
ಜನವರಿ ೧೯೯೫

ಮನೆಮಂದಿಗೆಲ್ಲ ಮುದ ನೀಡುವ ಮಾಸಿಕ

ಕಸ್ತೂರಿ

ಐದು ಮಿನಿ ಕಥೆಗಳು



ಮಾಜಿ ಪ್ರಧಾನಿ ಮೌನ ಮುರಿದಾಗ...





ಭ್ರಷ್ಟಾಸುರ ಸಂಹಾರ ಸಾಧ್ಯವೆ?

ವಿರಾಮ ಕಾಲ



ಛಾಯಾಚಿತ್ರ: ಎಂ.ಎಲ್. ಮೆಹ್ತಾ, ಹೊಸದಿಲ್ಲಿ

ಕಸ್ತೂರಿ

ಕನ್ನಡ ಡೈಜೆಸ್ಟ್

ಲೋಕ ಶಿಕ್ಷಣ ಟ್ರಸ್ಟಿನ
ಹೆಮ್ಮೆಯ ಕಾಣಿಕೆ

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಎಸ್.ಏ. ಜೋಶಿ

ಸಹಸಂಪಾದಕ:
ವೆಂಕಟನಾರಾಯಣ

ನಿರ್ವಹಣೆ:
ಗೋಪಾಲ ವಾಜಪೇಯಿ
ಶ್ರೀಕಾಂತ ಮಳಗಿ

ಕಲೆ:
ಪಿ.ಆರ್. ಪಾಟೀಲ
ಎಂ.ಎಸ್. ಶಶಿಧರ

ಮುಖಪುಟದ ಚಿತ್ರಗಳು:
ಕುವೆಂಪು– ಗೌರಿ ಸುಂದರ
ನಂದಾ– ಹರಿನಾಥ

ಕಸ್ತೂರಿ ಕಾರ್ಯಾಲಯ,
ಕೊಪ್ಪೀಕರ ರಸ್ತೆ,
ಹುಬ್ಬಳ್ಳಿ-೫೮೦ ೦೨೦.

ಚಿಂತನ


೧೯೯೪ ಸದ್ದಿಲ್ಲದೆ ೧೯೯೫ಕ್ಕೆ ಜೀವ ನೀಡುತ್ತಿದೆ. ಹಳೆಯ ದಿನದರ್ಶಿಗಳ ಜಾಗದಲ್ಲಿ ಹೊಸ ದಿನದರ್ಶಿಗಳು ಅರಳುವ ಕಾಲ. ಹೊಸ ಹೊಸ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ಅಣಿಗೊಳ್ಳುವ ಸಮಯ. ನೂತನ ರಾಜ್ಯ ಸರಕಾರದ ಪಂಚವಾರ್ಷಿಕ ಪಂಚಾಂಗ ಕೂಡ ಈಗಲೇ ಪ್ರಾರಂಭವಾಗುತ್ತಿದೆ.

೧೯೯೩ಕ್ಕೆ ಹೋಲಿಸಿದರೆ ಕಳೆದು ಹೋಗುತ್ತಿರುವ ವರ್ಷದಲ್ಲಿ ಪ್ರಾಕೃತಿಕ ವಿಕೋಪಗಳು ಕಡಿಮೆ. ಆದರೆ ಮಾನವ ನಿರ್ಮಿತ ಪ್ರಕೋಪಗಳು ರಾಜ್ಯವನ್ನು ನಡುಗಿಸಿದವು. ಸರಕಾರದ ಎಡಬಿಡಂಗಿ ನೀತಿಯಿಂದ ಪ್ರಾರಂಭವಾದ ಮೀಸಲಾತಿ ವಿರೋಧಿ ಆಂದೋಲನ, ಉರ್ದು ವಾರ್ತಾ ಪ್ರಸಾರ ಪ್ರತಿಭಟಿಸಿ ನಡೆದ ಚಳವಳಿ, ಹುಬ್ಬಳ್ಳಿಯಲ್ಲಿ ಸಂಭವಿಸಿದ ಧ್ವಜ ವಿವಾದ ಮುಂತಾದವುಗಳಿಗೆ ನೂರಾರು ಜನರ ಪ್ರಾಣ ಹವಿಸ್ಸಾಯಿತು. ಈ ಹಿನ್ನೆಲೆಯಲ್ಲಿ ವಿಧಾನಸಭೆಗೆ ಜರುಗಿದ ಚುನಾವಣೆಗಳು ಕೆಂಬಣ್ಣ ತಾಳುವ ಭಯ ಮೂಡಿದ್ದು ಸಹಜ. ಆದರೆ ಅಂಥ ಅನರ್ಥವೇನೂ ನಡೆಯದ ರೀತಿಯಲ್ಲಿ ಚುನಾವಣೆ ಜರುಗಿದವು.

ಡಾ. ಯು.ಆರ್. ಅನಂತಮೂರ್ತಿಯವರಿಗೆ 'ಜ್ಞಾನಪೀಠ' ಪ್ರಶಸ್ತಿ', ಪು.ತಿ.ನ., ಎ.ಎನ್. ಮೂರ್ತಿರಾವ್ ಅವರಿಗೆ 'ಪಂಪ' ಪ್ರಶಸ್ತಿ, ಗಂಗೂಬಾಯಿ ಹಾನಗಲ್ಲರಿಗೆ 'ಶಂಕರದೇವ' ಪ್ರಶಸ್ತಿ, ಡಾ. ಸುದರ್ಶನ ಅವರಿಗೆ ಅಂತಾರಾಷ್ಟ್ರೀಯ 'ಲೈವ್ಲಿಹುಡ್' ಪಾರಿತೋಷಕ, ಬಿ.ವಿ. ಕಾರಂತರಿಗೆ 'ಕಾಳಿದಾಸ ಸಮ್ಮಾನ್' ಪುರಸ್ಕಾರ, ಗಿರೀಶ್ ಕಾರ್ನಾಡರಿಗೆ 'ಸಂಗೀತ ನಾಟಕ ಅಕಾಡೆಮಿ ಫೆಲೋಷಿಪ್' ದೊರೆತದ್ದು ೧೯೯೪ರ ಹೆಗ್ಗಳಿಕೆ. ವರ್ಷದ ಇಳಿಹೊತ್ತಿನಲ್ಲಿ ಯುಗದ ಕವಿಯನ್ನು ಕಾಲ ತನ್ನ ತೆಕ್ಕೆಗೆ ತೆಗೆದುಕೊಂಡು 'ಉದಯ ರವಿ'ಯನ್ನು ಸಾರಸ್ವತ ಲೋಕವನ್ನು ಭಣಗುಟ್ಟುವಂತೆ ಮಾಡಿದ್ದು ಕನ್ನಡಿಗರ ದೌರ್ಭಾಗ್ಯ. ಹಾಗೆಯೆ, ವಚನ ಸಾಹಿತಿ ಸಿದ್ದಯ್ಯ ಪುರಾಣಿಕ, ಖ್ಯಾತ ಅಭಿನೇತ್ರಿ ದೇವಿಕಾರಾಣಿ, ಕಾದಂಬರಿಗಾರ್ತಿ ಎಂ.ಕೆ. ಇಂದಿರಾ, ಕಲಾವಿದ ಜೆ.ಎಸ್. ಶೆಣೈ ಮತ್ತಿತರರನ್ನೂ ನಾವು ಕಳೆದುಕೊಂಡೆವು.

ಹೊಸ ವರ್ಷವೆಂದರೆ ಹೊಸ ಸೂರ್ಯನೇನೂ ಉದಯಿಸುವುದಿಲ್ಲ. ಅವನ ನಿತ್ಯದ ಬೆಳಕಿನಲ್ಲಿ ನಾವೀನ್ಯವನ್ನು ಗುರುತಿಸುವುದೇ ಬದುಕು. ಅಂಥದನ್ನು ಗುರುತಿಸುವ ಅವಕಾಶವನ್ನು ೧೯೯೫ ನಿಮಗೆ ಒದಗಿಸಲಿ. ಮಕರ ಸಂಕ್ರಾಂತಿ ಒಳಿತು ಮಾಡಲಿ.

• ವ್ಯವಸ್ಥಾಪಕ ಸಂಪಾದಕ



ಬೆಚ್ಚಗಾಗಿಸಿದವು

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ''ಪ್ರಣಯ ಕಥೆಗಳು" ಶಶಿರದ ಚಳಿಗೆ ಸುಂದರವಾದ ಕಾರ್ತೀಕ ಬುಟ್ಟಿಯ ಹೊರಕವಚದಂತೆ ನಮ್ಮ ಹೃದಯವನ್ನು ಬೆಚ್ಚಗಾಗಿಸಿದವು.

ಈ ತುಟ್ಟಿ ದಿನಗಳಲ್ಲಿ 'ರೀಡರ್ಸ್ ಡೈಜೆಸ್ಟ್' ನಿಯತಕಾಲಿಕವನ್ನು ಖಂಡಿತ ಓದೋಕ್ಕಾಗಲ್ಲ. ಆ ಕೊರತೆಯನ್ನು 'ಕಸ್ತೂರಿ' ತುಂಬಿಕೊಡುತ್ತಿದೆ. ಪ್ರತಿ ತಿಂಗಳೂ ಜ್ಞಾನದ ಎನೆಲ್ಲ ಸರಕು ಹೊತ್ತು ಬರುವ 'ಕಸ್ತೂರಿ'ಯ ಪುಟಪುಟವೂ ನವ್ಯ. ನನ್ನ ಮತ್ತು 'ಕಸ್ತೂರಿ'ಯ ಸಾಂಗತ್ಯಕ್ಕೆ ಮೂವತ್ತು ವರ್ಷಗಳಾದವು. ಎರಡು ದಶಕಗಳಾಚೆ 'ಕಸ್ತೂರಿ'ಯಲ್ಲಿ ಪ್ರಕಟವಾದ ಅಪರೂಪದ ಲೇಖನಗಳನ್ನು ಮತ್ತೆ ಪ್ರಕಟಿಸಿ.

ಹಾರೂಗೇರಿ ಕಲ್ಲೇಶ ಕುಂಬಾರ

ಪ್ರಣಯಕಥಾ ವಿಶೇಷಾಂಕದಲ್ಲಿ ಪ್ರಕಟವಾದ ಭಾರತೀಯ ಕಥೆ 'ಸಸ್ಸೀ-ಪುನ್ನೂ' ಒಂದು ಸಿನಿಮಾ ಕಥೆಯಂತಿತ್ತು. ಇಂದಿನ ಕಳಪೆ ಚಿತ್ರಗಳಿಗೆ ಹೋಲಿಸಿದರೆ ಹಿಂದಿನ ಕಥೆಗಳೇ ಸತ್ವಪೂರ್ಣವಾಗಿರುತ್ತವೆ ಎನಿಸುತ್ತದೆ. ಸಂಗ್ರಹಯೋಗ್ಯ ಸಂಚಿಕೆ. ಪ್ರತಿ ತಿಂಗಳೂ ಹೊಸ ಹೊಸ ಪ್ರಯೋಗ ಮಾಡಿ ಸಫಲವಾಗುತ್ತಿರುವ 'ಕಸ್ತೂರಿ'ಗೆ ತುಂಬು ಹೃದಯದ ಅಭಿನಂದನೆಗಳು.

ಶಿಟಗೇರಿ ಸಂತೋಷ ನಾಯಕ

'ಪ್ರಣಯಕಥಾ ವಿಶೇಷಾಂಕ' ತುಂಬ ಆಕರ್ಷಕವಾಗಿದೆ. ಪ್ರಣಯವು ಕೆಳಗಿನ ಸ್ತರದಲ್ಲಿ ಕಾಮವಾಸನೆ ಎನ್ನಿಸಿಕೊಂಡರೂ, ಮೇಲಿನ ಸ್ತರಗಳಲ್ಲಿ ಶುದ್ಧ ಪ್ರೇಮವಾಗಿ ವ್ಯಕ್ತವಾಗುತ್ತದೆ. ಈ ಮೌಲ್ಯದ ನಿದರ್ಶನವಾಗಿ ಇಲ್ಲಿ 'ಮಾಧವಾನಲ-ಕಾಮಕದಲಾ', 'ಸಸ್ಸೀ-ಪುನ್ನೂ', 'ಶೀರೀ-ಫರ್ಹಾದ್' ಪ್ರಣಯ ಕಥೆಗಳು ಕಲಾತ್ಮಕವಾಗಿ ನಿರೂಪಿತವಾಗಿವೆ. ಸಾರ್ತ್ರ, ಮ್ಯಾಕ್ಸಿಂ ಗಾರ್ಕಿ ಮುಂತಾದ ಜಗತ್ಪ್ರಸಿದ್ಧ ವ್ಯಕ್ತಿಗಳ ಪ್ರಣಯ ಪ್ರಸಂಗಗಳು ಯಾರಿಗೆ ತಾನೆ ರುಚಿಸಲಿಕ್ಕಿಲ್ಲ?

ಹುಬ್ಬಳ್ಳಿ ಪ್ರೊ. ಜಿ.ಡಿ. ನಾಡಕರ್ಣಿ

ಪ್ರಣಯ ಪ್ರಸಂಗದ ಕಥೆಗಳು ಮತ್ತು ಲೇಖನಗಳು ಉತ್ತಮವಾಗಿ ಮೂಡಿ ಬಂದಿವೆ. ಗಣ್ಯ ವ್ಯಕ್ತಿಗಳಿಗೆ ಮಹಿಳೆಯರು ಬಗೆದ ದ್ರೋಹವನ್ನೋದಿ ಮನಸ್ಸು ಮುದುಡಿದಂತಾಯಿತು. ಜೀವನದುದ್ದಕ್ಕೂ ಮೆಲುಕು ಹಾಕುವಂಥ ಪ್ರಣಯ ಪ್ರಸಂಗಗಳನ್ನು 'ಕಸ್ತೂರಿ' ನಮಗೆ ಅರುಹಿದೆ.

ವಿಜಾಪುರ ಸಂಗಣ್ಣ ತೆಲಗಾಣಿ

ಪ್ರಣಯಲೋಕದ ಪಯಣಿಗರಿಗೆ ಹೊಸ ಸ್ಫೂರ್ತಿ ತುಂಬಬಲ್ಲ ಸಂಗ್ರಹಯೋಗ್ಯ ಸಂಚಿಕೆ ಇದು.

ಕೋಗಲೂರು ಈ.ಎಸ್. ತಿಪ್ಪೇಸ್ವಾಮಿ

ಚೇತೋಹಾರಿ

'ದಾದರ್‌ನಲ್ಲಿಯ ನನ್ನ ದಿನಗಳು' (ಪುಸ್ತಕ ವಿಭಾಗ) ಓದಿ, ನಾನೂ ದಾದರಿನಲ್ಲಿ ವಿಹರಿಸಿದಂಥ

ನೋವೆನಿಸಿತು.

ಶ್ರೀಮತಿ ಮನ್ನೂ ಭಂಡಾರಿ ಬರೆದ 'ಬಾಳನೌಕೆ' (ಅನು: 'ಸುಂದರ') ಓದಿ ಕರುಳು ಚುರ್ರೆಂದವು. ಕಣ್ಣುಗಳಲ್ಲಿ ಕಂಬನಿ ಹರಿಯಿತು. ಮಾಲಾ ಹಣಕ್ಕೆ ಮಾನ್ಯತೆ ನೀಡುತ್ತಾಳೆಂದು ಮೇಲ್ನೋಟಕ್ಕೆ ಅನ್ನಿಸಿದರೂ ಹೃದಯದ ದುಗುಡಗಳನ್ನು ಹತ್ತಿಕ್ಕಿಕೊಂಡು ಗಂಡನನ್ನು ಆದರಿಸುತ್ತಿದ್ದುದು ಆಕೆಯ ಹೆಂಗರುಳಿಗೆ ಸಾಕ್ಷಿ.

ಯಡಹಳ್ಳಿ ಶಂಕರ ಮುತ್ತಣ್ಣವರ

ಹೊಟ್ಟೆ ಹುಣ್ಣಾಗುವಂತೆ

ಅಜ್ಜಿಯನ್ನು ಗುಣಪಡಿಸಲು ದುಡ್ಡು ಕಳೆದುಕೊಂಡ ಮೊಮ್ಮಗನನ್ನು ನೆನೆಸಿಕೊಂಡು (ನನ್ನ ಅಜ್ಜಿ-ಹರಟೆ) ಹೊಟ್ಟೆ ಹುಣ್ಣಾಗುವಷ್ಟು ನಕ್ಕೆವು.

ಚನ್ನಗಿರಿ ಕೆ.ಪಿ.ಎಂ. ಶಿವಲಿಂಗಸ್ವಾಮಿ

ಅನುಭವವಾಯಿತು. ದಾದರ್‌ಗೆ ಹತ್ತಿಕೊಂಡಂತಿರುವ ಸಾಂತಾಕ್ರೂಜ್ ಪ್ರದೇಶದಲ್ಲಿ ಐದು ವರ್ಷ ವಾಸವಾಗಿದ್ದ ನನಗೆ ಮುಂಬಯಿಯಲ್ಲಿ ನಲಿದಾಡಿದ ನೆನಪುಗಳು ನುಗ್ಗಿಬಂದವು. ದಿ. ದಳವಿಯವರ ನಿರೂಪಣೆ ಮತ್ತು ರತ್ನಾಕರ ಶೆಟ್ಟಿಯವರ ಅನುವಾದ ಚೇತೋಹಾರಿ.

ನಿಲೋಗಲ್ — ಶಿವರಾಜ ಕರಡ್ಡಿ

'ಪುಸ್ತಕ ವಿಭಾಗ' ಓದುತ್ತಿದ್ದಂತೆ ದಳವಿ ಅವರ ದಿನಗಳು ದಾದರ್‌ನ ವಿವಿಧ ಹೋಟಲ್‌ನಲ್ಲಿ ತಿಂಡಿ ತಿನಿಸು ಸೇವಿಸುವುದರಲ್ಲಿಯೇ ಕಳೆದು ಹೋದವೇ ಎನ್ನಿಸಿತು.

ಅನವಾಲ — ಶ್ರೀಪಾದ ಜೋಶಿ

ದಾವಣಗೆರೆ — ಬಿ. ಕನಕಲಕ್ಷ್ಮಿ

ಕೆಲ ಸಲಹೆಗಳು

'ಕಸ್ತೂರಿ' ಕನ್ನಡದ ಏಕೈಕ ಡೈಜೆಸ್ಟ್. ಅದು ಇನ್ನಷ್ಟು ಸುಂದರವಾಗಲು, ಜನಪ್ರಿಯವಾಗಲು ಮಕ್ಕಳ ಬಗ್ಗೆಯೂ ಆಸ್ಥೆ ವಹಿಸಿ.

- ಅವರಿಗಾಗಿ ಕೆಲವು ಪುಟಗಳನ್ನು ಮೀಸಲಿಡಿ.
- ಹೊಸ ಲೇಖಕರಿಗೆ ಪ್ರಾಶಸ್ತ್ಯ ನೀಡಿ.
- ಭಾರತದ ಸುಪ್ರಸಿದ್ಧ ಸ್ಥಳಗಳ ಮಾಹಿತಿ ಇರಲಿ.
- ಪ್ರಚಲಿತ ಸಂಗತಿಗಳ ಕುರಿತು ಓದುಗರಲ್ಲಿ ಸಂವಾದಗಳನ್ನು ಏರ್ಪಡಿಸಿ.

ರಾಯಚೂರು ಸರ್ವೋತ್ತಮರಾವ್ ಮುತಾಲಿಕ್

ಡಿಸೆಂಬರ್ ಸಂಚಿಕೆಯ 'ಆರೋಗ್ಯದಂಗಳ'ದಲ್ಲಿ ಯೋಗಾಭ್ಯಾಸಿಗಳಿಗೆ ನೀಡಲಾದ 'ಕೆಲವು ಸೂಚನೆಗಳು' ಕಣ್ತಪ್ಪಿನಿಂದಾಗಿ ಎರಡು ಬಾರಿ (ಪುಟ ೧೫೯ ಮತ್ತು ೧೬೦ರಲ್ಲಿ) ಪ್ರಕಟವಾಗಿವೆ. ಹಾಗೆಯೇ ಪುಟ ೧೪೯ರ ೮ ನೇ ಸಾಲನ್ನು 'ಗಾದಿ ಅಥವಾ ಚೌಕಿಯ ಮೇಲೆ....' ಎಂದು ಓದಿಕೊಳ್ಳಬೇಕು.

- ಸಂಪಾದಕ.

ಏಕೆ?

ಡಿಸೆಂಬರ್ ಸಂಚಿಕೆಯಲ್ಲಿ ಚಿತ್ರನಟಿಯೊಬ್ಬಳ ಪ್ರೇಮಗಾಥೆ ಪ್ರಕಟಿಸುವುದಾಗಿ ನವೆಂಬರ್ ಸಂಚಿಕೆಯಲ್ಲಿ ತಿಳಿಸಿದ್ದಿರಿ. ಆದರೆ ಡಿಸೆಂಬರ್ 'ಕಸ್ತೂರಿ'ಯಲ್ಲಿ ಅದರ ಸುಳಿವೇ ಇಲ್ಲ ಏಕೆ?

ಬೆಂಗಳೂರು — ಎ.ವಿ. ಯದುಕುಮಾರ

(ಕೆಲವು ಅನಿವಾರ್ಯ ಕಾರಣಗಳಿಂದ ಹೀಗಾಯ್ತು. ಮುಂಬರುವ ಸಂಚಿಕೆಗಳಲ್ಲಿ ನಿಮ್ಮ ಆಸೆಯನ್ನು ಖಂಡಿತ ಈಡೇರಿಸುತ್ತೇವೆ.

- ಸಂಪಾದಕ)

ನಿರ್ಲಕ್ಷ್ಯದ ಪರಮಾವಧಿ

'ಅಸಮಾ ಬಿಹಾರಿ ಸಾಯಬೇಕಿತ್ತೆ?' ಲೇಖನವು ವೈದ್ಯರ ಪರಮಾವಧಿ ಬೇಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ.

ಹುನಗುಂದ — ಮಹಾಂತೇಶ ಸುರಪುರ

ಹಣಕ್ಕೆ ಪ್ರಾಧಾನ್ಯವನ್ನೀಯುವ ವೈದ್ಯರು ಮತ್ತು ದಾದಿಯರು ಪ್ರಾಣಹರಣಕ್ಕೂ ಕಾರಣವಾಗಬಲ್ಲರೆಂಬುದಕ್ಕೆ ಲೇಖನ ಉದಾಹರಣೆಯಾಗಿದೆ.

ಹೂಲಿಹಳ್ಳಿ — ಎಚ್.ಎಂ. ಬಸವರಾಜು

ಪ್ರೇಮದ ಪ್ರತಿನಿಧಿ

ಮುಖಪುಟದಲ್ಲಿ ಪ್ರಕಟವಾದ ತಾಜಮಹಲಿನ ಚಿತ್ರವು ಪ್ರಥಮ ದರ್ಶನದ ಪ್ರೇಮದಂತಿತ್ತು. 'ಆರೋಗ್ಯದಂಗಳ'ದಲ್ಲಿ ಯೋಗದ ಆಯಾ ಭಂಗಿಗಳ ಚಿತ್ರಗಳನ್ನು ಹಾಕಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

ಶಲ್ಲಿಕೇರಿ — ಜಿ.ಎಸ್. ಶೀಲವಂತರ

ಹೀಗಿರಬೇಕಿತ್ತು

'ಕಸ್ತೂರಿ' ನವೆಂಬರ್ ಸಂಚಿಕೆಯ 'ಜ್ಞಾನನಿಧಿ' (ನಿಮಗಿದು ಗೊತ್ತೆ?)ಯಲ್ಲಿ ಪುರಂದರದಾಸರು ಕರ್ನಾಟಕ ಸಂಗೀತದ ಪಿತಾಮಹ ಎಂದಿದೆ. ಅದು ತಪ್ಪು. ಮಧ್ವಮತ ಸ್ಥಾಪಕರಾದ ಮಧ್ವಾಚಾರ್ಯರು ಎಂಬುದು ಸರಿ.

ಬೆಂಗಳೂರು — ಎಚ್.ವಿ. ರಂಗನಾಥ

(ಆರನೇ ಪುಟಕ್ಕೆ)

ಅಂತರಂಗ

ಪುಸ್ತಕ ವಿಭಾಗ

ಆರೋಗ್ಯದಂಗಳ

ಐದು ಮಿನಿ ಕಥೆಗಳು

(ಪುಟ ೧೦೭ ರಿಂದ ೧೧೯)

ಬೆಳಕಿಂಡಿ

ಒಬ್ಬ ಮೂರ್ಖನನ್ನು ಜನಕ್ಕೆ ತಿಳಿಸಬೇಕಾದರೆ ವಾಕ್ ಸ್ವಾತಂತ್ರ್ಯ ಕೊಟ್ಟರೆ ಸಾಕು!
ಒಬ್ಬ ದಡ್ಡನನ್ನು ಹಾಳು ಮಾಡಬೇಕಾದರೆ ಚುನಾವಣೆಯಲ್ಲಿಳಿಸಿದರೆ ಸಾಕು!
ಒಬ್ಬ ಶತ್ರುವನ್ನು ಜನ ದ್ವೇಷಿಸಬೇಕಾದರೆ ಅಧಿಕಾರಕ್ಕೇರಿಸಿದರೆ ಸಾಕು!
ಒಬ್ಬ ಗೆಳೆಯನನ್ನು ದೂರ ಮಾಡಬೇಕಾದರೆ ಸಾಲ ಕೇಳಿದರೆ (ಕೊಟ್ಟರೆ) ಸಾಕು!

- ಬೀChi

ಗಂಡಸರ ಸಾವಿರ ಶಾಪಕ್ಕಿಂತ ಹೆಣ್ಣಿನ ನಿಟ್ಟುಸಿರು ಹಾಲಾಹಲ.

- ತ.ರಾ.ಸು.

ತುಟಿ ಮೀರಿದ ಹಲ್ಲು, ಅಂಕೆ ಮೀರಿದ ಕಣ್ಣು, ಹತೋಟಿ ಮೀರಿದ ಹೆಣ್ಣು ಬಹು ದಿನ ಬಾಳಲಾರವು.

- ಗಾದೆ

ಜೀವನವೆಂದರೆ ಒಂದು ಹೂವು ಇದ್ದಂತೆ. ಪ್ರೇಮವೆನ್ನುವುದು ಆ ಹೂವಿನಲ್ಲಿರುವ ಮಕರಂದ ಇದ್ದಂತೆ.

- ವಿಕ್ಟರ್ ಹ್ಯೂಗೋ

ಹೆಂಗಸರಿಗೆ ಒಂದಿಷ್ಟು ಉಪದೇಶ: ಖಂಡಿತ ಮದುವೆಯಾಗಿ. ಆದರೆ ದಿನವೆಲ್ಲ ಮನೆಯಲ್ಲೇ ಇರುವ ಗಂಡಸಿನ ಕೈ ಮಾತ್ರ ಹಿಡಿಯಬೇಡಿ.

- ಜಾರ್ಜ್ ಬರ್ನಾರ್ಡ್ ಷಾ

(ಮೂರನೇ ಪುಟದಿಂದ)

ಚಿರಸ್ಮರಣೀಯ

ಡಿಸೆಂಬರ್ 'ಕಸ್ತೂರಿ'ಯಲ್ಲಿ ಡಾ. ಎಚ್.ಡಿ. ಚಂದ್ರಪ್ಪಗೌಡ ಬರೆದ 'ಸಂತ ವಿನೋಬಾ– ಒಂದು ನೆನಪು' ಲೇಖನ ಮೌಲಿಕವಾಗಿತ್ತು. ಭೂದಾನ ಚಳವಳಿಯ ಹರಿಕಾರನ ಆದರ್ಶಗಳು ಸಾರ್ವಕಾಲಿಕ ಸತ್ಯ. ಸಾಮಾಜಿಕ ಅಸಮಾನತೆ ಹೊಡೆದೋಡಿಸಲು ವಿನೋಬಾ ಕೈಗೊಂಡ ಕಾರ್ಯ ಯೋಜನೆ ಅಪೂರ್ವ. ಅವರ ಧ್ಯೇಯಗಳು ಚಿರಸ್ಮರಣೀಯ.

ಕಮತ್ರಹಳ್ಳಿ ಪ್ರೊ. ಶಿವಕುಮಾರ ಕಲ್ಲೂರ

ನಮ್ಮ ಅನುಭವ

ನಯಾಗರ ಜಲಪಾತ ಧುಮುಕುವುದನ್ನು ಗಾಜಿನ ಕಿಟಕಿಗಳ ಮೂಲಕ ನೋಡಿದ್ದಾಗಿ ಎಚ್.ಆರ್. ಚಂದ್ರವದನರಾವ್ ಬರೆದಿದ್ದಾರೆ. ಆದರೆ ನೀರು ಧುಮುಕುವುದನ್ನು ನೋಡಲು ಯಾವ ತರಹದ ಗಾಜಿನ ಕಿಟಕಿಗಳೂ ಅಲ್ಲಿಲ್ಲ. ನಾವು ೨೮-೫-೯೪ರಂದು ಆ ಜಲಪಾತವನ್ನು ನೋಡಿದ್ದಾಗಿನ ಸ್ಥಿತಿ ಇದು. ನಮ್ಮ ಜೋಗದ ರಭಸಕ್ಕೆ ನಯಾಗರ ಸಾಟಿಯಾಗಲಾರದೆಂದೆನಿಸುತ್ತದೆ.

ಮೈಸೂರು ಶಾರದಾ ಲಕ್ಷ್ಮಣ್

ಹೊಸದೇನಿದೆ?

ನವೆಂಬರ್ ೧೯೯೪ರ ಸಂಚಿಕೆಯ 'ಜ್ಞಾನನಿಧಿ' ವಿಭಾಗದಲ್ಲಿ ಪ್ರಕಟವಾದ 'ವರ್ಗಗಣನೆಗೆ ಸುಲಭೋಪಾಯ' ಲೇಖನ ಹೊಸದೇನನ್ನೂ ತಿಳಿಸಿಲ್ಲ. ಸದ್ಯ ಎಂಟನೆ ತರಗತಿಯ ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುವ ವಿಧಾನವೇ ಆಗಿದೆ.

ನವನಗರ(ಹುಬ್ಬಳ್ಳಿ) ಎಂ.ಎಂ. ಕರಿಗೌಡರ

ಅಜಕಾರು ಎಸ್.ಕೆ. ಅಜೆಕಾರು

ಲೇಖಕರಿಗೆ ಸೂಚನೆ

- 'ಕಸ್ತೂರಿ'ಗಾಗಿ ಕಳಿಸುವಂಥ ಲೇಖನಗಳು ಕಾಗದದ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಂಥವಾಗಿರಲಿ. ನಿಮ್ಮ ಹೆಸರು–ವಿಳಾಸಗಳು ಸ್ಪಷ್ಟವಾಗಿರಲಿ. ಅನುವಾದ, ರೂಪಾಂತರ, ಆಧಾರಿತ ಲೇಖನಗಳಾದರೆ ಮೂಲ ಲೇಖಕ–ಪ್ರಕಾಶಕರ ವಿಳಾಸ, ಅನುಮತಿ ಪತ್ರಗಳನ್ನು ಜತೆಗೆ ಲಗತ್ತಿಸಿ.
- ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಲೇಖನಗಳ ಸಂಗಡವೆ ಅಗತ್ಯ ಅಂಚೆಚೀಟಿ ಲಗತ್ತಿಸಿದ ಲಕೋಟೆಯನ್ನಿಡಿ.
- ಚುಟುಕು, ಪುಟಕೊನೆಯ ಕಿರುಲೇಖನ, ನೆನಪು ನೆರಳಿನಲ್ಲಿ ಮುಂತಾದವುಗಳ ಕುರಿತು ಪತ್ರವ್ಯವಹಾರ ಮಾಡಲಾಗುವುದಿಲ್ಲ.
- ಲೇಖನದ ಕಾರ್ಬನ್ ಅಥವಾ ಝೆರಾಕ್ಸ್ ಪ್ರತಿಯನ್ನು ಕಳಿಸಲೇಬೇಡಿ.
- ಸ್ವೀಕೃತ ಲೇಖನಗಳನ್ನು ಯಥಾವಕಾಶ ಪ್ರಕಟಿಸಿ ಸೂಕ್ತ ಗೌರವಧನವನ್ನು ನೀಡಲಾಗುವುದು.

ಚಂದಾದಾರರಿಗೆ ಸೂಚನೆ

- 'ಕಸ್ತೂರಿ' ಪ್ರತಿ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳಿನ ೨ನೆಯ ದಿನಾಂಕದೊಳಗೆ ನಿಮಗೆ ತಲುಪದಿದ್ದಲ್ಲಿ ಚಂದಾದಾರರು ತಮ್ಮ ಟಪ್ಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಈ ಸಂಬಂಧದಲ್ಲಿ ಪತ್ರವ್ಯವಹಾರ ಮಾಡುವಾಗ, ವಿಳಾಸ ಬದಲಾವಣೆಯ ಸಂದರ್ಭದಲ್ಲಿ ದಯವಿಟ್ಟು ಚಂದಾ ನಂಬರು ಸ್ಫುಟವಾಗಿ ನಮೂದಿಸಿರಬೇಕಾದ್ದು ಅತ್ಯವಶ್ಯಕ.

ಪತ್ರವ್ಯವಹಾರ ವಿಳಾಸ:
ಪುಸ್ತಕಾರಾಂಗ ವ್ಯವಸ್ಥಾಪಕ,
ಕಸ್ತೂರಿ, ಪೊ.ಬಾ. ನಂ. ೩೦,
ಹುಬ್ಬಳ್ಳಿ–೫೮೦ ೦೨೦.

ಚಂದಾ ದರಗಳು

ಬಿಡಿ ಸಂಚಿಕೆ	ರೂ. ೬–೦೦
೬ ತಿಂಗಳಿಗೆ ಅಂಚೆ ವೆಚ್ಚ ಸೇರಿ	ರೂ. ೩೫–೦೦
೧ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ. ೭೦–೦೦
೨ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ. ೧೩೦–೦೦

ಕಸ್ತೂರಿ

ವರ್ಷ: ೩೯ ಜನೆವರಿ ೧೯೯೫ ಸಂಚಿಕೆ: ೫

ಗಾಂಧೀ ಉವಾಚ

ಸಂಗ್ರಹ: **ಜೆ.ಎಸ್. ಆಪಟೆ**



- ಗಂಡನ ಕೆಲಸ ವಿಶೇಷತಃ ಮನೆಯ ಹೊರಗೆ; ಹೆಂಡತಿಯದು ಮನೆಯ ಒಳಗೆ. ಅವಳು ಸರಿಯಾಗಿ ಮನೆತನವನ್ನು ನಿಭಾಯಿಸದೆ ಆತ ಸಾಕಷ್ಟು ಗಳಿಸಲು ಸಾಧ್ಯವಿಲ್ಲ. ಹೀಗೆ ಅಪರೋಕ್ಷವಾಗಿಯಾದರೂ ಅವನ ಗಳಿಕೆಗೆ ಅವಳೂ ಕಾರಣಳಾಗಿರುವುದರಿಂದ ಅವನ ಗಳಿಕೆಯಲ್ಲಿ ಅವಳಿಗೂ ಸಮನಾದ ಹಕ್ಕು ಇದೆ.
- ಮಕ್ಕಳ ಮೇಲೆ ತಂದೆಗೂ ತಾಯಿಗೂ ಅಷ್ಟೇ ಹಕ್ಕು. ಆದರೆ ಮಕ್ಕಳು ಒಮ್ಮೆ ಪ್ರಬುದ್ಧಾವಸ್ಥೆಯನ್ನು ಮುಟ್ಟಿದರೆಂದರೆ ಆ ಹಕ್ಕು ತಂತಾನೆ ಮಾಯವಾಗುತ್ತದೆ– ಮಾಯವಾಗಬೇಕು.
- ಸರಕಾರೀ ಖಜಾನೆಯಲ್ಲಿ ಕೋಟಿಗಟ್ಟಲೆ ಹಣವಿರಬಹುದು. ಆದರೆ ಅದೆಲ್ಲ ಬಂದದ್ದು

ಮೂಲತಃ ಬಡವರಿಂದ ಎನ್ನುವುದನ್ನು ಅಧಿಕಾರದಲ್ಲಿದ್ದವರು ಎಂದೂ ಮರೆಯ ಕೂಡದು.

- ಸಂಸ್ಥೆ ಯಾವುದೇ ಇರಲಿ, ಅದು ಬದುಕಬೇಕಾದರೆ ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟಿರುವುದು ಅವಶ್ಯ. ಆತ್ಮವಿಶ್ವಾಸಕ್ಕೆ ಸತ್ಯವೇ ಆಧಾರ. ಅದಿಲ್ಲದೆ ಸಂಸ್ಥೆಗೆ ಉಳಿಗಾಲವಿಲ್ಲ.
- ಪುರುಷರೇನೂ ಹೆಂಗಸರಿಗಿಂತ ಶ್ರೇಷ್ಠರಲ್ಲ. ಹೆಂಗಸರೇನೂ ಪುರುಷರಿಗಿಂತ ಕೀಳಲ್ಲ. ಬೌದ್ಧಿಕ ಶಕ್ತಿಯಲ್ಲಿಯೂ ಇಬ್ಬರೂ ಸರಿಸಮಾನರಾಗಿಯೇ ಇದ್ದಾರೆ. ಆದರೂ ಗಂಡಸೊಬ್ಬ ಎಷ್ಟೇ ಅಜ್ಞಾನಿಯಾಗಿರಲಿ, ಅಯೋಗ್ಯನಿಗಲಿ, ಅವನು ಪುರುಷನೆಂಬ ಒಂದು ಕಾರಣದಿಂದ ಮಾತ್ರ ಅವನಿಗೆ ಹೆಂಗಸರಿಂದ ಮರ್ಯಾದೆ ದೊರೆಯಬೇಕೆಂಬ ಕೆಟ್ಟ ಸಂಪ್ರದಾಯ ನಮ್ಮಲ್ಲಿ ಬೆಳೆದು ಬಂದಿದೆ. ಇದು ಮೊದಲು ತೊಲಗಬೇಕು.
- ಹಿಂದೂ ಧರ್ಮ ಎಷ್ಟು ಅಮೂಲ್ಯವಾಗಿದೆಯೋ ಉಳಿದ ಧರ್ಮಗಳೂ ಅಷ್ಟೇ ಅಮೂಲ್ಯವಾಗಿವೆ. ಹೀಗೆ ಎಲ್ಲ ಧರ್ಮಗಳೂ ಅಮೂಲ್ಯವಾಗಿವೆಯೆಂದ ಮೇಲೆ ಮತಾಂತರಕ್ಕೆ ಅರ್ಥವೇ ಉಳಿಯುವುದಿಲ್ಲ. ಆದ್ದರಿಂದ ನಾನು ಯಾವುದೇ ಮತಾಂತರವನ್ನು ವಿರೋಧಿಸುತ್ತೇನೆ. ವಾಸ್ತವವಾಗಿ ನಾವು ಹಿಂದುಗಳು ಇನ್ನಷ್ಟು ಒಳ್ಳೆಯ ಹಿಂದುಗಳಾಗುವಂತೆಯೂ ಮುಸಲ್ಮಾನರು ಇನ್ನಷ್ಟು ಒಳ್ಳೆಯ ಮುಸಲ್ಮಾನರಾಗುವಂತೆಯೂ ಕ್ರಿಶ್ಚಿಯನ್ನರು ಇನ್ನಷ್ಟು ಒಳ್ಳೆಯ ಕ್ರಿಶ್ಚಿಯನ್ನರಾಗುವಂತೆಯೂ ಪ್ರಯತ್ನಿಸಬೇಕು. ನಮ್ಮ ಧರ್ಮದಷ್ಟೇ ಇನ್ನೊಬ್ಬರ ಧರ್ಮವೂ ಶ್ರೇಷ್ಠವಾಗಿದೆ ಎಂಬ ಭಾವನೆ ಎಲ್ಲರಲ್ಲಿ ರಕ್ತಗತವಾಗುವುದರಲ್ಲೆ ಸಮಾಜದ ಹಿತ ಅಡಗಿದೆ.
- ಕಾಯಿದೆಗೆ ನಾವೆಲ್ಲ ಬದ್ಧರಾಗಬೇಕೆಂಬ ಮನೋಭಾವವನ್ನು ಮೈಗೂಡಿಸಿಕೊಂಡಾಗಲೆ ಪ್ರಜಾಪ್ರಭುತ್ವ ಬಂದೀತು; ಬಂದ ಪ್ರಜಾಪ್ರಭುತ್ವ ಉಳಿದೀತು. ಪ್ರಜಾಪ್ರಭುತ್ವದಲ್ಲಿ ನಂಬುಗೆಯಿರುವವರು, ಅದು ನಾಲ್ಕು ದಿನ ಬಾಳಲಿ ಎನ್ನುವುದನ್ನು ಇಚ್ಛಿಸುವವರು ಪ್ರಜಾಪ್ರಭುತ್ವದ ಬಗೆಗೆ ಯೋಚಿಸಬೇಕಲ್ಲದೆ, ತಾವು ಯಾವ ಪಕ್ಷಕ್ಕೆ ಸೇರಿದ್ದೇವೆಂಬ ಬಗೆಗಾಗಲಿ ಸ್ವಪ್ರಯೋಜನವನ್ನು ಹೇಗೆ ಸ್ಥಾಪಿಸಿಕೊಳ್ಳಬೇಕೆಂಬ ಬಗೆಗಾಗಲಿ ಅಲ್ಲ.
- ಪತಿಯು ದೇವರಾದರೆ ಪತ್ನಿಯು ದೇವಿಯಾಗದೆ ಉಳಿಯಲು ಹೇಗೆ ಸಾಧ್ಯ? ಖಂಡಿತ ಆಕೆ ಗುಲಾಮಳಲ್ಲ. ಒಬ್ಬರಿಗೊಬ್ಬರು ಸಹಕಾರಿಗಳು; ಒಬ್ಬರಿಗೊಬ್ಬರು ಮಾರ್ಗದರ್ಶಕರು.
- ತಂದೆ-ತಾಯಿಗಳಿಗೆ ಎಲ್ಲ ಮಕ್ಕಳೂ ಅಷ್ಟೆ. ಅವರ ಬಗೆಗಿನ ಪ್ರೀತಿಯು ಸರಿಸಮನಾಗಿರಬೇಕಾದಾಗ ಅವರಿಗೆ ದೊರೆಯುವ ಹಕ್ಕುಗಳು ಸರಿಸಮನಾಗಿರಬೇಕಾದದ್ದೂ ಅಷ್ಟೇ ಅವಶ್ಯ.

'ಬೇಂದ್ರೆ ನೆನಪುಗಳು'

೩೧, ಜನವರಿ ೧೯೯೫ರಿಂದ ವರಕವಿ ದತ್ತಾತ್ರಯ ರಾಮಚಂದ್ರ ಬೇಂದ್ರೆಯವರ ಜನ್ಮಶತಮಾನೋತ್ಸವ ವರ್ಷ ಪ್ರಾರಂಭ. ಆ 'ಶಬ್ದ ಗಾರುಡಿಗ'ನೊಂದಿಗೆ ನಿಮ್ಮಲ್ಲಿ ಅನೇಕರು ಕೆಲವು ಕ್ಷಣಗಳನ್ನಾದರೂ ಕಳೆದಿರಬಹುದು. ಆ ರಸನಿಮಿಷಗಳ ನೆನಪು ಇತರರಿಗೂ ತಲುಪುವಂತಾಗಲು 'ಕಸ್ತೂರಿ' ಈ ಅಂಕಣವನ್ನು ಪ್ರಾರಂಭಿಸುತ್ತಿದೆ. ಬೇಂದ್ರೆಯವರೊಂದಿಗಿನ ನಿಮ್ಮ ನೆನಪನ್ನು ಹಂಚಿಕೊಳ್ಳಿ. ಪ್ರಕಟವಾದವುಗಳಿಗೆ ಸೂಕ್ತ ಸಂಭಾವನೆಯಿದೆ.

• ಸಂಪಾದಕ



'ಕಾಡಿನ ಕವಿ'
ಕುವೆಂಪು

● ಡಾ. ಜಿ.ಎಸ್. ಶಿವರುದ್ರಪ್ಪ

ಕನ್ನಡದ ಅತ್ಯಂತ ಮಹತ್ವದ ಸಾಹಿತಿಗಳಲ್ಲಿ ಒಬ್ಬರಾದ ಕುವೆಂಪು ಅವರು ತಮ್ಮ ಬದುಕು-ಬರಹಗಳ ಮೂಲಕ ಈ ದೇಶದ ಸಮಕಾಲೀನ ಸೃಜನಶೀಲತೆಯ ಉತ್ಕರ್ಷದ ನಿಜವಾದ ಪ್ರತಿನಿಧಿಯಂತಿದ್ದಾರೆ. ಅವರ ಸಾಹಿತ್ಯದ ಹರಹು, ವೈವಿಧ್ಯ ಮತ್ತು ಎತ್ತರಗಳು ಅವರು ಮೂಡಿಬಂದ ಸಹ್ಯಾದ್ರಿಯ 'ಪರ್ವತಾರಣ್ಯ ಪ್ರಪಂಚ'ದಂತೆ ಬೆರಗು ಹುಟ್ಟಿಸುತ್ತವೆ. ನಿಜವಾಗಿ ನೋಡಿದರೆ ಕುವೆಂಪು 'ಕಾಡಿನ ಕವಿ'. 'ಕಾಡಿನ ಕೊಳಲಿದು ಕಾಡ ಕವಿಯು ನಾ ನಾಡಿನ ಜನರೊಲಿದಾಲಿಪುದು' ಎಂಬ ಬಿನ್ನಹದೊಂದಿಗೆ, ೧೯೩೦ರಲ್ಲಿ ಕನ್ನಡ ಕಾವ್ಯಲೋಕವನ್ನು ಪ್ರವೇಶಿಸಿದ ಈ ಕಾಡಿನ ಕವಿ ಅನಂತರ ನಾಡಿನ ಕವಿಯಾಗಿ, ಈ ನಾಡಿನ ಜನಮನವನ್ನು ಗೆದ್ದು ನೆಲೆನಿಂತ ಸಂಗತಿ ಈಗಾಗಲೇ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಭಾಗವಾಗಿದೆ. ಆದರೆ ಕುವೆಂಪು ಮೂಲತಃ 'ಕಾಡಿನ ಕವಿ' ಅನ್ನುವುದೇ, ಅವರನ್ನು ಕನ್ನಡ ಸಾಹಿತ್ಯ ಸಂದರ್ಭದ ಇತರ ಬರಹಗಾರರಿಂದ ಬೇರ್ಪಡಿಸುವ ಮುಖ್ಯ ಲಕ್ಷಣವಾಗಿದೆ. ಕನ್ನಡದಲ್ಲಿ ನಿಸರ್ಗವನ್ನು ಒಲಿದ ಹಾಗೂ ಅದರ ಸೊಗಸನ್ನು ಕುರಿತು ಹಾಡಿದ ಹಲವು ಕವಿಗಳಿದ್ದಾರೆ. ಆದರೆ ಅವರಾರೂ ಬಹುಶಃ ಕುವೆಂಪು ಅವರಂತೆ ಇಂತಹ ಮಲೆನಾಡಿನ ದುರ್ಗಮ ಅರಣ್ಯಶ್ರೇಣಿಯ ದಟ್ಟವಾದ ಅನುಭವಗಳಲ್ಲಿ ಬೇರೂರಿ ಬೆಳೆದವರಲ್ಲ ಮತ್ತು ರಮ್ಯತೆಯಿಂದ ಮೊದಲುಗೊಂಡು ಭವ್ಯತೆಯವರೆಗಿನ ಅರಣ್ಯಾನುಭವಗಳನ್ನು ಕುವೆಂಪು ಅವರಂತೆ ಗ್ರಹಿಸಿ ಅಭಿವ್ಯಕ್ತಿಸಿದವರಲ್ಲ. ಈ ಕಗ್ಗಾಡುಗಳ ರುದ್ರರಮಣೀಯ ಅದ್ಭುತ ಸೌಂದರ್ಯದ ಅನೇಕ ಪರಿಗಳನ್ನೂ, ಋತುಋತುವಿಗೂ ಬದಲಾಗುವ ಅದರ ವರ್ಣವಿಲಾಸಗಳನ್ನೂ, ಬಯಲುನಾಡಿನವರೆಂದೂ ಕಾಣದ ಹಾಗೂ ಕೇಳದ ಮೃಗಯಾ ವಿನೋದ-ಸಾಹಸಗಳ ಕಥನವನ್ನೂ, ಈ ನಿಬಿಡಾರಣ್ಯದ ನಡುವಣ ಜನಜೀವನದ ವೈವಿಧ್ಯಗಳನ್ನೂ ಮೊಟ್ಟಮೊದಲಿಗೆ ತೆಗೆದು ತೋರಿದವರು ಕುವೆಂಪು ಅವರೊಬ್ಬರೇ. ಅಷ್ಟೇ ಅಲ್ಲ, ಅವರ ಎಲ್ಲ ಕಥಾವಸ್ತುಗಳ ಮೂಲನೆಲೆ ಈ ಅರಣ್ಯವೇ. ಅವರ ಮಹಾಕಾವ್ಯ, ಕಾದಂಬರಿ, ನಾಟಕ, ಕವಿತೆ ಈ ಎಲ್ಲ ಪ್ರಕಾರಗಳಲ್ಲೂ ಈ ಅರಣ್ಯಾನುಭವಗಳೇ ಮೂಲದ್ರವ್ಯದಂತೆ- ಸರ್ವವ್ಯಾಪಿಯಾಗಿವೆ. ಅವರ ಬಹುತೇಕ ಎಲ್ಲ ಪಾತ್ರಗಳೂ ಈ ಅರಣ್ಯ ಸಂಸ್ಕೃತಿಯ ಪ್ರತೀಕಗಳೇ. ಇಷ್ಟರಮಟ್ಟಿಗೆ ಸಹ್ಯಾದ್ರಿಯ ಅರಣ್ಯಾನುಭವಗಳು ಎಂದೂ ಕನ್ನಡದಲ್ಲಿ ಈ ಪ್ರಮಾಣ ಹಾಗೂ ಸಾಚಾತನಗಳಲ್ಲಿ ಪ್ರಕಟವಾಗಿಲ್ಲ ಅನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ. ಮತ್ತು

('ಬಸವರಾಜ ಕಟ್ಟೀಮನಿ ವಿಚಾರ ವೇದಿಕೆ' ಧಾರವಾಡ ಇವರ ಕೃಪೆಯಿಂದ)

ಈ ಮೂಲಕ ಕುವೆಂಪು ಅವರಲ್ಲಿ ಪ್ರಕಟವಾಗುವ ಅದಮ್ಯವಾದ ನಿಸರ್ಗ ಪ್ರೀತಿ ಮೂಲತಃ ಜೀವನ ಪ್ರೀತಿಯ ವಿಸ್ತರಣೆ ಎಂದೇ ತಿಳಿಯಬೇಕಾಗಿದೆ. ಈ ನಿಸರ್ಗವನ್ನು ಕುರಿತ ಉತ್ಕಟವಾದ ಹಂಬಲ ಕೇವಲ ಸೌಂದರ್ಯನಿಷ್ಠವಾದುದು ಮಾತ್ರವಲ್ಲ, ಅದನ್ನೂ ಮೀರಿದ ಒಂದು ಆಧ್ಯಾತ್ಮಿಕ ಅನ್ವೇಷಣೆಯ ಪರಿಣಾಮ ಕೂಡ. ನಿಸರ್ಗದಿಂದ ವ್ಯಕ್ತಿತ್ವಕ್ಕೆ ಒದಗುವ ತುಷ್ಟಿ-ಪುಷ್ಟಿಗಳು ವ್ಯಕ್ತಿತ್ವದ ಬೆಳವಣಿಗೆಗೆ ಎಷ್ಟು ಅಗತ್ಯ ಅನ್ನುವುದನ್ನು ಪರಿಸರ ನಾಶದ ತಲ್ಲಣದ ಇಂದಿನ ದಿನಗಳಲ್ಲಿ ನಾವು ಕ್ರಮೇಣ ಕಂಡುಕೊಳ್ಳುತ್ತಿದ್ದೇವೆ. ನಮ್ಮ ಸುತ್ತಣ ನಿಸರ್ಗವನ್ನು ಪ್ರೀತಿಸುವುದು, ನಮಗೆ ಕೇವಲ ಭೌತಿಕವಾದ ಅಗತ್ಯ ಮಾತ್ರವಲ್ಲ, ಒಂದು ಆಧ್ಯಾತ್ಮಿಕ ಅವಶ್ಯಕತೆಯೂ ಹೌದು- ಎನ್ನುವುದನ್ನು ಒಂದು ಮೌಲ್ಯದಂತೆ ಪ್ರತಿಪಾದಿಸುವ ಕುವೆಂಪು ಅವರ ನಿಲುವು ಎಷ್ಟು ಅರ್ಥಪೂರ್ಣವಾದುದೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಇಂಥ ದಟ್ಟವಾದ ಅರಣ್ಯ ಪರಿಸರದ, ಹಾಗೂ ನಾಗರಿಕ ಜಗತ್ತಿನಿಂದ ಬಹುಮಟ್ಟಿಗೆ ಪ್ರತ್ಯೇಕವೆಂಬಂತಹ ಪರಿಸರದ ಅಪ್ರತಿಷ್ಠಿತ ಸಾಮಾಜಿಕ ಸ್ತರದಿಂದ ಬಂದ ಕವಿ, ಕುವೆಂಪು ಅನ್ನುವುದು ಅವರನ್ನೂ, ಅವರ ಸಾಹಿತ್ಯವನ್ನೂ, ಅವರ ಸಮಕಾಲೀನರಿಂದ ಬೇರ್ಪಡಿಸುವ ಲಕ್ಷಣವಾಗಿದೆ. ಇನ್ನೂ ಬಿಡಿಸಿ ಹೇಳಬೇಕೆಂದರೆ, ಬಹುಮಟ್ಟಿಗೆ ಅನಕ್ಷರತೆ, ಅಜ್ಞಾನ, ದಾರಿದ್ರ್ಯ, ಮೂಢನಂಬಿಕೆ ಇತ್ಯಾದಿಗಳಿಂದ ಇಡಿಕಿರಿದ ಜನಸಮುದಾಯದ, ಅದರಲ್ಲೂ ಶೂದ್ರ ವರ್ಗದಿಂದ ಬಂದ ಮೊಟ್ಟಮೊದಲ ಪ್ರಮುಖ ಬರಹಗಾರರಾಗಿದ್ದಾರೆ ಕುವೆಂಪು ಅನ್ನುವುದು ಅವರ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಹಲವು ಒಳನೋಟಗಳನ್ನು ಒದಗಿಸುತ್ತದೆ. ಇಂಥ ಅಪ್ರತಿಷ್ಠಿತ ಸಾಮಾಜಿಕ ಸ್ತರದಿಂದ ಬಂದ ಕಾರಣದಿಂದ, ಅವರು ತಮ್ಮ ಸಮಕಾಲೀನರಾದ ಕೆಲವು ಹಿರಿಯ ಬರಹಗಾರರಂತೆ ಯಾವುದೇ ಮತ-ಧರ್ಮಗಳ ಸಿದ್ಧ ಸಂಪ್ರದಾಯಕ್ಕೆ ಸೇರಿದವರಲ್ಲ ಮತ್ತು ಸಿದ್ಧ ಸಂಪ್ರದಾಯದ ಪೂರ್ವ ನಿಯಂತ್ರಣಗಳೂ ಉಪಾಧಿಗಳೂ ಇಲ್ಲದ ಒಂದು ಮುಕ್ತವೂ ಸ್ವತಂತ್ರವೂ ಆದ ಮನಃಸ್ಥಿತಿಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಜತೆಗೆ ತಾವು ಯಾವ ಅಪ್ರತಿಷ್ಠಿತ ಸಾಮಾಜಿಕ ಸ್ತರದಿಂದ ಬಂದರೋ, ಆ ಸ್ತರದ ಮೇಲೆ, ಪ್ರತಿಷ್ಠಿತ ವರ್ಗದವರಿಂದ ನಡೆದ ಹಾಗೂ ನಡೆಯುತ್ತಿದ್ದ ಶೋಷಣೆಗಳೂ, ಹಲ್ಲೆಗಳೂ, ಅವಮಾನಗಳೂ ಆ ಸಮಾಜದ ಒಬ್ಬ ವ್ಯಕ್ತಿಯಾಗಿ ತಮ್ಮ ಅನುಭವವೂ ಆದುದರಿಂದ ಆ ಮೇಲು ವರ್ಗದವರ ನಡವಳಿಕೆಗಳನ್ನು ಪ್ರತಿಭಟಿಸುತ್ತ, ಅವರ ಶೋಷಕ ತಂತ್ರಗಳನ್ನು ಬಯಲಿಗೆಳೆಯುತ್ತ, ಈ ಶೋಷಣೆಯ ಪ್ರತಿನಿಧಿಯಾದ 'ಪುರೋಹಿತ ಶಾಹಿ'ಯನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸುತ್ತ, ಅವುಗಳೆಲ್ಲದರ ವಿರುದ್ಧವಾಗಿ ಜನಸಮುದಾಯವನ್ನು ಎಚ್ಚರಿಸುವ ವೈಚಾರಿಕತೆಯನ್ನು ನಿರಂತರವಾಗಿ ಪ್ರತಿಪಾದಿಸುತ್ತ ಬಂದಿರುವುದು ಕುವೆಂಪು

• • •

ಈ ದೇಶದ ವರ್ಣ-ವರ್ಗಗಳನ್ನು ಕುವೆಂಪು ಅವರಷ್ಟು ದಿಟ್ಟತನದಿಂದ ಅವರ ಸಮಕಾಲೀನರಿಗೆ ಪ್ರಶ್ನಿಸಲು ಸಾಧ್ಯವಾಗಲಿಲ್ಲ ಎನ್ನುವುದೇ 'ಯುಗದ ಕವಿ'ಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.....

• • •

ಸಾಹಿತ್ಯದ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ. ಅವರ ಅನೇಕ ಸಾಮಾಜಿಕ ಕವಿತೆಗಳ ಹಾಗೂ 'ಶೂದ್ರ ತಪಸ್ವಿ'ಯಂಥ ನಾಟಕಗಳ ಮತ್ತು ಕಾದಂಬರಿಗಳ ಹಲವು ಸಂದರ್ಭಗಳಲ್ಲಿ ಮತ್ತು ಇತರ ವೈಚಾರಿಕ ಬರಹಗಳಲ್ಲಿ ಈ ಅಂಶವನ್ನು ಗುರುತಿಸಬಹುದಾಗಿದೆ. ಈ ಒಂದು ಧೋರಣೆ ಅವರ ವಿಚಾರಗಳನ್ನು ಹಾಗೂ ಅವರ ಭಾಷೆಯನ್ನು ಅಲ್ಲಲ್ಲಿ ತೀರಾ ಪ್ರೌಢವೂ ಹಾಗೂ ಸವಾಲಿನ ರೂಪದ್ದೂ ಆಗುವಂತೆ ಮಾಡಿದೆ. ಕುವೆಂಪು ಅವರ ಕಾವ್ಯಭಾಷೆ ತೀರಾ ಪ್ರೌಢವೂ, ಸಂಸ್ಕೃತಮಯವೂ ಆಗಿದೆ ಎಂದು ಆಕ್ಷೇಪಿಸುವವರು, ಅದು ಹಾಗೆ ರೂಪುಗೊಂಡದ್ದಕ್ಕೆ ಕಾರಣವಾದ ಸಾಂಸ್ಕೃತಿಕ ಸಂಗತಿಗಳನ್ನು ಮತ್ತು ಸಾಮಾಜಿಕ ಪರಿಸರವನ್ನು

ಅಷ್ಟಾಗಿ ಗಮನಕ್ಕೆ ತೆಗೆದುಕೊಂಡಂತೆ ತೋರುವು ದಿಲ್ಲ. ಮೇಲಾಗಿ ಒಬ್ಬ ಕವಿಯ ಕಾವ್ಯದ ಭಾಷೆ ಯನ್ನು ಕುರಿತು ನಿಜವಾದ ಸಹೃದಯರು ಎತ್ತಬೇ ಕಾದ ಪ್ರಶ್ನೆಗಳೇ ಬೇರೆಯ ತೆರನಾಗಿರಬೇಕು. ಅಂದರೆ ಒಬ್ಬ ಕವಿ ತನ್ನ ಅಭಿವ್ಯಕ್ತಿಗಾಗಿ ರೂಪಿಸಿ ಕೊಳ್ಳುವ ಭಾಷೆ ಅವನ ವಸ್ತು ಹಾಗೂ ಉದ್ದೇಶಕ್ಕೆ ಅನುಗುಣವಾಗಿದೆಯೆ ? ಅದು ಸಂವಹನಶೀಲವಾ ಗಿದೆಯೆ ಮತ್ತು ಒಂದು ಭಾಷಾ ಪರಂಪರೆಯಲ್ಲಿ ಅದರ ಎಲ್ಲ ಸಾಧ್ಯತೆಗಳನ್ನೂ ದುಡಿಸಿಕೊಳ್ಳುವುದರ ಮೂಲಕ ಒಂದು ಹೊಸ ಭಾಷೆಯನ್ನು ನಿರ್ಮಿಸಿ ದೆಯೆ ? ಇವು ಕೇಳಬೇಕಾದ ಪ್ರಶ್ನೆಗಳು.

ತುವು ಹುಟ್ಟಿ ಬಂದ ಮಲೆನಾಡಿನ ನಿಸರ್ಗದ ಚೆಲುವನ್ನು ಅದ್ಭುತವಾಗಿ ಚಿತ್ರಿಸಿದಂತೆಯೇ, ಅದರ ಒಡಲಿನ ಸಾಮಾಜಿಕ ಬದುಕನ್ನು, ಅದರ ದಟ್ಟ ವಿವರಗಳೊಡನೆ ಹಾಗೂ ಅದರ ಸಾಮಾಜಿಕ ಸ್ಥಿತ್ಯಂತರಗಳ ಜತೆಗೆ ದಾಖಲಿಸುತ್ತ, ಈ ಅರಣ್ಯ ಕೇಂದ್ರಿತ ಸಾಮಾಜಿಕ ಬದುಕಿನ ಮೂಲಕ ಇಡೀ ಭಾರತೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವ ನದ ಪಲ್ಲಟಗಳನ್ನೂ, ತಲ್ಲಣಗಳನ್ನೂ ಕುವೆಂಪು ಗ್ರಹಿಸಿದ ಕ್ರಮವು ಅನನ್ಯವಾಗಿದೆ. ಅದಕ್ಕಿಂತ ಮಿಗಿಲಾಗಿ ತಮ್ಮ ವರ್ಗದವರ ಬದುಕನ್ನು ಅದರ ಸಮಸ್ತ ವಿರೂಪಗಳ ಸಹಿತ ಅತ್ಯಂತ ವಸ್ತುನಿಷ್ಠ ವಾಗಿ, ಯಾವ ಹಿಂಜರಿಕೆಯೂ ಇಲ್ಲದೆ ಚಿತ್ರಿಸಿ ರುವ ರೀತಿಯು, ಒಬ್ಬ ಶ್ರೇಷ್ಠ ಕಲಾವಿದನಿಗಿರಬೇ ಕಾದ ಪ್ರಾಮಾಣಿಕತೆಯನ್ನೂ ದಿಟ್ಟತನವನ್ನೂ, ಅಲಿಪ್ತತೆಯನ್ನೂ ಸೂಚಿಸುತ್ತದೆ.

ಹುಟ್ಟನಿಂದ ಶೂದ್ರರೂ, ಹಿಂದಿನ ಅಥವಾ ಇಂದಿನ, ಅಂತರಂಗದ ಅಥವಾ ಬಹಿರಂಗದ ಯಾವ ಸಾಂಪ್ರದಾಯಿಕ ಉಪಾಧಿಗಳಿಗೂ ಬದ್ಧ ವಾಗದ ಒಂದು 'ನಿರಂಕುಶಮತಿ'ಯನ್ನು ಪ್ರತಿಪಾ ದಿಸಿದವರೂ ಆದ ಕುವೆಂಪು ಅವರು ಈ ದೇಶದ ವರ್ಣ ವರ್ಗಗಳನ್ನು ಕುರಿತು ಅತ್ಯಂತ ದಿಟ್ಟತನ ದಿಂದ ಹಾಗೂ ಯಾವುದೇ ಒಡಂಬಡಿಕೆಗಳಿಲ್ಲದೆ ಪ್ರಶ್ನೆ ಮಾಡಿದಂತೆ, ಅವರ ಸಮಕಾಲೀನರಾದ ಇತರ ಪ್ರಮುಖ ಬರಹಗಾರರಿಗೆ ಆ ಪ್ರಮಾಣ ದಲ್ಲಿ ಸಾಧ್ಯವಾಗಲಿಲ್ಲ ಅನ್ನುವುದೇ ಕುವೆಂಪು ಅವರ ವಿಶೇಷತೆಗಳಲ್ಲಿ ಒಂದಾಗಿದೆ. ಹಾಗೆಂದರೆ ಅವರ ಸಮಕಾಲೀನ ಪ್ರಮುಖ ಬರಹಗಾರರು ತಮ್ಮ ಸೃಜನಶೀಲತೆಯ ಉತ್ಕಟ ಕ್ಷಣಗಳಲ್ಲಿ, ಈ ಬಗೆಯ ಉಪಾಧಿಗಳನ್ನು ಮೀರುವಲ್ಲಿ ಹಾಗೂ ಸಮಸ್ಯೆಗಳನ್ನು ಎದುರಿಸುವಲ್ಲಿ ತಕ್ಕಮಟ್ಟಿಗೆ ಯಶ ಸ್ವಿಯಾಗಿಲ್ಲವೆಂದು ಈ ಮಾತಿನ ಅರ್ಥವಲ್ಲ.

ಸ್ವರ್ಗದ ಬಾಗಿಲು

ಕಳೆದ ನವೆಂಬರ್ ೧೧ನೆಯ ತಾರೀಖು ಗುರುವಾರ ಮೈಸೂರಿನ ನನ್ನ ಅಳಿಯನ ಮನೆಯಲ್ಲಿ ಬೆಳಗಿನ ಜಾವ ಬಂದ ಕನ್ನಡ ಪತ್ರಿಕೆಯನ್ನು ಓದಲು ತೆಗೆದುಕೊಂಡೆ. ಮುಖಪುಟದಲ್ಲಿ "ಕುವೆಂಪು ಇನ್ನಿಲ್ಲ." ದಿಗ್‌ಭ್ರಮೆಯಾಯ್ತು. ಮತ್ತೆ ಕನ್ನಡಕ ಒರೆಸಿ ಕೊಂಡು ಓದಿದೆ. "ಕುವೆಂಪು ಇನ್ನಿಲ್ಲ." ನಿಧಾನವಾಗಿ ಸಮಾಚಾರ ಓದಿದೆ. ತಕ್ಷಣ ನನ್ನ ಮಗಳಿಗೆ ಹೇಳಿ ಹತ್ತಿರವೇ ಇರುವ 'ಉದಯ ರವಿ'ಗೆ ಹೋದೆ. ಸುಮಾರು ಎಂಟು ಗಂಟೆ ಇರಬಹುದು. ಮನೆಯ ಮುಂದೆ ಬಹಳ ಜನರು ಸಾಲಾಗಿ ನಿಂತಿದ್ದರು. ನಾನೂ ಸಾಲಿ ನಲ್ಲಿ ನಿಂತು 'ಯುಗದ ಕವಿ'ಯ ಪಾರ್ಥಿವ ಶರೀರದ ದರ್ಶನ ಮಾಡಿ ನಮಸ್ಕರಿಸಿದೆ. ಎಡಗಡೆ ಕೊಠಡಿಯ ಬಾಗಿಲ ಮೇಲೆ ತೂಗು ಹಾಕಿದ್ದ ಅವರ ಪತ್ನಿಯ ಭಾವಚಿತ್ರವನ್ನು ನೋಡಿದೆ. ಮನಸ್ಸಿಗೆ ಹೊಳೆಯಿತು; ಈ ಪ್ರೇಮಮಯಿ ರಸಋಷಿ ತನ್ನ ಮನೋದೇ ವತೆಯನ್ನು ಸೇರಲು ಹೋರಟು ಹೋದ ರೆಂದು.

ಕೆಲವು ವರ್ಷಗಳ ಹಿಂದೆ ಕುವೆಂಪು ಅವರೇ ಬರೆದ "ಯಕ್ಷಪ್ರಶ್ನೆ" ಎಂಬ ಕವನ ವನ್ನು ಓದಿದ್ದೆ. ಅದು ಒಂದು ಕನಸಿನ ಚಿತ್ರ. ಬೆಳಗಿನ ಜಾವದ ಮನಃಪಟದ ಚಿತ್ರವಿರ ಬೇಕು. ಅದು ಇಂತಿದೆ.

ಕುವೆಂಪು ಸ್ವರ್ಗಕ್ಕೆ ಹೋದರಂತೆ. ಹೆಬ್ಬಾ ಗಿಲು ಮುಚ್ಚಿತ್ತು. ಬಾಗಿಲು ತಟ್ಟಿದರು.

ಆದರೆ ಜಾತಿಪದ್ಧತಿ, ವರ್ಣ ವ್ಯವಸ್ಥೆ, ಮೂಢನಂಬಿಕೆಗಳು, ಸಾಂಸ್ಥಿಕ ಧರ್ಮದ ಪ್ರತಿನಿಧಿಗಳಾದ ದೇವಸ್ಥಾನಗಳು ಹಾಗೂ ಈ ಎಲ್ಲವನ್ನೂ ಬಂಡವಾಳವನ್ನಾಗಿ ಮಾಡಿಕೊಂಡ ಪುರೋಹಿತಶಾಹೀ ಚಾತುರ್ಯಗಳು ಇತ್ಯಾದಿಗಳನ್ನು ನಿರ್ದಾಕ್ಷಿಣ್ಯವಾಗಿ ಹಾಗೂ ಉಗ್ರವಾಗಿ ಚಿಕಿತ್ಸೆಗೊಳಪಡಿಸಿದ ಕುವೆಂಪು ಅವರ ವೈಚಾರಿಕತೆಗೆ ಇರುವ ಬಂಡಾಯದ ಮನೋಧರ್ಮ, ಕ್ರಾಂತಿಕಾರಕ ಲಕ್ಷಣ. ಬೇರೆ ಯಾರಲ್ಲಿಯೂ ಈ ಪ್ರಮಾಣದಲ್ಲಿ ಕಾಣಿಸಿಕೊಳ್ಳುವುದಿಲ್ಲ.

ಕುವೆಂಪು ಮೂಲತಃ ಯಾವುದೇ ಸಿದ್ಧ ಸಂಪ್ರದಾಯಕ್ಕೆ ಸೇರದವರಾಗಿದ್ದರೂ, ಅವರು ಈ ದೇಶದ ಸಾಹಿತ್ಯಕ-ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ತಮ್ಮ ಅಧ್ಯಯನದ ಮೂಲಕ ಮೈಗೂಡಿಸಿಕೊಂಡು, ಅದನ್ನು ತಮ್ಮ ಕಾಲಧರ್ಮದ ಸಂದರ್ಭದಲ್ಲಿ ಪುನರ್ ವ್ಯಾಖ್ಯಾನಿಸಿರುವ ಕ್ರಮವು ವಿಶೇಷ ರೀತಿಯದಾಗಿದೆ. ಸಾಹಿತ್ಯದ ದಿಕ್ಕಿನಿಂದ ನೋಡುವುದಾದರೆ, ಕುವೆಂಪು ಕನ್ನಡ ಸಾಹಿತ್ಯ ಪರಂಪರೆಯ ಮೂಲಕ ಕನ್ನಡದ ಅನೇಕ ಮಹತ್ವದ ಲೇಖಕರಂತೆ- ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದವರಲ್ಲ; ಅವರು ಇಂಗ್ಲಿಷ್ ಸಾಹಿತ್ಯ ಪರಂಪರೆಯ ದಿಕ್ಕಿನಿಂದ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದರು. ಯಾಕೆಂದರೆ ಅವರು ಮೊದಲು ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಂಡದ್ದು ಕನ್ನಡದಿಂದ ಅಥವಾ ಕನ್ನಡದಲ್ಲಿ ಅಲ್ಲ; ಇಂಗ್ಲಿಷಿನಲ್ಲಿ ಅನ್ನುವುದು ಸ್ವಾರಸ್ಯದ ಸಂಗತಿಯಾಗಿದೆ! ಕುವೆಂಪು, ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಎಸ್.ಎಸ್.ಎಲ್.ಸಿ. ತರಗತಿಯ ವಿದ್ಯಾರ್ಥಿಯಾದ ಕಾಲಕ್ಕೆ 'ದಿ ಬಿಗಿನರ್ಸ್ ಮ್ಯೂಸ್' (The beginner's Muse) ಎಂಬ ಹೆಸರಿನ ಕವನ ಸಂಕಲನವನ್ನು ಪ್ರಕಟಿಸಿ ಇಂಗ್ಲಿಷ್ ಭಾಷೆಯ ಕವಿ ಎಂದು ಹೆಸರು ಮಾಡಿದರು! ಅವರು ಮುಂದೆ ಕನ್ನಡದ ಕವಿಯಾದದ್ದು ಹಾಗೂ ಕನ್ನಡ ಕಾವ್ಯಲೋಕವನ್ನು ಶ್ರೀಮಂತಗೊಳಿಸಿದ್ದು ಬೇರೊಂದು ಕತೆ.

ಈ ಸಂಗತಿಯ ಪ್ರಸ್ತಾಪದಿಂದ ನಿಷ್ಪನ್ನವಾಗುವ ಸಂಗತಿಯೆಂದರೆ, ಕುವೆಂಪು ಅವರು ಹುಟ್ಟಿ ಬೆಳೆದು ಬಂದಂಥ ಶೂದ್ರ ಸಮುದಾಯದ ಎಚ್ಚರಕ್ಕೆ ಅಂದು ಈ ದೇಶಕ್ಕೆ ಬಂದ ವಸಾಹತುಶಾಹಿ ಸಂದರ್ಭ ಮತ್ತು ತತ್ಪರಿಣಾಮವಾದ ಇಂಗ್ಲಿಷ್ ಶಾಲೆಗಳು ಒದಗಿಸಿದ ಶಿಕ್ಷಣದ ಅವಕಾಶ ಬಹು ಮುಖ್ಯವಾದ ಸಂಗತಿಯಾಗಿದೆ. ಅವರೇ ತಮ್ಮ

"ಯಾರದು ?" ಎಂದು ಯಕ್ಷ ಕೇಳಿದನಂತೆ. ಆಗ ಕುವೆಂಪು, "ನಾನು ಪುಟ್ಟಪ್ಪ," ಎಂದರಂತೆ. ಪುನಃ ಯಕ್ಷ, "ಯಾವ ಪುಟ್ಟಪ್ಪ ?" ಎಂದು ಕೇಳಿದ್ದಕ್ಕೆ, "ನಾನು ಕೆ.ವಿ. ಪುಟ್ಟಪ್ಪ," ಎಂದರಂತೆ. ಬಾಗಿಲು ತೆಗೆಯಲಿಲ್ಲ. ಆಗ ಕುವೆಂಪು, "ಪ್ರೊಫೆಸರ್ ಪುಟ್ಟಪ್ಪ," ಎಂದರು; "ವೈಸ್‌ಚಾನ್ಸೆಲರ್ ಪುಟ್ಟಪ್ಪ," ಎಂದರು; " 'ರಾಮಾಯಣ ದರ್ಶನಂ' ರಚಿಸಿದ ಪುಟ್ಟಪ್ಪ" ಎಂದರು; ಕೊನೆಗೆ "ರಾಷ್ಟ್ರಕವಿ ಪುಟ್ಟಪ್ಪ," ಎಂದರು. ಯಾವುದಕ್ಕೂ ಯಕ್ಷ ಉತ್ತರಿಸಲಿಲ್ಲ. ಸಗ್ಗದ ಬಾಗಿಲೂ ತೆಗೆಯಲಿಲ್ಲ. ಕುವೆಂಪುಗೆ ತಮ್ಮ ಅಸಹಾಯಕತೆಯಿಂದಾಗಿ ಕೋಪ ಬಂತು; ತಮ್ಮ ದೊಡ್ಡಸ್ತಿಕೆಗೆ ಬೆಲೆಯೇ ಸಿಗಲಿಲ್ಲವೆಂದು ರೋಷವೂ ಉಕ್ಕಿತು.

ಸ್ವಲ್ಪ ಹೊತ್ತಿನ ನಂತರ ಕೋಪ ಇಳಿದು ಮನಸ್ಸು ತಿಳಿಯಾದ ಮೇಲೆ ಮತ್ತೊಂದು ವಿಚಾರ ನೆನಪಿಗೆ ಬಂತು. ನಾಚಿಕೆಯನ್ನು ಅದುಮಿ ಕುವೆಂಪು, "ನಾನು.. ಹೇಮೀ ಗಂಡ...." ಎಂದು ಕೂಗಿ ಹೇಳಿದರಂತೆ. ತಕ್ಷಣವೇ ಸಗ್ಗದ ಬಾಗಿಲು ದಢಾರನೆ ತೆಗೆಯಿತು. ಕುವೆಂಪು ಒಳಹೋದರು. ಎದುರಿಗೆ ಅವರ ಮನದನ್ನೆ ಹೇಮಾವತಿ ತೋಳನ್ನೇ ತಲೆದಿಂಬಾಗಿಸಿಕೊಂಡು ಮಲಗಿ ನಿದ್ದೆಯಲ್ಲೂ ನಸುನಗುತ್ತಿರುವ ಮುಖವನ್ನು ನೋಡಿದರಂತೆ. ಇದು ಅವರ ಕನಸಂತೆ.

ಆದರೆ ಇಂದು ಅದು ನಿಜವೂ ಆಗಿರಬಹುದೆ ?

● ಕೆ.ಟಿ. ರಾಮಸ್ವಾಮಿ

ಆತ್ಮಕಥನವಾದ 'ನೆನಪಿನ ದೋಣಿ''ಯಲ್ಲಿ ಹೇಳಿಕೊಂಡಿರುವಂತೆ (ಪುಟ ೧೬೯) "ಇಂಡಿಯಾ ದೇಶವನ್ನು ಗೆದ್ದು ಅದರ ರಾಜಕೀಯ ಅವ್ಯವಸ್ಥೆಗೆ ಒಂದು ಸುವ್ಯವಸ್ಥೆಯನ್ನು ತಂದುಕೊಟ್ಟು, ಬ್ರಾಹ್ಮಣಾದಿ ಉಚ್ಚ ವರ್ಣದವರಿಂದ ಸಾವಿರಾರು ವರ್ಷಗಳಿಂದ ತುಳಿಯಲ್ಪಟ್ಟು ಶೋಷಿಸಲ್ಪಟ್ಟು, ದಾಸ್ಯತ್ವವನ್ನೇ ದೈವತ್ವವೆಂದೂ, ವಿಧಿಯೆಂದೂ ಒಪ್ಪಿಕೊಂಡು ಕಾಲಡಿಯ ಕಸವಾಗಿಬಿದ್ದಿದ್ದ ಶೂದ್ರಾದಿ ವರ್ಗದವರನ್ನು ತಲೆಯೆತ್ತುವಂತೆ ಪ್ರೇರಿಸಿದ್ದೂ ಇಂಗ್ಲಿಷೇ."

ಕುವೆಂಪು ಮುಂದೆ ಕನ್ನಡದ ಮಹತ್ವದ ಸಾಹಿತಿಯಾಗಿ, ಶಿಕ್ಷಣವೇತ್ತರಾಗಿ, ಕನ್ನಡ ಮಾಧ್ಯಮದ ಹೋರಾಟಗಾರರಾಗಿ, ಸ್ವಾತಂತ್ರ್ಯೋತ್ತರ ಭಾರತದ ಬದುಕಿನಲ್ಲಿ ಇಂಗ್ಲಿಷಿಗೆ ಯಾವ ಸ್ಥಾನವಿರಬೇಕು ಎಂಬುದನ್ನು ಕುರಿತು ತಾಳಿದ ನಿಲುವುಗಳನ್ನು ಬದಿಗಿರಿಸಿ ನೋಡಿದರೂ, ಈ ದೇಶದ ಅಪ್ರತಿಷ್ಠಿತ ಸಮುದಾಯದ ಬಿಡುಗಡೆಗೆ ಹಾಗೂ ಅಭ್ಯುದಯದಕ್ಕೆ ಇಂಗ್ಲಿಷ್ ಭಾಷೆ ಹಾಗೂ ಅದರ ಶಿಕ್ಷಣ ಒಂದು ದಾರಿಯಾಯಿತೆಂಬುದು ಚಾರಿತ್ರಿಕ ಸತ್ಯವಾಗಿದೆ. ಅಷ್ಟೇ ಅಲ್ಲ, ಕುವೆಂಪು ಅವರಿಗೆ ಆಧ್ಯಾತ್ಮ ಸಾಹಿತ್ಯ ಹಾಗೂ ಆ ಪರಂಪರೆಯ ಬಾಗಿಲು ತೆರೆದದ್ದೂ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾದ ಸ್ವಾಮಿ ವಿವೇಕಾನಂದರ ಜೀವನ ಹಾಗೂ ಕೃತಿಗಳ ಅಧ್ಯಯನದಿಂದಲೇ. ಹೀಗೆ ಕುವೆಂಪು ಅವರಿಗೆ ಎಳೆಯಂದಿನಲ್ಲಿಯೇ ಪಶ್ಚಿಮದ ಮಹಾಸಾಹಿತ್ಯ ಕೃತಿಗಳೂ, ಭಾರತೀಯ ಆಧ್ಯಾತ್ಮಿಕ ಸಾಹಿತ್ಯ ಪರಂಪರೆಯೂ, ಅರವಿಂದ, ರಾಮಕೃಷ್ಣ ವಿವೇಕಾನಂದ, ಗಾಂಧಿ, ಟ್ಯಾಗೋರ್- ಇತ್ಯಾದಿ ಮಹಾವಿಭೂತಿಗಳೂ ವ್ಯಕ್ತಿತ್ವದೊಳಗೆ ಪ್ರವೇಶಿಸಿದ್ದು ಇಂಗ್ಲಿಷಿನ ಮೂಲಕವೇ. ಅನಂತರ ಅವರು ಬಿ.ಎ. ತರಗತಿಗೆ ಬಂದು ಕನ್ನಡವನ್ನು ತಮ್ಮ ಅಧ್ಯಯನದ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡು, ಆ ಪರಂಪರೆಯನ್ನು ತಮ್ಮದನ್ನಾಗಿ ಮಾಡಿಕೊಂಡರು. ಈ ಎಲ್ಲ ಮಾತಿನ ಸಾರಾಂಶವೆಂದರೆ ಕುವೆಂಪು ಅವರು ತಮಗೆ ಅಗತ್ಯವಾದ ಸಾಹಿತ್ಯ ಪರಂಪರೆಯನ್ನು, ಈ ದೇಶದ ಸಾಂಸ್ಕೃತಿಕ ಪರಂಪರೆಯನ್ನು ಅತ್ಯಂತ ಶ್ರಮದಿಂದ ಮೈಗೂಡಿಸಿಕೊಳ್ಳಬೇಕಾಯಿತು. ಈ ದೇಶದ ಮೇಲ್ ವರ್ಗದಿಂದ ಬಂದ ಸಾಹಿತಿಗಳು, ತಮ್ಮ ಪರಂಪರೆಯನ್ನು ಅನಾವರಣ ಮಾಡಿಕೊಳ್ಳಲು ಶೂದ್ರ ವರ್ಗದಿಂದ ಬಂದ ಕುವೆಂಪು ಅವರಷ್ಟು ಕಷ್ಟಪಡಬೇಕಾಗಿರಲಿಲ್ಲ. ಆದರೂ ಸ್ವಯಂ ಶ್ರಮದಿಂದ ಹೀಗೆ ಈ ದೇಶದ ಧಾರ್ಮಿಕ-ಸಾಂಸ್ಕೃತಿಕ ಪರಂಪರೆಯನ್ನು ಮೈಗೂಡಿಸಿಕೊಂಡ ಕುವೆಂಪು, ಆ ಪರಂಪರೆಯನ್ನು ತಮ್ಮ ಸಾಹಿತ್ಯ ನಿರ್ಮಿತಿಯ ಸಂದರ್ಭದಲ್ಲಿ ಚಿಕಿತ್ಸೆಗೆ ಹಾಗೂ ಪುನರ್ ವ್ಯಾಖ್ಯಾನಕ್ಕೆ ಗುರಿಪಡಿಸಿರುವ ಕ್ರಮವು ವಿಶೇಷ ರೀತಿಯದಾಗಿದೆ. ಅವರ 'ಶೂದ್ರ ತಪಸ್ವಿ', 'ಬೆರಳ್ಗೆ ಕೊರಳ್', 'ಸ್ಮಶಾನ ಕುರುಕ್ಷೇತ್ರ' ಹಾಗೂ 'ರಾಮಾಯಣ ದರ್ಶನಂ'ಗಳಲ್ಲಿ ಪ್ರಾಚೀನ ಕಥಾವಸ್ತುಗಳನ್ನು ನಮ್ಮ ಕಾಲದ ಅಗತ್ಯಕ್ಕೆ ತಕ್ಕ ಹಾಗೆ ವ್ಯಾಖ್ಯಾನಿಸಿರುವ ಕ್ರಮವನ್ನು ಕಾಣಬಹುದು. ಈ ಪ್ರಯತ್ನಗಳು ಕನ್ನಡದಲ್ಲಿ ಮೊಟ್ಟಮೊದಲ ಹೊಸ ಪ್ರಯತ್ನಗಳಂತೆ ತೋರಬಹುದಾದರೂ ಈ ಬದಲಾವಣೆಗಳು ಹಿಂದೂ ಸಂಸ್ಕೃತಿಯನ್ನು ಸಮಗ್ರವಾದ ಶೋಧನೆಗೆ ಹಾಗೂ ಚಿಕಿತ್ಸೆಗೆ ಗುರಿಪಡಿಸಲು ಸಾಧ್ಯವಾಗಿಲ್ಲವೆಂದೂ, ಪ್ರತಿ ಸಂಸ್ಕೃತಿಯ ನಿರ್ಮಾಣ ಮಾಡುವುದರಲ್ಲಿ ಸಫಲವಾಗಿಲ್ಲವೆಂದೂ, ಅವು ಮತ್ತೆ ಪ್ರಾಚೀನ ಭಾರತೀಯ ಮಹತ್ ಪರಂಪರೆಯನ್ನೇ ಸಮರ್ಥಿಸುವ ಕೇವಲ ಸುಧಾರಣಾವಾದಿ ನಿಲುವುಗಳಾಗಿಬಿಡುತ್ತವೆಂದೂ- ಸಮಕಾಲೀನ ವಿಮರ್ಶೆ ತನ್ನ ಪ್ರತಿಕ್ರಿಯೆಗಳನ್ನು ಪ್ರಕಟಿಸಿದೆ.

ಕುವೆಂಪು ಸಾಹಿತ್ಯದ ಇನ್ನೊಂದು ಮುಖ್ಯ ಲಕ್ಷಣವೆಂದರೆ ಆಧ್ಯಾತ್ಮ. ಆಧ್ಯಾತ್ಮ ಎನ್ನುವುದು, ಮುಖ್ಯವಾಗಿ ಎಲ್ಲ ಜಾತಿ ಮತಗಳನ್ನೂ ನಿರಾಕರಿಸುತ್ತ, ಪ್ರತಿಯೊಂದು ಜೀವವೂ ತನ್ನ ಸ್ವಭಾವಕ್ಕೆ ಅನುಸಾರವಾಗಿ ತನ್ನ ಪರಿಣಾಮಕ ಪಥದಲ್ಲಿ ಮುನ್ನಡೆದು ತನ್ನ ಸ್ವರೂಪವನ್ನು ಆವಿಷ್ಕಾರ ಮಾಡಿಕೊಳ್ಳುವ ಹಕ್ಕು ಮತ್ತು ಸ್ವಾತಂತ್ರ್ಯ ಈ ಎರಡಕ್ಕೂ ಅಧಿಕಾರಿ- ಎನ್ನುವ ಶ್ರದ್ಧೆ. ಅದು ಒಂದು ರೀತಿಯಲ್ಲಿ ಎಲ್ಲದರ ಹಿಂದಿರುವ ಏಕತೆಯ ದರ್ಶನ. ಅದೊಂದು ರೀತಿಯ ಅದ್ವೈತ. ಇದು ಕೇವಲ ಶಂಕರಾಚಾರ್ಯರ 'ಅದ್ವೈತ' ಅಲ್ಲ; 'ಈಶಾವಾಸ್ಯಮಿದಂ ಸರ್ವಂ' ಎಂಬ ಉಪನಿಷತ್ತಿನ ಅದ್ವೈತ. ಯಾವ ಒಂದು ಮನಃಸ್ಥಿತಿ ಮೂಲತಃ ಜಡ ಮತ್ತು ಚೇತನ ಎಂಬ ತಾರತಮ್ಯವನ್ನು-

(ಕುವೆಂಪು ಅವರ ನಿಸರ್ಗ ಕವಿತೆಗಳಲ್ಲಿ ಮತ್ತೆ ಮತ್ತೆ ಪ್ರಸ್ತಾಪಿತವಾಗುವ ಜಡ-ಚೇತನಗಳ ಚರ್ಚೆಯನ್ನು ಗಮನಿಸಬೇಕು) ಒಪ್ಪುವುದಿಲ್ಲವೋ, ಅದು ಸಾಮಾಜಿಕ ನೆಲೆಯ ತಾರತಮ್ಯಗಳನ್ನು ನಿರಾಕರಿಸುವುದು ಸಹಜವಾಗಿದೆ. ಹೀಗೆ ಕುವೆಂಪು ಪ್ರತಿಪಾದಿಸುವ ಈ 'ಅದ್ವೈತ' ಏಕಕಾಲಕ್ಕೆ ಆಧ್ಯಾತ್ಮಿಕವೂ ಹೌದು, ಸಾಮಾಜಿಕವೂ ಹೌದು. ಇದನ್ನು 'ಹೊಸ ಪರಿಭಾಷೆ'ಯಲ್ಲಿ ಘೋಷಿಸಿದ ಗಾಂಧಿಯವರ 'ಸರ್ವೋದಯ' ಎಂಬ ಮಾತು ಕುವೆಂಪು ಅವರಿಗೆ ತುಂಬ ಪ್ರಿಯವಾದುದು. ಕುವೆಂಪು 'ಸರ್ವೋದಯ' ಎನ್ನುವುದು ಒಂದು ಯುಗಮಂತ್ರ. ಆದ ಕಾರಣವೇ ಸರ್ವೋದಯ ವಿರೋಧಿಯಾದ ಚಾತುರ್ವರ್ಣ, ಜಾತಿ ಪದ್ಧತಿ, ದೇವಸ್ಥಾನಗಳು ಹಾಗೂ ಪುರೋಹಿತಶಾಹಿಯನ್ನು ವಿರೋಧಿಸುತ್ತ, ಗಾಢವಾದ ಮಾನವೀಯ ಕಾಳಜಿಗಳನ್ನು ಪ್ರತಿಪಾದಿಸುವ ಕುವೆಂಪು ನಮಗೆ ಸಾಂಸ್ಕೃತಿಕವಾಗಿ ಅತ್ಯಂತ ಮುಖ್ಯವಾಗುತ್ತಾರೆ.

ಆಧುನಿಕ ವಿಜ್ಞಾನಕ್ಕೆ ಕುವೆಂಪು ತೋರುವ ಪ್ರತಿಕ್ರಿಯೆ ಅವರನ್ನು ಇತರ ಸಾಹಿತಿಗಳಿಂದ ಪ್ರತ್ಯೇಕಿಸುವ ಸಂಗತಿಯಾಗಿದೆ. ಖಗೋಳ ವಿಜ್ಞಾನ, ಭೌತ ವಿಜ್ಞಾನ, ಯೋಗ ವಿಜ್ಞಾನ, ಮನೋವಿಜ್ಞಾನಗಳು ಅವರ ಸಾಹಿತ್ಯವನ್ನೂ ವೈಚಾರಿಕತೆಯನ್ನೂ ರೂಪಿಸಿರುವ ಕ್ರಮವು ಒಂದು ಅಧ್ಯಯನದ ವಿಷಯವೇ ಆಗುತ್ತದೆ. ಹಾಗೆಯೆ ಜಾಗತಿಕವಾದ ಸಮಾಜವಾದಿ ನಿಲುವುಗಳಿಗೆ ಅವರು ಸ್ಪಂದಿಸಿರುವ ಹಾಗೂ ಪ್ರತಿಕ್ರಿಯಿಸಿರುವ ರೀತಿಗಳನ್ನು ಅವರ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಹಾಗೆ ನೋಡಿದರೆ ಕುವೆಂಪು ಅವರ ಸಾಹಿತ್ಯವೆಲ್ಲವೂ ಒಂದರ್ಥದಲ್ಲಿ ಸ್ವಾತಂತ್ರ್ಯಪೂರ್ವದ ಆಶೋತ್ತರಗಳ ಅಭಿವ್ಯಕ್ತಿಯಾಗಿ ಮತ್ತು ಸ್ವಾತಂತ್ರ್ಯೋತ್ತರ ಭಾರತದ ವಾಸ್ತವಗಳನ್ನು ಕುರಿತ ವಿಮರ್ಶೆಯಾಗಿ ತೋರುತ್ತದೆ. ಹಾಗೆಯೆ ಸಾಹಿತ್ಯ ನಿರ್ಮಿತಿಯ ನೆಲೆಯಲ್ಲಿ, ಈ ದೇಶದ ಪರಂಪರೆಗೆ ಅವರು ತೋರಿದ ಸೃಜನಾತ್ಮಕ ಪ್ರತಿಕ್ರಿಯೆಗಳು ಮತ್ತು ಜಾಗತಿಕ ಪ್ರಜ್ಞೆಯನ್ನು ಅವರು ಅರಗಿಸಿಕೊಂಡ ಕ್ರಮಗಳು ಮತ್ತು ಯುಗ ಪರಿವರ್ತನೆಯ ಸೂಕ್ಷ್ಮಗಳಿಗೆ ಸ್ಪಂದಿಸುತ್ತ, ಅವುಗಳನ್ನು ಗುರುತಿಸಿ ತಮ್ಮ ಬರಹದ ಮೂಲಕ ಅದಕ್ಕೆ ಹೊಂದುವಂತೆ ಜನಮನವನ್ನು ಸಜ್ಜುಗೊಳಿಸಿದ ಪ್ರಯತ್ನಗಳು ಕುವೆಂಪು ಅವರನ್ನು ಈ ಯುಗಮಾನದ ಮಹತ್ವದ ಲೇಖಕರನ್ನಾಗಿ ಮಾಡಿದೆ. ಈ ಹಿನ್ನಲೆಯಿಂದ ಹೇಳುವುದಾದರೆ ಈ ರಾಷ್ಟ್ರದ ಪರಂಪರೆಯನ್ನು ಹಾಗೂ ಚರಿತ್ರೆಯನ್ನು ಆರೋಗ್ಯಪೂರ್ಣವಾದ ಚರ್ಚೆಗೆ ಗುರಿಪಡಿಸುತ್ತ, ತಮ್ಮ ಕಾಲಮಾನದ ಯುಗಧರ್ಮಕ್ಕೆ ತೀವ್ರವಾಗಿ ಸ್ಪಂದಿಸಿದವರಲ್ಲಿ ಕುವೆಂಪು ಅಗ್ರಗಣ್ಯರೆಂದು ಹೇಳಬೇಕು.

●


ಕುವೆಂಪು ಉವಾಚ

ದೊಡ್ಡ ಮನಸ್ಸಿನಿಂದ ಮಾಡಿದ ಸಣ್ಣ ಕಾರ್ಯಗಳು ಸಣ್ಣ ಮನಸ್ಸಿನಿಂದ ಮಾಡಿದ ದೊಡ್ಡ ಕಾರ್ಯಗಳಿಗಿಂತಲೂ ಎಷ್ಟೋ ಶ್ರೇಷ್ಠವಾದವುಗಳೆಂದು ನನ್ನ ನಿಶ್ಚಲವಾದ ಅಭಿಪ್ರಾಯ. ಮಹಿಮೆ ಕಾರ್ಯಗಳಲ್ಲಿಲ್ಲ; ಕಾರ್ಯ ಮಾಡಿಸುವ ಚಿತ್ತವೃತ್ತಿಯಲ್ಲಿದೆ.

- 'ಸಂನ್ಯಾಸಿ ಮತ್ತು ಇತರ ಕಥೆಗಳು'ಇಂದ

ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರ ಹಿತಾಸಕ್ತ ಪ್ರತಿಗಾಮಿ ಶಕ್ತಿಗಳು, ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವಳನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ಬಲಾತ್ಕಾರದ ಇಂಗ್ಲೀಷ್ ಭಾಷೆಯಿಂದಲೂ ಇಂಗ್ಲೀಷ್ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೆಯ ಜಿಲೊಟಿನ್ನಿಗೆ ಕೋಟ್ಯಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಆ ನಷ್ಟದ ಪರಿಣಾಮವನ್ನು ಊಹಿಸಲು ಸಾಧ್ಯವಿಲ್ಲ. ಬಹುಶಃ, ಸರಿಯಾಗಿ ಲೆಕ್ಕ ಹಾಕಿದರೆ, ನಾಲ್ಕಾರು ಪಂಚವಾರ್ಷಿಕ ಯೋಜನೆಗಳ ಮೊತ್ತವೆ ಆದರೂ ಆಗಬಹುದೇನೋ!

- 'ಮನುಜಮತ ವಿಶ್ವಪಥ'ದಿಂದ



ಕುವೆಂಪು-
ಕೆಲವು ಪ್ರಸಂಗಗಳು...

'ಕುವೆಂಪು ಕೆಲವು ಪ್ರಸಂಗಗಳು' ಎಂಬ ಈ ಶೀರ್ಷಿಕೆಯಲ್ಲಿ ಕುವೆಂಪು ಅವರ ಕಾವ್ಯ ಪ್ರತಿಭೆಯನ್ನು ಗುರುತಿಸಿ, ಅವರ ಭವ್ಯ ಜೀವನವನ್ನು ರೂಪಿಸುವುದರಲ್ಲಿ ಕನ್ನಡದ ಆಚಾರ್ಯರೂ, ಪ್ರಾತಃಸ್ಮರಣೀಯರೂ ಆದ ಬಿ.ಎಂ.ಶ್ರೀ., ಎ.ಆರ್. ಕೃಷ್ಣಶಾಸ್ತ್ರಿ ಹಾಗೂ ಟಿ.ಎಸ್. ವೆಂಕಣ್ಣಯ್ಯನವರು ಎಂತಹ ಮಹತ್ವದ ಪಾತ್ರವನ್ನು ವಹಿಸಿದರು ಎಂಬುದಕ್ಕೆ ಸಾಕ್ಷಿಯಾಗಿ ಸ್ವತಃ ಕುವೆಂಪು ಅವರೇ ಬರೆದ ಲೇಖನಗಳಿಂದ ಆಯ್ದ ಕೆಲವು ಪ್ರಸಂಗಗಳನ್ನು ಪ್ರಸ್ತುತಪಡಿಸುವುದೇ ಲೇಖನದ ಮುಖ್ಯ ಉದ್ದೇಶ.

● ಡಾ. ಕೆ. ಶ್ರೀಕಂಠಯ್ಯ

ಯುಗದ ಕವಿಗೆ ಜಗದ ಕವಿಗೆ
ಶ್ರೀ ರಾಮಾಯಣ ದರ್ಶನದಿಂದಲೇ ಕೈ
ಮುಗಿದ ಕವಿಗೆ ಮಣಿಯದವರಾರು...
ರಾಮಕೃಷ್ಣ ವಚನೋದಿತ ಪ್ರತಿಭೆತೆರೆದ
ಕವನತತಿಗೆ ತಣಿಯದವರಾರು....
ಮಲೆನಾಡಿನ ಸೌಂದರ್ಯಕೆ ಕುಣಿದಾಡಿದ
ಕವಿಯ ಜೊತೆಗೆ ಕುಣಿಯದವರಾರು....

ಕವಿ ಕುವೆಂಪು ಅವರಿಗೆ ಅಭಿಮಾನಿಗಳು ಅರ್ಪಿಸಿದ ಸಾವಿರ ಪುಟಗಳಿಗೂ ಮೀರಿದ 'ಗಂಗೋತ್ರಿ' ಎಂಬ ಬೃಹತ್ ಅಭಿನಂದನ ಗ್ರಂಥದ ಪ್ರಾರಂಭದಲ್ಲೇ ವರಕವಿ ದ.ರಾ. ಬೇಂದ್ರೆಯವರು ಹಾಡಿರುವ ನಾಂದಿ ಪದ್ಯದ ಈ ಚರಣಗಳಿವೆ. ಇದರಲ್ಲಿ ಕವಿ ಕುವೆಂಪು ಅವರ ಘನವ್ಯಕ್ತಿತ್ವವನ್ನು ಸೆರೆಹಿಡಿದಿರುವುದನ್ನು ಕಾಣಬಹುದು.

೧೯೪೭-೫೦. ಭಾರತಕ್ಕೆ ಸ್ವಾತಂತ್ರ್ಯ ಸಂದ ಪ್ರಾರಂಭದ ದಿನಗಳಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ನಾನು. ಆಗ ಕನ್ನಡದ ಪ್ರಾಧ್ಯಾಪಕರಾಗಿದ್ದ ಕುವೆಂಪು ಅವರ ಕನ್ನಡದ ಕಂಪಿನ ಇಂಪಿಗೆ ತಲೆದೂಗುವ, ಮಾರುಹೋಗುವ ಅನೇಕ ಸಂದರ್ಭಗಳು ಒದಗಿದುವು., ಅವೆಲ್ಲ ಮಧುರ ಸ್ಮರಣೆಗಳಾಗಿ ಅವರು ನಮ್ಮನ್ನು ಅಗಲಿ ಹೋಗಿರುವ ಈ ಸಂದರ್ಭದಲ್ಲಿ ಅಲೆಅಲೆಯಾಗಿ ನೆನಪಿಗೆ ಬರುತ್ತಿವೆ.

ಮೈಸೂರು ಮಹಾರಾಜ ಕಾಲೇಜಿನ ಮಧ್ಯದಲ್ಲಿನ ಹಸಿರು ಹುಲ್ಲಿನ ಸಭಾಂಗಣ ಹಾಗೂ ಪ್ರವೇಶ ದ್ವಾರದ ಹಿಂಬದಿಯಲ್ಲಿರುವ ಜ್ಯೂನಿಯರ್ ಬಿ.ಎ., ಹಾಗೂ ಸೀನಿಯರ್ ಬಿ.ಎ. ಸಭಾಂಗಣಗಳೆಂದು ಹೆಸರಾಗಿರುವಂಥವು ಎರಡು ವಿಶಾಲ ಕೊಠಡಿಗಳು. ಅವು ತರಗತಿಗಳೂ ಹೌದು, ಸಭಾಗೃಹಗಳೂ ಹೌದು. ಸೀನಿಯರ್ ಬಿ.ಎ. ಹಾಲ್‌ಗೆ ಸ್ವಲ್ಪ ದೂರದಲ್ಲೇ ಕನ್ನಡ ಪ್ರಾಧ್ಯಾಪಕರ ಕೊಠಡಿ. ಕನ್ನಡ ನಾಡಿನ ಭೂಪಟ, ಕನ್ನಡ ಲಿಪಿಯ ಬೆಳವಣಿಗೆಯ ಚಿತ್ರ, ಕನ್ನಡದ ಮಹಾಮಹಾವ್ಯಕ್ತಿಗಳ ಭಾವಚಿತ್ರಗಳು- ಕನ್ನಡ ಪ್ರಾಧ್ಯಾಪಕರ ಕೊಠಡಿಯನ್ನು ಅಲಂಕರಿಸಿದ್ದುವು. ಕುವೆಂಪು ಕನ್ನಡ ಆನರ್ಸ್ ಹಾಗೂ ಎಂ.ಎ. ತರಗತಿಗಳನ್ನು ವಿಶೇಷವಾಗಿ ತೆಗೆದುಕೊಳ್ಳುತ್ತಿದ್ದರೇ ಹೊರತು, ನೂರು ಇನ್ನೂರು ವಿದ್ಯಾರ್ಥಿಗಳು ಸೇರುತ್ತಿದ್ದ ಜ್ಯೂನಿಯರ್ ಹಾಗೂ ಸೀನಿಯರ್ ಬಿ.ಎ. ಹಾಲ್‌ನಲ್ಲಿ ಅವರು ಪಾಠ ಮಾಡಿದ್ದೇ ನೆನಪಿಲ್ಲ. ಬಹಳ ಮಟ್ಟಿಗೆ ಆನರ್ಸ್ ಹಾಗೂ ಎಂ.ಎ. ವಿದ್ಯಾರ್ಥಿಗಳು- ಪ್ರಾಧ್ಯಾಪಕರ ಕೊಠಡಿಗೇ ಬರುತ್ತಿದ್ದರು. ಹೀಗಾಗಿ ಕುವೆಂಪು ತಮ್ಮ ಕೊಠಡಿಯನ್ನು ಬಿಟ್ಟು ಕಾಲೇಜಿನ ಪ್ರಾಂಗಣದಲ್ಲಿ ಓಡಾಡುತ್ತಿದ್ದುದೇ ತೀರ ಅಪರೂಪ. ಕುವೆಂಪು ಯಾವಾಗ ಎತ್ತ ಕಡೆಯಿಂದ ಬರುತ್ತಾರೆ, ಎತ್ತ ಕಡೆಯಿಂದ ಯಾವಾಗ ಹೋಗುತ್ತಾರೆ ಎಂಬುದು ಅವರ ನಡೆ-ನುಡಿ, ಆಚಾರ-ವಿಚಾರಗಳನ್ನು ಗಮನಿಸಲು ಕುತೂಹಲದಿಂದ ಇದ್ದ ನಮಗೆ ಅದೊಂದು ಚಿದಂಬರ ರಹಸ್ಯವಾಗಿಯೇ ಕಾಣುತ್ತಿತ್ತು. ತಮ್ಮ ಪಾಠವಾಯಿತು, ತಮ್ಮ ಕೊಠಡಿಯಾಯ್ತು; ಉಳಿದ ಹವ್ಯಾಸಗಳ ಗೊಡವೆಗೆ ಅವರು ಸಾಮಾನ್ಯವಾಗಿ ಹೋದವರೇ ಅಲ್ಲ. ಅವರು ಏಕಾಂತಪ್ರಿಯರು. ಗಲಭೆ, ಗದ್ದಲ ಗೊಂದಲಗಳಿಂದ ಬಹುದೂರ ಇರುವಂಥವರು ಎಂಬುದು ಕುವೆಂಪು ಅವರ ನಿಕಟವರ್ತಿಗಳಿಗೆ ತಿಳಿದಿರುವ ವಿಷಯ.

ಪ್ರೊ. ಮೂರ್ತಿರಾಯರು 'ಮಹಾರಾಜಾ'ಸ್ ಕಾಲೇಜಿನ ಕಾಮನ್ ರೂಮ್' ಎಂಬ ತಮ್ಮ ಪ್ರಬಂಧದಲ್ಲಿ ಮಹಾರಾಜಾ ಕಾಲೇಜಿನ ಚಟುವಟಿಕೆಗಳ ಸುಂದರ ಚಿತ್ರಣವನ್ನು ನೀಡುತ್ತಾರೆ. ಕುವೆಂಪು ಅವರೇ ತಾವು ಎಂ.ಎ. ತರಗತಿಗೆ ಸೇರಬೇಕಾದ ಸಂದರ್ಭದಲ್ಲಿ ವಿದ್ಯಾರ್ಥಿ ಮಿತ್ರರೊಂದಿಗೆ ಮೊದಲ ಬಾರಿಗೆ ಮಹಾರಾಜಾ ಕಾಲೇಜಿಗೆ ಬಂದ ಸಂದರ್ಭ, ಪ್ರೊ. ಕೃಷ್ಣಶಾಸ್ತ್ರಿಗಳೊಂದಿಗೆ ನಡೆದ ಮಾತುಕತೆ, ಇವುಗಳನ್ನು ಕುರಿತು 'ಆ ಅಮೃತ ಕ್ಷಣ' ಎಂಬ ಲೇಖನದಲ್ಲಿ ಪ್ರಬುದ್ಧ ಕರ್ನಾಟಕ ೧೯೬೮-

ಎ.ಆರ್. ಕೃಷ್ಣಶಾಸ್ತ್ರಿಗಳ ವಿಶೇಷ ಸಂಚಿಕೆ) ಸ್ಮರಿಸಿಕೊಂಡಿದ್ದಾರೆ.

"ಕಾಲೇಜು ತುಮುಲಶಬ್ದಮಯವಾಗಿತ್ತು. ಎಂ.ಎ. ತರಗತಿಗಳಿಗೆ ಅರ್ಜಿ ಹಾಕಲು ನೆರೆದಿದ್ದ ಸ್ನಾತಕೋತ್ತರ ವಿದ್ಯಾರ್ಥಿಗಳು ವರಾಂಡಾಗಳಲ್ಲಿ, ಕಾರಿಡಾರ್‌ಗಳಲ್ಲಿ, ಉಪ್ಪರಿಗೆಯಲ್ಲಿ, ಕೆಳಗೆ ಮೇಲೆ, ಅಲ್ಲಿ-ಇಲ್ಲಿ ನೆರೆದಿದ್ದರು. ನಡುನಡುವೆ ಈ ಹುಡುಗರ ಹಿಂಡಿನ ಮಧ್ಯೆ ಆಗಾಗ ಅಧ್ಯಾಪಕರು ಕಾಣಿಸಿಕೊಂಡಾಗ ನಮಸ್ಕಾರಾದಿಗಳೂ ಸಾಗುತ್ತಿದ್ದವು. ಪ್ರಾಧ್ಯಾಪಕರು ತಮ್ಮ ತಮ್ಮ ಮೀಸಲು ಕೊಠಡಿಗಳಿಗೆ ಠೀವಿಯಿಂದ ಹೋಗುತ್ತಿದ್ದರೆ, ಉಪಪ್ರಾಧ್ಯಾಪಕರು ಮತ್ತು ಲೆಕ್ಚರರು ತಮ್ಮೆಲ್ಲರಿಗಾಗಿ ಒಟ್ಟಿಗೆ ಮೀಸಲಾಗಿದ್ದ ದೊಡ್ಡ ಕೊಠಡಿಯೊಂದಕ್ಕೆ ಹೋಗುತ್ತಿದ್ದರು. ಅಧ್ಯಾಪಕ ಮಾತ್ರರಾಗಿದ್ದ ಶ್ರೀಯುತ ಎ.ಆರ್. ಕೃಷ್ಣಶಾಸ್ತ್ರಿಗಳು ಹೋಗುತ್ತಿದ್ದುದನ್ನು ಕಂಡು ನಾನಿದ್ದ ನಮ್ಮ ಗುಂಪು ನಮಸ್ಕಾರ ಮಾಡಿತು. ಅವರ ಬೆಳ್ಳನೆಯ ಕಚ್ಚೆ ಪಂಚೆ, ಉತ್ತರೀಯ ಕರಿಯ ಕ್ಲೋಸ್‌ಕಾಲರ್ ಕೋಟ್, ನೀಟಾಗಿ ಕಟ್ಟಿದ ಜರಿಯ ಪೇಟ- ಅವರನ್ನು ಯಾವ ಗುಂಪಿನಲ್ಲೂ ಎದ್ದು ಕಾಣುವಂತೆ ಮಾಡುತ್ತಿದ್ದವು."

ಮುಂದೆ ಕುವೆಂಪು ಕನ್ನಡ ಎಂ.ಎ. ಕ್ಲಾಸಿಗೆ ಸೇರಿದ ಒಂದು ಅಪರೂಪದ ಸಂದರ್ಶನ-ಸಂದರ್ಭವನ್ನು ವಿವರಿಸುತ್ತಾರೆ:

"ಮಿತ್ರರೊಬ್ಬರು ಬಂದು 'ಕೃಷ್ಣಶಾಸ್ತ್ರಿಗಳು ನಿಮ್ಮನ್ನು ಕರೆಯುತ್ತಿದ್ದಾರೆ' ಎಂದರು. ಟೀಚರ್ಸ್ ರೂಮಿಗೆ ಹೋದೆ. ಸಹಾತರ ಕುತೂಹಲದಿಂದಲೇ ಕೃಷ್ಣಶಾಸ್ತ್ರಿಗಳು ನಗುಮೊಗರಾಗಿ ವಿಶ್ವಾಸದಿಂದ ಸ್ವಾಗತಿಸಿದರು. 'ಈಗ ಹೇಗಿದ್ದೀರಿ ಪುಟ್ಟಪ್ಪಾ ? ಮೈ ಸರಿಯಾಗಿರಲಿಲ್ಲವೆಂದು ಕೇಳಿದೆ.'

" 'ಹೌದು ಸಾರ್. ಊರಿಗೆ ಹೋದಾಗ ಡಬ್ಬಲ್ ನ್ಯೂಮೋನಿಯಾ ಆಗಿ ಸ್ವಲ್ಪ ಕಷ್ಟವಾಗಿತ್ತು.'

" 'ಎಂ.ಎ.ಗೆ ಅಪ್ಲಿಕೇಶನ್ ಹಾಕಿದ್ದೀರಾ ?'

" 'ಹಾಕಿದ್ದೇನೆ.'

" 'ಯಾವುದಕ್ಕೆ ?'

" 'ಫಿಲಾಸಫಿಗೆ.'

" 'ಈ ವರ್ಷದಿಂದ ಕನ್ನಡ ಎಂ.ಎ. ತೆರೆಯುತ್ತದೆ. ಯುನಿವರ್ಸಿಟಿಗೆ ಸಾಕಷ್ಟು ವಿದ್ಯಾರ್ಥಿಗಳು ಬೇಕು. ಅದಕ್ಕೆ ನೀವು ಯಾಕೆ ಕನ್ನಡ ಎಂ.ಎ.ಗೆ ಬರಬಾರದು ? ಫಿಲಾಸಫಿ ಏನಪ್ಪಾ ? ನೀವೇ ಓದಿಕೊಳ್ಳುವ ಸಾಮರ್ಥ್ಯ ಪಡೆದಿದ್ದೀರಿ. ಹೇಗಿದ್ದರೂ ಆಶ್ರಮದಲ್ಲಿದ್ದೀರಿ. ಅಲ್ಲೇನು ಮೂರು ಹೊತ್ತೂ ಅದರ ಅಧ್ಯಯನ ತಾನೆ ? ನೀವು ಎಂತಿದ್ದರೂ ಕವಿಗಳು. ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಸೇವೆ ಸಲ್ಲಿಸಬಹುದು. ಫಿಲಾಸಫಿಗಿಂತಲೂ ಕನ್ನಡಕ್ಕೆ ನಿಮ್ಮ ಆವಶ್ಯಕತೆ ಹೆಚ್ಚು. ತುಂಬಾ ಪ್ರಯತ್ನದ ಫಲವಾಗಿ ಕನ್ನಡ ಎಂ.ಎ. ಪ್ರಾರಂಭಿಸುತ್ತಿದ್ದೇವೆ. ನಮಗೀಗ ನಿಮ್ಮಂಥ ವಿದ್ಯಾರ್ಥಿಗಳೇ ಬೇಕಾಗಿದ್ದಾರೆ.' ಆಕರ್ಷಣೀಯ ಆಹ್ವಾನದಂತಿದ್ದ ಅವರ ಮುಗುಳ್ನಗೆಯ ದಾಕ್ಷಿಣ್ಯಕ್ಕೆ ವಶವಾಗುತ್ತಿದ್ದ ನಾನು 'ನಮಸ್ಕಾರ' ಹೇಳಿ ಹೊರಗೆ ಬಂದೆ."

ಆದರೆ ಕನ್ನಡ ಎಂ.ಎ.ಗೆ ಕುವೆಂಪು ಸೇರಲು ತಾವು ಪ್ರೇರಕರಾಗಿ ನಿಂತ ವಿಷಯವನ್ನು ಎ.ಆರ್.ಕೃ. ಮರೆತೇಬಿಟ್ಟಿದ್ದರಂತೆ.

"ನಾನು ಕನ್ನಡವನ್ನು ಸ್ನಾತಕೋತ್ತರ ವಿಷಯವಾಗಿ ಆಳವಾಗಿ ಅಭ್ಯಾಸ ಮಾಡದಿದ್ದರೆ ಪಂಪ, ರನ್ನ, ಜನ್ನ, ನಾಗವರ್ಮ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶಾದಿ ಮಹಾಕವಿ, ವರಕವಿಗಳ ಕೃತಿಗಳನ್ನು ಅಧ್ಯಯನ ಮಾಡದಿದ್ದರೆ ಕೊನೆಗೆ ಕನ್ನಡ ಅಧ್ಯಾಪಕನಾಗಿ ಪಾಠ ಹೇಳದೆ ಇದ್ದಿದ್ದರೂ ವಿಷಯ ವಸ್ತು, ಭಾವಾದಿ ಸಂಪತ್ತಿನಲ್ಲಿ ಕೊರತೆಯಿರದಿರುವ ಉತ್ತುಂಗ ಪ್ರಜ್ಞಾಸ್ಥಿತಿಗೆ ಏರಬಹುದಾಗಿದ್ದರೂ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಂತಹ ಮೇರುಕೃತಿಗೆ ಬೇಕಾಗುವ ಪದ ಸಂಪತ್ತಿಯನ್ನೂ, ಮಹಾಶೈಲಿಯನ್ನೂ ಖಂಡಿತವಾಗಿಯೂ ಪಡೆಯಲಾಗುತ್ತಿರಲಿಲ್ಲ. ಬಹುಶಃ ನನ್ನ ಕಾವ್ಯಕನ್ನಿಕೆ ಬಡಕಲು ಕನ್ನಡದ ಪಂಗು ಶೈಲಿಯಲ್ಲಿ ಇಂಗ್ಲಿಷಿನ ಎರವಲು ಸರಕನ್ನು ತಲೆಹೊರೆಯಲ್ಲಿ ಹೊತ್ತು ಮಾರುವ ಬೀದಿಯ ಬೇಹಾರಿಯಾಗುತ್ತಿತ್ತೋ ಏನೋ ? ಒಟ್ಟಿನಲ್ಲಿ ನಾನು ಕನ್ನಡ ಎಂ.ಎ.

ತೆಗೆದುಕೊಳ್ಳುವಂತೆ ಮಾಡಿದ್ದು ಶಾಸ್ತ್ರಿಗಳಿಗೆ ನೆನಪಿಟ್ಟುಕೊಳ್ಳಲಾಗದಂತಹ ಒಂದು ಅತ್ಯಂತ ಸಾಧಾರಣ ವಿಷಯವಾಗಿದ್ದರೂ ನನಗೆ ಅದು ಒಂದು ದೈವೀಸಂಕಲ್ಪವಾಗಿಯೇ ಭಾಸವಾಗುತ್ತಿದೆ," ಎಂದು ಸ್ಮರಿಸಿಕೊಂಡಿದ್ದಾರೆ.

ಕುವೆಂಪು ತಾವು ಓದಿದ ಕಾಲೇಜಿನಲ್ಲೇ ಕನ್ನಡ ಅಧ್ಯಾಪಕ ಹುದ್ದೆಗೆ ಬರುವುದಕ್ಕೆ ಕನ್ನಡದ ಆಚಾರ್ಯ ಶ್ರೀ ಯವರು ಕಾರಣಕರ್ತರು. ಆ ಪ್ರಸಂಗವನ್ನು ಕುವೆಂಪು ಪ್ರಬುದ್ಧ ಕರ್ನಾಟಕದ 'ಶ್ರೀ' ಸಂಚಿಕೆಯಲ್ಲಿ (೧೯೮೪) ಪ್ರಸ್ತಾಪಿಸಿದ್ದಾರೆ. "ಸಾಧಾರಣವಾಗಿ ಕನ್ನಡದವರನ್ನು ಪಂಡಿತನಾಮಕ ಪಟ್ಟಿಯಲ್ಲಿಟ್ಟು ತಿಂಗಳಿಗೆ ೭೫ ರೂಪಾಯಿ ಮೇಲೆಯೇ ನೇಮಿಸುತ್ತಿದ್ದುದು ರೂಢಿ. ನನ್ನನ್ನು ಲೆಕ್ಚರರ್ ಎಂದು ಕರೆದು ನೂರು ರೂಪಾಯಿ ಮೇಲೆ ನೇಮಿಸಿದ್ದರು.... ಬಿ.ಎಂ.ಶ್ರೀ ಅವರು ಆಗ ರಿಜಿಸ್ಟ್ರಾರ್ ಆಗಿದ್ದರು. ಅವರಿಗೆ ನನ್ನ ಸಾಹಿತ್ಯ ಪ್ರತಿಭೆ ಚೆನ್ನಾಗಿ ತಿಳಿದಿತ್ತು. ನನ್ನಿಂದ ಕನ್ನಡ ಸಾಹಿತ್ಯಕ್ಕೆ ಮಹೋನ್ನತ ಸೇವೆ ಒದಗುತ್ತದೆ ಎಂಬ ನಂಬಿಕೆ ಅವರಿಗೆ ಮುಂಗಾಣ್ಕೆಯಾಗಿತ್ತೆಂದು ತೋರುತ್ತದೆ. ಆದ್ದರಿಂದಲೇ ಅವರು ರೂಢಿಯ ಸಾಮಾನ್ಯ ನಿಯಮವನ್ನೂ ಬದಿಗೊತ್ತಿ, ಬರಬಹುದಾದ ಟೀಕೆಗಳಿಗೂ ಸೊಪ್ಪು ಹಾಕದೆ ನನ್ನನ್ನು ನೂರು ರೂಪಾಯಿ ಸಂಬಳದ ಲೆಕ್ಚರರ್ ಸ್ಥಾನಕ್ಕೆ ನೇಮಿಸಿದರು."

ಅವರು ವೃತ್ತಿ ಜೀವನವನ್ನು ಆರಂಭಿಸಿದ ದಿನಗಳಲ್ಲಿ ನಡೆದ ಹಗರಣವೊಂದರ ಪ್ರಸಂಗ ಸ್ವಾರಸ್ಯಕರವಾಗಿದೆ. ಶ್ರೀರಂಗಪಟ್ಟಣದಲ್ಲಿ ನಡೆದ ಒಂದು ಸಭೆಯಲ್ಲಿ 'ನಿರಂಕುಶಮತಿಗಳಾಗಿ' ಎಂಬ ಶೀರ್ಷಿಕೆಯಲ್ಲಿ ಕುವೆಂಪು ಸ್ಫೂರ್ತಿಯುತವಾದ ಭಾಷಣವನ್ನು ಮಾಡಿದರು. ವಿದ್ಯಾರ್ಥಿಗಳಲ್ಲಿ ಮುಕ್ತಚಿಂತನೆಗೆ ಕರೆಕೊಡುವ ಆ ಭಾಷಣದಲ್ಲಿ ಅವರು ಪರಂಪರಾಗತ ಮೌಢ್ಯಗಳನ್ನು ಟೀಕಿಸಿದ್ದು ಅನೇಕರಿಗೆ ಕಹಿ ಎನಿಸಿ ವಿಶ್ವವಿದ್ಯಾಲಯದ ತನಕ ದೂರು ಹೋಯಿತು. ಆ ಭಾಷಣಕ್ಕೆ 'ಶ್ರೀ'ಯವರೇ ಅಧ್ಯಕ್ಷರಾಗಿದ್ದರು. ಆದಗೂ ವಿ.ವಿ. ನಿಲಯ ವಿಚಾರಣೆ ಮಾಡಲು ನಿರ್ಧರಿಸಿ ಆ ಜವಾಬ್ದಾರಿಯನ್ನು ಆಗಿನ ಕನ್ನಡ ಇಲಾಖೆಯ ಮುಖ್ಯಸ್ಥರಾದ ವೆಂಕಣ್ಣಯ್ಯನವರಿಗೆ ವಹಿಸಿ, ಕುವೆಂಪು ಅವರ ಭಾಷಣದ ಒಂದು ಪ್ರತಿಯನ್ನು ಕಳುಹಿಸಿದರು. ವೆಂಕಣ್ಣಯ್ಯನವರು ಅದನ್ನು ಓದಿ ವಿ.ವಿ. ನಿಲಯಕ್ಕೆ ಹಿಗೆ ವರದಿ ಮಾಡಿದರು: "ನನ್ನ ಮಗನಿಗೆ ನಾನು ಬುದ್ಧಿ ಹೇಳಬೇಕಾದರೆ ಇದಕ್ಕಿಂತಲೂ ಉತ್ತಮವಾಗಿ ಮತ್ತು ಸಮರ್ಥವಾಗಿ ಏನನ್ನೂ ಹೇಳಲಾರೆ."

ಕುವೆಂಪು ಉವಾಚ

ಕೆಟ್ಟವರಿಗೆ ನೆಟ್ಟಗಿರುವವರನ್ನು ತಮ್ಮಂತೆ ಮಾಡಿಕೊಳ್ಳುವ ಚಪಲತೆಯಾಗುತ್ತದೆ.

– 'ಕಾನೂರು ಹೆಗ್ಗಡಿತಿ'ಯಿಂದ

ಕೆಲವರಿಗೆ ತಮ್ಮ ಅಭ್ಯುದಯಕ್ಕಿಂತಲೂ ಮತ್ತೊಬ್ಬರ ಅವನತಿಯಲ್ಲಿ ಹೆಚ್ಚು ಸುಖವಿರುತ್ತದೆ.

– 'ಕಾನೂರು ಹೆಗ್ಗಡಿತಿ'ಯಿಂದ

ಪ್ರೇಮ ಮೊಟ್ಟ ಮೊದಲು ಹೃದಯದ ಕೋಶಕವನ್ನು ಪ್ರವೇಶಿಸಿದಾಗ ಅದರ ವಿದ್ಯುತ್ ಸ್ಪರ್ಶದಿಂದ ಜಡ ಜಗತ್ತು ಚೇತನಪೂರ್ಣವಾಗುತ್ತದೆ. ಆಗ ಹೊಂಗನಸಿನ ಹೆಗ್ಗಡಲಿನಲ್ಲಿ ಮಹಾಭಯಂಕರ ಭಾರವಾಗಿರುವ ಸ್ಥೂಲ ವಿಶ್ವವೂ ಬಣ್ಣದ ಗುಳ್ಳೆಯಾಗಿ ತೇಲಾಡುತ್ತದೆ. ಪ್ರಾಣಪಕ್ಷಿ ತನ್ನ ರಕ್ಕೆಗಳನ್ನು ಕೆದರಿ, ಅನಂತದಲ್ಲಿ ಅಶರೀರಿಯಾಗಿ ಹಾರಾಡತೊಡಗುತ್ತದೆ.

– 'ಕಾನೂರು ಹೆಗ್ಗಡಿತಿ'ಯಿಂದ

ರಾಷ್ಟ್ರಕವಿ ಕುವೆಂಪು ತಮ್ಮ ಮೇರುಕೃತಿ 'ಶ್ರೀ ರಾಮಾಯಣ ದರ್ಶನಂ' ಕಾವ್ಯವನ್ನು ರಚಿಸುತ್ತಿರುವ ಸಂದರ್ಭದಲ್ಲಿ ನಡೆದ ಅನೇಕ ಶೋಚನೀಯ ಪ್ರಸಂಗಗಳನ್ನು ಆಗಿನ ದಿನಗಳಲ್ಲಿ ಅವರ ಬಾಯಿಯಿಂದಲೇ ಕೇಳಿ ವಿಸ್ಮಿತನಾಗಿದ್ದೇನೆ. ಒಂದೆರಡು ಪ್ರಸಂಗಗಳನ್ನು ನೋಡಿ: 'ಶ್ರೀ ರಾಮಾಯಣ ದರ್ಶನಂ'ನಲ್ಲಿ 'ಅತ್ತಲಾ ಕಿಷ್ಕಿಂಧೆಯೊಳ್' ಎಂಬ ಪ್ರಕರಣ 'ಏಕಳುವೆ ತೇಜಸ್ವಿ ?' ಎಂಬ ವಾಕ್ಯದಿಂದ ಪ್ರಾರಂಭವಾಗುತ್ತದೆ. ಕಾವ್ಯ ರಚನೆ ಮಾಡುತ್ತಿದ್ದಾಗ ಅನೇಕ ವೇಳೆ ಅವರಿಗೆ ಸ್ಫೂರ್ತಿ ನಿಂತು ಲೇಖನ ಓಡದ ಮೌನವಾಗಿ ಕುಳಿತುಬಿಡುತ್ತಿದ್ದರು. ಮತ್ತೆ ಅವರಿಗೆ ಸ್ಫೂರ್ತಿ ಬರಲು ಏನೇನೋ ಸಂದರ್ಭಗಳು, ಸನ್ನಿವೇಶಗಳು ಕಾರಣವಾಗುತ್ತಿದ್ದವು. ಒಮ್ಮೆ ಹೀಗೆ ಕಿಷ್ಕಿಂಧಾ ಕಾಂಡದ ಪ್ರಾರಂಭದ ಸಮಯದಲ್ಲಿ ಅವರ ಸ್ಫೂರ್ತಿಯ ಸೆಲೆ ಬತ್ತಿ ಹೋಯಿತಂತೆ. ಹಾಗೇ ಕುಳಿತಿರುವಾಗ ಅವರ ಪುಟ್ಟ ಮಗ ತೇಜಸ್ವಿ ಏಕೋ ಅಳುತ್ತಾ ಬಂದನಂತೆ. 'ಏಕಳುವೆ ತೇಜಸ್ವಿ ?' ಎಂದು ಆ ಮಗುವಿಗೆ ಸ್ವಾಂತನ ನೀಡುವ ನುಡಿಗಳೇ ಮುಂದೆ ಅವರಿಗೆ ಸ್ಫೂರ್ತಿಯ ಸೆಲೆಯೊಡೆಯಲು ಕಾರಣವಾಗಿ ಕಾವ್ಯವನ್ನು ಮುಂದುವರಿಸಲು ಸಾಧ್ಯವಾಯಿತಂತೆ. (ಕುವೆಂಪು ಅವರ ಇಬ್ಬರು ಹೆಣ್ಣುಮಕ್ಕಳಾದ ತಾರಿಣಿ-ಇಂದು ಕಲಾ ಎಂಬ ಹೆಸರುಗಳಲ್ಲಿ ನಮಗೆ ವಿಶೇಷವೇನು ಕಾಣದಿದ್ದರೂ ಗಂಡುಮಕ್ಕಳ ಹೆಸರುಗಳು-ಪೂರ್ಣಚಂದ್ರ ತೇಜಸ್ವಿ ಹಾಗೂ ಕೋಕಿಲೋದಯ ಚೈತ್ರ- ಕೇಳಿದವರ ಮನಸ್ಸಿನ ಮೇಲೆ 'ಎಂತಹ ಸೊಗಸಾದ, ಸದಭಿರುಚಿಯ ಸುಸಂಸ್ಕೃತ ಹೆಸರುಗಳು' ಎಂದು ವಿಶಿಷ್ಟ ಪರಿಣಾಮವನ್ನು ಬೀರುತ್ತವೆ.)

ಒಮ್ಮೆ ಕವಿ ಕುವೆಂಪು ಕಾಲೇಜಿನ ಒಂದು ಸಮಾರಂಭದಲ್ಲಿ ತಮ್ಮ ಪ್ರಿಯ ಗುರುಗಳಾದ ವೆಂಕಣ್ಣಯ್ಯನವರ ಭಾವಚಿತ್ರವನ್ನು ಅನಾವರಣ ಮಾಡುತ್ತ, ವೆಂಕಣ್ಣಯ್ಯನವರು ತೀರಿಕೊಂಡ ರಾತ್ರಿ ತಮಗಾದ ಅನುಭವವನ್ನು ಭಾವಪೂರ್ಣವಾಗಿ ವರ್ಣಿಸಿದ್ದು ಈಗಲೂ ನನ್ನ ಕಿವಿಯಲ್ಲಿ ರಿಂಗಣಿಸು ತ್ತಿದೆ. ಆ ಪ್ರಸಂಗವನ್ನು ಕೋ. ಚೆನ್ನಬಸಪ್ಪನವರು ಕುವೆಂಪು ಅಭಿನಂದನ ಗ್ರಂಥ 'ಗಂಗೋತ್ರಿ'ಯಲ್ಲಿ ಮನಮಿಡಿಯುವಂತೆ ಚಿತ್ರಿಸಿದ್ದಾರೆ.

"ವೆಂಕಣ್ಣಯ್ಯನವರು ತೀರಿಕೊಂಡ ದಿನ ಕುವೆಂಪು ಅವರು ಅಂದಿನ ರಾತ್ರಿ ಕೃತಿ ರಚನೆಯಲ್ಲಿ ತೊಡಗಿದಾಗ ಗುರುಗಳ ಅಂತ್ಯದರ್ಶನ ಮಾಡಿಕೊಂಡು ಬಂದ ಕವಿಗೆ ವಿಚಿತ್ರ-ವಿನೂತನ ಅನುಭವ ವಾಯಿತು. ಅಪೂರ್ಣವಾಗಿದ್ದ 'ಶ್ರೀ ರಾಮಾಯಣ ದರ್ಶನಂ'ದ ರಚನೆಯನ್ನು ಮುಂದುವರಿಸಲು ಕುಳಿತರು. ಮತ್ತೆ ಮತ್ತೆ ಅದೇ ಚಿತಾಗ್ನಿ; ಅದೇ ಪ್ರಶಾಂತ ಮುಖ; ಅದೇ ಸೌಜನ್ಯಮೂರ್ತಿ; ಅದೇ ಗುರುಮೂರ್ತಿ. ಕಾವ್ಯ ರಚನೆ ಸಾಧ್ಯವಿಲ್ಲವೆಂದು ದೀಪ ಆರಿಸಿ ಕುಳಿತರು. ಆ ರಾತ್ರಿಯ ಏಕಾಂತದಲ್ಲಿ ಅವರ ಮೌನದ ವಲ್ಮೀಕದಲ್ಲಿ ಅವರಿಗೊಂದು ದರ್ಶನವಾಯಿತು.

"ಮಹಾಕವಿ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿ ಸ್ವರ್ಗದ ಬಾಗಿಲವರೆಗೂ ಹೋಗುತ್ತಾರೆ. ಮಹಾದ್ವಾರ ಮುಚ್ಚಿರುತ್ತದೆ. ಎಷ್ಟೇ ಪ್ರಯತ್ನಿಸಿದರೂ ಬಾಗಿಲು ತೆಗೆಯದಿರಲು ತಮ್ಮ ಕಂಕುಳಲ್ಲಿದ್ದ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಹೆಬ್ಬೊತ್ತಿಗೆಯಿಂದ ಅದನ್ನು ತಟ್ಟುತ್ತಾರೆ. ಬಾಗಿಲು ತೆರೆಯುತ್ತದೆ. ನೋಡುತ್ತಾರೆ- ದೊಡ್ಡ ಸಭೆ ! ಆ ಸಭೆಯ ಅಧ್ಯಕ್ಷತೆಯನ್ನು ತಮ್ಮ ಗುರು ವೆಂಕಣ್ಣಯ್ಯನವರೇ ವಹಿಸಿರುತ್ತಾರೆ. ಅದೊಂದು ಅದ್ಭುತ ದರ್ಶನ. ಅವರು ಆ ದರ್ಶನವನ್ನು ಬರೆಯಲೆಂದು ಲೇಖಣಿ ಎತ್ತಿದರೆ ಬಾಗಿಲು ತಟ್ಟಿದಂತಾಯ್ತು ! ನೋಡಿದರೆ ಯಾರೂ ಇಲ್ಲ. ಮತ್ತೆ ಮತ್ತೆ ಮೂರು-ನಾಲ್ಕು ಬಾರಿ ಕುಳಿತಾಗಲೂ ಹೀಗೇ ಆಗಿ ಅವರು ಬರವಣಿಗೆ ಮುಂದುವರಿಸಲು ಆಗಲೇ ಇಲ್ಲ. ಲೇಖನಿ ಮುಚ್ಚಿ ದೀಪ ಆರಿಸಿ ತಾವು ಬರೆಯಬೇಕೆಂದುಕೊಂಡ ಆ ವಿವರಗಳನ್ನು ಬರೆಯಬಾರದೆಂಬ ಸೂಚನೆಯೋ ಏನೋ ಎಂದು ಅಲ್ಲಿಗೆ ನಿಲ್ಲಿಸಿದರು. ಮುಂದೆ ಗ್ರಂಥಕಾರರಲ್ಲಿ ಕಾವ್ಯ ಸಂಪೂರ್ಣವಾದಾಗ ತಾವು ಅಂದು ರಾತ್ರಿ ಕಂಡು ಬರೆಯಲಾಗದ ದರ್ಶನವನ್ನು ಡ್ಯಾಶ್ ಹಾಕಿ ತುಂಬಿದರು.'' 'ಶ್ರೀ ರಾಮಾಯಣ ದರ್ಶನಂ' ಕಾವ್ಯದ ಮೊದಲ ಸಂಪುಟ ತೆಗೆಯುತ್ತಿದ್ದಂತೆಯೇ 'ಶ್ರೀ ವೆಂಕಣ್ಣಯ್ಯನವರಿಗೆ' ಎಂಬ ಶೀರ್ಷಿಕೆಯಲ್ಲಿ ಕಾಣಬರುವ ಈ ಸಾಲುಗಳು ಸ್ಮರಣೀಯವಾಗಿವೆ.

"ಇದೋ ಮುಗಿಸಿ ತಂದಿಹೆನ್ ಈ ಬೃಹದ್‌ಗಾನಮಂ
ನಿಮ್ಮ ಸಿರಿಯಡಿಗೊಪ್ಪಿಸಲ್ಕೆ, ಓ ಪ್ರಿಯ ಗುರುವೆ
ಕರುಣಿಸಿಂ ನಿಮ್ಮ ಹರಕೆಯ ಬಲದ ಶಿಷ್ಯನಂ,
ಕಾವ್ಯಮಂ ಕೇಳ್ದೊಂದು ಕೃಪೆಗೆ ಕೃತಕೃತ್ಯನಂ
ಧನ್ಯನಂ ಮಾಡಿ, ನೀಮುದಯರವಿಗೈತಂದು
ಕೇಳಲೆಳಸಿದಿರಂದು. ಕಿರುಗವನಗಳನೋದಿ
ಮೆಚ್ಚಿಸಿದೆನನಿತರೊಳೆ ಬೈಗಾಯ್ತು. "ಮತ್ತೊಮ್ಮೆ
ಬರುವೆ. ದಿನವೆಲ್ಲಮುಂ ಕೇಳ್ವೆನೋದುವೆಯಂತೆ;
ರಾಮಾಯಣಂ ಅದು ವಿರಾಮಾಯಣಂ ಕಣಾ!"
ಎಂದು ಮನೆಗೈದಿದಿರಿ. ಮನೆಗೈದಿದಿರಿದಿಟಂ;
ದಿಟದ ಮನೆಗೈದಿದಿರಿ!
ಇದೋ ಬಂದಿರುವೆನಿಂದು
ಮುಗಿಸಿ ತಂದಿಹೆನಾ ಮಹಾಗಾನಮಂ...."

ಮುಂದಿನ ಕೆಲವು ಸಾಲುಗಳು ಕವಿ ಕಂಡ ದರ್ಶನದ ಒಂದು ಮುಖವನ್ನು ಧ್ವನಿಸುತ್ತವೆ.

".....ಪೂರ್ವದ ಮಹಾಕವಿಗಳೆಲ್ಲರುಂ
ನೆರೆದ ಸಗ್ಗದ ಸಭೆಗೆ ಪರಿಚಯಿಸಿರೆನ್ನನುಂ;
ಸಂಘದ ಮಹಾಧ್ಯಕ್ಷರಲ್ತೆ ನೀಂ? ಕಿರಿಯ ನಾಂ
ಹಿರಿಯರಿಗೆ ಹಾಡುವೆನ್, ಕೇಳ್ವುದಾಶೀರ್ವಾದಂ
ನುಡಿಯುತಿಹುದಾ ದಿವ್ಯಕವಿ ಸಭೆಗೆ ಗುರುವಾಣಿ, ಕೇಳ್
ಆಲಿಸಾ ಗುರುಕೃಪೆಯ ಶಿಷ್ಯಕೃತಿ ಸಂಕೀರ್ತಿಯಂ.'

ಮಲೆನಾಡಿನ ಮಡಿಲಿನಲ್ಲಿ, ಕವಿಗೆ ತುಂಬ ಪ್ರಿಯವಾಗಿದ್ದ ತಾಣದಲ್ಲಿ (ಕವಿಶೈಲ) ಅವರ ಅಂತ್ಯಕ್ರಿಯೆ ನಡೆದದ್ದನ್ನು ಬೆಂಗಳೂರು 'ದೂರದರ್ಶನ'ದಲ್ಲಿ ನೋಡಿದಾಗ ಕುವೆಂಪು ಅವರ 'ಮಲೆನಾಡಿಗೆ' ಎಂಬ ಈ ಅರ್ಥಗರ್ಭಿತವಾದ ಪದ್ಯಚರಣ ನೆನಪಾಯಿತು. ತಾಯಿ ಮಗುವಿಗೆ ಲಾಲಿ ಹಾಡಿ ಮಲಗಿಸುವಂತಿದೆ ಈ ಪದ್ಯಚರಣದ ಲಯ, ಧಾಟಿ, ಭಾವ-ಬಂಧುರತೆ

"ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ,
ಮಲೆಯ ನಾಡಿಗೆ, ಮಳೆಯ ಬೀಡಿಗೆ ಸಿರಿಯ ಚೆಲುವಿನ ರೂಢಿಗೆ,
ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ,
ಹಸುರುಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಗೂಡಿಗೆ!

ಕುವೆಂಪು ಉವಾಚ

ಪ್ರವೃತ್ತಿಪ್ರೇರಕವಾದ ಆಧಾರ ಸ್ತಂಭಗಳೆಲ್ಲಾ ಉರುಳಿದರೆ ಮುಪ್ಪು ಬೇಸತ್ತೇ ಸತ್ತು ಹೋಗುತ್ತದೆ.

– 'ಮಲೆಗಳಲ್ಲಿ ಮದುಮಗಳು'ದಿಂದ

ದೇವರ ರಾಜ್ಯದವರಾದ ಮಕ್ಕಳು ಸೈತಾನನ ಅನುಯಾಯಿಗಳಾದ ದೊಡ್ಡವರ ಮತಭೇದವನ್ನೇನೆಂದು ಬಲ್ಲರು! ಮಕ್ಕಳಿಗೆ ಪ್ರೇಮವೇ ಜಾತಿಯನ್ನು ನಿರ್ಣಯಿಸುವ ಸಾಧನ. ಯಾರು ಹೆಚ್ಚಾಗಿ ತಮ್ಮನ್ನು ಪ್ರೀತಿಸುವುದಿಲ್ಲವೋ ಅವರೇ ಅಧಮ ಜಾತಿಯವರು!

– 'ಮಲೆನಾಡಿನ ಚಿತ್ರಗಳು'ದಿಂದ

ನಿತ್ಯದ ಉತ್ಪಾದನೆಗೆ ಭೂಗರ್ಭ ಶಾಖ

• ಎಚ್. ಗವಿಸಿದ್ದಯ್ಯ

ಸೈಬೀರಿಯದ ಪೂರ್ವಕ್ಕೆ 'ಕಮ್ಚಾಟ್ಕಾ' ಎಂಬ ದ್ವೀಪವೊಂದಿದೆ. ಅಲ್ಲಿಯ ವಿದ್ಯುಚ್ಛಕ್ತಿ ಅವಶ್ಯಕತೆಗಳು ಭೂಗರ್ಭದ ಶಾಖದಿಂದಲೇ ಪೂರೈಸಲ್ಪಡುತ್ತವೆ. ಈ ಕಾರ್ಯಕ್ಕಾಗಿ ಅಲ್ಲಿ ಅನೇಕ ಭೂಗರ್ಭ ಶಾಖೋತ್ಪನ್ನ ವಿದ್ಯುತ್ ಸ್ಥಾವರ (Geo Thermal Power Station)ಗಳು ಸ್ಥಾಪನೆಯಾಗಿವೆ. ಹೀಗೆ ಉತ್ಪಾದಿಸುವ ವಿದ್ಯುಚ್ಛಕ್ತಿಗೆ ತಗಲುವ ವೆಚ್ಚ ಕಡಿಮೆ. ಅಂದರೆ ಡೀಸೆಲ್ ಅಥವಾ ಕಲ್ಲಿದ್ದಲು ಉರಿಸಿ ಶಕ್ತಿಯನ್ನು ಉತ್ಪಾದಿಸುವ ಖರ್ಚಿಗಿಂತ ಒಂದು ಮೂರಾಂಶದಷ್ಟು. ಭೂಗರ್ಭ ಶಾಖದ ಉತ್ಪಾದನೆಯಲ್ಲಿನ ಮಿತವ್ಯಯ ಮತ್ತು ಸರಳ ವಿಧಾನಗಳನ್ನು ಕಂಡುಕೊಂಡ ಇಟಲಿಯೂ ಇಂಥ ಸ್ಥಾವರಗಳನ್ನು ಸ್ಥಾಪಿಸಿದೆ.

ಪರ್ವತದ ಶಿಲೆಗಳಲ್ಲಿ ಭೂಗರ್ಭದ ಶಾಖವು ಕೇಂದ್ರೀಕೃತವಾಗಿರುತ್ತದೆ. ಅನೇಕ ಕಿಲೋಮೀಟರ್ ಆಳದಲ್ಲಿರುವ ಬಂಡೆಗಳಿಂದ ಶಾಖವನ್ನು ಹೊರತೆಗೆಯುವ ತಾಂತ್ರಿಕ ನೈಪುಣ್ಯ ಇಂದು ಆಶಾದಾಯಕವೆನಿಸಿದೆ. ಬಂಡೆಗಳನ್ನು ಕೊರೆಯುವ ಹೊಸ ಹೊಸ ಯಂತ್ರೋಪಕರಣಗಳ ಆವಿಷ್ಕಾರ ನಡೆದೇ ಇದೆ.

ಭೂಗರ್ಭ ವಿದ್ಯುತ್ ಉತ್ಪಾದನಾ ವಿಧಾನವು ಶಾಖೋತ್ಪನ್ನ ವಿಧಾನಕ್ಕಿಂತ ಕ್ಲಿಷ್ಟವೇನೂ ಅಲ್ಲ. ಮೊದಲ ಹಂತದಲ್ಲಿ ಬೃಹತ್ ಬಂಡೆಗಳಲ್ಲಿ ರಂಧ್ರಗಳನ್ನು ಕೊರೆದು ಆ ರಂಧ್ರಗಳ ಮೂಲಕ ತಂಪು ನೀರನ್ನು ಹಾಯಿಸಲಾಗುವದು. ಸುಡುವ ಬಂಡೆಗಳ ಮೇಲೆ ಬಿದ್ದ ನೀರು ಆವಿಯಾಗಿ ಪರಿವರ್ತನಗೊಂಡು ಭೂಮಿಯ ಮೇಲ್ಭಾಗಕ್ಕೆ ಬರುತ್ತದೆ. ವಿದ್ಯುತ್ ಅಥವಾ ಶಾಖೋತ್ಪಾದನೆಗೆ ಆ ಆವಿಯೇ ಕಚ್ಚಾವಸ್ತುವಾಗುತ್ತದೆ.

ರಶಿಯದ ಪಟ್ಟಣಗಳಲ್ಲಿ ವಾಸಿಸುವ ಬಹಳಷ್ಟು ಜನರು ನೆಲಮಾಳಿಗೆಯ ಬಾಯ್ಲರ್ (ಹಬೆಯ ಪಾತ್ರೆ)ನಲ್ಲಿ ಬಿಸಿಯಾದ ನೀರನ್ನು ಉಪಯೋಗಿಸುತ್ತಾರೆ. ಕೈಗಾರಿಕಾ ಘಟಕಗಳನ್ನು, ಸಸ್ಯೋದ್ಯಾನಗಳನ್ನು, ಪ್ರಯೋಗಾಲಯಗಳನ್ನು ಬೆಚ್ಚಗಿಡಲು ಅಲ್ಲಿ ಭೂ ಶಾಖದ ನೀರನ್ನು ಬಳಸಲಾಗುತ್ತಿದೆ. ●

ಪ್ರಖರತೆಯ ಪರಿಣಾಮ

ಸೂರ್ಯನೊಳಗೆ ಶಾಖ ಹೆಚ್ಚುತ್ತಿದೆ. ಆದರಿಂದಾಗಿ ದಿನೇ ದಿನೇ ಆತ ಹೆಚ್ಚು ಹೆಚ್ಚು ಪ್ರಖರವಾಗುತ್ತಿದ್ದಾನೆ. ಸೂರ್ಯನಂತಹ ನಕ್ಷತ್ರಗಳಿಗೆ ಇದು ಸಹಜ ಮತ್ತು ಅವು ಕೊನೆಗೊಳ್ಳುವ ರೀತಿ ಕೂಡ. ಇದರಿಂದ ಭೂಮಿಯ ಶಾಖ ಹೆಚ್ಚುತ್ತದೆ. ಕಾರ್ಬನ್ ಡೈ ಆಕ್ಸೈಡ್ ಕಲ್ಲಿನಲ್ಲಿಯ ಸಿಲಿಕೇಟ್ ಜತೆ ವಿಲೀನಗೊಂಡು ಭೂಮಿಯ ಮೇಲೆ ಕಾರ್ಬನ್ ಡೈ ಆಕ್ಸೈಡ್ ಇಲ್ಲವಾಗುತ್ತದೆ. ಹಸಿರು ಗಿಡ-ಮರಗಳು ಕಾರ್ಬನ್ ಡೈ ಆಕ್ಸೈಡ್ ಉಪವಾಸದಿಂದ ಸಾಯುತ್ತವೆ. ಅವುಗಳ ಹಿಂದೆಯೇ ಇತರ ಜೀವಸಂಕುಲವೂ ನಶಿಸಿ ಹೋಗುವುದು. ಒಂದು ಲೆಕ್ಕಾಚಾರದಂತೆ ಭೂಮಿಯಲ್ಲಿ ಹೀಗಾಗಲು ಇನ್ನೂ ನೂರು ಮಿಲಿಯ ವರ್ಷಗಳು ಬೇಕು !

ಸಂಗ್ರಹ: **ಕೆ. ಗಣೇಶ**



ಭ್ರಷ್ಟಾಸುರ ಸಂಹಾರ ಸಾಧ್ಯವೆ?

ಸುಸಂಸ್ಕೃತ ನಾಡು ಈಗ ಸೂಟ್‌ಕೇಸ್ ಸಂಸ್ಕೃತಿಯ ನಾಡಾಗಿದೆ

• ವೃಷಭೇಂದ್ರಯ್ಯ

ವೃಕೋದರ ಭೀಮನು ಬಕಾಸುರನೊಂದಿಗೆ ಹಣಾಹಣ'ಗಿಳಿದ ಹೊತ್ತು. ಅವನನ್ನು ಹಿಡಿಹಿಡಿದು ಬಡಿಬಡಿದು ಹೈರಾಣಾಗಿಸುತ್ತಿದ್ದ ಸಂದರ್ಭದಲ್ಲಿ ಆ ರಕ್ಕಸ ಗಹಗಹಿಸಿ ನಗತೊಡಗಿದನಂತೆ. "ಎಲವೋ ಭುಜಬಲಗರ್ವಿ. ನೀನೇ ಪರಾಕ್ರಮಶಾಲಿಯೆಂದು ಉರ್ವಿಯೊಳು ಮೆರೆಯುತಿರ್ವಿ. ನನ್ನನ್ನೀಗ ಕೊಲ್ಲುವಿ ಯಲ್ಲವೆ, ಕೊಲ್ಲು. ಕೊಂದುಬಿಟ್ಟರೆ ಕಥೆ ಮುಗಿಯಿತೆಂದುಕೊಳ್ಳಬೇಡ. ನಾನು ಮತ್ತೆ ಮತ್ತೆ ಜನ್ಮವೆತ್ತುವ ರಕ್ತಬೀಜನ ವಂಶಸ್ಥ. ಯುಗಯುಗಾಂತರದಲ್ಲಿಯೂ ಹಗೆ ಸಾಧಿಸಿಕೊಳ್ಳುವ ಛಲವಂತ. ಕಲಿಯುಗದ ಪ್ರಥಮ ಚರಣ ಬರಲಿ. ಆಗ ನಾನು ಚಿರಂಜೀವಿಯಾಗುತ್ತೇನೆ. ಆ ಅವತಾರದಲ್ಲಿ ನನ್ನ ಹೆಸರು ಭ್ರಷ್ಟಾಸುರನೆಂ ದಿರುತ್ತದೆ. ಭಾರತದ ತುಂಬೆಲ್ಲ ನಾನು ನಾನಾ ರೂಪದಲ್ಲಿ ಪ್ರಕಟಗೊಳ್ಳುತ್ತೇನೆ. ಈಗೇನೋ ನನ್ನನ್ನು ನೀನು ಸುಲಭವಾಗಿ ಸಿಗಿದುಬಿಟ್ಟೆ. ಆದರೆ, ಭ್ರಷ್ಟಾಸುರನಾಗಿ ಜನ್ಮವೆತ್ತಿದಾಗ ಮಾತ್ರ ನಿನ್ನಂಥ ಸಾವಿರ ಸಾವಿರ ಭೀಮರಿಗೂ ನಾನು ಸಿಗುವವ ನಲ್ಲ. ಈಗ ನನ್ನ ಅನ್ನವನ್ನು ಕಸಿದುಕೊಂಡೆಯಲ್ಲವೆ ? ಮುಂದೆ ನಾನು, ಜನ ಒಂದು ತುತ್ತು ಅನ್ನಕ್ಕೂ ಅತ್ತತ್ತು ಸತ್ತು ಹೋಗುವಂತೆ ಮಾಡುತ್ತೇನೆ. ನನ್ನ ಮೈಯಿಂದ ಸುರಿದ ರಕ್ತದ ಒಂದೊಂದು ಬಿಂದುವೂ ಆಗ ಭ್ರಷ್ಟ ರಾಜಕಾರಣ' ಯಾಗಿ, ದುಷ್ಟ ಅಧಿಕಾರಿಯಾಗಿ ನಿನ್ನವರ ಜನ್ಮವನ್ನು ಜಾಲಾಡುತ್ತದೆ...." ಎಂಬನಂತೆ.

✤

ಸ್ವತಂತ್ರ ಭಾರತದಲ್ಲಿಂದು ಭ್ರಷ್ಟಾಸುರ ಸರ್ವಾಂತರ್ಯಾಮಿ. ಪಂಚಾಯಿತಿ ಮಟ್ಟದಿಂದ ಪಾರ್ಲಿಮೆಂಟ್‌ವರೆಗಿನ ಎಲ್ಲ ಘಟ್ಟಗಳಲ್ಲೂ ಆತ ಅಂತರ್ಗಾಮಿ. ಈಗ ಇಲ್ಲಿ ಇರುವುದು ಎರಡೇ ಎರಡು ವರ್ಗ: ಅಲ್ಪಸಂಖ್ಯಾತವೆಂದೆನಿಸಿದರೂ ಪ್ರಾಬಲ್ಯದಿಂದ ಮೆರೆಯುವ ಭ್ರಷ್ಟರದೊಂದು; ಬಹುಸಂಖ್ಯೆಯಲ್ಲಿದ್ದರೂ ಏನೂ ಮಾಡಲಾರದ ಹೇಡಿಗಳಾಗಿ ಭ್ರಷ್ಟಾಸುರನಿಗೆ ಬಲಿಯಾಗುತ್ತಿರುವವರದು ಇನ್ನೊಂದು. ಜಗತ್ತಿನಲ್ಲೇ ಅತಿ ದೊಡ್ಡ ಪ್ರಜಾತಂತ್ರ ರಾಷ್ಟ್ರ ಎಂದೆನಿಸಿಕೊಂಡಿರುವ ಭಾರತದಲ್ಲಿ ಪ್ರಜಾತಂತ್ರದ ವ್ಯಾಖ್ಯೆಯೇ ಬದಲಾಗಿದೆ. ಆ ಪದ ವಿಭಜಿತಗೊಂಡು ಪ್ರಜಾಜನ ಒಂದೆಡೆ, ತಂತ್ರ ಹೂಡುವ ಜನ ಮತ್ತೊಂದೆಡೆ ಆಗಿ ಹೋಗಿದ್ದಾರೆ. ಪ್ರಜೆಗಳು ಕಷ್ಟಾರ್ಜಿತದಲ್ಲೇ ಕುಂಯ್ಯೊ ಮರ್ರೋ ಎಂದು ಕಾಲ ದೂಡುತ್ತಿದ್ದರೆ, ಅವರ ಪ್ರತಿನಿಧಿಗಳು, ಸೇವಕರು ಎಂದೆನಿಸಿಕೊಳ್ಳುವ ರಾಜಕಾರಣ'ಗಳು ಮತ್ತು ಅಧಿಕಾರಿಗಳು ಭ್ರಷ್ಟಾರ್ಜಿತದಿಂದ ಬೀಗಿ ನಡೆಯುತ್ತಿದ್ದಾರೆ.

'ಭ್ರಷ್ಟಾಚಾರ'ದ ಪರಿಭಾಷೆಯೇನು ? 'ಪದ ದುರುಪಯೋಗದಿಂದ ಲಾಭ ಪಡೆದುಕೊಳ್ಳುವುದು,' ಎಂದು ಸಾಮಾನ್ಯವಾಗಿ ಅರ್ಥ ವಿವರಣೆ ನೀಡಿಬಿಡಬ ಹುದು. ಸರಕಾರಿ ಸ್ಥಾನಮಾನದ ಅಪಪ್ರಯೋಜನದ ಮೂಲಕ ಯಾವುದೇ ಅಧಿಕಾರಿ ಅಥವಾ ಮಂತ್ರಿ- ಶಾಸಕ ದುಡ್ಡು-ದೌಲತ್ತುಗಳನ್ನು ದುಡಿದುಕೊಳ್ಳುತ್ತಿ ದ್ದರೆ ಖಂಡಿತ ಅದು ಭ್ರಷ್ಟಾಚಾರ. ಅಧಿಕಾರ ಬಲದಿಂದ ಯಾವುದೇ ಸ್ತ್ರೀಯನ್ನು ಲೈಂಗಿಕ ಶೋಷಣೆಗೊಳಪಡಿಸಿದ್ದರೆ ಅದು ಭ್ರಷ್ಟಾಚಾರ. ಅಥವಾ, ತನ್ನ ಸ್ಥಾನ ಸಾಮರ್ಥ್ಯದಿಂದ ಸ್ವಜನರಿಗೆ ನೌಕರಿ-ಧಂಧೆ ಹಚ್ಚಿ ಕೊಟ್ಟಿದ್ದರೆ ಅದು ಭ್ರಷ್ಟಾ ಚಾರ. ಮಂತ್ರಿಯೊಬ್ಬ ಭೂ ಹಗರಣ, ಅಂತಾರಾಷ್ಟ್ರೀಯ ವ್ಯಾಪಾರ ಒಪ್ಪಂದದಲ್ಲಿ

ಲಾಭಾಂಶ ಪಡೆಯುವಿಕೆ; ಪೊಲೀಸು ಅಧಿಕಾರಿಯೊಬ್ಬ ಅಪರಾಧಿಗಳು-ವ್ಯಾಪಾರಿಗಳಿಂದ ದುಡ್ಡು ತಿನ್ನುವುದು; ದೇಶದ ಭವಿತವ್ಯಕ್ಕೆ ಬುನಾದಿಯೆನಿಸುವಂಥ ಯೋಜನೆಗಳಲ್ಲಿ ಇಂಜನಿಯರುಗಳು ಬಹ್ವಂಶ ಹಣವನ್ನು ತಾವೂ ತಮ್ಮ ಮೇಲಧಿಕಾರಿಗಳೂ ಜೇಬಿಗಿಳಿಸಿಕೊಳ್ಳುವುದೇ ಮೊದಲಾದವು ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಹೋಗಿವೆ. ಹುದ್ದೆಯೊಂದರ ನೇಮಕಕ್ಕೆ ಲಕ್ಷಾಂತರ ಸುರಿಯಲು ಸಿದ್ಧನಾದ ವ್ಯಕ್ತಿ ತಾನು ಸುರಿದ ಹಣದ ಎಷ್ಟೋ ಪಟ್ಟನ್ನು ಪದಗ್ರಹಣಾನಂತರ ಬಳಿದುಕೊಳ್ಳುವ ಯೋಚನೆಯಲ್ಲಿಯೇ ತೊಡಗಿಕೊಂಡಿರುತ್ತಾನೆ. ನಮ್ಮ ಸರಕಾರಿ ಕಾರ್ಯವಿಧಾನದಲ್ಲಿನ ಭ್ರಷ್ಟಾಚಾರಕ್ಕೆ ಒಂದೇ ಒಂದು ಸಣ್ಣ ಉದಾಹರಣೆ ನೀಡಬೇಕೆಂದರೆ ರಾಜ್ಯವೊಂದರ ಮುಖ್ಯಮಂತ್ರಿ ನಡೆಸುವ ಜನಸಂಪರ್ಕ ಸಭೆ. ಕೇವಲ ಮೂರು ತಾಸುಗಳಷ್ಟು ನಡೆಯುವ ಇಂಥ ಕಾರ್ಯಕ್ರಮ ಮೂರು ತಿಂಗಳುಗಳಷ್ಟು ಮೊದಲೇ ಯೋಜಿಸಲ್ಪಡುತ್ತದೆ. ಸಭೆ ನಡೆಯುವ ಜಾಗ, ಅಲ್ಲಿಯ ವ್ಯವಸ್ಥೆ, ಅದರ ಪ್ರಚಾರ, ಮಾಧ್ಯಮಗಳ ಮೂಲಕ ಅದರ ಪ್ರಸಾರ ಇತ್ಯಾದಿಗಳದು ಒಂದು ಹಂತ. ದಿನಗಳುರುಳುತ್ತಿರುವ ಹಾಗೆಯೇ ತತ್ಸಂಬಂಧಿತ ಅಧಿಕಾರಿಗಳ ದೌಡು ಆರಂಭವಾಗುತ್ತದೆ. ಸಿದ್ಧತಾ ಸಭೆಗಳಾಗುತ್ತವೆ. ಅವಶ್ಯಕ ಸಾಮಗ್ರಿಗಳ ಖರೀದಿ, ಊಟ-ವಸತಿಗಳೇ ಮೊದಲಾದವುಗಳ ಅಂದಾಜು ವೆಚ್ಚದ ಪಟ್ಟಿ ಸಿದ್ಧವಾಗುತ್ತದೆ. ಭದ್ರತಾ ವ್ಯವಸ್ಥೆಗಾಗಿ ಮತ್ತೊಂದು ದಂಡು ತಿರುಗಾಡಿ ಬರುತ್ತದೆ. ಆ ಸಭೆಗೆ ನಿಶ್ಚಿತವಾದ ಸ್ಥಳದಲ್ಲಿ "ತಯಾರಿಗಾಗಿ" ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂದಿ ಬಂದಿಳಿಯುತ್ತಾರೆ. ಎಲ್ಲವೂ ಅವರ 'ಲೆಕ್ಕಾಚಾರದಂತೆ' ನಡೆಯುತ್ತದೆ. ಜನಸಂಪರ್ಕ ಸಭೆ ಪತ್ರಿಕೆಗಳಲ್ಲೂ ಆಕಾಶವಾಣಿ', ದೂರದರ್ಶನಗಳಲ್ಲೂ ಪ್ರಮುಖ ವರದಿಯಾಗುತ್ತದೆ. ಮುಂದೆರಡು ದಿನಗಳ ನಂತರ ಅಧಿಕಾರಿ ಗಣ ಆ ಸ್ಥಳದಲ್ಲಿ 'ಉತ್ತರಪೂಜೆ' ಮುಗಿಸಿ ತೆರಳುತ್ತದೆ. ಅಂದಾಜು ವೆಚ್ಚದ ಪಟ್ಟಿ ಕರಾರುವಾಕ್ಕಾಗುವುದಕ್ಕೆ ಬೇಕಾದ ಎಲ್ಲವನ್ನೂ ಆ ಜನ 'ಉನ್ನತ ಹಂತ'ದಲ್ಲಿ ಚರ್ಚಿಸಿ ಲೆಕ್ಕ ಒಪ್ಪಿಸುತ್ತಾರೆ. ಇಂಥ ಒಂದೊಂದು ಸಭೆಗೆ ಕನಿಷ್ಠ ಮೂರು ಲಕ್ಷ ರೂಪಾಯಿಗಳು ವೆಚ್ಚವಾಗುತ್ತವೆಂದರೆ ಹುಬ್ಬೇರಿಸಬೇಡಿ. ಸ್ಟೇಷನರಿ ಖರೀದಿಯಿಂದ ಹಿಡಿದು ಉಳಿದೆಲ್ಲದರಲ್ಲೂ ಒಂದಕ್ಕೆ ಹತ್ತು ಪಟ್ಟು ಖರ್ಚು ತೋರಿಸಿದರೆ ಇನ್ನೇನಾಗಬೇಡ ? ಸಭೆಗೆ ಬಂದವರಿಗೆ ಒಂದೊಂದು ಕಾಣಿಕೆ ಬೇಡವೆ ? ಅದು ಗುಲಾಬಿ ಹೂವೇ ಆಗಬಹುದು; ಗುಲಾಬದಾನಿಯೇ ಇರಬಹುದು. ಗುಲಾಬಿ ಹೂವಾದರೆ ೨೫ ರೂಪಾಯಿಗೊಂದು, ಗುಲಾಬದಾನಿಗೆ ಏನಿಲ್ಲೆಂದರೂ ಪ್ರತಿಯೊಂದಕ್ಕೆ ಕಡಿಮೆಯೆಂದರೆ ಐನೂರು ರೂಪಾಯಿ ! ಕೆಲವು ವರ್ಷಗಳ ಹಿಂದೆ ನಡೆದ ಒಂದು ರಾಷ್ಟ್ರಮಟ್ಟದ ಸಮಾವೇಶದಲ್ಲಿ ಬಂದವರಿಗೆಲ್ಲ ಮೈಸೂರು ಪೇಟ ತೊಡಿಸಲಾಯಿತು. ಈ ಸಂದರ್ಭಕ್ಕೆಂದೇ ಪೇಟಗಳು ಸಿದ್ಧಗೊಂಡುವಂತೆ. ಒಂದೊಂದು ಪೇಟಕ್ಕೆ ಕೇವಲ ೨೦೦೦ ರೂ. ಬೆಲೆಯಂತೆ ! ಅದೇ ಪೇಟ ಪೇಟೆಯಲ್ಲಿ ಕೇವಲ ನೂರು-ನೂರೈವತ್ತಕ್ಕೆ ಸಿಗುತ್ತದೆಂಬ ಸತ್ಯ ಎಲ್ಲರಿಗೂ ಗೊತ್ತು.

ಕಿಸೆ ತುಂಬಿಕೊಳ್ಳುವ ಹೊಸ ಹೊಸ ದಾರಿಗಳನ್ನು ಹುಡುಕುತ್ತಲೇ ಇರುತ್ತದೆ ಭ್ರಷ್ಟ ಬುದ್ಧಿ. ನಮ್ಮ ಯೋಜನಾ ಆಯೋಗದಲ್ಲಿರುವ ಅಧಿಕಾರಿಗಳೆಲ್ಲ ಪ್ರಾಮಾಣಿಕರಾಗಿ ಕೆಲಸ ಮಾಡಿದ್ದರೆ ದೇಶ ಎಂದೋ ಸುಭಿಕ್ಷವಾಗಿರುತ್ತಿತ್ತು. ಪಂಚವಾ

ರ್ಷಿಕ ಯೋಜನೆಗಳಿಗೆಂದೇ ನಿಗದಿತ ಹಣದಲ್ಲಿನ ಮುಕ್ಕಾಲು ಪಾಲಿನಷ್ಟು ಪೋಲಾಗಿ ಹೋಗುತ್ತದೆ. ೧೯೮೫ರಲ್ಲಿ ರಾಜೀವಗಾಂಧಿ, "ಸರಕಾರಿ ಹಣದಲ್ಲಿ ಪ್ರತಿಶತ ೧೫ರಷ್ಟು ಮಾತ್ರ ಜನೋದ್ದೇಶಕ್ಕಾಗಿ ವ್ಯಯಿಸಲ್ಪಡುತ್ತದೆ. ಮಿಕ್ಕದ್ದೆಲ್ಲ ನೌಕರಶಾಹಿಯ ಜೇಬಿಗೆ ಬೀಳುತ್ತದೆ," ಎಂಬ ಅಂಶವನ್ನು ಬಯಲುಮಾಡಿದರು. ಇದೇನು ಗೊತ್ತಿಲ್ಲದ ಸಂಗತಿಯೆ? ಜನ "ನಿಜ ನಿಜ," ಎಂದು ಸುಮ್ಮನೇ ಕುಳಿತರು. ಯಾಕಂದರೆ ಭಾರತ ಸ್ವತಂತ್ರವಾದ ಮೇಲೆ ಭ್ರಷ್ಟಾಚಾರದ ಬುಗ್ಗೆ ಎಗ್ಗುಸಿಗ್ಗಿಲ್ಲದೇ ಚಿಮ್ಮತೊಡಗಿದ್ದನ್ನು ಸುಮ್ಮನೇ ನೋಡುತ್ತ ಕೂತು ಬಿಡುವ ಅಭ್ಯಾಸವಾಗಿ ಹೋಗಿದೆಯಲ್ಲ ಅವರಿಗೆ. ಇಂಥದು ನಡೆದಾಗಲೆಲ್ಲ ವಿರೋಧ ಪಕ್ಷಗಳು ಒಂದಷ್ಟು ಬೊಬ್ಬೆ ಹಾಕುತ್ತವೆ. ಕೆಲವು ದಿನ ಅದೊಂದು ದೊಡ್ಡ ಸುದ್ದಿಯಾಗುತ್ತದೆ. ಮುಂದೆ? ಮುಂದೆ ಮತ್ತೊಂದು ಸಮಸ್ಯೆಯನ್ನು ಹುಟ್ಟು ಹಾಕಿ ಸರಕಾರ ಜನರ ಲಕ್ಷ್ಯವನ್ನು ಅತ್ತ ಕೇಂದ್ರೀಕರಿಸಿಬಿಡುತ್ತದೆ.

ನಮ್ಮಲ್ಲಿ ತೀರ ನಿಷ್ಕಳಂಕ ನೇತಾರ ಎಂದಾದರೂ ಹುಟ್ಟಿದ್ದಿದೆಯೆ? ಆಯ್ಕೆಗೊಂಡು ಐದು ವರ್ಷ ಇರುವುದರೊಳಗೇ 'ಏನಾದರೂ ಒಂದಷ್ಟು ಮಾಡಿಕೊಳ್ಳಬೇಕು' ಎಂಬುದೇ ಪ್ರತಿಯೊಬ್ಬ ರಾಜಕಾರಣಿ'ಯ ಉದ್ದೇಶವಾಗಿರುತ್ತದೆ. ತಮ್ಮ ಮತಕ್ಷೇತ್ರದ ಹಿತ ಮರೆತು ಸ್ವಹಿತದಲ್ಲೇ ಐದೂ ವರ್ಷ ಕಾಲಕಳೆದವರೆಷ್ಟಿಲ್ಲ? ಮತ್ತೊಮ್ಮೆ ಆಯ್ಕೆಯಾಗುವ ಬಗ್ಗೆಯೇ ಸಂಶಯವಿರುವ ವ್ಯಕ್ತಿ ಇನ್ನೇನು ತಾನೇ ಮಾಡುತ್ತಾನೆ? ಹಿಂದುಗಳಲ್ಲೊಂದು ನಂಬಿಕೆಯಿತ್ತು- ಮನೆತನದಲ್ಲಿ ಯಾವನಾದರೂ ಒಬ್ಬ ಸಂನ್ಯಾಸ ಸ್ವೀಕರಿಸಿದರೆ ಆತನ ಹಿಂದಿನ ೧೨ ಮತ್ತು ಮುಂದಿನ ೧೨ ತಲೆಮಾರುಗಳು ಪಾವನಗೊಳ್ಳುತ್ತವೆ ಎಂದು. ಆದರೆ ಇಂದು ಒಬ್ಬ ವ್ಯಕ್ತಿ ಮಂತ್ರಿಯಾದರೆ ಆತನ ಮುಂದಿನ ಐದು ತಲೆಮಾರುಗಳಂತೂ ಹಾಲಿನಲ್ಲೇ ಸ್ನಾನಮಾಡಿ, ತುಪ್ಪದಲ್ಲೇ ಕೈ ತೊಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗುವುದಂತೂ ಖಂಡಿತ.

ಈ ನಲವತ್ತೂ ಚಿಲ್ಲರೆ ವರ್ಷಗಳಲ್ಲಿ ಎಂಥೆಂಥ ಹಗರಣಗಳು ನಡೆದವೆಂಬುದನ್ನು ಸ್ವಲ್ಪ ನೋಡಿ. ಒಂದೆಡೆ ಕೃಷ್ಣ ಮೆನನ್ ಭ್ರಷ್ಟಾಚಾರದ ಜೀಪು ಏರಿದರೆ, ಇನ್ನೊಂದೆಡೆ ತುಲಮೋಹನರಾಂ ಲೈಸೆನ್ಸ್ ಹಗರಣದಲ್ಲಿ ಶಾಮೀಲಾಗಿದ್ದಾರೆ. ಮತ್ತೊಂದೆಡೆ ಹರಿದಾಸ ಮುಂದಡಾ ಪ್ರಕರಣ ನೋಡಸಿಕ್ಕರೆ, ಮಗುದೊಂದೆಡೆ ಪ್ರಧಾನಿಯೊಬ್ಬರ ಧ್ವನಿ ಅನುಕರಿಸಿ ೬೦ ಲಕ್ಷ ರೂಪಾಯಿ ಲಪಟಾಯಿಸಿಯೂ ರಹಸ್ಯ ವರದಿಯ ಹಿಂದೆಯೇ ಸುಮ್ಮನಾಗಿಬಿಟ್ಟ ರುಸ್ತುಂ ಸೊಹ್ರಾಬ್ ನಗರವಾಲಾ ಕಾಣುತ್ತಾನೆ. ಅಂತುಲೆಯ ಕೈಗಳಿಗೆ ಸಿಮೆಂಟು ಅಂಟಿಕೊಂಡದ್ದೂ ಅರ್ಜುನಸಿಂಗರು ಲಾಟರಿಯ ಲಾರಿಯನ್ನೇರಿದ್ದೂ ನಮಗೆ ಗೊತ್ತಿದೆ. ಶಿವಾಜಿರಾವ್ ನೀಲಂಗೇಕರ್ ಪುತ್ರಿಮೋಹದ ಕಾರಣದಿಂದ ಕುರ್ಚಿ ಬಿಡಬೇಕಾಗಿ ಬಂದರೆ ರಾಮರಾಯರು ಅಳಿಯಂದಿರ ಮೂಲಕ ಲಾಭ ಗಿಟ್ಟಿಸಿಕೊಂಡ ವಿದ್ಯಮಾನಗಳಿವೆ.

ತಮ್ಮ ವಿಶುದ್ಧ ರಾಜಕೀಯ ಸಿದ್ಧಾಂತಗಳಿಗೆ ಹೆಸರಾಗಿದ್ದ ವಿ.ಕೆ. ಕೃಷ್ಣಮೆನನ್ ಜೀಪು ಹಗರಣದಿಂದ ತಮ್ಮ ಹೆಸರಿಗೆ ಮಸಿ ಬಳಿದುಕೊಳ್ಳಬೇಕಾಗಿ ಬಂತು. ಸ್ವತಂತ್ರ ಭಾರತದ ಮೊತ್ತಮೊದಲ ಕರ್ಮಕಾಂಡ ಈ ಜೀಪು ಹಗರಣ. ಎ.ಜಿ.ನೂರಾನಿ ತಮ್ಮ 'ಮಿನಿಷ್ಟರ್ಸ್ ಮಿಸ್‌ಕಂಡಕ್ಟ್' (ಮಂತ್ರಿಗಳ ದುರ್ನಡತೆ) ಎಂಬ ಪುಸ್ತಕದಲ್ಲಿ ಈ ಪ್ರಕರಣವನ್ನು ಸಾದ್ಯಂತವಾಗಿ ವಿವರಿಸಿದ್ದಾರೆ. ಆಗ

ಮೆನನ್ ಭಾರತದ ಹೈಕಮೀಶ್ನರ್ ಆಗಿ ಬ್ರಿಟನ್ನಿನಲ್ಲಿದ್ದರು. ಕಾಶ್ಮೀರದ ಮೇಲೆ ಪಾಕಿಸ್ತಾನ ದಾಳಿಮಾಡಿದ ಸಂದರ್ಭ. ನಮ್ಮ ಸೇನೆಗೆ ನಾಲ್ಕೂ ಚಿಲ್ಲರೆ ಸಾವಿರ ಜೀಪುಗಳ ಅವಶ್ಯಕತೆಯುಂಟಾಯಿತು. ಪ್ರತಿನಿಧಿ ಮಂಡಲವೊಂದು ಬ್ರಿಟನ್ನಿಗೆ ಹೋಯಿತು. 'ಪ್ರತಿಯೊಂದಕ್ಕೆ ೩೦೦ ಪೌಂಡುಗಳಂತೆ ೧೫೦೦ ಜೀಪುಗಳು ಇಲ್ಲಿ ಲಭ್ಯ ಇವೆ' ಎಂದು ರಕ್ಷಣಾ ಸಚಿವಾಲಯದ ಆರ್ಥಿಕ ಸಲಹೆಗಾರ ಎ.ಕೆ. ಚಂದಾ ಅವರಿಂದ ರಕ್ಷಣಾ ಇಲಾಖೆಯ ಕಾರ್ಯದರ್ಶಿಗೆ ಆಕಸ್ಮಿಕವಾಗಿ ಒಂದು ತಂತಿ ಸಂದೇಶ ಬಂತು. "ಅಡ್ಡಿಯಿಲ್ಲ. ಖರೀದಿಸಬಹುದು" ಎಂಬ ಉತ್ತರ ಇಲ್ಲಿಂದ ಹೋಯಿತು.

ಶುರುವಾಯಿತು ನೋಡಿ ಆಟ. ಮೊದಲ ಕಂತಿನಲ್ಲಿ ಭಾರತಕ್ಕೆ ಕೇವಲ ೧೫೫ ಜೀಪುಗಳು ಬಂದವು. ಆದರೆ ಅವೆಲ್ಲ ಕೇವಲ ಖೋಕಾಗಳು! ಒಂದಾದರೂ ಓಡುವ ಸ್ಥಿತಿಯಲ್ಲಿರಲಿಲ್ಲ. ಎಂಬತ್ತು ಲಕ್ಷ ರೂಪಾಯಿಗಳ ಆರ್ಡರು ಪಡೆದು ಜೀಪುಗಳನ್ನು ಒದಗಿಸಲು ಒಪ್ಪಿದ ಆ ಕಂಪನಿ 'ಮೆಸರ್ಸ್ ಎಂಟಿ ಮಿಸ್ಟೆಂಟ್ಸ್.' ಅದರ ಒಟ್ಟು ಬಂಡವಾಳವಾದರೂ ಎಷ್ಟೆನ್ನುತ್ತೀರಿ? ಬರಿ ೧೨,೦೦೦ ರೂಪಾಯಿಗಳಷ್ಟು! ಆರ್ಡರು ನೀಡುವಾಗ ಯಾರೂ ಈ ಕುರಿತು ವಿಚಾರಿಸುವ, ಪರಿಶೀಲಿಸುವ ಗೋಜಿಗೆ ಹೋಗಲಿಲ್ಲ. ಜೀಪುಗಳನ್ನು ಅಲ್ಲಿ ಹೇರಿ, ಇಲ್ಲಿ ಇಳಿಸುವ ಮತ್ತು ಜತೆಗೆ ಬಿಡಿ ಭಾಗಗಳನ್ನೂ ಒದಗಿಸುವ ಜವಾಬ್ದಾರಿ ಕಂಪನಿಯ ಮೇಲಿತ್ತು. ಆ ೧೫೫ ಜೀಪುಗಳು ಅಲ್ಲಿ ಒಟ್ಟೆ ಬೀಳುವ ಬದಲು ಇಲ್ಲಿ ಒಟ್ಟೆಬಿದ್ದವು ಅಷ್ಟೆ.

ಲೋಕ ಸಭೆಯಲ್ಲಿ 'ಹಾರ್ನು'ಗಳು ಕಿವಿಬಿರಿಯುವಂತೆ ಅರಚಿಕೊಳ್ಳತೊಡಗಿದವು. ಒಂದೊಂದೇ ಸತ್ಯ ಹೊರಬೀಳತೊಡಗಿತು. ಇಲ್ಲಿ 'ಮೆಸರ್ಸ್ ಎಂಟಿ ಮಿಸ್ಟೆಂಟ್ಸ್' ಮಾತ್ರ ಇರಲಿಲ್ಲ. ಮೆನನ್ ಸಾಹೇಬರು ಲಂಡನ್ನಿನ ಇನ್ನೊಂದು ಸಂಸ್ಥೆ 'ಮೆಸರ್ಸ್ ಎಸ್.ಸಿ.ಕೆ. ಏಜನ್ಸೀಡ್'ನೊಂದಿಗೂ ೧೦೦೭ ಜೀಪು ಖರೀದಿ ಕುರಿತಂತೆ ಒಪ್ಪಂದ ಮಾಡಿಕೊಂಡಿದ್ದರು. ಅದರಂತೆ ಆ ಸಂಸ್ಥೆ ಪ್ರತಿ ತಿಂಗಳು ೬೮ ಜೀಪು ಒದಗಿಸಬೇಕು. ಆದರೆ ೪೭ ಜೀಪುಗಳನ್ನು ಮಾತ್ರ ಕಂಪನಿ ನೀಡಿತು.

ಮೆನನ್ ಇನ್ನೂ ಒಂದು ಹಗರಣದಲ್ಲಿ ಭಾಗಿಯಾದದ್ದು ಬೆಳಕಿಗೆ ಬಂತು. ಎರಡು ಸಾವಿರ ರೂಪಾಯಿ ಭಂಡವಲಿನ 'ಜೆ.ಸಿ.ಡಿ. ಆ್ಯಂಡ್ ಕಂಪನಿ'ಗೆ ಸುಮಾರು ನಾಲ್ಕು ಕೋಟಿ ಬೆಲೆಯ ರೈಫಲ್ ಹಾಗೂ ಮದ್ದು ಗುಂಡುಗಳ ಸರಬರಾಜಿನ ವಿಷಯದಲ್ಲಿ ಆರ್ಡರು ಹೋಗಿತ್ತು. ನಂತರದ ನಾಲ್ಕು ತಿಂಗಳಲ್ಲಿ ಈ ಸರಬರಾಜು ಮುಗಿಯಬೇಕು. ಆದರೆ ಗಡವು ಮೀರಿ ಹಲವು ತಿಂಗಳುಗಳೇ ಸರಿದರೂ ಆ ಕಂಪನಿಯಿಂದ ಒಂದಾದರೂ ಬಂದೂಕು ಬರದಾದಾಗ ರಕ್ಷಣಾ ಸಚಿವಾಲಯ ಆ ಆರ್ಡರನ್ನು ರದ್ದು ಮಾಡಲೇಬೇಕಾಯಿತು. ಕಾಶ್ಮೀರ ಯುದ್ಧಕ್ಕಾಗಿ ಖರೀದಿಸಬೇಕಾಗಿದ್ದ ಈ ಶಸ್ತ್ರಾಸ್ತ್ರಗಳ ಆರ್ಡರು ರದ್ದಾದದ್ದು ಮುಂದೆ ಯುದ್ಧ ವಿರಾಮ ಘೋಷಿಸಲ್ಪಟ್ಟು ಒಂದು ವಾರದ ನಂತರ. ಮತ್ತೆ ಲೋಕಸಭೆಗೊಂದಲದ ಬೀಡಾಯಿತು. ಮೆನನ್ ಮೇಲಿನ ಆರೋಪಗಳ ತನಿಖೆಗಾಗಿ ಅಯ್ಯಂಗಾರ್ ಸಮಿತಿ ರಚಿಸಲ್ಪಟ್ಟಿತು. ಆದರೆ ಅಯ್ಯಂಗಾರರ ಸಮಿತಿ ಸಲ್ಲಿಸಿದ್ದ ತನಿಖಾ ವರದಿ ಯಾವ ಅಲಮಾರಿನೊಳಗೆ ಅಡಗಿ ಕೂತಿದೆ ಎಂಬುದು ಇಂದಿಗೂ ಒಂದು ರಹಸ್ಯವಾಗಿಯೇ ಉಳಿದಿದೆ. ಇಂಥ ಮೆನನ್ ಸಾಹೇಬರು ೧೯೫೭ರಲ್ಲಿ ರಾಷ್ಟ್ರದ ರಕ್ಷಣಾ ಮಂತ್ರಿಯೂ ಆದರು!

ಹರಿದಾಸ ಮುಂದಡಾ ಹಾಂಡ ಸ್ವತಂತ್ರ ಭಾರತದ ಎರಡನೆ ದೊಡ್ಡ ಭ್ರಷ್ಟಾಚಾರ ಪ್ರಕರಣ. ರಾಜನೀತಿಯಲ್ಲಿ 'ಸಂಬಂಧ'ದ ದುಷ್ಪರಿಣಾಮವೇನಾಗುತ್ತದೆ ಎಂಬುದಕ್ಕೆ ಒಂದು ಉದಾಹರಣೆ. ಮುಂದಡಾ ಮೇಲೆ ೧೬೦ ಕೋಟಿ ರೂಪಾಯಿ ಗುಳುಂ ಅನ್ನಿಸಿದ ಆರೋಪವಿತ್ತು. ಈ ಸಂಬಂಧವಾಗಿ ಆತನನ್ನು ೧೮೦ಕ್ಕೂ ಹೆಚ್ಚಿನ ಆರ್ಥಿಕ ಮತ್ತು ಅಪರಾಧಿಕ ವಿಷಯಗಳಲ್ಲಿ ಆರೋಪಿಯನ್ನಾಗಿ ಮಾಡಲಾಗಿತ್ತು. ಆಗ ಎಲ್.ಐ.ಸಿ. ೧.೨೬ ಕೋಟಿ ರೂಪಾಯಿಗಳ ಶೇರುಗಳನ್ನು ಮುಂದಡಾನ ಕಂಪನಿಗಳಿಂದ ಖರೀದಿಸಿತ್ತು. ಅಷ್ಟೇ ಅಲ್ಲ, ಚಾರ್ಟರ್ಡ್ ಮತ್ತು ಅಲಹಾಬಾದ್ ಬ್ಯಾಂಕುಗಳಂಥವೂ ಇದರಲ್ಲಿ ಶಾಮೀಲಾಗಿದ್ದವು. ಮುಂದಡಾ ಓಸ್ಲರ್, ಡಂಕನ್ ಸ್ಟೀಲ್ ಮತ್ತು ಬ್ರಹ್ಮಪುತ್ರಾ ಮುಂತಾದ ಕಂಪನಿಗಳ ಮೇಲೆ ಅಧಿಕಾರ ನಡೆಸತೊಡಗಿದ.

ಆತನ ಈ ನಯವಂಚಕತನ ಫಿರೋಜ್ ಗಾಂಧಿಯ ಗಮನಕ್ಕೆ ಬಂತು. ಸಂಸತ್ತಿನಲ್ಲಿ ಪ್ರಶ್ನೋತ್ತರಗಳಿಗೆ ಮುಂದಡಾ ಗ್ರಾಸವಾದ. ಆತನಿಗೆ ರಾಜಕೀಯ ರಕ್ಷೆ ನೀಡುವುದರ ವಿಷಯದಲ್ಲಿ ಫಿರೋಜ್ ವಿರೋಧ ವ್ಯಕ್ತಪಡಿಸಿದರು. ಆ ವಿರೋಧ ಅದೆಷ್ಟು ಉಗ್ರವಾಗಿತ್ತೆಂದರೆ ತತ್ಪರಿಣಾಮವಾಗಿ ಆಗಿನ ವಿತ್ತ ಮಂತ್ರಿ ಟಿ.ಟಿ.ಕೃಷ್ಣಮಾಚಾರಿ ಹಾಗೂ (ಆಮೇಲೆ ವಿತ್ತಮಂತ್ರಿಯಾದ) ಎಚ್.ಎಂ. ಪಟೇಲ್ ರಾಜೀನಾಮೆ ನೀಡಬೇಕಾಯಿತು.

ಎಂ.ಸಿ. ಛಾಗಲಾ ತನಿಖಾ ಸಮಿತಿ ವಿತ್ತ ಮಂತ್ರಿಯೆಡೆ ಬೆರಳು ತೋರಿಸಿತ್ತು. ಮುಂದಡಾ ಬಂಧಿಸಲ್ಪಟ್ಟ. ಬಿಡುಗಡೆಯೂ ಆಯಿತು. ಆ ಕಲುಷಿತ ಇತಿಹಾಸ ವಿನ್ನೂ ಜನಮಾನಸದಿಂದ ಮರೆಯಾಗಿಲ್ಲ.

ಕೆ. ಡಿ. ಮಾಳವೀಯ ಮತ್ತು ಸಿರಾಜುದ್ದೀನ್‌ರ ಕಥೆ ಇಂದಿಗೂ ನೆನಪಿಗೆ ಬರುತ್ತದೆ. ಭಾರತೀಯ ರಾಜಕಾರಣದಲ್ಲಿ ಅವರು ಪದ್ಧತಿಯನ್ನು ನವೀನ ರೀತಿಯಲ್ಲಿ ಪುನರುಜ್ಜೀವನಗೊಳಿಸಿದರು. ೧೯೬೩ರಲ್ಲಿ ಆದಾಯಕರಗಳ್ಳತನದ ಆರೋಪದ ಮೇಲ 'ಸಿರಾಜುದ್ದೀನ್ ಆ್ಯಂಡ್ ಕಂಪನಿ'ಯ ವ್ಯವಸ್ಥಾಪಕ ಸಿರಾಜುದ್ದೀನ್‌ರ ಮನೆ ಹಾಗೂ ಕಚೇರಿಗಳ ಮೇಲೆ ಇನ್‌ಕಂ ಟ್ಯಾಕ್ಸ್‌ನವರು ದಾಳಿ ನಡೆಸಿದಾಗ ಅನೇಕ ವಿಷಯಗಳು ಬೆಳಕಿಗೆ ಬಂದವು. 'ಸಿರಾಜುದ್ದೀನ್ ಆ್ಯಂಡ್ ಕಂಪನಿ' ಅನೇಕ ಕೇಂದ್ರ ಸಚಿವರಿಗೆ ಹಣ ಮತ್ತು ವಸ್ತುಗಳ ರೂಪದಲ್ಲಿ ಕಾಣಿಕೆಗಳನ್ನು ನೀಡಿತ್ತೆಂಬುದಕ್ಕೆ ಪುರಾವೆಗಳು ಸಿಕ್ಕವು. ಪ್ರಕರಣ ಚರ್ಚೆಗೆ ಬಂತು. ತನಿಖೆಗೆ ಒತ್ತಾಯಿಸಲಾಯಿತು. ಆಗ ಮಂತ್ರಿ ಕೇಶವದೇವ ಮಾಲವೀಯ "೧೯೬೨ರಲ್ಲಿ ನನ್ನ ಮತ ಕ್ಷೇತ್ರವಾದ 'ಬಸ್ತಿ'ಯಿಂದ ವಿಧಾನ ಸಭೆಗೆ ಸ್ಪರ್ಧಿಸುತ್ತಿದ್ದ ಉಮೇದುವಾರನೊಬ್ಬನಿಗೆ ೧೦ ಸಾವಿರ ರೂಪಾಯಿ ಕೊಡುವಂತೆ 'ಸಿರಾಜುದ್ದೀನ್ ಆ್ಯಂಡ್ ಕಂಪನಿ'ಗೆ ಶಿಫಾರಸು ಮಾಡಿದ್ದೆ" ಎಂದು ಒಪ್ಪಿಕೊಂಡರು. ಆದರೆ ಸಂಸತ್ತು ಅಷ್ಟಕ್ಕೇ ಸಮಾಧಾನಗೊಳ್ಳಲಿಲ್ಲ. "ಮಾಲವೀಯರು 'ಸಿರಾಜುದ್ದೀನ್ ಆ್ಯಂಡ್ ಕಂಪನಿ' ಎರಡು ಕೋಟಿ ರೂಪಾಯಿಗಳ ಯಂತ್ರೋಪಕರಣ ತರಿಸಿಕೊಳ್ಳಲು ವಾಣಿಜ್ಯ ಸಚಿವಾಲಯ ಅನುಮತಿ ನೀಡುವಂತೆ ಪ್ರಭಾವ ಬೀರಿದ್ದಾರೆ. ಈಗಾಗಲೇ ವಿವಾದವೆದ್ದಿದೆ. ಇದು ಗೊತ್ತಿದ್ದೂ ಮಂತ್ರಿ ಮಾಲವೀಯರು ಅದು ಹೇಗೆ ಶಿಫಾರಸು ನೀಡಿದರು ?" ಮುಂತಾಗಿ ವಿರೋಧ ಪಕ್ಷದವರು ಪಟ್ಟು ಹಿಡಿದು ಕೂತರು. "ಅವರ ಮೇಲಿನ ಎಂಟರ ಪೈಕಿ ಆರು ಆರೋಪಗಳು

ಪತ್ನಿ ಋಣ !?

ಅಧಿಕಾರ ದುರುಪಯೋಗದ ಮತ್ತೊಂದು ಮುಖ ಇಲ್ಲಿದೆ.

ನಮ್ಮ ಪ್ರಧಾನಿ ಪಿ.ವಿ.ಎನ್. ಅವರ 'ಆಸ್ಥಾನ ರತ್ನ'ಗಳಲ್ಲೊಬ್ಬರಾದ, ಕರ್ನಾಟಕದಿಂದ ದಿಲ್ಲಿಗೆ ದರಬಾರು ನಡೆಸಲು ಕಳಿಸಲ್ಪಟ್ಟ ಮಂತ್ರಿಯೊಬ್ಬರು ತಮ್ಮ ಪತ್ನಿ ಋಣ ತೀರಿಸಲು ಸ್ಥಾನಬಲ ಪ್ರಯೋಗಿಸಿದ ಕಥೆ ಇದು.

ಬೆಂಗಳೂರಿನಲ್ಲಿರುವ ರಾಷ್ಟ್ರೀಕೃತ ಬ್ಯಾಂಕೊಂದರ ಶಾಖೆಯಿಂದ ಈ ಮಂತ್ರಿಯ ಪತ್ನಿ ೧೯೮೭ರಲ್ಲಿ ತಮ್ಮ ರಾಸಾಯನಿಕ ಉದ್ದಿಮೆಗಾಗಿ ೫ ಲಕ್ಷ ೯೩ ಸಾವಿರದ ಸಾಲ ಪಡೆದರು. ಬ್ಯಾಂಕಿನ ಅಧಿಕಾರಿಗಳು ಸುಲಭದಲ್ಲಿ ಸಾಲ ಮಂಜೂರು ಮಾಡಲು ಒಪ್ಪಿರಲಿಲ್ಲ. ಪತಿಯ ವರ್ಚಸ್ಸು ಕೆಲಸ ಮಾಡಿದ್ದರಿಂದಾಗಿ ಸಾಲ ಪಡೆಯಲು ಸಫಲರಾದರಂತೆ ಈ ಮಹಿಳೆ. ಆಮೇಲೆ ಮರುಪಾವತಿ, ಬಡ್ಡಿ ಕಟ್ಟುವಿಕೆಗಳ ಮಾತೇ ಇಲ್ಲ! ಕಳೆದ ವರ್ಷ ಮಾರ್ಚ್ ಕೊನೆಗೆ ಬಡ್ಡಿ ಸಹಿತ ಈ ಮೊತ್ತ ೧೭ ಲಕ್ಷ ೪೯ ಸಾವಿರವಾಗಿ ಕೂತಿತ್ತು. ಬ್ಯಾಂಕಿನವರ ವತಾವತಿಯೂ ಹೆಚ್ಚಾಯಿತು.

"ನನ್ನದು ಲುಕ್ಸಾನಿನಲ್ಲಿ ನಡೆದಿರುವ ಉದ್ದಿಮೆ. ಸಾಲ ತೀರಿಸುವುದು ನನ್ನಿಂದ ಅಸಾಧ್ಯ ಆದ್ದರಿಂದ ದಯವಿಟ್ಟು ನನ್ನಿಂದ ಕೊಡಲು ಶಕ್ಯವಾಗಬಹುದಾದ ಏಳು ಲಕ್ಷ ರೂಪಾಯಿಗಳನ್ನು ಸ್ವೀಕರಿಸಿ ನನ್ನ ಖಾತೆಯನ್ನು ಮುಚ್ಚಬೇಕಾಗಿ ವಿನಂತಿ," ಎಂದು ಬರೆದುಕೊಂಡರಂತೆ ಈ ಚತುರಮತಿ. ಅಧಿಕಾರಿಗಳು ಮಾತುಕತೆ ನಡೆಸಿ ಕೊನೆಗೆ, "ಎಂಟು ಲಕ್ಷ ಕೊಟ್ಟುಬಿಡಿ. ಈ ಪ್ರಕರಣಕ್ಕೆ ಪೂರ್ಣವಿರಾಮ ಹಾಕೋಣ," ಎಂದರಂತೆ. ಅಂತೂ ೯ ಲಕ್ಷ ೪೯ ಸಾವಿರ ರೂಪಾಯಿಗಳ ಉಳಿತಾಯ !

ಸಣ್ಣ ಸಾಲ ಪಡೆದಾತ ಅದನ್ನು ತೀರಿಸಲು ಸೊರಗಿ ಸಣ್ಣಾಗುತ್ತಾನೆ. ದೊಡ್ಡ ಸಾಲ ಪಡೆದಾತ ಅದರ ಚಿಂತೆಯನ್ನೇ ಮರೆತು ಗಡದ್ದಾಗಿ ಮಲಗಿ ನಿದ್ರಿಸುತ್ತಲೇ ಹೀಗೆ ಬೇರೆ ಯಾವ ಕಡೆ ಸಾಲ ಪಡೆಯುವುದು ಎಂಬ ಕನಸು ಕಾಣುತ್ತಿರುತ್ತಾನೆ. ●

✤

ಅಳಿಯ-ರಾಮರಾಯ !

ಸ್ವಜನ ಪಕ್ಷಪಾತದ ಇನ್ನಷ್ಟು ಉದಾಹರಣೆಗಳಿಲ್ಲಿವೆ.

'ತೆಲುಗು ದೇಶಂ' ಪಕ್ಷದ ಜನಕ, ಆಂಧ್ರ ಜನತೆಯ ಆರಾಧ್ಯ ನಾಯಕ, 'ಕೃಷ್ಣ' ಪಾತ್ರ ಪ್ರವೀಣ ಎನ್.ಟಿ. ರಾಮರಾವ್ ಅಳಿಯ ಚಂದ್ರಬಾಬು ನಾಯ್ಡು ಅವರನ್ನು ಎನ್.ಟಿ.ಆರ್. 'ರಾಷ್ಟ್ರೀಯ ಕೃಷಿಕ ಪರಿಷತ್' ಅಧ್ಯಕ್ಷನನ್ನಾಗಿ ನೇಮಿಸಿದ್ದನ್ನು ಆಂಧ್ರದ ಹೈಕೋರ್ಟ್ ಅನೂರ್ಜಿತಗೊಳಿಸಿತು. ರಾಮರಾವ್ ಹಠಮಾರಿ. ಅಳಿಯನನ್ನು ಮತ್ತೆ ಅದೇ ಸ್ಥಾನದಲ್ಲಿ ಕೂರಿಸಿದರು. ಹೈಕೋರ್ಟು ಮತ್ತೆ ಈ ನೇಮಕವನ್ನು ರದ್ದು ಮಾಡಿತು. ರಾಮರಾವ್ ಮತ್ತೊಂದು ದಾಳ ಎಸೆದರು. ಎರಡನೆ ಅಳಿಯ ಡಾ. ವೆಂಕಟೇಶ್ವರರಾವ್ ಮಂತ್ರಿಯಾದರು; ಮಗ ಬಾಲಕೃಷ್ಣ ತಂದೆಯ 'ರಾಜಕೀಯ ಉತ್ತರಾಧಿಕಾರಿ'ಯಾದ.

ಒರಿಸ್ಸಾದ ಜಾನಕಿವಲ್ಲಭ ಪಟ್ಟನಾಯಕರು ತಮ್ಮ ಪತ್ನಿ ಜಯಂತಿ ಹಾಗೂ ಅಳಿಯ ಸೌಮ್ಯ ರಂಜನರನ್ನು; ಭಜನಲಾಲ್ ತಮ್ಮ ಅಳಿಯ ಅನೂಪ್ ವಿಶ್ನೋಯಿಯನ್ನು; ಜ್ಯೋತಿಬಸು ತಮ್ಮ ಮಗ ಚಂದನ್ ಬಸುವನ್ನು; ಭಗವತ್ ಝಾ ಆಜಾದ್ ತಮ್ಮ ಮಗ ಕೀರ್ತಿ ಆಜಾದ್‌ರನ್ನು; ಅರ್ಜುನ್‌ಸಿಂಗ್ ತಮ್ಮ ಪುತ್ರ ರಾಹುಲಸಿಂಗ್‌ನನ್ನು; ಶಂಕರರಾವ್ ಚವ್ಹಾಣ್ ಮಗ ಅಶೋಕನನ್ನು; ಎ.ಆರ್. ಅಂತುಲೆ ಅಳಿಯ ಮುಶ್ತಾಕ್‌ನನ್ನು ರಾಜಕಾರಣದಲ್ಲಿ ಮುಂದೆ ತರುವುದಕ್ಕಾಗಿ ಅಧಿಕಾರದ ದುರುಪಯೋಗ ಮಾಡಿಕೊಂಡರೆಂಬುದು ಎಲ್ಲರೂ ಬಲ್ಲ ಸಂಗತಿ. ●

ನಿರಾಧಾರವೆಂದು ಸಾಬೀತಾಗಿದೆ. ಉಳಿದ ಎರಡರಲ್ಲಿ ಮಾಲವೀಯ ತಪ್ಪಿತಸ್ಥರೆಂದು ಸಿದ್ಧವಾಗಿದೆ" ಎಂದು ನೆಹರೂ ಹೇಳಿಕೆ ನೀಡಿದರೂ ವಿರೋಧ ಪಕ್ಷದವರು ಮಾಲವೀಯರ ರಾಜೀನಾಮೆಗೆ ಒತ್ತಾಯಿಸತೊಡಗಿದರು. ಕೊನೆಗೂ ಕೇಶವದೇವ ಅಧಿಕಾರ ಬಿಟ್ಟು ಇಳಿಯಬೇಕಾಯಿತು.

'ಸಂಬಂಧ'ಗಳನ್ನು ನಿಭಾಯಿಸುವಲ್ಲಿ ಅತ್ಯಂತ ಕೌಶಲದಿಂದ ಕೆಲಸ ಮಾಡಿದವರೆಂದರೆ ಪಂಜಾಬಿನ ಮಾಜಿ ಮುಖ್ಯ ಮಂತ್ರಿ ದಿ. ಪ್ರತಾಪಸಿಂಗ್ ಕೈರಾನ್. ಅವರ ಮೇಲೆ ಅಧಿಕಾರ ದುರುಪಯೋಗದ ಆರೋಪವಿತ್ತು. ರಾಜಕಾರಣಕ್ಕೆ ಬರುವ ಮೊದಲು ಅವರ ಆರ್ಥಿಕ ಸ್ಥಿತಿ ಅಷ್ಟೇನೂ ತೃಪ್ತಿದಾಯಕವಾಗಿರಲಿಲ್ಲವಂತೆ. ಆ ಕಾರಣದಿಂದ ಅವರ ಪತ್ನಿ ರಮಾ ಕೈರಾನ್ ಮತ್ತು ಮಗ ಸುರಿಂದರ್ ಸಿಂಗ್ ನೌಕರಿ ಮಾಡಬೇಕಾಗಿ ಬಂತು. ಆದರೆ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಕೈರಾನ್ ಲಕ್ಷಾಂತರಗಳ ಸಂಪತ್ತಿಗೆ ಮಾಲಕರಾದರು. ಚಂಡೀಗಢದ ನೀಲಂ ಟಾಕೀಜಿಗೆ ಮುಖ್ಯ ಮಂತ್ರಿಯ ಪುತ್ರನೂ ಸಮಪಾಲುದಾರ. ಅಮೃತಸರದ ನಂದನ ಟಾಕೀಜು ಅವರ ಎರಡನೆಯ ಮಗ ಮತ್ತು ಸೊಸೆಯ ಹೆಸರಿನಲ್ಲಿದೆ. ಅಷ್ಟೇ ಅಲ್ಲ ಆ ಈಡೀ ಜಾಗ ನಾಮಮಾತ್ರ ಶುಲ್ಕವಿತ್ತು ಕೊಂಡುಕೊಂಡದ್ದು.

ಸುಪ್ರಿಂ ಕೋರ್ಟಿನ ಮಾಜಿ ನ್ಯಾಯಾಧೀಶ ಸುಧಿರಂಜನ್ ದಾಸ್ 'ಕೈರಾನ್ ಕಾಂಡ'ದ ವಿಚಾರಣೆ ಮಾಡಬೇಕಾಯಿತು. ಲಾಲಬಹಾದ್ದೂರರು ಪ್ರಧಾನ ಮಂತ್ರಿಪದ ಸ್ವೀಕರಿಸಿ ಸರಿಯಾಗಿ ಮೂರನೆಯ ದಿನ ದಾಸ್ ವರದಿ ಬಂತು. ಆದರೆ ಕೈರಾನ್ ಆ ವರದಿಯನ್ನು ಮನ್ನಿಸುವುದಿಲ್ಲವೆಂದೂ, ತಾವು ರಾಜೀನಾಮೆ ನೀಡುವುದಿಲ್ಲವೆಂದೂ ಹಟ ಹಿಡಿದರು.

ಶಾಸ್ತ್ರೀಜಿ ಆ ವರದಿ ಪ್ರಕಟವಾಗುವಂತೆ ನೋಡಿಕೊಂಡರು. ಕೈರಾನ್ ವಿರುದ್ಧ ಕೂಗೆದ್ದಿತು. ಅನಿವಾರ್ಯವಾಗಿ ಕೈರಾನ್ ರಾಜೀನಾಮೆ ಇತ್ತುದಲ್ಲದೆ ರಾಜಕೀಯ ಸಂನ್ಯಾಸವನ್ನೂ ಸ್ವೀಕರಿಸಿದರು.

ಒರಿಸ್ಸಾದ ಪಟ್ಟನಾಯಕರ ವಿಷಯಕ್ಕೆ ಬರೋಣ. 'ಕಲಿಂಗ ಇಂಡಸ್ಟ್ರೀಜ್' ಎಂಬ ಸಂಸ್ಥೆಗೆ ಅವರ ಪತ್ನಿಯೇ ಚೇರ್‌ಮನ್. ಆ ಕೈಗಾರಿಕೆಯ ಮುಖ್ಯ ಉತ್ಪಾದನೆ ಕತ್ತರಿಗಳು. ಪಟ್ಟನಾಯಕರು ಯಾವುದೇ ಟೆಂಡರ್ ಕರೆಯದೇ ಆ ಔದ್ಯೋಗಿಕ ಸಂಸ್ಥೆಯಿಂದ ೭೭ ಲಕ್ಷ ೯೧ ಸಾವಿರ ರೂಪಾಯಿಗಳ ಕತ್ತರಿಗಳನ್ನು ಸರಕಾರದ ಪರವಾಗಿ ಖರೀದಿಸಿದರು. ಅಷ್ಟೇ ಅಲ್ಲ, ಖರೀದಿಯ ಪ್ರಸ್ತಾಪ ಆ ಸಂಸ್ಥೆಯಿಂದ ಬಂದಾಗಲೆಲ್ಲ ಹಿಂದೆ ಮುಂದೆ ನೋಡದೆಯೇ ಖರೀದಿಸಲಾಯಿತು. ಆದರೆ ಒಂದೇ ಒಂದು ಕತ್ತರಿಯೂ ಬಳಕೆಗೆ ಬಂದಿರಲಿಲ್ಲವೆಂಬುದು ಚೋದ್ಯದ ಸಂಗತಿ. ಖನ್ನಾ ಆಯೋಗ ೧೯೬೭ರಲ್ಲಿ ಪಟ್ಟನಾಯಕರನ್ನು ತಪ್ಪಿತಸ್ಥರೆಂದು ಸಾರಿ ವರದಿ ನೀಡಿತು. ಬೀಜೂಭಾಯಿ 'ಕತ್ತರಿ ಪ್ರಯೋಗ'ಕ್ಕೆ ಒಳಗಾದರೂ ಮತ್ತೆ ಮತ್ತೆ ಅಧಿಕಾರಕ್ಕೆ ಬಂದು 'ಭ್ರಷ್ಟಾಚಾರದ ಭಾಂಡಾರ'ವೇ ಆಗಿ ಹೋದರು.

ಜೀಪು ಹಗರಣದಿಂದ ಶೇರು ಹಗರಣದವರೆಗೆ ನಡೆದ ಈ ಪ್ರಕರಣಗಳೆಲ್ಲ ಭ್ರಷ್ಟಾಚಾರದ ಪರ್ಯಾಯಗಳಾಗಿ ನಿಂತಿವೆ. ಎಲ್ಲಿದೆ ದೋಷ? ಹುಡುಕುವವರಾರು? ರಾಜ್ಯವೊಂದರ ಕೆಬಿನೆಟ್ ಸಚಿವನ ಮೇಲೆ ಬರುವ ಆಪಾದನೆಗಳ ವಿಚಾರಣೆ ಅದೇ ರಾಜ್ಯದ ಇನ್ನೊಬ್ಬ ಕೆಬಿನೆಟ್ ದರ್ಜೆಯ ಮಂತ್ರಿಯ ನೇತೃತ್ವದಲ್ಲಿ

ಎಮ್ಮೆಗಳಿಗೂ ಏರ್‌ಕಂಡೀಶನ್ !

ಭಾರತದ ಉಪಪ್ರಧಾನಮಂತ್ರಿಯಾಗಿ ಮೆರೆದ ದೇವೀಲಾಲರ ದೌಲತ್ತು-ದೌಲುಗಳು ಒಂದೇ ಎರಡೇ ? ದಿಲ್ಲಿಯ ಗದ್ದುಗೆಯ ಎರಡನೆ ಸ್ಥಾನದಲ್ಲಿದ್ದ ಅವರು ತಮ್ಮ ಎಮ್ಮೆಗಳ ಕೊಟ್ಟಿಗೆಯನ್ನು ವಾತಾನುಕೂಲಿಯನ್ನಾಗಿ ಮಾಡಿ ಆ ಖರ್ಚನ್ನೆಲ್ಲ ಸರಕಾರದ ಮೇಲೆ ಹೇರಿದರು ! ಇದು ಮುಂದೆ ದೊಡ್ಡ ರಾದ್ಧಾಂತವೇ ಆಯಿತು. ●

ನಡೆಯುತ್ತದೆ. ಆರೋಪ ಸಾಬೀತಾಗುವುದಿಲ್ಲ. ಆದರೆ ಆ ಸಚಿವನಿಗೆ ನೆರವಾದ ಕೆಲವು ನೌಕರರು ಸಸ್ಪೆಂಡಾಗುತ್ತಾರೆ. ಕೆಲದಿನಗಳಲ್ಲಿಯೇ ಮತ್ತೊಂದು ಪ್ರಕರಣ ಧುತ್ತೆಂದು ಎದುರಾಗುತ್ತದೆ. ಹೊಸ ಪ್ರಕರಣದಲ್ಲಿ ಹಳೆಯದನ್ನು ಜನ ಮರೆತು ಬಿಡುತ್ತಾರೆ. ಅಲ್ಲಿಗೆ ಆ ಪ್ರಕರಣ ಮುಗಿದಂತೆಯೇ.

ಇಂದು ಭಾರತದಲ್ಲಿ "ನಿಸ್ಪೃಹ," "ನಿಸ್ವಾರ್ಥಿ" ಎಂದು, "ಶುದ್ಧ ಚಾರಿತ್ರ್ಯದವ"ನೆಂದು ಎತ್ತಿ ತೋರಿಸಬಹುದಾದ ಒಬ್ಬನೇ ಒಬ್ಬ ರಾಜಕಾರಣಿ ಇದ್ದಾನೆಯ ? ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಹುಡುಕಿದರೂ ಸಿಗುವುದಿಲ್ಲ. ಇಷ್ಟಾದರೂ ಪ್ರತಿಯೊಬ್ಬ ರಾಜಕಾರಣಿಯೂ "ಬಡವರ ಬಂಧು." ಚುನಾವಣಾ ಕಣದಲ್ಲಿರುವ ಪ್ರತಿ ಉಮ್ಮೇದುವಾರನಿಗೂ ಪ್ರಜೆ "ಮತದಾರ ಬಾಂಧವ."

"'ಭ್ರಷ್ಟಾಚಾರ' ಇಂದು 'ಶಿಷ್ಟಾಚಾರ'ವಾಗಿ ಪರಿಣಮಿಸಿದೆ. ಪ್ರತಿ ರಕ್ಕಸನ ಶಕ್ತಿ ಸುರಪ್ರಸಾದಿತವೆ. ಹಾಗೆಯೇ ಪ್ರತಿ ಭ್ರಷ್ಟಾಚಾರಿಗೂ 'ಸಜ್ಜನ'ರ ಸಹಕಾರ ಇರುತ್ತದೆ. ಇದೊಂದು ರೀತಿ ಕೊಡು-ಕೊಳ್ಳುವಿಕೆ," ಎಂಬ ಚಂದ್ರಶೇಖರ ಧರ್ಮಾಧಿಕಾರಿಗಳ ಮಾತು ವಿಚಾರಾರ್ಹವಾಗಿದೆ. ಧರ್ಮಾಧಿಕಾರಿಗಳು ಹೇಳುವ ಇನ್ನೊಂದು ಮಾತನ್ನೂ ನಾವು ಗಣನೆಗೆ ತಂದುಕೊಳ್ಳಬೇಕು- "ನಮ್ಮ ಸಂಸ್ಕೃತಿಯ ಹಾಗೆ. ಸೊಳ್ಳೆ ಪರದೆಯ ರೀತಿಯದು. ಸೊಳ್ಳೆ ಕಚ್ಚಬಾರದು ಎಂದೇ ಪರದೆಯೊಳಗಡೆ ಮಲಗುತ್ತಾರೆ. ಆದರೆ ಇಷ್ಟು ಮಾಡಿದ ಮಾತ್ರಕ್ಕೆ ಸೊಳ್ಳೆ ಸಾಯುತ್ತದೆಯ ? ಸೊಳ್ಳೆ ಹುಟ್ಟುವ ಜಾಗವನ್ನ ಸಮೂಲನಾಶಗೊಳಿಸಿದರೆ ಅದರ ಕಾಟವೇ ಇರುವುದಿಲ್ಲ ಎಂದು ಅರ್ಥಮಾಡಿಕೊಳ್ಳುವವರೆಷ್ಟು ಜನ ?" ಇಂಥ ಮಾರ್ಮಿಕ ಮಾತುಗಳನ್ನು ಓದಿದಾಗಲೆಲ್ಲ ಮೆಚ್ಚಿಕೊಳ್ಳುತ್ತೇವೆ; ಖೈರ್ನಾರ್-ಶೇಷನ್ನರ ಭಾಷಣ ಕೇಳಿದಾಗ ಕೈ ತಟ್ಟಿದ ಹಾಗೆ. ಅಷ್ಟಾದರೆ ಮುಗಿಯಿತು. ಪುಸ್ತಕ ಮುಚ್ಚಿಟ್ಟ ಮೇಲಾಗಲಿ, ಸಭಾಭವನದಿಂದ ಹೊರ ಬಂದ ಮೇಲಾಗಲಿ ನಾವು ಮೈಮರೆತು ಮತ್ತೆ ಭ್ರಷ್ಟಾಸುರನ ಪ್ರಭಾವಲಯದಲ್ಲಿ ಸಿಲುಕಿ ಸೊರಗತೊಡಗುತ್ತೇವೆ.

✤

ಭೀಮ ತಪ್ಪು ಮಾಡಿದ. ಬೆಟ್ಟದೆತ್ತರ ಬಿದ್ದ ಆ ಬಕಾಸುರನ ದೇಹವನ್ನು ಪುಡಿಪುಡಿ ಮಾಡಿ ಬಂದ. ಆ ರಕ್ತದಿಂದ ಮುಂದಾಗುವ ಅನಾಹುತ ಆತನಿಗೆ ಆ ವಿಜಯೋನ್ಮಾದದಲ್ಲಿ ಗಮನಕ್ಕೆ ಬರಲಿಲ್ಲ.

"ಭ್ರಷ್ಟಾಸುರ ಸಂಹಾರ ಸಾಧ್ಯವೇ ?" ಎಂಬುದೊಂದು ಯಕ್ಷ ಪ್ರಶ್ನೆಯಂತಾಗಿ ಕೂತಿದೆ. ಅಂದು ಧರ್ಮರಾಜನೇನೋ ಉತ್ತರ ನೀಡಿ ನೀರು ಪಡೆಕೊಂಡು ತನ್ನ ನಾಲ್ವರು ತಮ್ಮಂದಿರನ್ನೂ ಬದುಕಿಸಿದ. ಇಂದು ನಾವು ಧರ್ಮಜನಿಗಾಗಿ ಹುಡುಕಬೇಕಾದ ಪರಿಸ್ಥಿತಿಯಿದೆ. ●


ನನ್ನ ತಂದೆ
ಸಿ.ಕೆ. ನಾಯುಡು
• ಚಂದ್ರಾ ನಾಯುಡು

ಸಿ.ಕೆ. ನಾಯ್ಡು ವ್ಯಕ್ತಿಶಃ ಹೇಗಿದ್ದರೆಂಬುದನ್ನು ಅವರ ಪುತ್ರಿಯ ಮಾತಿನಲ್ಲೇ ಕೇಳಿ. ಕರ್ನಲ್ ಸಿ.ಕೆ. ನಾಯ್ಡು ಜನ್ಮಶತಮಾನೋತ್ಸವ ವರ್ಷ ಸಂದರ್ಭದ ಬರಹ.

(ಜನನ: ೧೮೯೫ ಅಕ್ಟೋಬರ್ ೩೧)

ಈಗ ಎಲ್ಲೆಲ್ಲೂ ಕ್ರಿಕೆಟ್ ಕುರಿತಾದ ಮಾತುಗಳೇ ಕೇಳಿಬರುತ್ತಿರುವಾಗ ನನ್ನ ಯೋಚನೆಗಳು ನಮ್ಮ ಸ್ವರ್ಗಸ್ಥ ತಂದೆ ಕರ್ನಲ್ ಸಿ.ಕೆ. ನಾಯ್ಡುರವರನ್ನು ಸುತ್ತುವರಿಯುವುದರಲ್ಲಿ ಅಸಹಜತೆಯೇನೂ ಇಲ್ಲ. ಬೇರುಗಳ ಬಗ್ಗೆ ಯೋಚಿಸದೆ ಹೂ-ಮೊಗ್ಗುಗಳ ಸೌಂದರ್ಯವನ್ನು ಸವಿಯುವುದು ಹೇಗೆ ಅಸಾಧ್ಯವೋ, ಹಾಗೆ ನಾಯ್ಡುರವರನ್ನು ಹೊರಗಿಟ್ಟು ಭಾರತೀಯ ಕ್ರಿಕೆಟ್ ಬಗ್ಗೆ ಚಿಂತನೆ ಮಾಡುವುದೂ ಸಾಧ್ಯವಿಲ್ಲ.

ಕಳೆದು ಹೋದ ದಿನಗಳನ್ನು ವರ್ತಮಾನದೊಂದಿಗೆ ತುಲನೆ ಮಾಡುವುದು ಅರ್ಥಹೀನವೆಂದು ಗೊತ್ತಿದ್ದೂ ನನ್ನ ತಂದೆಗೆ ಸಂಬಂಧಿಸಿದಂತೆ ಒಮ್ಮೊಮ್ಮೆ '.....ರೆ' ಸಾಗರದಲ್ಲಿ ತೇಲಾಡಿ ಬಿಡುತ್ತೇನೆ. ಒಂದು ವೇಳೆ ನಾಯ್ಡುಗೆ ೩೭ ತುಂಬುವ ಮೊದಲೇ ಭಾರತದಲ್ಲಿ ಕ್ರಿಕೆಟ್ ಟೆಸ್ಟ್ ಅಂಕುರಗೊಂಡಿದ್ದರೆ.... ಈಗಿನ ಆಟಗಾರರು ಹಲವಾರು ಟೆಸ್ಟ್‌ಗಳಲ್ಲಿ ಪಾಲ್ಗೊಳ್ಳುವಂಥ ಅವಕಾಶ ಆತನಿಗೆ ಲಭಿಸಿದ್ದಿದ್ದರೆ.... ಎರಡನೇ ಜಾಗತಿಕ ಸಮರ ಆತನ ಕ್ರಿಕೆಟ್ ಜೀವನಕ್ಕೆ ತಡೆ ಹಾಕಿರದಿರುತ್ತಿದ್ದರೆ.... ನಾಯ್ಡು ಯೌವನಾವಸ್ಥೆಯಲ್ಲಿರುವಾಗ 'ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯಗಳು' ನಡೆದಿದ್ದರೆ.... ನಾಯ್ಡು ಆಟದ ವೈಖರಿಯನ್ನು ತಮ್ಮಲ್ಲಿ ಸೆರೆ ಹಿಡಿದಿಟ್ಟುಕೊಳ್ಳುವಲ್ಲಿ ದೂರದರ್ಶನ ಯಶಸ್ವಿಯಾಗಿದ್ದಿದ್ದರೆ..... ಮಾಧ್ಯಮಗಳು ಈಗ ಕ್ರಿಕೆಟ್‌ಗೆ ಕೊಡುತ್ತಿರುವ ಮಹತ್ವವನ್ನು ಆಗಲೂ ಕೊಟ್ಟಿದ್ದರೆ.... ಎಂದೆಲ್ಲ ಯೋಚಿಸಿ ನಿಡುಸುಯ್ಯುತ್ತೇನೆ. ಇಂಥ ನೂರೆಂಟು '...ರೆ'ಗಳಲ್ಲಿ ಕೆಲವಾದರೂ ಸಾಧ್ಯವಾಗಿದ್ದರೆ.. ?

ಮನೆ ಮಕ್ಕಳಿಗೆಲ್ಲ 'ನಾನಾ', ಆಪ್ತೇಷ್ಟರಿಗೆ 'ಸಿ.ಕೆ.' ಆಗಿದ್ದರು ಕೊಟ್ಟಾರಿ ಕನಕಯ್ಯ ನಾಯ್ಡು. ತಂದೆಯನ್ನು ಸುತ್ತುವರಿದಿದ್ದ ಹಲವಾರು ಮಿತಿಗಳನ್ನು ನಿರ್ಲಕ್ಷಿಸಿ ವಿಧಿ ಆತನ ಕಥೆಯನ್ನು ಅನುಪಮ ಲೇಖನಿಯಿಂದ ಬರೆದಿತ್ತು. ಭಾರತೀಯ ಕ್ರಿಕೆಟ್ ಆಗಸದಲ್ಲಿ ಜಾಜ್ವಲ್ಯಮಾನವಾಗಿ ಬೆಳಗಿದ ತಾರೆ- ಸಿ.ಕೆ. ಅದಕ್ಕೆಂದೇ ಯಾವಾಗಾದರೂ ಎಲ್ಲಿಯಾದರೂ ಭಾರತದ ಕ್ರಿಕೆಟ್ ಪ್ರಸ್ತಾಪವಾದರೆ ಅಲ್ಲಿ ಸಿ.ಕೆ. ಹೆಸರು ಹೆಮ್ಮೆ ಪ್ರೀತಿ ಮತ್ತು ಪೂಜ್ಯ ಭಾವನೆಯೊಂದಿಗೆ ರಾರಾಜಿಸುತ್ತದೆ; ಆಜಾನುಬಾಹು, ಸೂಜಿಗಲ್ಲಿನಂಥ ವ್ಯಕ್ತಿಯೊಬ್ಬನ ಚಿತ್ರ ಮನಸ್ಸಿನ ಮೂಲೆಯಲ್ಲೆಲ್ಲೋ ಪಡಿಮೂಡುತ್ತದೆ.

ನನಗೆ ನಾಯ್ಡು ತಂದೆ ಮಾತ್ರ ಆಗಿರಲಿಲ್ಲ. ನನ್ನ ಹೀರೋ ಕೂಡ ಆತನೆ. ತನ್ನ ಸಂಪರ್ಕಕ್ಕೆ ಬಂದವರ ಎದೆಯಲ್ಲಿ ಭೀತಿಯನ್ನು, ಹೃದಯದಲ್ಲಿ ಪ್ರೀತಿಯನ್ನು ತುಂಬಬಲ್ಲಂಥ ವ್ಯಕ್ತಿತ್ವ ಆತನದಾಗಿತ್ತು. ಕಾಲ ಎಲ್ಲವನ್ನೂ ಮಸಕು ಮಾಡುತ್ತದೆ ಎನ್ನುತ್ತಾರೆ ಬಲ್ಲವರು. ಆದರೆ ಸಿ.ಕೆ.ಯ ಮಗಳ ನೆನಪುಗಳಿಗೆ ಈ ಮಾತು ಅನ್ವಯಿಸುವುದಿಲ್ಲ. ಅವಿನ್ನೂ ಹಚ್ಚಹಸಿರಾಗಿಯೇ ಇವೆ; ನಿಜ ಹೇಳಬೇಕೆಂದರೆ ಮತ್ತಷ್ಟು ಹೃದಯಸ್ಪರ್ಶಿಯಾಗಿವೆ. ಆತನನ್ನು ಎತ್ತರಕ್ಕೇರಿಸಿದ ಮತ್ತು ಆತನನ್ನು 'ಅಸಾಮಾನ್ಯ ಕ್ರಿಕೆಟ್ಟಿಗ'ನನ್ನಾಗಿ ರೂಪಿಸಿದ ವಿಶಿಷ್ಟ ಗುಣಗಳು ನನ್ನ ಮನದಲ್ಲಿ ಸ್ಫುಟವಾಗಿ ಉಳಿದಿವೆ.

ನಮ್ಮಪ್ಪನಿಗೆ ಕ್ರಿಕೆಟ್‌ನಲ್ಲಿ ಆರರ ಅತಿಯಾಸೆ. ಕ್ರಿಕೆಟ್‌ನಲ್ಲಿ ಪದಾರ್ಪಣ ಮಾಡುತ್ತಲೇ ಎದುರಿಸಿದ ಮೊದಲ ಎಸೆತದಿಂದಲೇ ಆತನ ಹೆಸರು ಭಾರತ ತಂಡದಲ್ಲಿ ಸ್ಥಾಪಿಸಲ್ಪಟ್ಟಿತು. ನಿಖರ, ಆಕ್ರಮಣಕಾರೀ ಆಟಕ್ಕೆ ವಿಶೇಷವಾಗಿ ಸಿಕ್ಸರ್‌ಗಳಿಗೆ ಅಪ್ಪ ಪ್ರಸಿದ್ಧವಾಗಿದ್ದರು.

ಸಿ.ಕೆ. ತನ್ನ ಅಭಿಮಾನಿ ಪ್ರೇಕ್ಷಕರಿಗೆ ಆಟದ ರಸದೌತಣ ನೀಡಿದ ಪಂದ್ಯಗಳಲ್ಲಿ ೧೯೨೬ ರಲ್ಲಿ ಮುಂಬಯಿಗೆ ಬಂದ ಆರ್ಥರ್ ಗಿಲಿಗನ್ ನೇತೃತ್ವದ ಎಂ.ಸಿ.ಸಿ. ತಂಡದೆದುರು ಆಡಿದ್ದೂ ಒಂದು.

ಎರಡು ದಿನಗಳ ಪಂದ್ಯದ ಮೊದಲ ದಿನವೇ ಪ್ರವಾಸಿ ತಂಡ ೩೬೩ ಓಟಗಳನ್ನು ಕೂಡಿ ಹಾಕಿತ್ತು.

ಮುಂಬಯಿ ಕ್ರಿಕೆಟ್ ಪ್ರೇಮಿಗಳು ಎಂದೂ ಕೇಳರಿಯದ, ಕಂಡರಿಯದ ಆಟ ಪ್ರದರ್ಶಿಸಿದ್ದ ಗೈ ಅರ್ಲ್ ಎಂಟು ಸಿಕ್ಸರ್‌ಗಳನ್ನು ಬಾರಿಸಿದ್ದ. ಆಟದ ಫಲಿತಾಂಶವೇನೆಂಬುದನ್ನು ಅವರಾಗಲೇ ಊಹಿಸಿದ್ದರು. ಭಾರತೀಯ ಆಟಗಾರರ ಜೋಲು ಮುಖವನ್ನು ಪ್ರೇಕ್ಷಕರು ಕಲ್ಪಿಸಿಕೊಂಡಿದ್ದರು.

ಆತಿಥೇಯ ತಂಡದ ಆಟಗಾರರು ಅಳುಕುತ್ತ ಳುಕುತ್ತಲೇ ಬ್ಯಾಟಿಂಗಿಗೆ ಇಳಿದಿದ್ದರು. ಆಳ ಓಟಗಳಿಗೆ ಮೂವರು ಬಲಿಯಾದದ್ದನ್ನು ಸ್ಕೋರ್ ಬೋರ್ಡ್ ತೋರಿಸುತ್ತಿತ್ತು. ಸಿ.ಕೆ. ಐದನೆಯ ಆಟಗಾರನಾಗಿ ಕ್ರೀಸ್ ಬಳಿ ಬಂದರು. ಬ್ಯಾಟ್ ಹಿಡಿದಾಗ ಆತನಲ್ಲಿ ಅದೇನು ನಿರ್ದಯತೆ! ಚಿಲ್ಲರೆ ಹೊಡೆತಗಳಿಗೆ ಅಲ್ಲಿ ಸ್ಥಳವೇ ಇಲ್ಲ. ರಾಕೆಟ್ ಹಾರಿಸಿದಂತೆ ಬೌಂಡರಿ ಗೆರೆಯನ್ನು ದಾಟಿ ಬೀಳುವಂತೆ ಚೆಂಡನ್ನು ಉಡಾಯಿಸುವುದೆಂದರೆ ಆತನಿಗೆ ಎಲ್ಲಿಲ್ಲದ ಮೋಜು. ವೇಗದ ಮತ್ತು ಚಾತುರ್ಯದ ಬೌಲಿಂಗ್‌ಗೆ ಹೆಸರಾದ ಟೇಟ್, ಆ್ಯಸ್ಟಿಲ್, ಬೋಯ್ಸ್, ವ್ಯಾಟ್ ಮತ್ತು ಮರ್ಕರ್ ಅವರನ್ನು ಸಿ.ಕೆ. ಹಣ್ಣುಗಾಯಿ-ನೀರುಗಾಯಿ ಮಾಡಿದರು. ಆತನ ಬ್ಯಾಟನಿಂದ ಸಿಡಿಯುತ್ತಿದ್ದ ಚೆಂಡು ಹನ್ನೊಂದು ಬಾರಿ ಬೌಂಡರಿ ಗೆರೆಯಿಂದಾಚೆಯೇ ನೆಲ ಕಾಣಬೇಕಾಯಿತು. ಇಷ್ಟಲ್ಲದೆ ಆತ ೧೧೫ ನಿಮಿಷಗಳಲ್ಲಿ ಮಾಡಿದ ೧೫೩ರ ವೈಯಕ್ತಿಕ ಸ್ಕೋರ್‌ನಲ್ಲಿ ೧೩ ಬೌಂಡರಿಗಳೂ ಇದ್ದವು. ಎಲ್ಲರಿಂದಲೂ 'ವಾಹ್!' ಅನ್ನಿಸಿಕೊಂಡಿದ್ದ ಗೈ ಅರ್ಲ್‌ನ ಆಟ ನನ್ನ ತಂದೆಯ ಆಟದ ಮುಂದೆ ತೀರಾ ಸಪ್ಪೆಯಾಯಿತು.

ಆ ದಿನವು ಸಿ.ಕೆ.ಯ ಒಡೆತನದಲ್ಲಿದ್ದಂತೆನಿಸಿತು. ಎಲ್ಲೆಲ್ಲೂ ವಿದ್ಯುತ್ಸಂಚಾರ. ಪ್ರೇಕ್ಷಕರು ಪರಮಾನಂದದಿಂದ ಉನ್ಮತ್ತರಾದಂತಿದ್ದರು. ಸಿ.ಕೆ.ಯ ಬಿರುಗಾಳಿಯಂಥ ಹೊಡೆತಗಳ ವರ್ತಮಾನ ಗಾಳಿಯಲ್ಲೆಲ್ಲ ಬಿತ್ತರಗೊಂಡದ್ದರಿಂದ ಆತ ಭೋಜನಾನಂತರ ಇನ್ನಿಂಗ್ಸ್ ಪ್ರಾರಂಭಿಸಿದಾಗ ಮೈದಾನದ ಹೊರಗಿನ ಮರಗಳ ಮೇಲೂ, ಮನೆಗಳ ಮೇಲೂ ಜನರು ಇರುವೆಗಳಂತೆ ಮುಕುರಿಕೊಂಡಿದ್ದರು.

'ಹಿಸ್ಟರಿ ಆಫ್ ಇಂಡಿಯನ್ ಕ್ರಿಕೆಟ್' ಪುಸ್ತಕದಲ್ಲಿ ಎಡ್ವರ್ಡ್ ಡಾಕರ್ ನನ್ನ ತಂದೆಯ ಆಟವನ್ನು ಹೀಗೆ ಉಲ್ಲೇಖಿಸಿದ್ದಾರೆ, "ಅಗೋ! ಮತ್ತೊಂದು ಸಿಕ್ಸ್; ಈ ಸಲ ಪೆವಿಲಿಯನ್ ಬಲಕ್ಕೆ; ಓಹ್, ಪ್ರೇಕ್ಷಕರ ಚಪ್ಪಾಳೆ, ಕೇಕೆ. ಅಂಪೈಯರರೂ ತಮಗರಿವಿಲ್ಲದಂತೆ ಕೈ ತಟ್ಟುತ್ತಿದ್ದಾರಲ್ಲ..."

"ಪೆವಿಲಿಯನ್ನಿನಿಂದ ಕ್ರೀಸ್ ಬಳಿ ಬರುತ್ತಿದ್ದ ಸಿ.ಕೆ.ಯ ಧೀರ ನಡೆಯನ್ನು ನೋಡಿದರೆ ಸಾಕು, ಪ್ರೇಕ್ಷಕನಿಗೆ ಹಣ ಕೊಟ್ಟದ್ದಕ್ಕೂ ಸಾರ್ಥಕವಾಯಿತು ಎಂದೆನಿಸುತ್ತಿತ್ತು," ಎಂದ ದಿ. ಖಂಡು ರಾಂಗಣೇಕರ್ ಮಾತನ್ನು ಸಿ.ಕೆ. ಮಗಳಾದ ನಾನು ಮರೆತೇನೆಯ?

ಹುಟ್ಟಿದ ದಿನಾಂಕ (ಅಕ್ಟೋಬರ್ ೩೧)ವನ್ನು ಹಂಚಿಕೊಂಡ ಸರದಾರ್ ವಲ್ಲಭಭಾಯಿ ಪಟೇಲ್ ಮತ್ತು ನನ್ನ ತಂದೆಯ ನಡುವೆ ಎಂತಹ ಸಾಮ್ಯ! ಇಬ್ಬರೂ ಉಕ್ಕಿನ ಮನುಷ್ಯರು. ಇಬ್ಬರೂ ಸವಾಲುಗಳನ್ನೇ ಇಷ್ಟಪಟ್ಟು ಅವುಗಳನ್ನು ಮೆಟ್ಟಿ ನಿಂತವರು. ಸವಾಲುಗಳು ಮನುಷ್ಯನಲ್ಲಿ ಉತ್ತಮಿಕೆಗಳನ್ನು ಬೆಳೆಸುತ್ತವೆ ಎಂದು ಅಪ್ಪ ಆಗಾಗ ಹೇಳುತ್ತಿದ್ದುದುಂಟು.

ಅಪ್ಪನ ನರನರದಲ್ಲೂ ಧೈರ್ಯ ತುಂಬಿತ್ತು. ಎಂತಹ ಮಾರಕ ಬೌಲಿಂಗ್‌ಗೂ ಆತ ಅಳುಕುತ್ತಿರಲಿಲ್ಲ. ಆ ದಿನಗಳಲ್ಲಿ ಶಿರಸ್ತ್ರಾಣ ಕದನ ರಂಗದಲ್ಲಿ ಬಳಕೆಯಲ್ಲಿತ್ತೆ ವಿನಾ ಕ್ರಿಕೆಟ್ ಮೈದಾನದಲ್ಲಲ್ಲ. ಅಂಥ ಸಂದರ್ಭವೊಂದರಲ್ಲಿ ದತ್ತು ಫಡ್ಕರ್ ಎಸೆದ ವೇಗದ ಚೆಂಡು ನೇರವಾಗಿ ಅಪ್ಪನ ಬಾಯಿಗೇ ಅಪ್ಪಳಿಸಿತು. ಈಗಿನಂತಾಗಿದ್ದರೆ ನಾಲ್ಕಾರು ಜನ ಸ್ಟ್ರೇಚರ್ ಹೊತ್ತುಕೊಂಡು ಮೈದಾನಕ್ಕೆ ಓಡಿಬರುತ್ತಿದ್ದರು. ಆದರೆ ರಕ್ತವನ್ನೂ, ಮುರಿದ ಹಲ್ಲನ್ನೂ ನಾಯುಡು ಪಿಚಕ್ಕೆಂದು ಪಕ್ಕಕ್ಕೆ ಉಗುಳಿ ಕರವಸ್ತ್ರದಿಂದ ಬಾಯೊರೆಸಿಕೊಂಡು ಮತ್ತೆ ಬ್ಯಾಟ್ ಕುಟ್ಟುತ್ತ ನಿಂತರು. ಪ್ರಥಮೋಪಚಾರವನ್ನು ಒಲ್ಲೆನೆಂದರು.

ಇಂಥ ಛಾತಿ, ಆತ್ಮ ಸ್ಥೈರ್ಯ ಆಟಕ್ಕೇ ಸೀಮಿತವಾಗಿರಲಿಲ್ಲ. ಜೀವನದಲ್ಲಿ ಎದುರಾದ ಸಮಸ್ಯೆಗಳನ್ನು, ಹಿನ್ನಡೆಗಳನ್ನು, ನಿರಾಶೆಗಳನ್ನು, ಹತಾಶೆಗಳನ್ನು ಲೀಲಾಜಾಲವಾಗಿ ಮೆಟ್ಟಿ ನಿಂತರು. ದುಃಖ-ನೋವುಗಳನ್ನು ತನ್ನಲ್ಲೇ ಅಡಗಿಸಿಟ್ಟುಕೊಂಡು ನಗುವ ಅದ್ಭುತ ಸಾಮರ್ಥ್ಯ ಅಪ್ಪನಿಗಿತ್ತು. ಆತ ಅತ್ಯಂತ ಶಿಸ್ತಿನ ಮನುಷ್ಯ. ಮನೆಯಲ್ಲಿ ಕುರ್ಚಿಯ ಸ್ಥಳ ಸ್ವಲ್ಪವೇ ಬದಲಾಗಿದ್ದರೂ, ವೇಪ



ಚಂದ್ರಾ ನಾಯ್ಡು

ರಿನ ತುಂಡೊಂದು ಬಿದ್ದಿದ್ದರೂ ಅಪ್ಪ ದೂರ್ವಾಸ ಮುನಿಯಾಗಿಬಿಡುತ್ತಿದ್ದರು. ಆದರೆ ಮಕ್ಕಳಾದ ನಮ್ಮಿಂದಲೂ ಅಂಥ ಶಿಸ್ತಿನ ವರ್ತನೆಯನ್ನು ನಿರೀಕ್ಷಿಸಿದಾಗ ಮಾತ್ರ ರಂಪಾಟವಾಗುತ್ತಿತ್ತು.

ಸಿ.ಕೆ. ನಾಯ್ಡು ಆಸ್ತಿಕ ಮನುಷ್ಯ. ಭಗವದ್ಗೀತೆ ಆತನಲ್ಲಿ ದೈವೀ ಪ್ರೇರಣೆಯನ್ನು ತುಂಬುತ್ತಿತ್ತು. ಯಾರಿಗೂ ಹೆದರದ ತಂದೆ ದೇವರೆಂದರೆ ಸಾಕು, ಅಂಜಲೀಬದ್ಧವಾಗಿಬಿಡುತ್ತಿದ್ದರು. ನಮ್ಮಲ್ಲಿ ಚಿಕ್ಕಂದಿನಿಂದ ಅಭಯವನ್ನು ತುಂಬಿದ್ದು ಆತನೇ. ಯಾವುದೇ ಹಬ್ಬ- ಅದು ಶಿವರಾತ್ರಿ ಇರಲಿ, ಗುಡಿಪಾಡವಾ ಇರಲಿ, ಗಣೇಶ ಚತುರ್ಥಿ ಇರಲಿ, ದುರ್ಗಾಪೂಜೆ ಇರಲಿ, ಲಕ್ಷ್ಮೀ ಪೂಜೆ ಇರಲಿ- ಮನೆಯಲ್ಲಿ ಭಯಭಕ್ತಿಯಿಂದ ಆಚರಿಸಲೇಬೇಕು. ಜನ್ಮಾಷ್ಟಮಿಯಂದು ನಾವು (ಮಕ್ಕಳು) ಗೊರಕೆ ಹೊಡೆಯುತ್ತಿದ್ದರೆ ಅಪ್ಪ ಮಧ್ಯ ರಾತ್ರಿ ೧೨ ದಾಟುವವರೆಗೆ ಭಗವದ್ಗೀತೆ ಓದುತ್ತಲೋ ಅಮ್ಮ ಹಾಡುತ್ತಿದ್ದ ತ್ಯಾಗರಾಜರ ಕೀರ್ತನೆಗಳನ್ನು ಕೇಳುತ್ತಲೋ ಇರುತ್ತಿದ್ದರು. ಕೃಷ್ಣ ಹುಟ್ಟಿದ್ದು ಆ (ಅ)ವೇಳೆಯಲ್ಲಿಯೇ ಅಲ್ಲವೆ? ನಮ್ಮ ತಾಯಿ ವೃತ್ತಿಪರ ಗಾಯಕಿಯನ್ನು ಸರಿಗಟ್ಟುವಂತೆ ಹಾಡುತ್ತಿದ್ದಳು.

ಅಪ್ಪ ಧರ್ಮಪಕ್ಷಪಾತಿಯಾಗಿರದಿದ್ದ ಕಾರಣ ಮನೆಯಲ್ಲಿ ಮೊಹರಂ ಕೂಡ ಆಚರಣೆಗೊಳ್ಳುತ್ತಿತ್ತು. ಆತ ನಾಗಪುರದ ತಾಜುದ್ದೀನ್ ಬಾಬಾನ ಕಟ್ಟಾ ಅನುಯಾಯಿ. ಕ್ರಿಸ್‌ಮಸ್ ಬಂತೆಂದರೆ ಅಮ್ಮ ಕೇಕ್ ತಯಾರಿಸುತ್ತಿದ್ದಳು.

ಸಿ.ಕೆ. ಸೀದಾ-ಸಾದಾ ಮನುಷ್ಯ, ಕ್ರಿಕೆಟ್ ಬ್ಯಾಟಿನಂತೆ. ಈಗ ಮಿತಿಮೀರಿರುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಭಟ್ಟಂಗಿತನ, ಸಿನಿಕತನಗಳ ಹಿನ್ನೆಲೆಯಲ್ಲಿ ಯೋಚಿಸಿದಾಗ ನಮ್ಮ ತಂದೆಯ ಬಗೆಗಿನ ಗೌರವ, ಮೆಚ್ಚುಗೆ, ಪ್ರೀತಿ ನೂರ್ಮಡಿಯಾಗುತ್ತದೆ. ಮಿಥ್ಯಾ ಪ್ರಶಂಸೆ, ದಾಸ್ಯತ್ವ, ಗಾಸಿಪ್‌ಗಳಿಂದ ಗಾವುದ ದೂರವಿದ್ದ ಸಿ.ಕೆ. ತನ್ನ ವ್ಯಕ್ತಿತ್ವ ಮತ್ತು ನಡವಳಿಕೆಗಳಿಂದಲೇ ಅಭಿಮಾನಿಗಳ ಪ್ರೀತಿ-ಗೌರವಗಳನ್ನು ಸಂಪಾದಿಸಿದ್ದರು. ಆತ ಶಿಸ್ತಿನ ಸಿಪಾಯಿಯಾಗಿದ್ದರೂ ತಂಡದ ಸಹ ಸದಸ್ಯರಿಗೆ, ಮತ್ತು ಆತನ ಮಕ್ಕಳಾದ ನಮಗೆ ಸ್ವಲ್ಪ ರಿಯಾಯಿತ್ತು. ಶಿಸ್ತಿನ ಮಕ್ಕಳಿಗೆಂದು ಪ್ರಶಸ್ತಿ ಏನಾದರೂ ಆಗ ಇದ್ದಿದ್ದರೆ ಅದು ಖಂಡಿತ ನಮ್ಮ ಬಗಲಿಗೆ ಬೀಳುತ್ತಿತ್ತು.

ಅಪ್ಪನದು ಗಡಸು ಮುಖ ಅಲ್ಲಿ ಮಂದಹಾಸ ಮಿನುಗುತ್ತಿದ್ದುದು ಕಡಿಮೆ. ಎಷ್ಟಾದರೂ ಮಿಲಿಟರಿ ಅಧಿಕಾರಿಯಲ್ಲವೆ? ಡ್ಯೂಟಿ ಎಂದರೆ ಡ್ಯೂಟಿ. ಅನೌಚಿತ್ಯಕ್ಕೆ ಎಡೆ ಇಲ್ಲದಂಥದು. ವಹಿಸಲ್ಪಟ್ಟ ಕೆಲಸ ಮುಗಿದ ಬಳಿಕ ಅಪ್ಪ ವಿರಾಮವಾಗಿರುತ್ತಿದ್ದರು. ಕರ್ನಲ್ ಎಂದರೆ ಹಣೆಯಿಂದ ಬೂಟಿನವರೆಗೆ ನಡುಗಿ ಬೆವರುತ್ತಿದ್ದ, ಆತನೆದುರು ಒಂದು ತೊಟ್ಟು ನೀರು ಕುಡಿಯಲೂ ಹಿಂದೆ ಮುಂದೆ ನೋಡುತ್ತಿದ್ದ ಸಹ ಸಿಬ್ಬಂದಿಯವರು ಅಪ್ಪನ ವಿರಾಮ ಕಾಲದಲ್ಲಿ ಜೊತೆಗೂಡುತ್ತಿದ್ದರು. ಆತನೊಂದಿಗೆ ಒಂದೆರಡು ಗಂಟೆಗಳನ್ನು ಆಹ್ಲಾದಕರವಾಗಿ ಕಳೆಯುತ್ತಿದ್ದರು. ಸಿ.ಕೆ. ಉತ್ತಮ ವಾಗ್ಮಿ. ಆತನ ಜ್ಞಾನದ ಹರವಾದರೂ ಎಂಥದೆನ್ನುತ್ತೀರಿ? ಆತನಿಗೆ ಗೊತ್ತಿಲ್ಲವೆನ್ನುವಂಥ ಯಾವ ವಿಷಯವೂ ಇರಲಿಲ್ಲ. ನಾಯ್ಡು ಒಂದು ಸಂಚಾರಿ ವಿಶ್ವಕೋಶದಂತಿದ್ದರು. ಪರೀಕ್ಷೆಯ ತಯಾರಿಯಲ್ಲಿ ನಾನು ಅಪ್ಪನನ್ನೇ ಆಶ್ರಯಿಸುತ್ತಿದ್ದೆ. ಗಣಿತದಲ್ಲಿ ಆತ ಪಂಡಿತ. ಕಾರ್ಯಾಚರಣೆಯಿಂದ, ಟೆನ್ನಿಸ್ ಅಥವಾ ಕ್ರಿಕೆಟ್ ಮೈದಾನದಿಂದ ದಣಿದು ಬಂದಿದ್ದರೂ, ಹೊಟ್ಟೆ ಕರಕರ ಅನ್ನುತ್ತಿದ್ದರೂ ನನ್ನ ಬಳಿ ಬಂದು ಗಣಿತದ ಸಮಸ್ಯೆಗಳನ್ನು ಬಿಡಿಸಿಕೊಟ್ಟ ನಂತರವೇ ಮುಂದಿನ ವಿಚಾರ. ಇಂಗ್ಲೀಷ್ ಭಾಷೆಯಲ್ಲೂ ಅಪ್ಪನೇ ನನಗೆ ಗುರು, ಮಾರ್ಗದರ್ಶಿ. ನಮ್ಮ ಅಜ್ಜನಿಂದ ನಮ್ಮ ಅಪ್ಪನಿಗೆ ಇಂಗ್ಲೀಷ್ ಜ್ಞಾನ

ಸಿ.ಕೆ. ನಾಯ್ಡು: ಮಹತ್ವದ ಮಾಹಿತಿಗಳು

ಕರ್ನಲ್ ಸಿ.ಕೆ. ನಾಯ್ಡು ಹಲವಾರು ರೀತಿಯಲ್ಲಿ ವೈಶಿಷ್ಟ್ಯ ಪೂರ್ಣ ವ್ಯಕ್ತಿ. ಈಗ ಕಪಿಲದೇವ್ ಜನಪ್ರಿಯರಾಗಿರುವಂತೆ ಮೂವತ್ತರ ದಶಕದಲ್ಲಿ ನಾಯ್ಡು ತಮ್ಮ ಭರ್ಜರಿ ಬ್ಯಾಟಿಂಗ್ ಹಾಗೂ ಹಾಗೂ ಬೌಲಿಂಗ್‌ನಿಂದ ಜನಮನ ಗೆದ್ದವರು.

ಈಗ ಅತ್ಯಂತ ಸ್ಪರ್ಧಾತ್ಮಕವಾಗಿರುವ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಒಬ್ಬ ಆಟಗಾರ ಮೂವತ್ತು ವರ್ಷ ವಯಸ್ಸು ದಾಟಿದರೆ ಆತ ತನ್ನ ಕ್ರಿಕೆಟ್ ಜೀವನದ ಕೊನೆಯ ಭಾಗದಲ್ಲಿದ್ದಂತೆಯೆ. ಆದರೆ ಸಿ.ಕೆ. ನಾಯ್ಡು ತಮ್ಮ ೩೭ನೇ ವಯಸ್ಸಿನಲ್ಲಿ ಭಾರತ ತಂಡದ ಮೊದಲ ಟೆಸ್ಟ್ ಕ್ಯಾಪ್ಟನ್ ಆಗಿ ಜವಾಬ್ದಾರಿ ನಿರ್ವಹಿಸಿದವರು.

ಆಗಿನ ಕಾಲದಲ್ಲಿ ನಡೆಯುತ್ತಿದ್ದ ಟೆಸ್ಟ್‌ಗಳ ಸಂಖ್ಯೆ ಈಗಿನದಕ್ಕೆ ಹೋಲಿಸಿದರೆ ತೀರ ಕಡಿಮೆ. ಹೀಗಾಗಿ ಟೆಸ್ಟ್‌ಗಳಲ್ಲಿ ನಾಯ್ಡು ಅವರ ಸಾಧನೆ, ಅವರ ನಿಜವಾದ ಸಾಮರ್ಥ್ಯ ಬಿಂಬಿಸುವದಿಲ್ಲ, ೧೯೩೫-೩೬ರಲ್ಲಿ ಇಂಗ್ಲೆಂಡ್ ವಿರುದ್ಧ ಸರಣಿ'ಯಲ್ಲಿ ಒಂದೇ ಇನಿಂಗ್ಸ್‌ದಲ್ಲಿ ೧೧ ಸಿಕ್ಸರ್ ಬಾರಿಸಿದ ನಾಯ್ಡು ಬಿರುಸಿನ ಹೊಡೆತಕ್ಕೆ ಹೆಸರಾದವರು.

ಭಾರತದ ಪರ ಪ್ರಥಮದರ್ಜೆ ಕ್ರಿಕೆಟ್‌ನಲ್ಲಿ ತಮ್ಮ ೫೭ನೇ ವಯಸ್ಸಿನವರೆಗೂ ಆಡಿದ ಅತ್ಯಂತ ಹಿರಿಯ ಆಟಗಾರನೆಂಬ ಖ್ಯಾತಿಯು ನಾಯ್ಡು ಅವರದು.

ಪ್ರತಿಷ್ಠಿತ ರಣಜಿ ಟ್ರಾಫಿ ಪ್ರಶಸ್ತಿಯನ್ನು ಹೋಳ್ಕರ್ ತಂಡ ನಾಯ್ಡು ಅವರ ನಾಯಕತ್ವದಲ್ಲಿ ಮೂರು ಸಲ ಗೆದ್ದುದು ಒಂದು ಹೆಗ್ಗಳಿಕೆ (೧೯೪೫-೪೬, ೧೯೫೦-೫೧, ಹಾಗೂ ೧೯೫೨-೫೩). ನಾಯ್ಡು ಅವರ ವಯಸ್ಸು ಆಗ ಐವತ್ತು ದಾಟಿತ್ತು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ದೇಶೀಯ ಕ್ರಿಕೆಟ್‌ನಲ್ಲಿ ಆಗ ಪಂದ್ಯಗಳು ಹೆಚ್ಚು ಮಹತ್ವ ಹಾಗೂ ಪ್ರತಿಷ್ಠೆ ಪಡೆದಿದ್ದವು.

ಕ್ವಾಡ್ರ್ಯಾಂಗ್ಯುಲರ್ (ಚತುಷ್ಕೋನ) ಟೂರ್ನಿ ಆಗ ಇಡೀ ದೇಶದ ಗಮನ ಸೆಳೆಯುತ್ತಿತ್ತು. ೧೭೨೯ರಲ್ಲಿ ಹಿಂದು ಹಾಗೂ ಮೊಹ್ಮಡನ್ ತಂಡಗಳ ನಡುವಿನ ಪಂದ್ಯದಲ್ಲಿ ನಾಯ್ಡು ೧೫೯ ಓಟ ಗಳಿಸಿದ್ದರಲ್ಲದೇ ಯುರೋಪಿಯನ್ನರ ತಂಡದ ವಿರುದ್ಧ ಮದ್ರಾಸ್ ಪ್ರೆಸಿಡೆನ್ಸಿ ಪರವಾಗಿ ೧೩೯ ಓಟ ಬಾರಿಸಿದ್ದರು.

ರಣಜಿ ಟ್ರಾಫಿ ಪಂದ್ಯದಲ್ಲಿ ಅತ್ಯಧಿಕ ಮೊತ್ತ (೮ ವಿಕೆಟ್‌ಗೆ ೯೧೨) ಗಳಿಸಿದ ಹೋಳ್ಕರ್ ತಂಡಕ್ಕೆ ನಾಯಕರಾಗಿದ್ದವರು ನಾಯ್ಡು. ಈ ದಾಖಲೆ ಮುರಿಯಲ್ಪಟ್ಟಿಲ್ಲವಾದರೂ ೧೯೮೧-೯೦ ತಮಿಳುನಾಡು, ಗೋವಾದ ವಿರುದ್ಧ ೮ ವಿಕೆಟ್ ನಷ್ಟಕ್ಕೆ ೯೧೨ ಓಟ ಗಳಿಸಿ, ದಾಖಲೆಯನ್ನು ಸರಿಗಟ್ಟಿತು.

ಹೋಳ್ಕರ್ ತಂಡದ ಭಂಡಾರಕರ, ಜಗದಾಳೆ, ನಿಂಬಾಳಕರ್, ನಾನಾ ಸರ್‌ವಟೆ, ಸಿ.ಕೆ. ನಾಯ್ಡು, ಆರ್.ಪಿ. ಸಿಂಗ್ ಶತಕ ಬಾರಿಸಿದ್ದರು.

ತಮಿಳುನಾಡು- ಗೋವಾ ಪಂದ್ಯದಲ್ಲಿ ತಮಿಳುನಾಡಿನ ಗೋಪಾಲಸಿಂಗ್ ತ್ರಿ-ಶತಕ ಗಳಿಸಿದ್ದರು.

ವಿಶ್ವವಿಖ್ಯಾತ ಆಟಗಾರ ಡೆನಿಸ್ ಕಾಂಪ್ಟನ್, ೧೯೪೪ರಲ್ಲಿ ನಾಯ್ಡು ಅವರ ನಾಯಕತ್ವದಲ್ಲಿ ಹೋಳ್ಕರ್ ಪರವಾಗಿ ಆಡಿದ್ದರು.

ರಣಜಿ ಟ್ರಾಫಿಯಲ್ಲಿ ನಾಯ್ಡು ಅವರ



ಅತ್ಯಧಿಕ ಸ್ಕೋರು ೨೦೦. ಬಡೋದೆ ವಿರುದ್ಧ ಅವರು ಈ ಸಾಧನೆಗೈದಿದ್ದರು.

೪೯ ರಣಜಿ ಪಂದ್ಯಗಳನ್ನು, ೭೪ ಇನಿಂಗ್ಸ್‌ಗಳನ್ನು ಆಡಿರುವ ನಾಯ್ಡು ೨೫೬೭ ಓಟಗಳನ್ನು ಗಳಿಸಿದ್ದು ಅದರಲ್ಲಿ ಮೂರು ಶತಕಗಳಿವೆ. ಬ್ಯಾಟಿಂಗ್ ಸರಾಸರಿ ೩೬:೧೫. ಪಾಲುಗಾರಿಕೆಯಾಟದಲ್ಲಿ ಬಂಗಾಲ ವಿರುದ್ಧ ನಾಯ್ಡು ಹಾಗೂ ಸರವಟೆ ೨೧೮ ಓಟ ಸೇರಿಸಿದ್ದರು.

ಬೌಲಿಂಗ್‌ನಲ್ಲಿ ೨೫೦೧ ಓಟ ನೀಡಿರುವ ಅವರು ೧೦೯ ವಿಕೆಟ್ ಕೆಡವಿ ೨೫.೭೦ ಸರಾಸರಿ ಹೊಂದಿರುವರು.

೧೯೫೦ರಲ್ಲಿ 'ವರ್ಷದ ಕ್ರಿಕೆಟ್ ಪಟು' ಪ್ರಶಸ್ತಿಗೆ ಪಾತ್ರರಾದ ನಾಯ್ಡು ೧೯೫೩ ರಲ್ಲಿ ವಿಸ್ಡನ್‌ದ ಶ್ರೇಷ್ಠ ಐವರು ಆಟಗಾರರಲ್ಲಿ ಒಬ್ಬರಾಗಿ ಆಯ್ಕೆಗೊಂಡಿದ್ದರು.

ಇಂಗ್ಲೆಂಡ್ ವಿರುದ್ಧ ಎರಡು ಟೆಸ್ಟ್ ಸರಣಿಗೆ ಭಾರತ ತಂಡದ ನಾಯಕರಾಗಿದ್ದ ನಾಯ್ಡು ೭ ಟೆಸ್ಟ್, ೧೪ ಇನಿಂಗ್ಸ್‌ಗಳಲ್ಲಿ ೩೫೦ ಓಟಗಳಿಸಿದ್ದು ೮೧ ಅತ್ಯಧಿಕ ಸ್ಕೋರು. ಸರಾಸರಿ ೨೫. ನಾಲ್ಕು ಕ್ಯಾಚುಗಳನ್ನು ತೆಗೆದುಕೊಂಡ ಅವರು ಬೌಲಿಂಗ್‌ನಲ್ಲಿ ೮೮೬ ಓಟ ನೀಡಿ ೯ ವಿಕೆಟ್ ಕೆಡವಿದ್ದಾರೆ.

ಭಾರತದ ಖ್ಯಾತ ಆಲ್‌ರೌಂಡರ್ ಎನಿಸಿದ್ದ. ಕರ್ನಲ್ ನಾಯ್ಡು, ಕ್ರಿಕೆಟ್‌ನ ಇತರ ಖ್ಯಾತನಾಮರಾದ ಲೆನ್‌ಹಟನ್, ಹಾಂಪ್ಸನ್, ವಿಜಯ ಮರ್ಚೆಂಟ್, ಹಜಾರೆ ಮುಂತಾದವರ ಸಂಗಡ ಆಡಿದವರು.

ಈಗ ಕಪಿಲದೇವ ಅವರ ನಿರ್ಭಿಡೆಯ ಬಿರುಸಿನ ಬ್ಯಾಟಿಂಗ್ ನೋಡಿದ ಹಳಬರು ಸಿ.ಕೆ. ನಾಯ್ಡು ಅವರನ್ನು ನೆನಪಿಸಿಕೊಂಡರೆ ಆಶ್ಚರ್ಯವಿಲ್ಲ.

ನಾಯ್ಡು ಅವರ ಬಗ್ಗೆ ಎಲ್ಲ ವಿವರಗಳನ್ನು ನಾಲಿಗೆಯ ತುದಿಯ ಮೇಲೆಯೇ ಹೊಂದಿ ಈ ಲೇಖಕನಿಗೆ ನೀಡಿದ, ಚಲಿಸುವ ಜ್ಞಾನ ಕೋಶವೆಂದೇ ಹೇಳಬಹುದಾದ ಧಾರವಾಡದ ಹಿರಿಯ ಕ್ರೀಡಾಪಟು, ಕ್ರೀಡಾ ಆಡಳಿತಗಾರ ಸತೀಶ್ ತಗರಪುರ್ ಅವರು ಇನ್ನೊಂದು ಸಂಗತಿಯನ್ನು ಹೇಳಿದರು:

"ನಾಯ್ಡು ಅವರ ನಾಯಕತ್ವದಲ್ಲಿ ಹೋಳ್ಕರ್ ತಂಡದ ಪರವಾಗಿ ಆಡಿದ್ದ ಕರ್ನಲ್ ಆರ್.ಕೆ. ದ್ರಾವಿಡ ೭೦ರ ದಶಕದಲ್ಲಿ ಧಾರವಾಡದಲ್ಲಿ ಎನ್.ಸಿ.ಸಿ. ಕಮಾಂಡಿಂಗ್ ಆಫೀಸರ್ ಆಗಿ ಕಾರ್ಯ ನಿರ್ವಹಿಸಿದ್ದರು. ಸದ್ಯ ಕರ್ನಾಟಕದಲ್ಲಿ ಮಿಂಚುತ್ತಿರುವ, ಟೆಸ್ಟ್ ತಂಡದ ಒಳಹೊರಗೆ ಸುಳಿದಾಡುತ್ತಿರುವ ರಾಹುಲ್ ದ್ರಾವಿಡ ಕರ್ನಲ್ ಆರ್.ಕೆ.ದ್ರಾವಿಡ ಅವರ ಸೋದರನ ಮಗ.

ನಾಯ್ಡು ಅವರದು ಕ್ರಿಕೆಟ್ ಕುಟುಂಬ. ಕ್ರಿಕೆಟ್ ಅವರ ಮನೆಯ ಜನರಲ್ಲಿ ರಕ್ತಗತ. ಸೋದರ ಸಿ.ಎಸ್. ನಾಯ್ಡು ಭಾರತದ ಪರ ಆಡಿದ್ದು, ಪುತ್ರ ಪ್ರಕಾಶ್ ನಾಯ್ಡು ಮಧ್ಯ ಪ್ರದೇಶ್ ಪರವಾಗಿ ರಣಜಿ ಚಾಂಪಿಯನ್‌ಶಿಪ್‌ನಲ್ಲಿ ಆಡಿದ್ದಾರೆ. ರಾಷ್ಟ್ರೀಯ ಜೂನಿಯರ್ ಟೇಬಲ್ ಟೆನಿಸ್ ಚಾಂಪಿಯನ್ ಆಗಿದ್ದ ಪ್ರಕಾಶ್ ಈಗ ಮಧ್ಯ ಪ್ರದೇಶದಲ್ಲಿ ಪೊಲೀಸ್ ಡಿ.ಐ.ಜಿ. ಆಗಿದ್ದಾರೆ."

ನಾಯ್ಡು ಮಗಳು ಚಂದ್ರಾ ಈಗ ಸುಪ್ರಸಿದ್ಧ ಕ್ರಿಕೆಟ್ ಕಾಮೆಂಟೇಟರ್ ಆಗಿದ್ದಾರೆ. ಸತೀಶ್ ತಗರಪೂರ್ ಚಂದ್ರಾ ನಾಯ್ಡು ಅವರೊಂದಿಗೆ ಸಹ ವೀಕ್ಷಕ ವಿವರಣಕಾರರಾಗಿ ಕಾರ್ಯ ಮಾಡಿದ್ದಾರೆ.

● ಗುರುರಾಜ ಜಮಖಂಡಿ

ರಕ್ತಗತವಾಗಿ ಬಂದಿರಬೇಕು. ಭಾಷೋಚ್ಚಾರಣೆಯಲ್ಲಿ ಗೊಂದಲ ಉಂಟಾದರೆ ಎಲ್ಲರಂತೆ ನಾನು ನಿಘಂಟನ್ನು ತೆರೆಯುತ್ತಿರಲಿಲ್ಲ, ಅಪ್ಪನನ್ನು ಕೂಗಿ ಕರೆಯುತ್ತಿದ್ದೆ.

ನಾವು ಕಾಯಿಲೆ ಬಿದ್ದಾಗ, ಪರೀಕ್ಷೆಯ ತಯಾರಿಯಲ್ಲಿದ್ದಾಗ ಮತ್ತು ಬಿಕ್ಕಟ್ಟಿನ ಸಂದರ್ಭಗಳಲ್ಲಿ ಅಪ್ಪನ ಶಿಸ್ತು ಸ್ವಲ್ಪ ಸಡಿಲಗೊಳ್ಳುತ್ತಿತ್ತು. ಒಮ್ಮೆ ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದೆನಂತೆ. ಸರಿ, ಅಪ್ಪನನ್ನು ಕರೆಸಿದರು. ತೇಕುತ್ತಲೇ ಬಂದ ಅಪ್ಪ ನನ್ನನ್ನು ಆಸ್ಪತ್ರೆವರೆಗೆ ಹೊತ್ತುಕೊಂಡೇ ಹೋದರಂತೆ, ವಾಹನಕ್ಕೆ ಕಾಯ್ದರೆ ಮತ್ತೆಲ್ಲಿ ತಡವಾಗುವುದೋ ಎಂದು. ತಂಗಿ ಕಾಯಿಲೆ ಬಿದ್ದಾಗಲೂ ಆಕೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವ ತನಕ ಅವಳ ಹಾಸಿಗೆಯ ಬದಿಯಲ್ಲಿ ಪೇಲವ ಮುಖ ಹೊತ್ತು ಕುಳಿತಿದ್ದನಂತೆ. ಅಮ್ಮನೂ ಒಮ್ಮೆ ಆಸ್ಪತ್ರೆಗೆ ದಾಖಲಾಗಿದ್ದಳು. ಅಪ್ಪ ಆಕೆಯ ಹಾಸಿಗೆಯ ಬಳಿ ದಿಕ್ಕೇಡಿಯಂತೆ ಕುಳಿತಿರುತ್ತಿದ್ದರು. ಆಕೆ ಗುಣಮುಖಳಾಗಿ ಮನೆಗೆ ಬಂದಾಗ ಅಪ್ಪ ಮನೆಯನ್ನು ಸಿಂಗರಿಸಿಬಿಟ್ಟಿದ್ದರು. ಎಲ್ಲೆಲ್ಲೂ ಹೂಗಳ ರಾಶಿ. ಮದುವಣಗಿತ್ತಿಗೆ ದೊರೆತಂಥ ಸ್ವಾಗತ. ಸಿ.ಕೆ. ಅಂಥ ಕುಟುಂಬವತ್ಸಲ.

ಕೆಲವಾರು ಜನರಿಗೆ ಮಾತ್ರ ತಂದೆಯ ಸಂಗೀತ ಪ್ರೇಮ ಗೊತ್ತು. ಆತನಿಗೆ ಶಾಸ್ತ್ರೀಯ ಸಂಗೀತ ಪಂಚಪ್ರಾಣ. ರೇಡಿಯೋದಲ್ಲಿ ರಾಗಗಳು, ಆಲಾಪಗಳು ಧ್ವನಿಗೈದವೆಂದರೆ ಸಿ.ಕೆ. ಹೊರಜಗತ್ತನ್ನು ಮರೆತುಬಿಡುತ್ತಿದ್ದರು. ಕೆ. ಎಲ್. ಸೈಗಾಲ್ ಮತ್ತು ಕಾನನದೇವಿ ಅವರ ಲಘು ಸಂಗೀತ ಅಚ್ಚುಮೆಚ್ಚು. ಅಪ್ಪನ ಬಳಿ ಈ ಸುಪ್ರಸಿದ್ಧ ಗಾಯಕರ ಹಾಡುಗಳ ಸಂಗ್ರಹ ಬೇರೆಯವರು ಹೊಟ್ಟೆಕಿಚ್ಚುಪಡುವಷ್ಟಿತ್ತು.


ಹವ್ಯಾಸಗಳಲ್ಲಿ ಶ್ರೀಮಂತ, ವಸ್ತ್ರಧಾರಣೆಯಲ್ಲಿ ರಾಜೋಚಿತ, ಕೆಲಸದಲ್ಲಿ ಶ್ರದ್ಧೆ, ಸಹಸಿಬ್ಬಂದಿ ಮತ್ತು ಆಟಗಾರರೊಂದಿಗೆ ಸ್ನೇಹಪರತೆಯಿಂದ ಇದ್ದ ಶ್ಯಾಮಲ ವರ್ಣದ ಆಜಾನುಬಾಹು ಸಿ.ಕೆ. ನಾಯ್ಡು, ನಮಗೆಲ್ಲ 'ನಾನಾ', ನೌಕೆಯಲ್ಲಿ 'ಕರ್ನಲ್', ಆತನನ್ನು ಪ್ರೀತಿಸುತ್ತಿದ್ದವರಿಗೆ, ಗೌರವಿಸುತ್ತಿದ್ದವರಿಗೆ, ಅಭಿಮಾನಿಗಳಿಗೆ, ಅಧೀನ ನೌಕರರಿಗೆ 'ಕರ್ನಲ್‌ಸಾಬ್.' ೧೯೬೭ ನವೆಂಬರ್ ೧೪ರಂದು ಎಂದೂ ಬಾರದ ಪೆವಿಲಿಯನ್‌ಗೆ ಸರಸರನೆ ನಡೆದು ಬಿಟ್ಟರು ನನ್ನ ತಂದೆ. ●

'ಇಲಸ್ಟ್ರೇಟೆಡ್ ವೀಕ್ಲಿ'ಯಿಂದ

ಚಪ್ಪಾಳೆ ಹೊಡೆದು ಗಿನ್ನೆಸ್ ದಾಖಲೆ

೧೯೮೮ರ ಫೆಬ್ರವರಿ ೧೨ ರಂದು ಒಂದು ವಿಶ್ವದಾಖಲೆ ನಡೆದು ಹೋಯಿತು. ಅಂದು ನಿರಂತರ ೬೦ ಗಂಟೆ ಚಪ್ಪಾಳೆ ಹೊಡೆದು ಗಿನ್ನೆಸ್ ದಾಖಲೆ ಪುಸ್ತಕದಲ್ಲಿ ಸ್ಥಾನಗಿಟ್ಟಿಸಿದವರು ಮದ್ರಾಸಿನ ಬ್ಯಾಂಕ್ ಅಧಿಕಾರಿ ೩೯ ವರ್ಷದ ಜಯರಾಮನ್. ಅದೇ ವರ್ಷ ಅವರು ಮತ್ತೆ ೬೦ ಗಂಟೆ ಚಪ್ಪಾಳೆ ಹೊಡೆದರು. ಉದ್ದೇಶ, ಮಕ್ಕಳ ಪೋಲಿಯೋ ನಿರ್ಮೂಲನ ಕಾರ್ಯಕ್ರಮಕ್ಕೆ ನಿಧಿ ಸಂಗ್ರಹ. ನಿಮಿಷಕ್ಕೆ ೧೬೦ರಂತೆ ೫,೭೬,೦೦೦ ಬಾರಿ ಚಪ್ಪಾಳೆ ತಟ್ಟಿ, ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಈ ಕೃಷಿ ಅಧಿಕಾರಿ ಒಂದು ಚಪ್ಪಾಳೆಗೆ ೨ ರೂ.ನಂತೆ ಬರುವ ಮೊತ್ತವನ್ನು ೧೦೦ ಹಾಸಿಗೆಗಳ ಆಸ್ಪತ್ರೆ ಸ್ಥಾಪನೆಗೆ ದಾನ ಮಾಡಿದರು. ಬ್ಯಾಂಕ್ ಹಾಗೂ ಮದರಾಸು ರೋಟರಿ ಕ್ಲಬ್, ಹಾಗೂ ಹಿಂದೂ ಮಿಷನ್ ಆಸ್ಪತ್ರೆ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಿತು. ಪ್ರಪ್ರಥಮ ಬಾರಿಗೆ ೧೯೮೫ರಲ್ಲಿ ೫೮ ತಾಸು ಚಪ್ಪಾಳೆ ಹೊಡೆದು ತಾನೇ ನಿರ್ಮಿಸಿದ ವಿಶ್ವದಾಖಲೆಯನ್ನು ೧೯೮೮ರಲ್ಲಿ ಮುರಿದು ತಮ್ಮ ಹೆಸರಿನಲ್ಲಿ ಮತ್ತೆ ಬರೆಸಿದ ಕೀರ್ತಿ ಜಯರಾಮನ್ ಅವರದು!!!

● ನಾರಾಯಣ ರೈ. ಕುಕ್ಕುವಳ್ಳಿ



ವ್ಯಾಪಾರ ನಿಮಿತ್ತ (ಮದರಾಸಿನಿಂದ) ಪಾಂಡಿಚೇರಿ ರಾಜ್ಯಕ್ಕೆ ಸೇರಿರುವ ಕಾರೈಕಲ್ ಎಂಬ ಊರಿಗೆ ವರ್ಷೋಪ್ಪತ್ತಿನ ಹಿಂದೆ ಹೋಗಿದ್ದೆ. ಸಂಜೆ ಹೊತ್ತು ಕುತೂಹಲದಿಂದ ಆ ಊರಿನಲ್ಲಿರುವ ವಿದೇಶಿ ವಸ್ತುಗಳ ಮಾರಾಟ ಕೇಂದ್ರಕ್ಕೆ ಹೋದೆ. ಒಂದು ಅಂಗಡಿಯ ಯಜಮಾನನೊಂದಿಗೆ ಮಾತನಾಡುತ್ತ, ನಾನು ಕನ್ನಡಿಗನೆಂದು ಪರಿಚಯ ಮಾಡಿಕೊಂಡದ್ದನ್ನು ಅವನ ಪಕ್ಕದಲ್ಲಿಯೇ ಇದ್ದ ಅವನ ಸ್ನೇಹಿತರೊಬ್ಬರು ಗಮನಿಸುತ್ತಿದ್ದರು. ನನಗೆ ಕನ್ನಡ ಬರುತ್ತದೆಂದು ತಿಳಿದ ಕೂಡಲೇ ಅವರು ನನ್ನ ಬಳಿ ಬಂದು (ತಮಿಳಿನಲ್ಲಿ) ಮಾತನಾಡಲು ಆರಂಭಿಸಿದರು.

ಅವರು ಎರಡು ವರ್ಷ ಕುವೈತ್‌ನಲ್ಲಿ ವಾಸವಾಗಿದ್ದು ಮೂರು ತಿಂಗಳ ಹಿಂದೆ ತಾನೆ ವಾಪಸ್ಸು ಬಂದಿದ್ದರು. ಕುವೈತ್‌ನಲ್ಲಿದ್ದಾಗ ಅವರಿಗೆ ಮಂಗಳೂರಿನ ಮುಸ್ಲಿಮ್ ವ್ಯಕ್ತಿಯೊಬ್ಬರು (ಈಗಲೂ ಕುವೈತ್‌ನಲ್ಲಿಯೇ ಇದ್ದಾರೆ) ತುಂಬ ಆತ್ಮೀಯರಾಗಿದ್ದರಂತೆ. ಇವರು ಮಾತ್ರ ಅನಿವಾರ್ಯ ಕಾರಣಗಳಿಂದ ಬಂದಿದ್ದಾರೆ. ಆ ಮಂಗಳೂರಿನ ಕುವೈತ್ ನಿವಾಸಿ ಒಂದು ತಿಂಗಳ ಹಿಂದೆ ಇವರಿಗೆ ಪತ್ರ ಬರೆದಿದ್ದರು. ಅದು ಇದ್ದುದು ಕನ್ನಡದಲ್ಲಿ. ಕನ್ನಡದ ವಿನಾ ಬೇರೆ ಭಾಷೆಯಲ್ಲಿ ಬರೆಯಲು ಅವರಿಗೆ ಬಾರದು. ಅಗಲಿಕೆಯ ನಂತರ ಮೊದಲನೆಯ ಪತ್ರ ಅದು.

ಒಂದು ತಿಂಗಳಿನಿಂದಲೂ ಕನ್ನಡ ಓದುವವರಿಗಾಗಿ ಕಾದಿದ್ದ ಆತ ನನ್ನನ್ನು ನೋಡಿದ ಕೂಡಲೇ ಖುಷಿಪಟ್ಟ. ಗೆಳೆಯನ ಪತ್ರದ ವಿಷಯವನ್ನು ನನಗೆ ತಿಳಿಸಿದ. ಕೂಡಲೆ ಮನೆಗೆ ಧಾವಿಸಿ ಆ ಪತ್ರವನ್ನು ತೆಗೆದುಕೊಂಡು ಬಂದು ನನ್ನ ಕೈಗಿತ್ತು, ಓದಿ ವಿಷಯವನ್ನು ಹೇಳುವಂತೆ ಕೇಳಿಕೊಂಡ. ಪತ್ರದಲ್ಲಿನ ಸಾರಾಂಶವನ್ನು ಆತನಿಗೆ ತಮಿಳಿನಲ್ಲಿ ವಿವರಿಸಿ ಹೇಳಿದೆ. ಆ ತಮಿಳು ಮುಸ್ಲಿಮ್ ಬಾಂಧವನಿಗೆ ಅಪಾರ ಸಂತೋಷವಾಯಿತು.

ಆ ಪತ್ರದ ಕೊನೆಯ ಕೆಲವು ಸಾಲುಗಳನ್ನು ಓದಿದಾಗ ನನಗೂ ಅತ್ಯಂತ ಸಂತೋಷವಾಯಿತು. ಕೆಲವು ಸಾಲುಗಳು ಹೀಗಿದ್ದವು:

“ನನ್ನ ಮಿತ್ರನಿಗೆ ಕಸ್ತೂರಿ ಕನ್ನಡದಲ್ಲಿ ಬರೆದಿರುವ ಪತ್ರದ ಸಾರಾಂಶವನ್ನು ತಮಿಳಿನಲ್ಲಿ ವಿವರಿಸಿ ಹೇಳುವ ಕನ್ನಡ ಮಿತ್ರರೇ, ನಿಮಗೆ ಸಾವಿರ ನಮಸ್ಕಾರ. ‘ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು’ ಎಂಬ ರಾಷ್ಟ್ರಕವಿ ಕುವೆಂಪು ಅವರ ವಾಣಿಯು ನನ್ನ ಕಿವಿಯಲ್ಲಿ ಸದಾ ಗುಂಯ್‌ಗುಡುತ್ತಿರುತ್ತದೆ. ನಾನಿರುವ ಕುವೈತ್‌ನಲ್ಲಿ ಕನ್ನಡ ಮಾತನಾಡುವವನನ್ನು ಆಕಸ್ಮಾತ್ ಕಂಡಾಗ ನನಗಾಗುವ ಆನಂದ ಹೇಳತೀರದು...” ತಾನು ಬರೆದಿರುವ ಪತ್ರದಲ್ಲಿ ಏನಾದರೂ ತಪ್ಪಿದ್ದರೆ ಕ್ಷಮಿಸಿ ಎಂದು ಹೇಳಿ ವಿಳಾಸವನ್ನು ಕೊಟ್ಟು ಅರಿಕೆ ಮಾಡಿಕೊಂಡಿರುವ ಆ ಕುವೈತ್ ವಾಸಿ ಮುಸ್ಲಿಮ್ ಬಾಂಧವನ ಕನ್ನಡ ಪ್ರೇಮವನ್ನು ನಾನು ಮನಸಾರ ಮೆಚ್ಚಿದ್ದೇನೆ.

• ಎ. ರಾಮದಾಸ್

ಸುಮಾರು ಎರಡು ವರ್ಷಗಳ ಹಿಂದೆ ನಡೆದ ಘಟನೆ. ಕೀಟ ಹಾಗೂ ರೋಗಬಾಧೆಗಳ ನಿವಾರಣೆಗಾಗಿ ಕೃಷಿ ಕ್ಷೇತ್ರದಲ್ಲಿ ಬಹಳವಾಗಿ ಬಳಸಲ್ಪಡುತ್ತಿರುವ ರಾಸಾಯನಿಕ ಪದಾರ್ಥಗಳ ಬಗ್ಗೆ

ಸಾಕು-ಬೇಕು

ಹಾರದ ಮೇಲೆ
ಹಾರ
ಕವಿವರ್ಯನಿಗೆ
ಸನ್ಮಾನ-ಸಿಂಗಾರ !
ಕವಿ ಹೃದಯ
ಆಶಿಸುತ್ತಿತ್ತು
ಸಾಕು ಮಾಡಿರಿ ಹಾರ
ನೀಡಿರೆನಗೆ ಆಹಾರ.

● ರಮೇಶಚಂದ್ರ

ನನ್ನ ದೀರ್ಘ ಅನುಭವದ ಆಧಾರದ ಮೇಲೆ ಒಂದು ಉಪಯುಕ್ತ ಲೇಖನವನ್ನು ಸಿದ್ಧಪಡಿಸಿ ವಾರಪತ್ರಿಕೆಯೊಂದಕ್ಕೆ ಕಳುಹಿಸಿದ್ದೆ. ಈ ಲೇಖನದ ಮುಖ್ಯ ಉದ್ದೇಶ ರೈತ ಹಾಗೂ ಸಾಮಾನ್ಯ ಜನರಲ್ಲಿ ರಾಸಾಯನ ಪದಾರ್ಥಗಳ ಬಗ್ಗೆ ಮಾಹಿತಿಗಳೊಡನೆ ಸರಿಯಾದ ತಿಳಿವಳಿಕೆ ಮೂಡಿಸುವುದಾಗಿತ್ತು.

ನನ್ನ ಲೇಖನದ ಪ್ರಕಟಣೆ ಬಗ್ಗೆ ತಿಳಿಯಲು ಆ ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರೊಬ್ಬರನ್ನು ಭೇಟಿ ಮಾಡಬೇಕಾಯಿತು. ಅವರು ಪರಿಸರದ ಬಗ್ಗೆ ಬಹಳ ಕಾಳಜಿ ಇರುವಂಥವರೆಂದು ಕೇಳಿದ್ದೆ. ಅವರ ಕೆಲವು ಲೇಖನಗಳನ್ನೂ ಓದಿದ್ದೆ. ಅವರ ಮಾತಿನಿಂದ ನನ್ನ ಲೇಖನದ ಬಗ್ಗೆ ಅವರಿಗೆ ಅಷ್ಟು ಒಳ್ಳೆಯ ಅಭಿಪ್ರಾಯ ಇದ್ದಂತೆ ಕಾಣಲಿಲ್ಲ. ಕೃಷಿಯಲ್ಲಿ ಉಪಯೋಗಿಸುತ್ತಿರುವ ಎಲ್ಲ ರಾಸಾಯನಿಕ ಪದಾರ್ಥಗಳೂ ವಿಷಪೂರಿತ. ಅವುಗಳ ಬಳಕೆಯಿಂದ ಮನುಷ್ಯ ಹಾಗೂ ಇತರೆ ಪ್ರಾಣಿ ವರ್ಗಕ್ಕೆ ವಿಷ ಉಣಬಡಿಸಿದಂತಾಗುತ್ತದಲ್ಲದೆ ಪರಿಸರದ ವಿನಾಶಕ್ಕೆ ಕಾರಣವಾಗುತ್ತದೆ ಎಂದು ವಾದಿಸಿದರು. ನಮ್ಮ ಕೃಷಿ ವಿಜ್ಞಾನಿಗಳು ನಿಜಾಂಶವನ್ನು ತಿಳಿಸದೆ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆಂದು ಆರೋಪಿಸಿದರು. ಕೊನೆಗೆ ನನ್ನ ಲೇಖನವನ್ನು ಅವರ ವಿಚಾರ ಲಹರಿಗೆ ಸರಿಹೊಂದುವಂತೆ ಬದಲಾಯಿಸಿದಲ್ಲಿ ಪ್ರಕಟಣೆ ಸಾಧ್ಯವೆಂದರು.


ಅವರ ಅಭಿಪ್ರಾಯ ನನ್ನ ದೀರ್ಘ ಕಾಲದ ಅನುಭವ ಹಾಗೂ ಸಂಶೋಧನೆಗೆ ಸವಾಲಾದರೂ, ಚರ್ಚಿಸಲು ಇಷ್ಟಪಡದೆ ನಿರ್ಗಮಿಸಬೇಕೆಂದು ಎದ್ದಾಗ ತಮ್ಮ ಜೇಬಿನಿಂದ ಸಿಗರೇಟು ಪ್ಯಾಕ್ ತೆಗೆದು ತಾವೊಂದು ಹತ್ತಿಸಿ, ನನಗೂ ಒಂದು ಕೊಡಲು ಬಂದರು. ನನ್ನ ಸಹನೆ ಮೀರಿ, "ಸ್ವಾಮಿ ಪರಿಸರದ ಬಗ್ಗೆ ಬಹಳ ಕಾಳಜಿಯಿರುವಂತೆ ಮಾತನಾಡುವ ನೀವು ಸಿಗರೇಟು ಚಟದಿಂದ ನಿಮ್ಮ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿರುವುದಲ್ಲದೆ ಇತರರಿಗೂ ಧಾರಾಳವಾಗಿ ವಿಷ ಹಾಕುತ್ತಿದ್ದೀರಿ. ನಿಮ್ಮ ಪರಿಸರ ಪ್ರಜ್ಞೆ ಎಷ್ಟರಮಟ್ಟದ್ದು ಎಂದು ತಿಳಿಯಿತು," ಎಂದು ಹೇಳಿ ನನ್ನ ಲೇಖನವನ್ನು ವಾಪಸ್ಸು ಪಡೆದು ಹೊರಬಂದೆ.

● ಟಿ.ಎಸ್. ಶ್ರೀಧರ

ತೀರ್ಥಹಳ್ಳಿಯಲ್ಲಿ ಪ್ರೌಢ ಶಿಕ್ಷಣವನ್ನು ಪೂರೈಸಿದ್ದ ನನಗೆ ಗುಡಿ ಕೈಗಾರಿಕೆ ಪ್ರಾರಂಭಿಸುವ ವಿಚಾರದಲ್ಲಿ ತುಂಬಾ ಆಸ್ಥೆ ಇತ್ತು. ಅದಕ್ಕಾಗಿ ಕಲಕತ್ತ, ಮುಂಬಯಿ, ಮದರಾಸುಗಳಲ್ಲಿನ ಪ್ರಖ್ಯಾತ ಬುಕ್ ಡಿಪೋಗಳಿಂದ ಕ್ಯಾಟಲಾಗುಗಳನ್ನು ತರಿಸಿದ್ದೆ. ಕಲಕತ್ತದಿಂದ ಬಂದ ಪುಸ್ತಕವೊಂದರಲ್ಲಿ ಶಾಯಿ, ಸಾಬೂನು, ಹಲ್ಲುಪುಡಿ ಮುಂತಾದ ವಸ್ತುಗಳನ್ನು ತಯಾರಿಸುವ ಬಗ್ಗೆ ವಿವರಣೆಗಳಿದ್ದವು. ಶಾಯಿಯನ್ನು ತಯಾರಿಸುವ ವಿಧಾನ ನನಗೆ ಹಿಡಿಸಿತು. ಪ್ರಾರಂಭಕ್ಕೆ ಬೇಕಾದ ರಾಸಾಯನಿಕಗಳ ಪೈಕಿ ಮೈರಾಬಲನ್ ಮುಖ್ಯ ಎಂದು ವಿವರಣಾ ಪುಸ್ತಿಕೆಯಲ್ಲಿ ಪ್ರಕಟವಾಗಿತ್ತು.

ಸ್ವಲ್ಪ ತರಿಸಿದರೆ ಪಾರ್ಸಲ್ ಖರ್ಚು ಜಾಸ್ತಿಯಾಗುತ್ತದೆಂದೆಣಿಸಿ ಇತರ ರಾಸಾಯನಿಕಗಳೊಂದಿಗೆ ೧೦ ಪೌಂಡ್ (ಆಗ ಕಿ.ಗ್ರಾಂ. ಪದ್ಧತಿ ಜಾರಿಯಲ್ಲಿರಲಿಲ್ಲ) ಮೈರಾಬಲನ್ ಕಳಿಸಿಕೊಡುವಂತೆ ಪತ್ರ ಬರೆದೆ. ಕೆಲವೇ ದಿನಗಳಲ್ಲಿ ಪಾರ್ಸೆಲ್ ಬಂತು. ಕುತೂಹಲ ಮತ್ತು ಸಂತೋಷದಿಂದ ಬಿಚ್ಚಿ ನೋಡಿ ಬೆಚ್ಚಿ ಬಿದ್ದೆ. ಅದರಲ್ಲಿ ಹತ್ತು ಪೌಂಡ್ ತೂಕದ ಅಳಲೇ ಕಾಯಿಗಳಿದ್ದವು. ಮೈರಾಬಲನ್ ಎಂದರೆ ಅಳಲೇಕಾಯಿ ಎಂಬುದು ನನಗಾಗ ಗೊತ್ತಿರಲಿಲ್ಲ. ಅವು ನಮ್ಮ ಪಕ್ಕದ ಕಾಡಿನಲ್ಲೇ ಬೇಕಾದಷ್ಟು ಸಿಗುತ್ತಿದ್ದವು.

● ಕೆ. ಶ್ರೀನಿವಾಸ



ಹೀರೋರೋ ಎಂಬ ಶಾಪಗ್ರಸ್ತ ಕತ್ತಿ

• ಎಂ.ಆರ್.ಎಸ್. ರಾವ್

ಶಾಪಗ್ರಸ್ತ ಹೋಪ್ ವಜ್ರದ ಬಗೆಗೆ ನೀವೆಲ್ಲ ಕೇಳಿದ್ದೀರಿ. ಆದರೆ ರತ್ನಖಚಿತವಾದ ಹಿರೋರೋ ಕತ್ತಿಯ ಬಗೆಗೆ ಕೇಳಿಲ್ಲ. ಅಲ್ಲವೆ ? ಅದಕ್ಕಾಗಿಯೇ ನಾನೀಗ ಅದರ ಕಥೆಯನ್ನು ಹೇಳಹೊರಟಿರುವುದು.

ಕಥೆ ಶುರುವಾಗುವುದು ಸುಮಾರು ಎಂಬತ್ತು ವರ್ಷಗಳ ಹಿಂದೆ- ಖಚಿತವಾಗಿ ಹೇಳಬೇಕೆಂದರೆ ೧೯೧೨ರಿಂದ.

ಆಫ್ರಿಕದಲ್ಲೆಲ್ಲ ಬರಿ ನಿಗ್ರೋಗಳೇ ಇದ್ದಾರೆ ನಿಜ. ಆದರೆ ಅವರೆಲ್ಲ ಬೇರೆ ಬೇರೆ ಬುಡಕಟ್ಟುಗಳಲ್ಲಿ ಹಂಚಿಹೋಗಿದ್ದಾರೆ. ಅವುಗಳಲ್ಲಿ, ಹಿರೋರೋ ಬುಡಕಟ್ಟೂ ಒಂದು.

ಬುಡಕಟ್ಟೆಂದ ಮೇಲೆ ಅದಕ್ಕೊಬ್ಬ ಮುಖಂಡ ಇರಲೇಬೇಕಷ್ಟೇ, ಹಿರೋರೋ ಪಂಗಡಕ್ಕೂ ಒಬ್ಬ ಮುಖಂಡನಿದ್ದ. ಉಳಿದ ಪಂಗಡಗಳ ಮುಖಂಡರ ಹಾಗೆ ಅವನೂ ಅಪಾರ ಸಂಪತ್ತನ್ನು ಗಳಿಸಿ ಇಟ್ಟಿದ್ದ. ಆ ಸಂಪತ್ತು ಎಲ್ಲಿದೆಯೆಂಬುದು ಅವನನ್ನು ಅವನ ಹೆಂಡತಿಯನ್ನು ಹೊರತುಪಡಿಸಿದರೆ ಬೇರಾರಿಗೂ ತಿಳಿಯದು. ಅದನ್ನು ಬಳಸುವ ಪ್ರಸಂಗ ಬಂದರೂ ಹೇಗೂ ಆತ ತಮ್ಮ ಒಳಿತಿಗಾಗಿಯೇ ಉಪಯೋಗಿಸುತ್ತಾನ ಎಂಬ ವಿಶ್ವಾಸ ಬುಡಕಟ್ಟಿನ ಉಳಿದ ಜನರಿಗೆ ಇದ್ದುದರಿಂದ ಅವರಾರೂ ಆ ಸಂಪತ್ತಿನ ಬಗೆಗೆ ತಲೆಕೆಡಿಸಿಕೊಳ್ಳಲು ಹೋಗಲಿಲ್ಲ.

ಹೀಗಿರುತ್ತ ಒಂದು ದಿನ ಫ್ರೋಲಿಕ್ ಎಂಬ ಜರ್ಮನ್ ಸೈನ್ಯಾಧಿಕಾರಿಯ ಕಿವಿಗೆ ಈ ಸಂಪತ್ತಿನ ಸುದ್ದಿ ಬಿತ್ತು. ಮೊದಲೇ ಜರ್ಮನಿಯ ಆಧಿಪತ್ಯಕ್ಕೊಳಪಟ್ಟ ಪ್ರದೇಶ. ಅಂದ ಮೇಲೆ ಆ ಜರ್ಮನ್ ಸೈನ್ಯಾಧಿಕಾರಿ ಸಂಪತ್ತನ್ನು ಹಾಗೆಯ ಬಿಡುತ್ತಾನೆಯ ? ಸುದ್ದಿ ಕಿವಿಗೆ ಬೀಳುವುದೇ ತಡ, ಆತ ಹಿರೋರೋ ಮುಖಂಡನನ್ನು ಕರೆಸಿದ.

ಇದಾವುದೂ ಗೊತ್ತಿರದ ಬುಡಕಟ್ಟಿನ

ಯಾಕೆ 'ಈ' ದ್ವೇಷ ?

ಇಂಗ್ಲೀಷಿನಲ್ಲಿ E ಅಕ್ಷರವನ್ನು ಬಳಸುವಷ್ಟು ಇನ್ನಾವ ಅಕ್ಷರವನ್ನೂ ಬಳಸುವುದಿಲ್ಲ. ಆದರೆ E ಅಕ್ಷರವನ್ನು ಬಳಸದೆ ಒಂದು ಚಿಕ್ಕ ಪುಸ್ತಕವನ್ನು ಬರೆಯುವುದಾಗಿ ಅರ್ನೆಸ್ಟ್ ವಿನ್ಸೆಂಟ್ ರೈಟ್ ನಿರ್ಧರಿಸಿ, ೫೦,೦೦೦ ಶಬ್ದಗಳುಳ್ಳ ನೀಳ್ಗತೆಯನ್ನು ಬರೆದ.

ಪುಸ್ತಕದ ಹೆಸರು: 'ಗ್ಯಾಡ್ಸ್‌ಬಿ, ಎ ಸ್ಟೋರಿ ಆಫ್ ಓವರ್ ೫೦,೦೦೦ ವರ್ಡ್ಸ್ ವಿದೌಟ್ ಯೂಜಿಂಗ್ ದಿ ಲೆಟರ್ ಇ.'

ಬರೆಯುವಾಗ ಆಕಸ್ಮಾತ್ತಾಗಿ E ನುಸುಳಿಕೊಂಡಿದ್ದರೆ ಅದು ಗಮನಕ್ಕೆ ಬರಬೇಕೆಂದು ಆತ ಹಸ್ತಪ್ರತಿಯನ್ನು ಟೈಪ್ ಮಾಡುವಾಗ ಟೈಪ್‌ರೈಟರಿನ E ಅಕ್ಷರದ ಒತ್ತುಗುಂಡಿಯನ್ನೇ ನಿಷ್ಕ್ರಿಯಗೊಳಿಸಿದ್ದ.

• 'ಯಲಗೂರೇಶ'

ಜ್ಞಾನನಿಧಿ

ಮುಖಂಡ ಭರ್ಜರಿಯಾದ ಉಡುಪು ಧರಿಸಿ ಹೆಂಡತಿಯೊಡನೆ ಬಂದ. ಬುಡಕಟ್ಟಿನ ಉಳಿದ ಮುಖಂಡರು ಧರಿಸುವ ಹಾಗೆ ಸೊಂಟದಲ್ಲೊಂದು ವಜ್ರಖಚಿತವಾದ ಕತ್ತಿ. ಫ್ರೋಲಿಕ್ ಆ ಕತ್ತಿಯನ್ನೇ ಕಸಿದುಕೊಂಡು, "ಸಂಪತ್ತನ್ನು ಎಲ್ಲಿ ಬಚ್ಚಿಟ್ಟಿದ್ದೀಯೆಂಬುದನ್ನು ಹೇಳುತ್ತೀಯೋ ಅಥವಾ ಸರಿಯಾದ ಪಾಠ ಕಲಿಸಲೋ ?" ಎಂದು ಅಬ್ಬರಿಸಿದ. ಮುಖಂಡ ಬಾಯಿ ಬಿಡಲಿಲ್ಲ.

ಫ್ರೋಲಿಕ್ ಮುಖಂಡನ ಹೆಂಡತಿಯನ್ನು ಕೋಣೆಯೊಳಗೆ ಎಳೆದುಕೊಂಡು ಹೋಗಿ ಕತ್ತಿಯಿಂದ ತಿವಿಯತೊಡಗಿದ. ಅವಳ ಮೈತುಂಬ ರಕ್ತ, ವೇದನೆಯನ್ನು ಸಹಿಸಲಾಗದೆ ಬೊಬ್ಬಿಡತೊಡಗಿದಳು. ಅವಳ ಸ್ಥಿತಿಯನ್ನು ನೋಡಲಾಗದೆ ಆ ಹಿರೋರೋ ಮುಖಂಡ ಬಚ್ಚಿಟ್ಟ ಸಂಪತ್ತನ್ನು ತೋರಿಸಲು ಒಪ್ಪಿಕೊಂಡ.

ಫ್ರೋಲಿಕ್ ಮೂರು ಜನ ಸೈನಿಕರ ಸಮೇತ ಮುಖಂಡನನ್ನೂ ಅವನ ಹೆಂಡತಿಯನ್ನೂ ಎಳೆದುಕೊಂಡು ಬಂಡಿಯಲ್ಲಿ ಹೊರಟ. ದಟ್ಟವಾದ ಕಾಡು. ಅದರಲ್ಲೊಂದು ಗುಡಿಸಲು. ಆ ಗುಡಿಸಲಿನಲ್ಲಿ ಹಿರೋರೋ ಮುಖಂಡ ಸಂಪತ್ತನ್ನು ಹುಗಿದಿದ್ದ. ಫ್ರೋಲಿಕ್‌ನ ಆಜ್ಞೆಯಂತೆ ಸೈನಿಕರು ಮುಖಂಡ ತೋರಿಸಿದ ಸ್ಥಳವನ್ನು ಅಗೆದು ಸಂಪತ್ತನ್ನು ಹೊರದೆಗೆದರು. ವಿವಿಧ ಬಗೆಯ ಸ್ವರ್ಣಾಭರಣಗಳು, ಮುತ್ತಿನ ಸರಗಳು. ವಜ್ರಖಚಿತವಾದ ವಂಕಿಗಳು. ಸಂಪತ್ತನ್ನು ಲಪಟಾಯಿಸಿದ್ದು ಜರ್ಮನ್ ಸರಕಾರಕ್ಕೆ ಗೊತ್ತಾದರೆ ಸಂಪತ್ತನ್ನು ಸರಕಾರಕ್ಕೆ ಒಪ್ಪಿಸಬೇಕಾಗುವುದಷ್ಟೇ ಅಲ್ಲ, ಇದ್ದ ಸ್ಥಾನವನ್ನೂ ಕಳೆದುಕೊಂಡು ಶಿಕ್ಷೆಯನ್ನು ಅನುಭವಿಸಬೇಕಾಗುವದು.ಇದು ಬೇಡವೆಂದರೆ ಮುಖಂಡನನ್ನೂ ಮುಖಂಡನ ಹೆಂಡತಿಯನ್ನೂ ಅಲ್ಲದೆ ಸೈನಿಕರನ್ನೂ ಅಲ್ಲಿಯೆ ಮುಗಿಸಿಬಿಡಬೇಕು. ಆದರೆ ತನಗೆ ಬಂಡಿ ನಡೆಸಲು ಬರುವುದಿಲ್ಲವಲ್ಲ ? ಅದಕ್ಕಾಗಿ ಬಂಡಿ ನಡೆಸುವ ಸೈನಿಕನೊಬ್ಬನನ್ನು ಬಿಟ್ಟು ಉಳಿದವರ ಕಥೆಯನ್ನು ಮುಗಿಸುವುದೇ ಸರಿ ಎಂದ ಫ್ರೋಲಿಕ್. ಉಳಿದೆಲ್ಲರನ್ನು ಗುಂಡಿಟ್ಟು ಕೊಂದು ಸಂಪತ್ತನ್ನು ಬಂಡಿಯಲ್ಲಿ ತುಂಬಿಕೊಂಡು ಹೊರಟ.

ಹೇಗೋ ಈ ಸುದ್ದಿ ಆಗಲೆ ಬುಡಕಟ್ಟಿನ ಇತರ ಜನರಿಗೆ ತಲುಪಿದ್ದರಿಂದ ಅವರ ಪೈಕಿ ಧೈರ್ಯಶಾಲಿಗಳಾದ ಕೆಲವರು ದೂರದಿಂದ ಇವರನ್ನು ಅನುಸರಿಸಿಕೊಂಡು ಬಂದಿದ್ದರು. ಬಂಡಿ ಸ್ವಲ್ಪ ದೂರು ಮುಂದೆ ಸಾಗುವುದೇ ತಡ, ಅವರೆಲ್ಲ ಮುಗಿಬಿದ್ದು ಫ್ರೋಲಿಕ್‌ನನ್ನು, ಅವನ ಸಹಚರನನ್ನು ಕೊಂದು ಸಂಪತ್ತಿನ ಸಮೇತವಾಗಿ ಹೊರಟು ಹೋದರು. ಮುಖಂಡನನ್ನು ಅವನ ಹೆಂಡತಿಯನ್ನೂ ಗೌರವದಿಂದ ನೋಡುತ್ತಿದ್ದ ಅವರಿಗೆ ಅವಳ ರಕ್ತದಿಂದ ಸಿಕ್ತವಾದ ಕತ್ತಿಯನ್ನು ಕೊಂಡೊಯ್ಯಲು ಮನಸ್ಸಾಗಲಿಲ್ಲವಾದ್ದರಿಂದ ಕತ್ತಿಯನ್ನು ಫ್ರೋಲಿಕ್‌ನ ಶವದ ಬಳಿಯೇ ಒಗೆದು ಹೊರಟು ಹೋದರು.

ಇದಾಗಿ ವರ್ಷಗಳೇ ಉರುಳಿದವು. ಫ್ರೋಲಿಕ್‌ನ ಹೆಣದ ಸುತ್ತ ಮರಗಳು ಬೆಳೆದವು. ಬಂಡಿ ಮಳೆಗಾಳಿಗಳ ಹೊಡೆತದಿಂದ ಜೀರ್ಣವಾಗಿ ಮುರಿದು ಬಿತ್ತು. ಹೀಗಿರುತ್ತ ಆ ಪ್ರದೇಶದಲ್ಲಿ ಬಂಗಾರದ ಗಣಿಯಿರುವ ವಿಷಯು ಜನಜನಿತವಾಗಿ ಬಂಗಾರದ ಆಸೆಯಿಂದ ಅನೇಕರು ಅಲ್ಲಿಗೆ ಬರತೊಡಗಿದರು. ಒಂದು ದಿನ ಬಂಗಾರದ ಅನ್ವೇಷಕರಿಬ್ಬರು ಅರಣ್ಯದಲ್ಲಿ ಅಲೆಯುತ್ತಿರುವಾಗ ಮರಗಳ ಸಂದಿಯಲ್ಲಿ ಮುರುಕು ಬಂಡಿಯೊಂದು ಕಂಡಿತು.

ಗಿಡಗಳನ್ನು ಬಿಡಿಸಿಕೊಂಡು ಅಲ್ಲಿಗೆ ಹೋದಾಗ ಎರಡು ಅಸ್ಥಿಪಂಜರಗಳು. ಪಕ್ಕದಲ್ಲೆ ಧೂಳಿನಿಂದ ಕೂಡಿದ ವಜ್ರಖಚಿತ ಕತ್ತಿ. ಇಂಥ ಅಮೂಲ್ಯವಾದ ಕತ್ತಿಯೇ ಸಿಕ್ಕಮೇಲೆ ಇನ್ನೇಕೆ ಬಂಗಾರದ ಅನ್ವೇಷಣೆಯಲ್ಲಿ ತೊಡಗಬೇಕು ? ಬದಲು ಅದನ್ನು ಜೋಹಾನ್ಸ್‌ಬ

ರ್ಗ್‌ನಲ್ಲಿ ಮಾರಿ ಬಂದ ಹಣದಿಂದ ಕೊನೆಯವರೆಗೂ ಸುಖವಾಗಿ ಜೀವಿಸಬಾರದೆ ? ಎಂದವರು ಯೋಚಿಸಿದರು.

ಜೋಹಾನ್ಸ್‌ಬರ್ಗ್ ತಲುಪಿದ ರಾತ್ರಿ ಅವರಿಬ್ಬರೂ ಕಂಠಪೂರ್ತಿಯಾಗಿ ಕುಡಿದರು. ಕುಡಿದ ಅಮಲಿನಲ್ಲೆ ಜಗಳಾಡಿದರು, ಹೊಡೆದಾಡಿದರು. ಅವರಲ್ಲೊಬ್ಬ ಇನ್ನೊಬ್ಬನನ್ನು ಮಚ್ಚಿನಿಂದ ಬಲವಾಗಿ ಹೊಡೆದ. ಆ ರಭಸಕ್ಕೆ ಹೊಡೆತ ತಿಂದವ ಅಲ್ಲೆ ಸತ್ತುಬಿದ್ದ.

ಮರುದಿನ ಉಳಿದವ ಆ ಕತ್ತಿಯನ್ನು ತೆಗೆದುಕೊಂಡು ಜೋಹಾನ್ಸ್‌ಬರ್ಗ್‌ನ ವಜ್ರಾಭರಣಗಳನ್ನು ಮಾರುವ 'ಕೋಹೆನ್ ಅ್ಯಂಡ್ ರೋಚೆನ್‌ಬ್ಲಾಟ್' ಎಂಬ ಪ್ರಸಿದ್ಧ ಕಂಪನಿಗೆ ಮಾರಿದ. ಅದೇ ರಾತ್ರಿ ಕಂಪನಿಯ ಮಾಲಕ ಕೋಹೆನ್‌ನ ಮನೆಯನ್ನು ದರೋಡೆಕೋರರು ಮುತ್ತಿ ಇದ್ದುಬಿದ್ದ ಸಂಪತ್ತೆಲ್ಲವನ್ನೂ ದೋಚಿದರು. ಕೋಹೆನ್‌ನನ್ನು, ಅವನ ಹೆಂಡತಿಯನ್ನು ನಿರ್ದಯವಾಗಿ ತುಂಡರಿಸಿದರು.

ಈ ಎಲ್ಲ ಗೊಂದಲದ ಮಧ್ಯೆ ಕೋಹೆನ್‌ನ ಮಗ ಮಾತ್ರ ಹೇಗೋ ಉಳಿದುಕೊಂಡ. ಆ ವೇಳೆಗಾಗಲೆ ಹಿರೋರೋದ ಕುಖ್ಯಾತಿ ಎಲ್ಲೆಡೆ ಪಸರಿಸಿತ್ತು. ಆ ಅರಿಷ್ಟದ ಕತ್ತಿಯನ್ನು ಯಾರಿಗಾದರೂ ಮಾರಿ ಕೈತೊಳೆದುಕೋ ಎಂದು ಕೋಹೆನ್ನನ ಸ್ನೇಹಿತರು ಹೇಳಿದ್ದನ್ನು ಮಗ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಇದಾದ ಒಂದೇ ವಾರದಲ್ಲಾತ ವಾಹನ ಅಪಘಾತವೊಂದರಲ್ಲಿ ತೀರಿಕೊಂಡ.

ಅನಂತರ ಆ ಕತ್ತಿ ಸ್ಟುರ್‌ಮನ್ ಎಂಬಾತನ ಕೈಗೆ ಬಂತು. ಅದನ್ನು ಕೊಂಡ ಕೆಲವೇ ದಿನಗಳಲ್ಲಾತ ಸಿಡಿಲು ಬಡಿದು ಸತ್ತುಹೋದ.

ಅಮೆರಿಕದ ಕೋಟ್ಯಧೀಶನೊಬ್ಬನಿಗೆ ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸುವ ಚಟ. ಈ ಕತ್ತಿ ಸ್ಟುರ್‌ಮನ್ನನ ಹೆಂಡತಿಯ ಬಳಿಯಿರುವ ಸುದ್ದಿ ತಿಳಿಯುತ್ತಲೇ ಅದನ್ನು ಖರೀದಿಸುವಂತೆ ತನ್ನ ಆಫ್ರಿಕದ ಏಜಂಟನಾದ ಡಾರ್ಕ್ ನಾಥನ್ನನಿಗೆ ಸೂಚಿಸಿದ. ಆದರೆ ನಾಥನ್ನನಿಗೆ ಆ ಕತ್ತಿಯನ್ನು ಮುಟ್ಟಲೂ ಭಯ. ಹಾಗೆಂದು ಆ ಕೋಟ್ಯಧೀಶನ ಮಾತನ್ನು ತಳ್ಳಿಹಾಕುವಂತೆಯೂ ಇರಲಿಲ್ಲ. ಕೊನೆಗೆ ಧೈರ್ಯ ತಂದುಕೊಂಡು ಆ ಕತ್ತಿಯನ್ನು ಖರೀದಿಸಿ ಪ್ಯಾಕ್ ಮಾಡಿ ಪೋಸ್ಟ್ ಆಫೀಸಿನಲ್ಲಿ ಕೊಟ್ಟು ಹೊರಬರುತ್ತಲೇ ಲಾರಿಯೊಂದು ಹಾಯ್ದು ಆತ ಸತ್ತುಹೋದ.

ಆ ಕತ್ತಿ ಅಮೆರಿಕದ ಕೋಟ್ಯಧೀಶನನ್ನು ತಲುಪುವ ವೇಳೆಗೆ ೨೮ ಜನರನ್ನು ಬಲಿತೆಗೆದುಕೊಂಡಿತ್ತು. ಮುಂದೆ ಆ ಕೋಟ್ಯಧೀಶನಿಗೆ ಏನಾಯಿತೆನ್ನುವುದಾಗಲಿ ಆ ರತ್ನಖಚಿತವಾದ ಕತ್ತಿ ಈಗ ಯಾರ ಬಳಿ ಇದೆಯೆನ್ನುವುದಾಗಲಿ ತಿಳಿಯದು. ಇಷ್ಟಕ್ಕೂ ಅಂಥ ಅರಿಷ್ಟದ ಕತ್ತಿಯನ್ನು ಖರೀದಿಸಲು ಯಾರು ಇಷ್ಟಪಡುತ್ತಾರೆ ನೀವೇ ಹೇಳಿ ?

ಆ ಕತ್ತಿ ಅಮೆರಿಕದ ಕೋಟ್ಯಧೀಶನನ್ನು ತಲುಪುವ ವೇಳೆಗೆ ೨೮ ಜನರನ್ನು ಬಲಿತೆಗೆದುಕೊಂಡಿತ್ತು. ಮುಂದೆ ಆ ಕೋಟ್ಯಧೀಶನಿಗೆ ಏನಾಯಿತೆನ್ನುವುದಾಗಲಿ ಆ ರತ್ನಖಚಿತವಾದ ಕತ್ತಿ ಈಗ ಯಾರ ಬಳಿ ಇದೆಯೆನ್ನುವುದಾಗಲಿ ತಿಳಿಯದು. ಇಷ್ಟಕ್ಕೂ ಅಂಥ ಅರಿಷ್ಟದ ಕತ್ತಿಯನ್ನು ಖರೀದಿಸಲು ಯಾರು ಇಷ್ಟಪಡುತ್ತಾರೆ ನೀವೇ ಹೇಳಿ ? ●

ಚಿಂಪಾಂಜಿಯೆಂದರೆ ಒಂದು ರೀತಿಯಲ್ಲಿ ಗೋರಿಲ್ಲಾದ ತಮ್ಮ. ಪೂರ್ಣವಾಗಿ ಬೆಳೆದಾಗ ಎಂಭತ್ತು ಕಿಲೋದವರೆಗೂ ತೂಗಬಲ್ಲದು. ಇದರ ಬೊಟ್ಟು ಬಲುಗಟ್ಟಿ. ಚಿಂಪಾಂಜಿಯ ಒಂದೇ ಬೊಟ್ಟಿನಿಂದ ಮರದ ಟೊಂಗೆಗೆ ಜೋತುಬಿದ್ದು ಉಯ್ಯಾಲೆಯಾಡಬಲ್ಲದು.

● ಭ್ರಾಂತೇಶ

ಸಂಖ್ಯಾ ವಿನೋದ

ಕನ್ನಡಿಯು ಮುಖವನ್ನು ತದ್ವತ್ತಾಗಿ ತೋರಿಸುತ್ತದಾದರೂ ಕಿರಣಗಳ ಪ್ರತಿಫಲನದಿಂದಾಗಿ ಮುಖದ ಬಲಭಾಗ ಕನ್ನಡಿಯಲ್ಲಿ ಎಡಬದಿಗೂ ಮುಖದ ಎಡಭಾಗ ಕನ್ನಡಿಯ ಬಲಬದಿಗೂ ಪ್ರತಿಬಿಂಬಿತವಾಗಿರುವುದನ್ನು ಗಮನಿಸಿದ್ದೀರಾ? ಗಣಿತದಲ್ಲಿಯೂ ಹಾಗೆಯೆ. ಸಂಖ್ಯೆಗಳನ್ನು ತಿರುವುಮುರುವಾಗಿ ಒಂದೇ ಕ್ರಮದಲ್ಲಿ ಬರೆದಾಗ ಒಂದೇ ಬಗೆಯ ಉತ್ತರ ಅಪರೂಪಕ್ಕಾಗಿಯಾದರೂ ದೊರೆಯುವುದುಂಟು. ಅದಕ್ಕೆ ಇಂಗ್ಲಿಷಿನಲ್ಲಿ 'ಮಿರರ್ ಇಮೇಜ್ ಎಡಿಷನ್' ಎನ್ನುತ್ತಾರೆ. ಇದನ್ನು ಕನ್ನಡಿ ಪ್ರತಿಬಿಂಬದ ಲೆಕ್ಕಾಚಾರ ಎಂದು ಕನ್ನಡದಲ್ಲಿ ಭಾಷಾಂತರಿಸಬಹುದು. ಇಂಥ ಲೆಕ್ಕದ ಒಂದು ಉದಾಹರಣೆ ಇಲ್ಲಿದೆ.

೧೨೩೪೫೬೭೮೯	೯೮೭೬೫೪೩೨೧
೧೨೩೪೫೬೭೮	೮೭೬೫೪೩೨೧
೧೨೩೪೫೬೭	೭೬೫೪೩೨೧
೧೨೩೪೫೬	೬೫೪೩೨೧
+ ೧೨೩೪೫	+ ೫೪೩೨೧
೧೨೩೪	೪೩೨೧
೧೨೩	೩೨೧
೧೨	೨೧
೧	೧
೧,೦೮೩,೬೭೬,೨೬೯	೧,೦೮೩,೬೭೬,೨೬೯

ಎಷ್ಟೋ ಜನರಿಗೆ ಗುಣಿಸುವುದೆಂದರೇನೇ ತಲೆನೋವು. ಆದರೆ ಈ ಸಂಖ್ಯೆಗಳು ಮಾತ್ರ ಅಂಥವರಿಗೆ ಕೂಡ ಖುಷಿ ನೀಡಬಲ್ಲವೇ ಹೊರತು ತಲೆನೋವನ್ನು ಖಂಡಿತ ತರಲಾರವು.

೬೫೩೫೯೪೭೭೧೨೪೧೮೩ x ೧೭ x ೧ = ೧೧೧೧೧೧೧೧೧೧೧೧೧೧೧೧

೬೫೩೫೯೪೭೭೧೨೪೧೮೩ x ೧೭ x ೨ = ೨೨೨೨೨೨೨೨೨೨೨೨೨೨೨೨

೬೫೩೫೯೪೭೭೧೨೪೧೮೩ x ೧೭ x ೩ = ೩೩೩೩೩೩೩೩೩೩೩೩೩೩೩೩

೬೫೩೫೯೪೭೭೧೨೪೧೮೩ x ೧೭ x ೪ = ೪೪೪೪೪೪೪೪೪೪೪೪೪೪೪೪

೬೫೩೫೯೪೭೭೧೨೪೧೮೩ x ೧೭ x ೫ = ೫೫೫೫೫೫೫೫೫೫೫೫೫೫೫೫

೬೫೩೫೯೪೭೭೧೨೪೧೮೩ x ೧೭ x ೬ = ೬೬೬೬೬೬೬೬೬೬೬೬೬೬೬೬

೬೫೩೫೯೪೭೭೧೨೪೧೮೩ x ೧೭ x ೭ = ೭೭೭೭೭೭೭೭೭೭೭೭೭೭೭೭

೬೫೩೫೯೪೭೭೧೨೪೧೮೩ x ೧೭ x ೮ = ೮೮೮೮೮೮೮೮೮೮೮೮೮೮೮೮

೬೫೩೫೯೪೭೭೧೨೪೧೮೩ x ೧೭ x ೯ = ೯೯೯೯೯೯೯೯೯೯೯೯೯೯೯೯

೧೨೩೪೫೬೭೮೯ ಕ್ಕೆ ೯೯೯೯೯೯೯೯೯ ರಿಂದ ಗುಣಿಸುವುದೂ ಅಷ್ಟು ಕಠಿಣವಲ್ಲ, ನೋಡಿ ಬೇಕಾದರೆ:

೧ ೨ ೩ ೪ ೫ ೬ ೭ ೮ ೯
x ೯ ೯ ೯ ೯ ೯ ೯ ೯ ೯
೧೧೧೧೧೧೧೧೧
೧೧೧೧೧೧೧೧೧
೧೧೧೧೧೧೧೧೧
೧೧೧೧೧೧೧೧೧
೧೧೧೧೧೧೧೧೧
೧೧೧೧೧೧೧೧೧
೧೧೧೧೧೧೧೧೧
೧೧೧೧೧೧೧೧೧
೧೧೧೧೧೧೧೧೧
೧ ೨ ೩ ೪ ೫ ೬ ೭ ೮ ೯ ೮ ೭ ೬ ೫ ೪ ೩ ೨ ೧

ಎತ್ತರವಾದ ಹೊಟೇಲ್

ಜಗತ್ತಿನಲ್ಲಿ ಅತ್ಯಂತ ಎತ್ತರವಾದ ಉಪಹಾರ ಮಂದಿರ (ಹೊಟೇಲ) ರಶಿಯಾದ ಮಾಸ್ಕೋದಲ್ಲಿದೆ ಹೆಸರು 'ರೋಸಿಯಾ' ಇದರಲ್ಲಿ ೫೩೫೦ ಆಸನಗಳಿವೆ.

● ಶ್ರೀಪಾದ ಏ. ಜೋಶಿ

ಒಂಬತ್ತರ ವೈಚಿತ್ರ್ಯ ನಿಮ್ಮಲ್ಲಿ ಅನೇಕರಿಗೆ ಈಗಾಗಲೇ ತಿಳಿದಿರಬಹುದು. ಅದನ್ನು ಗೊತ್ತಿರದವರ ಪ್ರಯೋಜನಕ್ಕಾಗಿ ಆ ಅಂಕಿಯ ವೈಚಿತ್ರ್ಯವನ್ನು ಮತ್ತೆ ವಿವರಿಸುತ್ತಿದ್ದೇನೆ.

೧ x ೯ = ೯
೧ x ೯ = ೧೮ (೧ + ೮ = ೯)
೨ x ೯ = ೨೭ (೨ + ೭ = ೯)
೪ x ೯ = ೩೬ (೬ + ೩ = ೯)
೫ x ೯ = ೪೫ (೪ + ೫ = ೯)
೬ x ೯ = ೫೪ (೫ + ೪ = ೯)
೭ x ೯ = ೬೩ (೬ + ೩ = ೯)
೮ x ೯ = ೭೨ (೭ + ೨ = ೯)
೯ x ೯ = ೮೧ (೮ + ೧ = ೯)
೧೦ x ೯ = ೯೦ (೯ + ೦ = ೯)

ಈ ಅಂಕಿಯ ವೈಚಿತ್ರ್ಯ ಇಷ್ಟಕ್ಕೇ ನಿಲ್ಲುವುದಿಲ್ಲ:

೯ x ೯ + ೭ = ೮೮
೯೮ x ೯ + ೬ = ೮೮೮
೯೮೭ x ೯ + ೫ = ೮೮೮೮
೯೮೭೬ x ೯ + ೪ = ೮೮೮೮೮
೯೮೭೬೫ x ೯ + ೩ = ೮೮೮೮೮೮
೯೮೭೬೫೪ x ೯ + ೨ = ೮೮೮೮೮೮೮
೯೮೭೬೫೪೩ x ೯ + ೧ = ೮೮೮೮೮೮೮೮
೯೮೭೬೫೪೩೨ x ೯ + ೦ = ೮೮೮೮೮೮೮೮೮

ಸಂಖ್ಯೆಗಳ ಪ್ರಪಂಚವೇ ವಿಚಿತ್ರ ಅಲ್ಲವೆ?

● ಎಂ.ಆರ್.ಎಸ್.

ಜ್ಞಾನನಿಧಿ

ನಿಜವಾಗಿಯೂ ಅಮೆರಿಕವನ್ನು ಕಂಡುಹಿಡಿದವರಾರು ?

ಇತಿಹಾಸದ ಪುಸ್ತಕಗಳು ಹೇಳುವಂತೆ ೧೪೯೨ರಲ್ಲಿ ಕೊಲಂಬಸ್ ಅಮೆರಿಕವನ್ನು ಕಂಡುಹಿಡಿದ. ಊಂಹುಂ. ಅದಕ್ಕಿಂತ ಮೊದಲೆ ಅಮೆರಿಗೋ ವೆಸ್ಪುಚಿ ಅದನ್ನು ಕಂಡುಹಿಡಿದಿದ್ದ. ಅದರಿಂದಲೇ ಆ ಖಂಡಕ್ಕೆ ಅಮೆರಿಕ ಎಂಬ ಹೆಸರು ಬಂತು ಎನ್ನುತ್ತಾರೆ ಸ್ಪೇನಿನವರು. ಅದು ಹೇಗಾದೀತು ? ಹತ್ತನೆಯ ಶತಮಾನದಲ್ಲೆ ನಮ್ಮ ವೈಕಿಂಗ್ ಜನ ಅಮೆರಿಕವನ್ನು ಕಂಡುಹಿಡಿದಿದ್ದರು. ಅವರು ಈ ಹೊಸನಾಡಿಗೆ 'ವಿನ್‌ಲಂಡ್' ಎಂಬ ಹೆಸರನ್ನೂ ಇರಿಸಿದ್ದರು. ಅದಕ್ಕೆಲ್ಲ ನಮ್ಮ ಬಳಿ ದಾಖಲೆಯೂ ಇದೆ ಎನ್ನುತ್ತಾರೆ ನಾರ್ವೇಜಿಯನ್ನರು. ಅವರ ಪ್ರಕಾರ ವೈಕಿಂಗರು ಕೆನಡಾದವರೆಗೂ ಹೋಗಿದ್ದರಂತೆ.

ಇರಬಹುದು. ಆದರೆ ಅದಕ್ಕಿಂತ ನಾಲ್ಕು ಶತಮಾನಗಳಷ್ಟು ಮೊದಲೆ ಕ್ರೈಸ್ತ ಸಂನ್ಯಾಸಿಗಳು ಮತಪ್ರಚಾರಕ್ಕೆಂದು ಅಲ್ಲಿಗೆ ಹೋಗಿ ಅಲ್ಲಿನ ಅನಾಗರಿಕ ಜನರಿಗೆ ಧರ್ಮದೀಕ್ಷೆ ನೀಡಿ ನಾಗರಿಕರನ್ನಾಗಿ ಮಾಡಿದರು ಎನ್ನುತ್ತಾರೆ ಐರ್ಲಂಡಿನ ಜನ.


ಅದೆಲ್ಲ ಬರೀ ಬುರುಡೆ. ನಿಜ ಹೇಳಬೇಕೆಂದರೆ ಹನ್ನೆರಡನೆಯ ಶತಮಾನದಲ್ಲೆ ನಮ್ಮ ಪ್ರಿನ್ಸ್ ಮ್ಯಾಡೋಕ್ ಸೈನ್ಯಸಮೇತನಾಗಿ ಉತ್ತರ ಅಮೆರಿಕಕ್ಕೆ ಹೋಗಿದ್ದ. ಅಲ್ಲಿನ ನೆಲ ಫಲವತ್ತಾಗಿದ್ದುದರಿಂದ, ವಾತಾವರಣ ಹಿತಕರವಾಗಿದ್ದುದರಿಂದ ಸೈನ್ಯದ ಎಷ್ಟೋ ಜನ ಅಲ್ಲೆ ನೆಲೆನಿಂತರು. ಹೀಗಾಗಿ ಶತಮಾನಗಳ ನಂತರ ಇಂಗ್ಲಂಡಿನಿಂದ ಜನ ಅಮೆರಿಕಕ್ಕೆ ವಲಸೆ ಹೋದಾಗ ಹಳೆಯ ವೆಲ್ಷ್ ಭಾಷೆ ಮಾತಾಡುವವರನ್ನು ಕಂಡರು ಎನ್ನುತ್ತಾರೆ ಇಂಗ್ಲಂಡಿನ ವೆಲ್ಷ್ ಜನ.

ಇವರೆಲ್ಲರಿಗಿಂತ ಅಮೆರಿಕಕ್ಕೆ ಮೊದಲು ಹೋದವರೆಂದರೆ ನಾವೇ. ಕ್ರಿ.ಶ. ೪೯೯ರಲ್ಲೆ ಅಲ್ಲಿಗೆ ಹೋದ ನಮ್ಮ ಹೋಷಿನ್ ಎಂಬ ಬೌದ್ಧ ಸಂನ್ಯಾಸಿ ಅಲ್ಲಿ ಮೈಗೆ ಕೆಂಪು ಬಣ್ಣ ಬಳಿದುಕೊಳ್ಳುತ್ತಿದ್ದ ರೆಡ್ ಇಂಡಿಯನ್ನರನ್ನು ಕಂಡಿದ್ದ. ಅದಕ್ಕೆಲ್ಲ ನಮ್ಮ ಬಳಿ ದಾಖಲೆಯೂ ಇದೆ ಎನ್ನುತ್ತಾರೆ ಚೀನೀಯರು.

ಈ ರೆಡ್ ಇಂಡಿಯನ್ನರಾದರೂ ಅಲ್ಲಿಗೆ ಎಲ್ಲಿಂದ ಬಂದರು ಎನ್ನುತ್ತೀರಿ ? ಹದಿನೈದು ಸಾವಿರ ವರ್ಷಗಳ ಹಿಂದೆ ಬೆರಿಂಗ್ ಜಲಸಂಧಿಯಿಂದ ಆಹಾರಾನ್ವೇಷಣೆಗೆ ಅಲ್ಲಿಗೆ ಹೋಗಿ ನೆಲಸಿದವರೇ ಈ ರೆಡ್ ಇಂಡಿಯನ್ನರು. ಹೀಗಾಗಿ ನಿಜವಾಗಿ ಅಮೆರಿಕವನ್ನು ಕಂಡುಹಿಡಿದವರೆಂದರೆ ರಶಿಯನ್ನರೇ ಹೊರತು ಬೇರಾರೂ ಅಲ್ಲ ಎನ್ನುತ್ತಾರೆ ರಶಿಯದವರು.

ಅಮೆರಿಕವನ್ನು ನಾಗರಿಕ ಜಗತ್ತಿಗೆ ಪರಿಚಯಿಸಿದಾತ ಕೊಲಂಬಸ್ ಎನ್ನುವುದಕ್ಕೆ ಎರಡು ಮಾತಿಲ್ಲ. ಆದರೆ ನಿಜವಾಗಿಯೂ ಅಮೆರಿಕವನ್ನು ಕಂಡುಹಿಡಿದವರಾರು ? ಎನ್ನುವುದು ಆ ದೇವರಿಗೇ ಗೊತ್ತು.

● ದೀಪಾಲಿ



ರೋಮನ್ ಸಾಮ್ರಾಜ್ಯದಲ್ಲಿ ಮಂಗಳವಾರವನ್ನು ಹೊರತುಪಡಿಸಿ ಉಳಿದ ಯಾವ ದಿನವೂ ಕ್ಷೌರವನ್ನು ಮಾಡಿಸಿಕೊಳ್ಳುವಂತಿರಲಿಲ್ಲ!

ಕನಿಷ್ಟಬಿಲ್ಲೆ ಕನಿಷ್ಟನಲ್ಲ, ಪೊಲೀಸನೂ ಕೀಳಲ್ಲ

ಪೊಲೀಸರೆಂದರೆ ಯಾರು ಎನ್ನುವುದು ನಮಗೆಲ್ಲ ಗೊತ್ತೇ ಇದೆ. ಆದರೆ ಈ ಶಬ್ದ ಹೇಗೆ ಬಂತೆನ್ನುವುದು ಗೊತ್ತೆ? ಗ್ರೀಕ್ ಭಾಷೆಯಲ್ಲಿ ಪೊಲೀಸ್ ಎಂದರೆ ನಗರ. ಪೊಲಿಟೀಸ್ ಎಂದರೆ ನಾಗರಿಕ. ಹೀಗೆ ನಗರವನ್ನೂ, ನಾಗರಿಕರನ್ನೂ ರಕ್ಷಿಸುವಾತ ಪೊಲೀಸನಾದ.

ಆದರೆ ಕುದುರೆಲಾಯದ ಸರದಾರನೂ ಪೊಲೀಸನಾದದ್ದು ಗೊತ್ತೆ? ಅದು ನಡೆದದ್ದು ಹೀಗೆ:

ನಮ್ಮಲ್ಲಿ ಕಾರುಗಳನ್ನಿಡುವುದು ಪ್ರತಿಷ್ಠೆಯ ಲಕ್ಷಣವಾದಂತೆ ಪ್ರಾಚೀನ ಕಾಲದಲ್ಲಿ ಕುದುರೆಗಳನ್ನು ಸಾಕುವುದು ಪ್ರತಿಷ್ಠೆಯ ಲಕ್ಷಣವಾಗಿತ್ತು. ಇದಕ್ಕೆ ರೋಮನ್ ಚಕ್ರಾಧಿಪತ್ಯವೂ ಹೊರತಾಗಿರಲಿಲ್ಲ. ಕುದುರೆಯನ್ನು ಸಾಕುವುದಷ್ಟೇ ಅಲ್ಲ, ಅವುಗಳನ್ನು ಸರಿಯಾಗಿ ನೋಡಿಕೊಳ್ಳುವುದೂ ಪ್ರತಿಷ್ಠೆಯ ಕುರುಹಾಗಿತ್ತು. ಆದ್ದರಿಂದ ಶ್ರೀಮಂತರ, ಆಢ್ಯರ ಮನೆಗಳಲ್ಲಿ ಕುದುರೆಗಳನ್ನು ನೋಡಿಕೊಳ್ಳಲೆಂದೇ ಮನುಷ್ಯನೊಬ್ಬ ನಿಯುಕ್ತನಾದ. ಪ್ರತಿಷ್ಠೆಯ ಸ್ಥಾನವಾಗಿದ್ದರಿಂದ ಆತನಿಗೆ 'ಕುದುರೆಲಾಯದ ಸರದಾರ' ಎಂಬ ಉಪಾಧಿಯೇ ಬಂತು. (ಲ್ಯಾಟಿನ್ನಿನಲ್ಲಿ ಕಮ್ಸ್ ಎಂದರೆ ಸರದಾರ; ಸ್ಟ್ಯಾಬುಲಿ ಎಂದರೆ ಕುದುರೆಲಾಯ; ಕಮ್ಸ್ ಸ್ಟ್ಯಾಬುಲಿ ಎಂದರೆ ಕುದುರೆಲಾಯದ ಸರದಾರ)

ರೋಮನ್ ಆಧಿಪತ್ಯ ತನ್ನ ಮೆರಗನ್ನು ಕಳೆದುಕೊಳ್ಳುತ್ತಿದ್ದ ಹಾಗೆ, ಅಲ್ಲಿನ ಶ್ರೀಮಂತರ ಕುದುರೆಗಳನ್ನು ಸಾಕುವ ಆರ್ಥಿಕಶಕ್ತಿ ಕುಗ್ಗುತ್ತಿದ್ದ ಹಾಗೆ ಈ ಕಮ್ಸ್‌ಸ್ಟ್ಯಾಬುಲಿಯ ಕೆಲಸ ಕಳ್ಳಕಾಕರಿಂದ, ಅಪಾಯಕಾರಿ ವ್ಯಕ್ತಿಗಳಿಂದ ಕುಟುಂಬವನ್ನು ರಕ್ಷಿಸುವುದಕ್ಕೆ ಮಾತ್ರ ಸೀಮಿತಗೊಂಡಿತು. ಕಾಲಾಂತರದಲ್ಲಿ ಈ ಕಮ್ಸ್‌ಸ್ಟ್ಯಾಬುಲಿಯೇ ಜನರ ಬಾಯಲ್ಲಿ ಕಾನ್‌ಸ್ಟೇಬಲ್ ಆದ.

ಸಾಮಾಜಿಕ ಸ್ಥಿತಿಗತಿಯೊಡನೆ ಶಬ್ದದ ಅರ್ಥವೂ ಹೇಗೆ ಬದಲಾವಣೆಗೊಳ್ಳುತ್ತದೆಂಬುದಕ್ಕೆ ಇದು ಒಂದು ಉದಾಹರಣೆ. ಶಬ್ದಭಾಂಡಾರ ಹಣದ ಭಾಂಡಾರಕ್ಕಿಂತ ಅಮೂಲ್ಯವಾಗಿದೆ ನಿಜ. ಆದರೆ ಕಾಲಸರಿದಂತೆ ಹಣದ ಹಾಗೆ ಎಷ್ಟೋ ಶಬ್ದಗಳೂ ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತವೆನ್ನುವುದೂ ಅಷ್ಟೆ ನಿಜ.

● 'ಎಂ. ಗಂಗಾಧರಭಟ್ಟ'

ದನಿ ಇಲ್ಲದ್ದು...

ಜಿರಾಫೆಗೆ ಪ್ರಕೃತಿಯ ಕ್ರೇನ್ ಎಂದೇ ಅನ್ವರ್ಥನಾಮ. ಆದರೆ ಅಷ್ಟೆಲ್ಲ ಎತ್ತರವಿರುವ ಆ ಪ್ರಾಣಿಗೆ ಸ್ವರಗಳನ್ನು ಹೊರಡಿಸುವ ಶಕ್ತಿಯಿಲ್ಲವೆಂದರೆ ನಂಬುತ್ತೀರಾ? ಪಾಪ, ಎಷ್ಟು ಕಷ್ಟ ಬಂದರೂ ಅದು ತನ್ನ ಸಂಗಾತಿಗಳ ಮುಂದೆ ದುಃಖವನ್ನು ಹಂಚಿಕೊಳ್ಳುವಹಾಗಿಲ್ಲ. ಅದರ ಕತ್ತು ಒಂಟೆಯ ಕತ್ತಿಗಿಂತ ಉದ್ದವಾಗಿದೆಯೇನೋ ನಿಜ, ಆದರೆ ಅಷ್ಟು ಉದ್ದ ಕತ್ತು ಇದ್ದರೂ ಕುತ್ತಿಗೆಯ ಎಲುವುಗಳ ಸಂಖ್ಯೆ ಇಲಿಯ ಕುತ್ತಿಗೆಯ ಎಲವುಗಳಿಗಿಂತ ಹೆಚ್ಚಿಲ್ಲ. ಇಲಿಯ ಕುತ್ತಿಗೆಯಲ್ಲಿ ಏಳೇ ಎಲವುಗಳು. ಜಿರಾಫೆಯ ಕುತ್ತಿಗೆಯಲ್ಲೂ ಅಷ್ಟೆ.

● 'ಶಾಂತೇಶ'



ಒಂದೇ ಗಂಟೆಯಲ್ಲಿ....

ಒಂದು ಗಂಟೆಯೇನೂ ಅಷ್ಟು ದೊಡ್ಡ ಅವಧಿಯಲ್ಲ. ಆದರೆ ಈ ಚಿಕ್ಕ ಅವಧಿಯಲ್ಲೆ ಜಗತ್ತಿನಲ್ಲಿ ಏನೆಲ್ಲ ಘಟಿಸುತ್ತಿಲ್ಲ!

ವಾಚಾಳಿಗಳಾಗಿದ್ದರೆ ಒಂದೇ ಗಂಟೆಯಲ್ಲಿ ನೀವು ಎರಡೂವರೆಸಾವಿರ ಶಬ್ದಗಳಷ್ಟು ಮಾತಾಡಿರುತ್ತೀರಿ. ಐನೂರು ಸಲ ನಿಮ್ಮ ರೆಪ್ಪೆ ಬಡಿದುಕೊಂಡಿರುತ್ತದೆ. ೨೨೪೦ ಕಿಲೋಗ್ರಾಮ್‌ಗಳಷ್ಟು ರಕ್ತವನ್ನು ನಿಮ್ಮ ಹೃದಯ ಶರೀರದ ವಿವಿಧ ಭಾಗಗಳಿಗೆ ಪಂಪ್ ಮಾಡಿರುತ್ತದೆ. ಇಷ್ಟೇ ಅವಧಿಯಲ್ಲಿ ಶರೀರ ಕಳೆದುಕೊಂಡ ಉಷ್ಣತೆಯನ್ನು ಸಂಗ್ರಹಿಸಲು ಸಾಧ್ಯವಾದರೆ ಆದರಿಂದ ಎರಡು ಪಿಂಟ್‌ಗಳಷ್ಟು ನೀರನ್ನು ಕುದಿಯುವ ಮಟ್ಟದವರೆಗೆ ಕಾಯಿಸಬಹುದು.

ಒಂದು ಗಂಟೆಯಲ್ಲಿ ನಿಮ್ಮ ಉಗುರು ೦.೩೨೭ ಇಂಚಿನಷ್ಟು ಬೆಳೆದಿರುತ್ತದೆ. ಹನ್ನೆರಡು ಸಾವಿರಕ್ಕೂ ಹೆಚ್ಚು ಮಕ್ಕಳು ಹುಟ್ಟಿರುತ್ತವೆ. ನಾಲ್ಕುಸಾವಿರ ಜನ ಮದುವೆಯಾದರೆ, ಎರಡೂವರೆ ಸಾವಿರ ಜನ ವಿಚ್ಛೇದನೆಯನ್ನು ಪಡೆದಿರುತ್ತಾರೆ.

ಒಂದು ಗಂಟೆಯಲ್ಲಿ ಪೃಥ್ವಿ ತನ್ನ ಅಕ್ಷದ ಸುತ್ತ ೬೬,೦೦೦ ಮೈಲುಗಳನ್ನು ಕ್ರಮಿಸಿರುತ್ತದೆ. ನಭೋಮಂಡಲದಿಂದ ೮೩ ಟನ್ನುಗಳಷ್ಟು ತಾರಾರಜ (cosmic dust) ಭೂಮಿಯ ಮೇಲೆ ಬಿದ್ದಿರುತ್ತದೆ. ನಮ್ಮ ಗಣನೆಗೆ ಬರುವುದಿಲ್ಲವಾದರೂ ಒಂದು ಗಂಟೆಯಲ್ಲಿ ಇಪ್ಪತ್ತು ಸಲವಾದರೂ ಭೂಮಿ ಕಂಪಿಸಿರುತ್ತದೆ. ಮೂರು ಚಿಕ್ಕಪುಟ್ಟ ಭೂಕಂಪಗಳು ಅಲ್ಲಲ್ಲಿ ಸಂಭವಿಸಿರುತ್ತವೆ. ಸಿಡಿಲು ಬಡಿದು ಒಬ್ಬನಾದರೂ ಜೀವಕ್ಕೆರವಾಗಿರುತ್ತಾನೆ ಇಲ್ಲವೆ ಒಂದು ಕಟ್ಟಡವಾದರೂ ಧ್ವಂಸವಾಗಿರುತ್ತದೆ.

ಒಂದು ಗಂಟೆಯಲ್ಲೆ ಎರಡು ಸಾವಿರ ಜನ ಬೇರೆ ಬೇರೆ ಖಂಡಗಳಲ್ಲಿ ನೆಲೆಸಿರುವ ಆಪ್ತೇಷ್ಟರನ್ನು ಫೋನು ಮೂಲಕ ಸಂಪರ್ಕಿಸಿರುತ್ತಾರೆ. ಸಾಗರದಲ್ಲಿ ಹಡಗುಗಳು ಒಟ್ಟು ಅರವತ್ತು ಲಕ್ಷ ಮೈಲುಗಳನ್ನು ಕ್ರಮಿಸಿರುತ್ತವೆ. ವಿಮಾನಗಳೇನೂ ಸ್ಪರ್ಧೆಯಲ್ಲಿ ಹಿಂದೆ ಬೀಳುವುದಿಲ್ಲ. ಹಡಗುಗಳು ಅರವತ್ತು ಲಕ್ಷ ಮೈಲುಗಳನ್ನು ಕ್ರಮಿಸಿದರೆ ವಿಮಾನಗಳು ಒಂದು ಕೋಟಿ ಹತ್ತು ಲಕ್ಷ ಮೈಲುಗಳಿಗಿಂತಲೂ ಹೆಚ್ಚು ಅಂತರವನ್ನು ಸವೆಸಿರುತ್ತವೆ. ಬಸವನ ಹುಳದ ಗತಿ ಅತ್ಯಂತ ನಿಧಾನ ನಿಜ. ಆದರೆ ನಿಶ್ಚಲವಾಗಿ ತೋರುವ ಬಸವನಹುಳವೂ ಆ ಅವಧಿಯಲ್ಲಿ ೬೦ ಅಡಿಗಳಷ್ಟು ಮುಂದೆ ಚಲಿಸಿರುತ್ತದೆ.

ಒಂದು ಗಂಟೆಯಲ್ಲಿ ಎರಡು ಕೊಲೆಗಳಾದರೂ ಸಂಭವಿಸಿರುತ್ತವೆ. ನೂರು ಕಡೆಗಳಲ್ಲಾದರೂ ದರೋಡೆಗಾರರು ಲಗ್ಗೆ ಹಾಕಿರುತ್ತಾರೆ.

ಈ ಜಗತ್ತು ತುಮುಲಮಯವಾಗಿಲ್ಲವೆಂದು ಹೇಳಿದವರಾರು ?

● 'ಕಲ್ಲಪ್ಪಾಚಾರ್ಯ'

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

---

೧. ಏಕಾಗ್ರ
(ಅ) ಸೂಜಿ
(ಆ) ಒಂದೇ ವಿಷಯದಲ್ಲಿ ನಟ್ಟ
(ಇ) ಬೆಟ್ಟದ ತುದಿ
(ಈ) ಸಿಡುಕ

೨. ನಾಡು
(ಅ) ಕೆಟ್ಟ ವಾಸನೆ ಇಡುಗು
(ಆ) ಸಪ್ಪಳ
(ಇ) ಉಬ್ಬು
(ಈ) ಒದ್ದೆ ಮಾಡು

೩. ಧುರಂಧರ
(ಅ) ಮುಂದಾಳು
(ಆ) ಯೋಧ
(ಇ) ಧೈರ್ಯಶಾಲಿ
(ಈ) ದೂರ ಹೋದ

೪. ಮುಳಿಸು
(ಅ) ಒಂದು ತರದ ಹುಲ್ಲು
(ಆ) ಕೋಪ
(ಇ) ಸಂತೋಷ
(ಈ) ದುಃಖ

೫. ಲೋಲುಪ
(ಅ) ಜೋತಾಡುವವ
(ಆ) ಪ್ರಿಯ
(ಇ) ಆಸೆಬುರುಕ
(ಈ) ತಪ್ಪಿಹೋದ

೬. ಬಿಗುಮಾನ
(ಅ) ಮಾತಾಡಲು ಒಲ್ಲದಿರುವುದು
(ಆ) ಒಂದು ಅಳತೆ
(ಇ) ಅಭಿಮಾನ
(ಈ) ಮಾನಹಾನಿ

೭. ಲಾಂಛನ
(ಅ) ಅನ್ಯಾಯ
(ಆ) ಇಚ್ಛೆ
(ಇ) ಓದುವಿಕೆ
(ಈ) ಗುರುತು

೮. ಅವಗಾಹನೆ
(ಅ) ಮೋಸ
(ಆ) ಗೋಪ್ಯ
(ಇ) ತಿಳಿವಳಿಕೆ
(ಈ) ಮೋಹ

೯. ಮುಸುಳಿಸು
(ಅ) ಕಳೆಗುಂದು
(ಆ) ವಿರೋಧಿಸು
(ಇ) ಮರೆ
(ಈ) ತಿಕ್ಕು

೧೦. ಪನ್ನತಿಕೆ
(ಅ) ನಿರರ್ಥಕತೆ
(ಆ) ಸೋಲು
(ಇ) ಪ್ರಸಾದ
(ಈ) ಪರಾಕ್ರಮ

೧೧. ದುರ್ಘಟ
(ಅ) ಕಷ್ಟಸಾಧ್ಯ
(ಆ) ಅವಗಢ
(ಇ) ಒಡೆದ ಗಡಿಗೆ
(ಈ) ಭಾರೀ ಹಾವು

೧೨. ವಾತಾಯನ
(ಅ) ಆಕಾಶ
(ಆ) ಬಿರುಗಾಳಿ
(ಇ) ಕಿಂಡಿ
(ಈ) ಗಾಳಿಯ ದಿಕ್ಕು

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

೧. ಏಕಾಗ್ರ

(ಅ) ಒಂದೇ ವಿಷಯದಲ್ಲಿ ನಟ್ಟ. ಉದಾ: ಏಕಾಗ್ರಚಿತ್ತನಾಗಿ ಓದುತ್ತಿದ್ದನು. ಅಂದರೆ ಮನಸ್ಸಿನಲ್ಲಿ ಬೇರೆ ವಿಷಯಕ್ಕೆ ಆಸ್ಪದ ಕೊಡದೆ ಓದುತ್ತಿದ್ದನು. (ಸಂ. ಏಕ=ಒಂದೇ, ಅಗ್ರ=ತುದಿ.)

೨. ನಾದು

(ಈ) ಒದ್ದೆ ಮಾಡು, ನೆನಸು, ತೋಯಿಸು, ತಂಪುಗೊಳಿಸು, ಕಲಸಿ ಮುದ್ದೆ ಮಾಡು. ಉದಾ: ಹಿಟ್ಟನ್ನು ಚೆನ್ನಾಗಿ ನಾದಿ ಉಂಡೆಮಾಡು. (ಕ.)

೩. ಧುರಂಧರ

(ಅ) ಮುಂದಾಳು, ಧುರೀಣ, ಪ್ರಮುಖ, ನೊಗ ಅಥವಾ ಭಾರ ಅಥವಾ ಹೊಣೆಯನ್ನು ಹೊತ್ತವ, ಹೊರಲು ಯೋಗ್ಯನಾದವ, ಮಹಾಪುರುಷ (ಸಂ. ಧುರಂ=ನೊಗವನ್ನು, ಧರ=ಹೊತ್ತವ)

೪. ಮುಳಿಸು

(ಅ) ಕೋಪ, ಕೆರಳುವಿಕೆ, ಉದ್ರೇಕ. ಹುಸಿ ಮುಳಿಸು=ಕೋಪದ ನಟನೆ. (ಕ. ಮುಳಿ=ಕೋಪಗೊಳ್ಳು.)

೫. ಲೋಲುಪ

(ಇ) ಯಾವುದರಲ್ಲಾದರೂ ಆಸೆಬುರುಕ, ಮಿತಿಮೀರಿ ಹಂಬಲಿಸುವವ, ಲೋಭಿ, ಕಾಮಿ. ಉದಾ: ಧನಲೋಲುಪ, ಕಾಮಲೋಲುಪ, ಜಿಹ್ವಾ (ನಾಲಿಗೆಯ) ಲೋಲುಪ. (ಸಂ.)

೬. ಬಿಗುಮಾನ

(ಇ) ಮಾತಾಡಲು ಒಲ್ಲದಿರುವುದು, ಬಿಗುಪು, ನಿಷ್ಠುರತೆ. ಉದಾ: ಅವಳ ಬಿಗುಮಾನವನ್ನು ನೋಡಿದರೆ ಮಾತಾಡಲಿಕ್ಕೇ ಹೆದರಿಕೆಯಾಗುತ್ತದೆ. (ಕ. ಬಿಗು + (ಸಂ.)ಮಾನ)

೭. ಲಾಂಛನ

(ಈ) ಗುರುತು, ಕುರುಹು. ಉದಾ: ಶ್ರೀವತ್ಸ ಲಾಂಛನ, ಕಲೆ, ಅಪಕೀರ್ತಿಯ ಗುರುತು. ಉದಾ: ನಿನ್ನ ವರ್ತನೆಯು ನಿನ್ನ ಕುಲಕ್ಕೆ ಲಾಂಛನಾಸ್ಪದವಾಗಿದೆ, ಹೆಸರು, ಬಿರುದು. (ಸಂ.)

೮. ಅವಗಾಹನೆ

(ಇ) ತಿಳಿವಳಿಕೆ, ಪರಿಜ್ಞಾನ, (ನೀರಲ್ಲಿ) ಮುಳುಗು ಹಾಕುವಿಕೆ, ಆಳವಾದ ಅಭ್ಯಾಸ. ಉದಾ: ಸಾರ್ವಜನಿಕರ ಅವಗಾಹನೆಗಾಗಿ ಅಂದರೆ ಎಲ್ಲರ ತಿಳಿವಳಿಕೆಗಾಗಿ (ಸಂ. ಅವ=ಕೆಳಗೆ, ಗಾಹನ=ಮುಳುಗುವುದು.)

೯. ಮಸುಳಿಸು

(ಅ) ಕಳೆಗುಂದು, ಮಾಸು, ಕಂದು, ಕಳೆಗುಂದಿಸು, ಕಂದಿಸು, ಮರೆಯಾಗು, ಅಡಗು, ಅಡಗಿಸು. (ಕ. ಮಸುಳ್=ಮಾಸು+ಇಸು)

೧೦. ಪನ್ನತಿಕೆ

(ಈ) ಪರಾಕ್ರಮ, ಸಾಹಸ, ಧೈರ್ಯ, ಚಾತುರ್ಯ (ಕ.)

೧೧. ದುರ್ಘಟ

(ಅ) ಕಷ್ಟಸಾಧ್ಯ, ಕಠಿನ, ಅಸಾಧ್ಯ, ಅಸಂಭವ, ಕಷ್ಟದಾಯಕವಾದ. ಉದಾ: ಈ ದುರ್ಘಟ ಪ್ರಸಂಗದಿಂದ ತಪ್ಪಿದರೆ ಸಾಕು. (ಸಂ.)

೧೨. ವಾತಾಯನ

(ಇ) ಕಿಂಡಿ, ಕಿಟಕಿ, ಗಾಳಿಕಿಂಡಿ (ಸಂ. ವಾತ=ಗಾಳಿ, ಅಯನ=ಚಲನೆ.)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬-೮ ಸರಿಯಿದ್ದರೆ	...	ಸಾಧಾರಣ
೯-೧೦ ಸರಿಯಿದ್ದರೆ	...	ಉತ್ತಮ
೧೧-೧೨ ಸರಿಯಿದ್ದರೆ	...	ಅತ್ಯುತ್ತಮ

ಇದನ್ನೊಮ್ಮೆ ನೀವು ನೋಡಲೇಬೇಕು

ಸವಣೂರಿನ 'ವೃಕ್ಷದೇಗುಲ'

ಚಿತ್ರ-ಲೇಖನ:

ಪಿ.ಎಸ್. ಪರ್ವತಿ

ಧಾರವಾಡ ಜಿಲ್ಲೆಯ ಸವಣೂರು ಒಂದು ಕಾಲಕ್ಕೆ ಸಂಸ್ಥಾನವೊಂದರ ರಾಜಧಾನಿ. ಧಾರ್ಮಿಕ ವಿಚಾರಗಳಿಗೆ ಇಂಬುಕೊಟ್ಟ, ಆಧ್ಯಾತ್ಮಿಕ ಹಿನ್ನೆಲೆಯುಳ್ಳ ಈ ಊರಿನ ಸುತ್ತಲಿನ ತೋಟಗಳಲ್ಲಿ ಬೆಳೆಯುವ ವೀಳ್ಯದೆಲೆ ಬಹು ಹೆಸರುವಾಸಿ.

ಈ ಊರಿನಲ್ಲಿರುವ ಮೂರು ಅಪರೂಪದ ವೃಕ್ಷಗಳು ಪರಿಸರ ಪ್ರೇಮಿಗಳನ್ನು, ಪ್ರವಾಸಿಗರನ್ನು ಆಕರ್ಷಿಸುವುದರ ಜೊತೆಗೆ ಸೊಬಗನ್ನೂ ಹೆಚ್ಚಿಸಿವೆ.

ಸವಣೂರಿನ ಹೊರ ವಲಯದಲ್ಲಿರುವ ಕಲ್ಮಠದ ಆವರಣದಲ್ಲಿ ಗಜಗಾತ್ರದಿಂದ ಬೆಳೆದಿರುವ ಈ ವೃಕ್ಷಗಳು, ಗತ ಇತಿಹಾಸದ ಕೊಂಡಿಯಾಗಿ ಪ್ರಕೃತಿಯ ಭವ್ಯ ಪರಂಪರೆಯ ಸಾಕ್ಷಿಯಾಗಿ ನಿಂತಿವೆ. ಮೊದಲ ನೋಟಕ್ಕೆ ಅಚ್ಚರಿ ಹುಟ್ಟಿಸುವ ಈ ದೈತ್ಯಾಕಾರದ ಮರಗಳು ಭೂತಾಯಿಯ ಮಡಿಲಲ್ಲಿ ಶತಮಾನಗಳನ್ನೇ ಕಂಡಿವೆ. ಕಣ್ಣಳತೆಗೆ ನಿಲುಕದ ಈ ವಿಶಾಲ ವೃಕ್ಷಗಳ ಬೃಹತ್ ಗಾತ್ರದ ಬೊಡ್ಡೆಯ ಸುತ್ತಳತೆಯನ್ನು ಕಂಡೇ ವೀಕ್ಷಕರು ವಿಸ್ಮಿತರಾಗುತ್ತಾರೆ.

ಸ್ಥಳೀಯವಾಗಿ 'ದೊಡ್ಡ ಹುಣಸೆ' ಮತ್ತು 'ಗೊಡ್ಡು ಹುಣಸೆ' ಎಂದು ಕರೆಯಲ್ಪಡುವ ಈ ಬೃಹತ್ ವೃಕ್ಷಗಳಿಗೆ ಹುಣಸೆ ಗಿಡದ ಯಾವುದೇ ಗುಣಲಕ್ಷಣಗಳೂ ಇಲ್ಲ. ಈ ದೈತ್ಯ ವೃಕ್ಷಗಳ ನೆಲಮಟ್ಟದ ಬೊಡ್ಡೆಯ ಪರಿಧಿ ೧೨ ಮೀಟರುಗಳಷ್ಟಿದೆ. ಹತ್ತು ಜನ ಅಪ್ಪುಗೆ ಹಾಕಿ, ಕೈಚಾಚಿ ನಿಂತಾಗ ಮಾತ್ರ ಗಿಡವನ್ನು ಸುತ್ತುವರಿಯಲು ಸಾಧ್ಯವಾಗಬಹುದೇನೋ. ಈ ಮರಗಳು ಉಬ್ಬಿದ ಬಾಟಲಿಯಂತೆ ಗೋಚರಿಸುವುವಲ್ಲದೆ, ಇವುಗಳ ಕಾಂಡವು ಮೋಂಬತ್ತಿಯ ಆಕಾರದಲ್ಲಿದ್ದು ಕ್ರಮೇಣ ಅವುಗಳ ತುದಿ ಮೊನಚಾಗುವದು. ಈ ಮೂರು ವೃಕ್ಷಗಳನ್ನು ಅಳತೆ ಮಾಡಲಾಗಿದ್ದು, ಮೊದಲ ವೃಕ್ಷದ ಎದೆಮಟ್ಟದ ಬೊಡ್ಡೆಯ ಸುತ್ತಳತೆ ೧೪.೭೦ ಮೀಟರ್ ಮತ್ತು ಎತ್ತರ ೧೬.೫೦



ಇದರ ವೃಕ್ಷದಡಿ ಮಾನವನೆಷ್ಟು ಕುಬ್ಜ!

ಮೀಟರ್. ಆದರ ಪಕ್ಕದಲ್ಲಿರುವ ಎರಡನೆ ಮರದ ಸುತ್ತಳತೆ ೧೧.೯೭ ಮೀಟರ್ ಹಾಗೂ ಎತ್ತರ ೧೫.೪೦ ಮೀಟರ್. ಮೂರನೆಯ ವೃಕ್ಷದ ಸುತ್ತಳತೆ ೧೧.೬೩ ಮೀಟರ್ ಮತ್ತು ಎತ್ತರ ೧೬.೫೦ ಮೀಟರ್. ಮರಗಳ ಮೈ ಪಟ್ಟೆಯು ಈ ಭಾರೀ ಗಾತ್ರ ವೀಕ್ಷಕರಲ್ಲಿ ಕೌತುಕ ಹುಟ್ಟಿಸದಿರದು.

ಈ ವೃಕ್ಷಗಳು "ಬಾಂಬ್‌ಕೇಶಿಯಾ" ಎಂಬ ವೃಕ್ಷ ಕುಟುಂಬ ವರ್ಗಕ್ಕೆ ಸೇರಿದವುಗಳಾಗಿದ್ದು, ಮೂಲತಃ ಆಫ್ರಿಕಾ ಖಂಡದಿಂದ ಬಂದಂಥವು. "ಬಾವೊಬಾಬ ಟ್ರೀ" ಎಂದು ಕರೆಯಲಾಗುವ ಈ ವೃಕ್ಷಗಳಿಗೆ "ಅಡೆನ್‌ಸೊನಿಯಾ ಡಿಜಿಟಾಟಾ" ಎಂಬುದು ಸಸ್ಯಶಾಸ್ತ್ರೀಯ ಹೆಸರು.

ಬಲಿಷ್ಠ ಹಾಗೂ ನುಣುಪಾದ ತೊಗಟೆ ಹೊಂದಿರುವ ಈ ವೃಕ್ಷಗಳಿಗೆ ದೊಡ್ಡ ಗಾತ್ರದ ಎಲೆಗಳಿವೆ. ಕಾಂಡದ ಸುತ್ತಲೂ ಟಿಸಿಲೊಡೆದ

ರೆಂಬೆಗಳ ಹಸಿರು ಹಾಸಿಗೆಯ ಛಾವಣಿಯಿಂದಾಗಿ ಈ ವೃಕ್ಷ ಸಮೂಹ ವನ್ಯಧಾಮದಂತೆ ಕಾಣುವದು. ಸಾಮಾನ್ಯವಾಗಿ ನವೆಂಬರ್-ಡಿಸೆಂಬರ್ ತಿಂಗಳುಗಳಲ್ಲಿ ಈ ಮರಗಳು ಹೂವು ಮುಡಿಯುತ್ತವೆ. ಈ ಸಂದರ್ಭದಲ್ಲಿ ನೂರೊಂದು ಬಗೆಯ ಪಕ್ಷಿಗಳಿಗೆ ಈ ಮರಗಳು ಆಶ್ರಯ ನೀಡುತ್ತವೆ. ವರ್ಷದುದ್ದಕ್ಕೂ ಬಾವಲಿಗಳು ಈ ವೃಕ್ಷಗಳನ್ನು ತಂಗುದಾಣವಾಗಿ ಮಾಡಿಕೊಂಡಿರುವದೊಂದು ವಿಶೇಷ.

ಸೋರೆಕಾಯಿ ಗಾತ್ರದ ಉದ್ದನೆಯ ಕಂದು ಬಣ್ಣದ ಫಲ ನೀಡುವ ಈ ಮರಗಳಿಗೆ, ಹಣ್ಣಿನ ತಿರುಳು ತಿನ್ನಲು ಮಂಗಗಳು ದಾಳಿಯಿಡುವುದು ಸಾಮಾನ್ಯ. ಹೀಗಾಗಿ ಈ ವೃಕ್ಷಗಳಿಗೆ ಬಳಕೆ



ಕಟ್ಟೆ ಕಟ್ಟಿ ರಕ್ಷಿಸಲ್ಪಟ್ಟ 'ದೊಡ್ಡ ಹುಣಸೆ ಮರ'

ಮಾತುಗಳಲ್ಲಿ 'ಮಂಗಗಳ ರೊಟ್ಟಿಯ ಮರ' (Monkey-bread Tree) ಎಂಬ ಅನ್ವರ್ಥಕ ನಾಮವೂ ಇದೆ. ಈ ಮರಗಳ ಹಣ್ಣು ಹಾಗೂ ಹೂವುಗಳಲ್ಲಿ ಔಷಧೀಯ ಗುಣಧರ್ಮಗಳಿವೆಯೆಂದು ಹೇಳಲಾಗಿದೆ. ವೃಕ್ಷದ ಬುಡದಲ್ಲಿಟ್ಟ ಆಹಾರ ಪದಾರ್ಥಗಳನ್ನು ಬಹುಕಾಲ ಕೆಡದಂತೆ ಸಂರಕ್ಷಣೆ ಮಾಡುವ 'ರಕ್ಷಕ' ಶಕ್ತಿ ಈ ಮರಗಳಿಗೆ ಇದೆಯೆಂದು ಇಲ್ಲಿಯ ಜನ ಹೇಳುತ್ತಾರೆ.

ಭಾರತಕ್ಕೆ ಈ ವೃಕ್ಷಗಳನ್ನು ಮುಸ್ಲಿಂ ವ್ಯಾಪಾರಸ್ಥರು ಪರಿಚಯಿಸಿರಬಹುದೆಂದು ಅಭಿಪ್ರಾಯ ಪಡಲಾಗಿದೆ. ಈ ಹಿಂದೆ ಈ ವೃಕ್ಷಗಳು ನಮ್ಮ ದೇಶದಲ್ಲಿ ಸಾಕಷ್ಟಿದ್ದವಂತೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ವೃಕ್ಷ ಸಂಕುಲ ನಾಶವಾಗುತ್ತಿದ್ದು, ನಮ್ಮ ರಾಜ್ಯದಲ್ಲಿ ಸವಣೂರಿನ ಈ ಮೂರೂ ಮರಗಳು ಅಪರೂಪದ ವೃಕ್ಷಗಳೆನಿಸಿವೆ. ಈ ಮರಗಳ ನಿಖರವಾದ ವಯಸ್ಸಿನ ದಾಖಲೆಗಳು ಲಭ್ಯವಾಗಿಲ್ಲವಾದರೂ, ಇವುಗಳ ಗಾತ್ರ, ವಿಶಾಲ ಬೆಳವಣಿಗೆಯನ್ನು ಪರಿಶೀಲಿಸಿದಾಗ ಕನಿಷ್ಠ ಮೂರ್ನಾಲ್ಕು ಶತಮಾನಗಳಷ್ಟು ಪುರಾತನವಾದವುಗಳು ಎಂದೆನಿಸುತ್ತದೆ. ಹಳೆಯ ತಲೆ ಮಾರಿನ ಹಿರಿಯವನ್ನು ವಿಚಾರಿಸಿದಾಗ, ಈ ಮರಗಳು ತಮ್ಮ ಮುತ್ತಜ್ಜನ ಕಾಲದಿಂದಲೂ ಇರುವುದಾಗಿ ಹೇಳಿದರು. ಪೌರಾಣಿಕವಾಗಿ ಈ ವೃಕ್ಷವನ್ನು ಶ್ರೀಕೃಷ್ಣ ಪರಮಾತ್ಮನು ಭಾರತಕ್ಕೆ ತಂದನೆಂಬ ಪ್ರತೀತಿಯೂ ಇದೆ. ಹೀಗಾಗಿ ಊರ ಜನರು ಈ ಮರಗಳನ್ನು ಪೂಜ್ಯ ಹಾಗೂ ಶ್ರದ್ಧಾ ಮನೋಭಾವದಿಂದ ಆರಾಧಿಸುತ್ತಾರೆ. ಗರ್ಭಿಣಿಯರು ಹಾಗೂ ತಾಯಂದಿರು ಈ ವೃಕ್ಷಗಳಿಗೆ ನಡೆದುಕೊಳ್ಳುತ್ತಾರೆ. ವೃದ್ಧರು ಹಾಗೂ ಯುವಕರಿಗೆ ಈ ಮರಗಳ ನೆರಳು ವಿಶ್ರಾಮ, ಲೋಕಾಭಿರಾಮದ ತಾಣ. ಇನ್ನು ಕೆಲವರಿಗೆ ಪಗಡೆ-ಹುಲಿಮನೆ ಆಟವಾಡಲು ಇದೊಳ್ಳೆಯ ಪ್ರಶಸ್ತ ಜಾಗ. ಸವಣೂರಿನ ಜನ ಈ ಅಪರೂಪದ ಮರಗಳನ್ನು ಅಕ್ಕರೆಯಿಂದ ಕಾಣುತ್ತಾರೆ.

ಅಚ್ಚರಿ ಹುಟ್ಟಿಸುವ ಈ ವೃಕ್ಷಗಳ ರಕ್ಷಣೆಗೆ ರಾಜ್ಯ ಅರಣ್ಯ ಇಲಾಖೆ ಸೂಕ್ತ ಕ್ರಮಕೈಕೊಂಡಿದೆ. ಈ ವೃಕ್ಷಗಳ ಸುತ್ತಲೂ ಎತ್ತರವಾದ ಕಟ್ಟೆಗಳನ್ನು ಕಟ್ಟಿ ಕಾಂಡ-ಬೇರುಗಳಿಗೆ ಧಕ್ಕೆಯೊದಗದಂತೆ ನೋಡಿಕೊಂಡಿದೆಯಲ್ಲದೆ ಸಾರ್ವಜನಿಕರಿಗೂ ವೃಕ್ಷ ಪ್ರೇಮಿಗಳಿಗೂ ಮರಗಳ ಮಹತ್ವವನ್ನು ಬಿಂಬಿಸುವ ದಿಶೆಯಲ್ಲಿ ಫಲಕಗಳನ್ನೂ ನೆಟ್ಟಿದೆ.

ಮೊದಲ ನೋಟಕ್ಕೆ ಕುತೂಹಲ ಹಾಗೂ ಆಸಕ್ತಿ ಹುಟ್ಟಿಸುವ, ಪ್ರಕೃತಿ ಇತಿಹಾಸದ ಈ ಮಹಾವೃಕ್ಷಗಳು ಸೃಷ್ಟಿಯ ವೈಶಿಷ್ಟ್ಯ ರೂಪಗಳಾಗಿ ನಿಂತಿವೆ. ಈ ಬೃಹದಾಕಾರದ ಎದುರು ನಿಮ್ಮ ಎತ್ತರ ಎಷ್ಟೆಂದು ಅರಿಯಲು ನೀವೊಮ್ಮೆ ಸವಣೂರಿಗೆ ಭೇಟಿ ನೀಡಬೇಕು. ಹೌದು. ನಿಜಕ್ಕೂ ಅದೊಂದು ಅಪೂರ್ವ ಅನುಭವ.

ಪಾದರಸ !

"ಕಬ್ಬನ್ನು ಹಿಂಡಿದಾಗ ಬರುವುದೇ ಕಬ್ಬಿನ ರಸ," ಎಂದು ಮಂಕ.

"ನನಗೆ ಗೊತ್ತಿಲ್ಲವೇ.... ಹಾಗೇ ಲಿಂಬೆ ಹಣ್ಣು ಹಿಂಡಿದರೆ ಬರೋದೇ ಲಿಂಬೇ ರಸ," ಎಂದ ಮಡೆಯ.

"ಓಹೋಹೋ.... ಅದೇ ರೀತಿ ಪಾದಗಳನ್ನು ಹಿಂಡಿದರೆ ಬರೋದೇ ಪಾದರಸ !" ಎಂದೇ ಬಿಟ್ಟ ಮುಠ್ಠಾಳ, ಗುರುಗಳ ಪಾದ ಹಿಂಡ್ತಾ !

ಸಂಗ್ರಹ: ಹಾ. ಮ್ಯೆ. ಸೂರಿ

ತೋಳ-ಮಾನವರ ರೋಚಕ ಪ್ರಕರಣಗಳು!

● ಅರುಣ

ತೋಳ ಮಾನವರ ಕುರಿತು ಚರಿತ್ರೆಯಲ್ಲಿ ರೋಚಕವೂ ಭಯಾನಕವೂ ಆದ ಸಂಗತಿಗಳು ದಾಖಲಾಗಿವೆ. ಫ್ರಾನ್ಸ್‌ನಲ್ಲಿ ೧೫೨೦-೧೬೩೦ ರ ಅವಧಿಯಲ್ಲಿ ವರದಿಯಾದ ಇಂಥ ಪ್ರಕರಣಗಳ ಸಂಖ್ಯೆ ೩೦ ಸಾವಿರವನ್ನೂ ದಾಟಿತ್ತು.

೧೫೯೮ರ ವರ್ಷ. ಬೇಸಿಗೆಯ ಒಂದು ದಿನ. ಫ್ರಾನ್ಸಿನ ದಟ್ಟ ಕಾಡಿನಲ್ಲಿ ಹಳ್ಳಿಯ ಮಂದಿ ಹುಡುಗನೊಬ್ಬನ ಬೆತ್ತಲೆ ಶವವನ್ನು ಕಂಡರು. ಆ ಛಿದ್ರವಿಚ್ಛಿದ್ರ ದೇಹ ನೋಡಲು ಭಯಾನಕವಾಗಿತ್ತು. ಇಡೀ ಶರೀರವನ್ನು ಯಾವುದೋ ಕ್ರೂರ ಪ್ರಾಣಿ ಅಲ್ಲಲ್ಲಿ ಕಚ್ಚಿ ತಿಂದಿತ್ತು. ಹಳ್ಳಿಯ ಮಂದಿ ಶವದ ಬಳಿ ಬಂದಾಗ ಎರಡು ತೋಳಗಳು ಮರಗಳ ಮಧ್ಯದಿಂದ ಪಲಾಯನ ಮಾಡುತ್ತಿದ್ದುದು ಗೋಚರಿಸಿತು. ತೋಳಗಳನ್ನು ಬೆನ್ನಟ್ಟಿ ತುಸು ದೂರ ಹೋಗುವಷ್ಟರಲ್ಲಿ ಅವರಿಗೊಂದು ವಿಸ್ಮಯ ಕಾದಿತ್ತು. ತೋಳದ ಸ್ಥಾನದಲ್ಲಿ ಹರಕು ಬಟ್ಟೆ ಧರಿಸಿದ, ಕಮಟು ವಾಸನೆ ಬೀರುತ್ತಿದ್ದ ಗಡ್ಡಧಾರಿಯೊಬ್ಬ ನಿಂತಿದ್ದ! ಅವನ ಕೈಗಳು ಮಾನವ ರಕ್ತದಲ್ಲಿ ಅದ್ದಿ ತೆಗೆದಂತಿದ್ದುವು! ಉಗುರುಗಳ ಸಂದಿನಲ್ಲಿ ನರಮಾಂಸದ ತುಣುಕುಗಳು ಅಂಟಿದ್ದವು!

ಆತ ಓರ್ವ ನಿರ್ಗತಿಕ ಭಿಕ್ಷುಕ. ಹೆಸರು ಜಾಕ್ವಿಸ್ ರೌಲೆಟ್. ಹುಡುಗನನ್ನು ಕೊಂದು ತಿಂದ ಅಪರಾಧಕ್ಕಾಗಿ ಪೊಲೀಸರು ರೌಲೆಟ್‌ನನ್ನು ಬಂಧಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದರು. ಅದೇ ವರ್ಷ ಅಗಸ್ಟಿನಲ್ಲಿ ರೌಲೆಟ್‌ನ ವಿಚಾರಣೆ ಫ್ರಾನ್ಸಿನ ಅಂಗರ್ ಪಟ್ಟಣದಲ್ಲಿ ಆರಂಭವಾಯಿತು.

ವಿಚಾರಣೆಯ ಸಂದರ್ಭದಲ್ಲಿ ರೌಲೆಟ್ ತಾನೊಬ್ಬ 'ತೋಳ-ಮನುಷ್ಯನಾಗಿದ್ದೆ' ಎಂದ. ಅವನ ಬಾಯಿಯಲ್ಲಿ ತೋಳಗಳಂತೆ ಕೋರೆ ಹಲ್ಲುಗಳು, ಮುಂಗೈ ಹಾಗೂ ಮುಂಗಾಲುಗಳಲ್ಲಿ ತೋಳಗಳಂತೆ ಪಂಜಾ ಇದ್ದವು. ತೀರ್ಪು ನೀಡುವ ಮೊದಲು ಆತ 'ವರ್‌ವೂಲ್ಫ್' (ತೋಳ ಮನುಷ್ಯ) ಆಗಿದ್ದನೇ ಇಲ್ಲವೆ ಎಂಬುದನ್ನು ನಿರ್ಧರಿಸಬೇಕು ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟರು. 'ವರ್‌ವೂಲ್ಫ್' ಅಂದರೆ ಮನುಷ್ಯ ತೋಳವಾಗಿ ರೂಪ ಪರಿವರ್ತನೆ ಹೊಂದುವದು. ಅಥವಾ ಅಂಥ ಸಾಮರ್ಥ್ಯ ಪಡೆಯುವುದು ಎಂದು ಅರ್ಥ. ಹಳೆಯ ಇಂಗ್ಲಿಷ್‌ನಲ್ಲಿ 'ವರ್' ಪದಕ್ಕೆ ಮನುಷ್ಯ ಹಾಗೂ ತೋಳ ಎಂಬ ಎರಡೂ ಅರ್ಥಗಳಿವೆ. ಜಾಕ್ವಿಸ್ ರೌಲೆಟ್‌ನ ಈ ಅಪರಾಧಕ್ಕೆ ಮರಣದಂಡನೆಗಿಂತ ಕಡಿಮೆ ಶಿಕ್ಷೆಯೇ ಇರಲಿಲ್ಲ. ಆದರೆ ಆತ ಮನೋವ್ಯಾಧಿಯಿಂದ ನರಳುತ್ತಿದ್ದಾನೆಂದು ಪರಿಗಣಿಸಿ ನ್ಯಾಯಾಲಯ ಅವನ ಅಪರಾಧವನ್ನು ಮನ್ನಿಸಿ ಚಿಕಿತ್ಸೆಗಾಗಿ ಹುಚ್ಚಾಸ್ಪತ್ರೆಗೆ ಕಳುಹಿಸಿತು.

ಹಾಲಿವುಡ್‌ನ ಇಂಗ್ಲಿಷ್ ಚಿತ್ರಗಳಲ್ಲಿ ನೀವು ವರ್‌ವೂಲ್ಫ್ ಅಥವಾ ತೋಳ-ಮನುಷ್ಯರನ್ನು

ಕಂಡಿರಬಹುದು. ಮುಖ ಮಾತ್ರ ತೋಳಗಳಂತೆ ಇದ್ದು, ಉಳಿದ ಶರೀರದ ಭಾಗ ಮನುಷ್ಯರಂತೆಯೇ ಇರುತ್ತದೆ. ಆದರೆ ಮೂಲತಃ ವರ್‌ವೂಲ್ಫ್‌ಗಳು ಹುಟ್ಟಿನಿಂದ ಮಾನವರಾಗಿದ್ದು, ತೋಳವಾಗಿ ಸಂಪೂರ್ಣ ರೂಪ ಪರಿವರ್ತನೆ ಹೊಂದಿರುತ್ತಾರೆ.

ತೋಳ ಮಾನವರಿಗೂ ರಕ್ತಪಿಶಾಚಿಗಳಿಗೂ (ವಾಂಪೈರ್) ಕೆಲವೊಂದು ನಿಕಟ ಹೋಲಿಕೆಗಳಿವೆ. ತೋಳ-ಮನುಷ್ಯ ಸತ್ತ ಬಳಿಕ ಕೆಲವೊಂದು ಅವಶ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದಿದ್ದರೆ ಅದು ರಕ್ತಪಿಶಾಚಿಯಾಗಿ ಪರಿವರ್ತಿತವಾಗುತ್ತದೆ ಎಂಬ ನಂಬಿಕೆ ಇದೆ. ಅಲ್ಲದೆ ತೋಳಗಳು ಕಚ್ಚಿ ಕೊಂದು ಹಾಕಿದ ಕುರಿಯ ಶವವನ್ನು ಬೇಯಿಸಿ ತಿಂದವರು, ಸತ್ತ ತೋಳದ ಮಿದುಳನ್ನು ತಿಂದವರು ಅಥವಾ ಕೊಳದಿಂದ ನೀರು ಕುಡಿಯಲು ಹೋದ ತೋಳದ ಹೆಜ್ಜೆ ಗುರುತಿನ ಮೇಲೆ ಕಾಲಿಟ್ಟು ನಡೆದವರು, ತೋಳಗಳ ತಂಡ ನೀರು ಕುಡಿದು ಹೋದ ಕೊಳದಿಂದಲೇ ನೀರು ಕುಡಿದವರು- ಅಂಥವರೆಲ್ಲ ತೋಳವಾಗಿ ರೂಪಾಂತರ ಹೊಂದುತ್ತಾರೆ ಎಂಬ ವಿಚಿತ್ರ ಕತೆಗಳೂ ಇವೆ. ಸಣ್ಣ ಗಾತ್ರದ ಚೂಪಾದ ಕಿವಿ ಹಾಲೆಗಳುಳ್ಳವರು, ಚೂಪಾದ ಹಲ್ಲುಳ್ಳವರು, ಬಲಿಷ್ಠವಾದ ವಕ್ರವಾದ ಕೈ ಉಗುರು ಉಳ್ಳವರು, ಮೂಗಿನತನಕ ಚಾಚಿದ ಪೊದೆ ಹುಬ್ಬಿರುವವರು ಕೂಡ 'ತೋಳ' ವಾಗುತ್ತಾರಂತೆ.

ಐರೋಪ್ಯ ರಾಷ್ಟ್ರಗಳಲ್ಲಿ ಮುಖ್ಯವಾಗಿ ಫ್ರಾನ್ಸ್, ಜರ್ಮನಿ, ಸ್ಕಾಂಡಿನೇವಿಯಾಗಳಲ್ಲಿ ತೋಳ-ಮನುಷ್ಯರ ಕುರಿತ ದಂತಕತೆಗಳು, ಐತಿಹ್ಯಗಳು, ಪ್ರತ್ಯಕ್ಷದರ್ಶಿ ವೃತ್ತಾಂತಗಳು ವಿಪುಲವಾಗಿ ಕೇಳಿ ಬರುತ್ತವೆ. ತೋಳ ಮನುಷ್ಯನಾಗ ಬಯಸುವವ ವಿಸ್ತೃತ ಕ್ರಿಯಾವಿಧಿಗಳನ್ನು ಆಚರಿಸಬೇಕಾಗುತ್ತದೆ. ತೋಳ ಮನುಷ್ಯರಾಗಿ ರೂಪ ಪರಿವರ್ತನೆ ಹೊಂದಲು ಹುಣ್ಣಿಮೆ ಮಧ್ಯರಾತ್ರಿಯ ನಂತರದ ವೇಳೆ ಪ್ರಶಸ್ತವಂತೆ. ರೂಪ ಪರಿವರ್ತನೇಚ್ಛು ಆ ವೇಳೆಗೆ ಸ್ಮಶಾನಕ್ಕೆ ತೆರಳಿ ಆಗತಾನೇ ಸುಟ್ಟು ಬೂದಿಯಾದ ಶವದ ಚಿತೆಯ ಪಕ್ಕದಲ್ಲಿ ನೆಲದ ಮೇಲೆ ವೃತ್ತವೊಂದನ್ನು ಎಳೆಯಬೇಕು. ಆ ವೃತ್ತದ ಮಧ್ಯೆ ಬೆಂಕಿಯನ್ನು ಪ್ರತಿಷ್ಠಾಪಿಸ ಬೇಕು. ಬೆಂಕಿಯ ಮೇಲೆ ಗಿಡಮೂಲಿಕೆಗಳು ಹಾಗೂ ಮಾದಕದ್ರವ್ಯ ತುಂಬಿದ ಕಡಾಯಿಯನ್ನು ಕುದಿಯಲು ಇರಿಸಬೇಕು. ಅನಂತರ ಆಗತಾನೇ ಕೊಂದ ಬೆಕ್ಕಿನ ನೆಣದಿಂದ ತಯಾರಿಸಿದ ಮುಲಾಮನ್ನು ಮೈಮೇಲೆಲ್ಲ ಸವರಿಕೊಳ್ಳಬೇಕು. ಸೊಂಟದ ಸುತ್ತ ತೋಳದ ಚರ್ಮದಿಂದ ತಯಾರಿಸಿದ ಬೆಲ್ಟ್ ಬಿಗಿದುಕೊಳ್ಳಬೇಕು. ಕಡಾಯಿಯಲ್ಲಿ ಮಾಂತ್ರಿಕ ಗಿಡಮೂಲಿಕೆಗಳು ಬೇಯುತ್ತಿರುವಾಗ ಆತ ವೃತ್ತದೊಳಗೆ ಮೊಣಕಾಲೂರಿ ಕುಳಿತು, ದುಷ್ಟಶಕ್ತಿಗಳನ್ನು ಉದ್ದೇಶಿಸಿ ಮುಖ್ಯವಾಗಿ ತೋಳಗಳ ಮೃತಾತ್ಮವನ್ನು ಉದ್ದೇಶಿಸಿ ಹೀಗೆ ಪ್ರಾರ್ಥಿಸಬೇಕು:

"ನನ್ನನ್ನು ಬಲಿಷ್ಠವಾದ ಕಪ್ಪು ತೋಳವಾಗಿ
ಪರಿವರ್ತಿಸು,
ಎಲ್ಕ್ ಮೃಗದ ವೇಗ, ಕರಡಿಯ ಪಂಜಾಗಳು,
ಹಾವಿನ ವಿಷ, ನರಿಯ ಕುತಂತ್ರ,
ಎತ್ತಿನ ಶಕ್ತಿ, ಹುಲಿಯ ದವಡೆಗಳು,
ಶಾರ್ಕ್‌ನ ಹಲ್ಲುಗಳು, ಕತ್ತಲೆಯಲ್ಲಿ
ನೋಡಲು ಬೆಕ್ಕಿನ ಕಣ್ಣುಗಳು...
ಇವನ್ನೆಲ್ಲ ನನಗೆ ಅನುಗ್ರಹಿಸು.
ತೋಳದ ಆತ್ಮವೇ ನನ್ನನ್ನು ನರಭಕ್ಷಕನಾಗಿ,
ಸ್ತ್ರೀಭಕ್ಷಕನಾಗಿ, ಮಕ್ಕಳನ್ನು ಕೊಂದು
ತಿನ್ನುವವನನ್ನಾಗಿ ಪರಿವರ್ತಿಸು...."

ಈ ಕ್ರಿಯಾವಿಧಿಗಳು ಮುಗಿದ ಮೇಲೆ ತೋಳ ಮನುಷ್ಯನಾಗಿ ಪರಿವರ್ತಿತವಾಗಲು ಹೆಚ್ಚು ಕಾಲ ತಗಲುವುದಿಲ್ಲ. ಹೀಗೆ ಪರಿವರ್ತನೆಗೊಂಡ ವ್ಯಕ್ತಿಯ ಶರೀರ ಕತ್ತಲಲ್ಲಿ ಹೊಳೆಯುತ್ತದೆ. ಉದ್ದ ತೋಳುಗಳಿರುತ್ತವೆ. ಪಾದಗಳು ಹಾಗೂ ಅಂಗೈ ಉಗುರುಗಳು ಚೂಪಾಗಿರುತ್ತವೆ. ಅರ್ಧ ಪ್ರಾಣಿ, ಅರ್ಧ ಮನುಷ್ಯನ ರೂಪ ಪಡೆದ ವಿಲಕ್ಷಣ ಜೀವಿ ರೂಪುಗೊಳ್ಳುತ್ತದೆ.

ಹೀಗೆ ರೂಪ ಪರಿವರ್ತನೆ ಹೊಂದುವ ಶಕ್ತಿ ಪಡೆದ ಗಂಡು ಅಥವಾ ಹೆಣ್ಣು ಮುಚ್ಚಂಜೆ

ಯಿಂದ ಮರುದಿನ ಮುಂಜಾನೆವರೆಗೂ ಆ ಸ್ಥಿತಿಯಲ್ಲಿಯೇ ಉಳಿಯುತ್ತಾರೆ. ಬೆಳಗಾದ ನಂತರವೇ ಮತ್ತೆ ಅವರಿಗೆ ಪೂರ್ಣ ಮನುಷ್ಯ ರೂಪ. ಆದರೆ ಮನುಷ್ಯ ರೂಪ ಪಡೆಯಲು ಅವರು ಕೆಸರಲ್ಲಿ ಉರುಳಾಡಬೇಕು, ಮುಂಜಾನೆಯ ಇಬ್ಬನಿಯಲ್ಲಿ ತೋಯಿಸಿಕೊಳ್ಳಬೇಕು ಎಂದು ಕೆಲವು ಜಾನಪದ ಕತೆಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ತೋಳ ಮನುಷ್ಯರನ್ನು ಸೆರೆಹಿಡಿಯಬಹುದು. ಸಾಮಾನ್ಯ ತೋಳಗಳಂತೆ ಗುಂಡಿಟ್ಟು ಕೊಲ್ಲಬಹುದು. (ಬೆಳ್ಳಿಯ ಗುಂಡು ಹಾರಿಸಿ ಅದನ್ನು ಕೊಲ್ಲುವುದೇ ಹೆಚ್ಚು ಪರಿಣಾಮಕಾರಿ ವಿಧಾನವಂತೆ.) ಸತ್ತ ತೋಳ ಮನುಷ್ಯನ ಶವವನ್ನು ಹೂಳುವ ಬದಲು ಸುಟ್ಟುಹಾಕಬೇಕು.

ಮಧ್ಯಯುಗದಲ್ಲಿ ಅಮೆರಿಕ ಹಾಗೂ ಯುರೋಪ್ ರಾಷ್ಟ್ರಗಳಲ್ಲಿ ತೋಳಗಳ ಹಾವಳಿ ವಿಪರೀತವಾಗಿತ್ತು. ಕೆಂಡವನ್ನು ಉಗುಳುವಂತಿದ್ದ ಅದರ ಕೆಂಗಣ್ಣುಗಳು, ಚೂಪು ಹಲ್ಲು, ಆಕಾಶದತ್ತ ಮುಖ ಚಾಚಿ ಕೆಟ್ಟ ದನಿಯಲ್ಲಿ ಊಳಿಡುವಿಕೆ (ತೋಳದ ಕೂಗು ಕೆಡುಕಿನ ಸಂಕೇತವೆಂಬ ಭಾವನೆ ಇದೆ) ಇವೇ ಮುಂತಾದ ಕಾರಣಗಳಿಂದ ತೋಳ ದುಷ್ಟಶಕ್ತಿಯ ಸಂಕೇತವೆಂಬ ನಂಬಿಕೆ ರೂಢಿಗೆ ಬಂದಿತು. ತೋಳಗಳ ಸಂಖ್ಯೆ ಜಾಸ್ತಿ ಇದ್ದೆಡೆಯಲ್ಲೆಲ್ಲ ತೋಳ-ಮನುಷ್ಯರ ಸಂಖ್ಯೆಯೂ ಹೆಚ್ಚುತ್ತಿದೆ ಎಂಬ ವದಂತಿಗಳೂ ಕೇಳಿಬರತೊಡಗಿದವು.

ಚಾರಿತ್ರಿಕ ಹಿನ್ನೆಲೆ

ರಕ್ತಪಿಶಾಚಿಗಳ ಕುರಿತು ಲಭಿಸುವ ರೀತಿಯಲ್ಲಿಯೇ ತೋಳ ಮನುಷ್ಯರ ಬಗ್ಗೆಯೂ ವಿಪುಲ ಚಾರಿತ್ರಿಕ ಮಾಹಿತಿಗಳು ದೊರಕುತ್ತವೆ. ಇತಿಹಾಸದ ಪಿತನೆನಿಸಿದ್ದ ಹೆರಾಡೊಟಸ್ ಕ್ರಿಸ್ತಪೂರ್ವ ಐದನೆ ಶತಮಾನದಲ್ಲಿ ಹೀಗೆ ಬರೆದಿದ್ದ: "ಪ್ರತಿಯೊಬ್ಬನೂ ನ್ಯೂರಿಯನ್ (Neurian) ವರ್ಷದಲ್ಲಿ ಒಂದು ಬಾರಿ ತೋಳವಾಗಿ ರೂಪ ಪರಿವರ್ತನೆ ಹೊಂದುತ್ತಿದ್ದ. ಅದೇ ಸ್ಥಿತಿಯಲ್ಲಿ ಆತ ಹಲವು ದಿನಗಳವರೆಗೆ ಮುಂದುವರೆಯುತ್ತಿದ್ದ. ಅನಂತರ ಆತ



> **ದೇ**ವರೆ, ನಮಗೆ ನಿರಂತರ ಭ್ರಾತೃತ್ವವನ್ನು ಕರುಣಿಸು. ಅದು ಶಬ್ದಗಳಲ್ಲಿ ಬೇಡ. ನಮ್ಮ ಪ್ರತಿಯೊಂದು ಚಟುವಟಿಕೆಯಲ್ಲಿ ಬೇಕು.
>
> — ಸ್ಟೀಫನ್ ಬೆನೆಟ್

ನಿಗೆ ಮನುಷ್ಯನ ಸ್ವರೂಪವೇ ಪ್ರಾಪ್ತವಾಗುತ್ತಿತ್ತು. ಕ್ರಿಸ್ತಶಕ ಏಳನೆ ಶತಮಾನದಲ್ಲಿ ರೋಮನ್ ವೈದ್ಯನೊಬ್ಬ 'ಅಸಾಂತ್ರೊಫಿಯಾ ಎಂಬುದು ಮಾನಸಿಕ ಖಿನ್ನತೆಯ ಒಂದು ಕಾಯಿಲೆ. ದೇಹದ ರಕ್ತನಾಳಗಳನ್ನು ಬಿಡಿಸಿ, ರಕ್ತ ಹೊರತೆಗೆಯುವ ಮೂಲಕ ಅದನ್ನು ವಾಸಿ ಮಾಡಬಹುದು' ಎಂದು ಅಭಿಪ್ರಾಯಪಟ್ಟಿದ್ದ."

ಮನುಷ್ಯ ತೋಳವಾಗಿ ಪರಿವರ್ತನೆ ಹೊಂದುವ ವಿದ್ಯಮಾನ ಮೂಢನಂಬಿಕೆಯಲ್ಲ, ಕಾಲ್ಪನಿಕ ಕಟ್ಟುಕತೆಯಲ್ಲ ಎಂದು ದೃಢವಾಗಿ ಪ್ರತಿಪಾದಿಸುವವರಿದ್ದಾರೆ. ಉದಾಹರಣೆಯಾಗಿ ಸಬೈನ್ ಬಾರಿಂಗ್ ಗೌಲ್ಡ್ ೧೮೬೫ರಲ್ಲಿ ಪ್ರಕಟವಾದ ತನ್ನ 'ದಿ ಬುಕ್ ಆಫ್ ವರ್‌ವೂಲ್ಸ್ ಬೀಯಿಂಗ್ ಅನ್ ಅಕೌಂಟ್ ಆಫ್ ಎ ಟೆರ್ರಿಬಲ್ ಸುಪರ್‌ಸ್ಟೀಶನ್' ಎಂಬ ಕೃತಿಯಲ್ಲಿ "ಜಗತ್ತಿನ ಅರ್ಧಭಾಗದಷ್ಟು ಮಂದಿ ತೋಳ-ಮನುಷ್ಯರಲ್ಲಿ ವಿಶ್ವಾಸವಿರಿಸಿದ್ದರು" ಎಂದು ಉಲ್ಲೇಖಿಸಿದ್ದಾನೆ.

ತೋಳ ಮನುಷ್ಯರ ಕುರಿತು ಆಧುನಿಕ ಚರಿತ್ರೆಯಲ್ಲಿ ದಾಖಲಾಗಿರುವ ಕೆಲವು ವೃತ್ತಾಂತಗಳು ಒಂದಕ್ಕಿಂತ ಒಂದು ರೋಚಕವೂ ಭಯಾನಕವೂ ಆಗಿವೆ. ಪರಂಪರಾಗತವಾಗಿ ರಕ್ತಪಿಶಾಚಿಗಳ ಮೂಲಸ್ಥಾನ ಪೂರ್ವ ಯುರೋಪಿನ ದಟ್ಟ ಕಾಡುಗಳಾಗಿದ್ದರೆ, ತೋಳ-ಮನುಷ್ಯ, ತೋಳ-ವನಿತೆಯರ ಮೂಲಸ್ಥಾನ ಫ್ರಾನ್ಸಿನ ದಟ್ಟ ಅರಣ್ಯಗಳಾಗಿದ್ದವು. ತೋಳ-ಮನುಷ್ಯರಿಗೆ ಫ್ರೆಂಚ್ ಭಾಷೆಯಲ್ಲಿ 'ಲೋಪ್ಸ್-ಗಾರೋಲ್ಸ್' ಅನ್ನುತ್ತಿದ್ದರು. ೧೬ನೇ ಶತಮಾನದಲ್ಲಿ ಫ್ರಾನ್ಸ್‌ನಲ್ಲಿ ತೋಳ-ಮನುಷ್ಯರ ಉಪಟಳ ಸಾಂಕ್ರಾಮಿಕ ಜಾಡ್ಯದಂತೆ ವ್ಯಾಪಿಸಿತ್ತು. ೧೫೨೦ರಿಂದ ೧೬೩೦ರವರೆಗಿನ ಅವಧಿಯಲ್ಲಿ ೩೦,೦೦೦ಕ್ಕೂ ಅಧಿಕ ತೋಳ ಮನುಷ್ಯರ ಪ್ರಕರಣಗಳು ವರದಿಯಾಗಿದ್ದವು.

ಗಿಲ್ಲೆಸ್ ಗಾರ್ನಿಯರ್ ಪ್ರಕರಣ

ತೋಳ ಮನುಷ್ಯನಿಗೆ ಸಂಬಂಧಿಸಿದ ಅತ್ಯಂತ ಭೀಭತ್ಸವೂ ಭಯಾನಕವೂ ಆಗಿರುವ ಪ್ರಕರಣ ೧೫೭೩ ಸಪ್ಟಂಬರ್ ೧೩ರಂದು ಸಂಭವಿಸಿದ ಗಿಲ್ಲೆಸ್ ಗಾರ್ನಿಯರ್‌ರದು. ಫ್ರಾನ್ಸಿನ ಹೂಲೆ ನಗರದಲ್ಲಿ ತೋಳವೊಂದು ಕೆಲವು ಸಣ್ಣ ಮಕ್ಕಳನ್ನು ಕೊಂದು ತಿಂದ ಘಟನೆಗಳು ಮೇಲಿಂದ ಮೇಲೆ ಸಂಭವಿಸತೊಡಗಿದವು. ಕ್ರೈಸ್ತ ಪಾದ್ರಿ ಗಿಲ್ಲೆಸ್ ಗಾರ್ನಿಯರ್‌ನೇ ಆ ತೋಳವಾಗಿರಬೇಕು, ಅವನೇ ಈ ಅಮಾನುಷ ಕೃತ್ಯಗಳನ್ನೆಸಗಿರಬೇಕು ಎಂದು ಊಹಿಸಿ ನಗರ ಆಡಳಿತದ ಅಧಿಕಾರಿಗಳು ಅವನನ್ನು ಬಂಧಿಸಲು ಆದೇಶ ನೀಡಿದರು. ಆದರೆ ಗಾರ್ನಿಯರ್‌ನ ಪತ್ತೆಯಾಗಲಿಲ್ಲ. ಮಕ್ಕಳ ಹತ್ಯೆ ಮುಂದುವರಿಯಿತು. ದೇಹದ ಹಲವು ಕಡೆ ತೋಳ ಕಚ್ಚಿದ ಗುರುತುಗಳಿದ್ದ ಪುಟ್ಟ ಹುಡುಗಿಯೊಬ್ಬಳ ಶವ ಚರ್ಚ್ ಪಕ್ಕದ ಮೈದಾನದಲ್ಲಿ ಕಂಡುಬಂದಿತು. ಈ ಘಟನೆ ನಡೆದ ಆರು ದಿನಗಳ ತರುವಾಯ ಹತ್ತು ವರ್ಷದ ಹುಡುಗನೊಬ್ಬ ಕಣ್ಮರೆಯಾದ. ಕೊನೆಗೊಂದು ದಿನ ಸ್ಥಳೀಯ ಜನರು ರೊಚ್ಚಿಗೆದ್ದು ಸೈಂಟ್ ಬೊನೆಟ್ ಎಂದು ಹೆಸರಾಗಿದ್ದ ಪಾದ್ರಿಯ ನಿವಾಸಕ್ಕೆ ದಾಳಿಯಿಟ್ಟು ಅವನನ್ನೂ, ಅವನ ಹೆಂಡತಿಯನ್ನೂ ಬಂಧಿಸಿದರು. ವಿಚಾರಣೆ ಸಂದರ್ಭದಲ್ಲಿ ಗಾರ್ನಿಯರ್ ತಾನು ತೋಳವಾಗಿ ಎಳೆಯ ಮಕ್ಕಳನ್ನು ಕೊಂದು ತಿಂದುದು ಹೌದೆಂದು ಒಪ್ಪಿಕೊಂಡ. "ಎಳೆಯ ಮಕ್ಕಳ ಮಾಂಸ ಬಹಳ ರುಚಿಯಾಗಿರುತ್ತದೆ." ಎಂದೂ ಹೇಳಿದ.

"ದ್ರಾಕ್ಷಿ ತೋಟದಲ್ಲಿ ಹಣ್ಣು ಕೀಳುತ್ತಿದ್ದ ಹತ್ತರ ಹರೆಯದ ಬಾಲಕಿಯ ಮೇಲೆ ನೆಗೆದು,

ಹಲ್ಲಿನಿಂದ ಕಚ್ಚಿ ಪಂಜಾದಿಂದ ಪರಚಿ ಕೊಂದು ಹಾಕಿದೆ. ಅನಂತರ ಅವಳ ಎದೆ, ಹೊಟ್ಟೆಯ ಮಾಂಸವನ್ನು ಕಿತ್ತು ತಿಂದೆ. ಹುಡುಗಿಯ ದೇಹದ ಸ್ವಲ್ಪ ಮಾಂಸವನ್ನು ತನ್ನ ಪತ್ನಿಯೂ ತಿನ್ನಲೆಂದು ಮನೆಗೆ ಒಯ್ದು ಆಕೆಗೂ ತಿನ್ನಲು ನೀಡಿದೆ. ಹುಡುಗಿಯರ ಕೋಮಲ ಶರೀರದ ಮಾಂಸ ಬಲು ರುಚಿಯಾಗಿರುತ್ತದೆ," ಎಂದ. ಈ ಭೀಭತ್ಸ ನರಹತ್ಯೆಗಳನ್ನು ಎಸಗಿದ ತೋಳ-ಮನುಷ್ಯ ಕ್ರೈಸ್ತ ಪಾದ್ರಿ ಗಾರ್ನಿಯರ್‌ನನ್ನು ೧೫೭೪ರ ಜನವರಿ ೧೮ರಂದು ಜೀವಂತ ಸುಟ್ಟು ಕೊಲ್ಲಲಾಯಿತು.

ಈ ಘಟನೆ ನಡೆದು ೩೦ ವರ್ಷಗಳ ತರುವಾಯ ನೈಋತ್ಯ ಫ್ರಾನ್ಸಿನ ಬೋರ್ಡೆಕ್ಸ್ ಎಂಬಲ್ಲಿ ಇದೇ ಗಾರ್ನಿಯರ್ ಹೆಸರಿನ ೧೪ರ ಹರೆಯದ ಕುರಿಗಾಹಿ ಯುವಕ ಹಲವು ಮಕ್ಕಳನ್ನು ಅಮಾನುಷವಾಗಿ ಕೊಂದು ತಿಂದ ಅಪರಾಧಕ್ಕಾಗಿ ವಿಚಾರಣೆ ಎದುರಿಸಬೇಕಾಯಿತು. "ತಾನು ವೃಕರೂಪಿಯಾಗಿ ಐವತ್ತಕ್ಕೂ ಅಧಿಕ ಮಕ್ಕಳನ್ನು ಕೊಂದು ತಿಂದೆ," ಎಂದು ಗಾರ್ನಿಯರ್ ವಿಚಾರಣೆ ಸಂದರ್ಭದಲ್ಲಿ ಒಪ್ಪಿಕೊಂಡ. ಕತ್ತಲಾವರಿಸಿದ ಬಳಿಕ ತಾನು ತೋಳವಾಗಿ ಪರಿವರ್ತನೆ ಹೊಂದುತ್ತಿದ್ದುದಾಗಿ ಹೇಳಿದ ಗಾರ್ನಿಯರ್, "ಒಮ್ಮೆ ಇಬ್ಬರು ಹುಡುಗಿಯರು ಕೊಳದಲ್ಲಿ ಸ್ನಾನ ಮಾಡುತ್ತಿದ್ದರು. ನಾನು ಅವರ ಮೇಲೆ ಆಕ್ರಮಣ ಮಾಡಿದೆ. ಒಬ್ಬಳು ಕಿರುಚಿ ಓಡಿಹೋದರೆ, ಇನ್ನೊಬ್ಬಳ ಮೇಲೆ ನೆಗೆದು ಕಬಳಿಸಿದೆ." ಎಂದ. ನ್ಯಾಯಾಲಯದಲ್ಲಿ ಗಾರ್ನಿಯರ್ ನೀಡಿದ ಹೇಳಿಕೆ ಯಲ್ಲಿ ವಿನೋದಮಯ ಅಂಶಗಳೂ ಇದ್ದವು. "ಮುದುಕಿಯೊಬ್ಬಳ ಮೇಲೆ ಆಕ್ರಮಣವೆಸಗಿ ಅವಳನ್ನು ಕೊಂದು ತಿಂದಾಗ ಅವಳ ಮಾಂಸ ಪಾಚರಕ್ಷೆಯ ಚರ್ಮಕ್ಕಿಂತಲೂ ದೊರಗಾಗಿತ್ತು. ಮಗುವೊಂದರ ಮೇಲೆ ನೆಗೆದು ಕೊಂದು ತಿಂದಾಗ ಅದು ಸಾಯುವ ಮುನ್ನ ಕಿವಿ ಬಿರಿಯುವಂತೆ ಕಿರುಚಿತು." ಎಂದು ಮುಂತಾಗಿ ಹೇಳಿದ.

ಗಾರ್ನಿಯರ್ ತನ್ನ ತಪ್ಪೊಪ್ಪಿಗೆಯಲ್ಲಿ ತಿಳಿಸಿದ ವ್ಯಕ್ತಿಗಳ ಮನೆಗಳು ಶೋಧಿಸಲ್ಪಟ್ಟವು. ಆದರೆ ಅಲ್ಲಿ ಯಾವ ಸುಳಿವೂ ದೊರಕಲಿಲ್ಲ. ಗಾರ್ನಿಯರ್‌ನನ್ನು 'ಜೀವಂತ ಸುಟ್ಟು' ಕೊಲ್ಲುವ ಶಿಕ್ಷೆ ವಿಧಿಸಲಾಯಿತು. ಈ ಪ್ರಕರಣ ಸ್ಥಳೀಯ ಜನಸಮುದಾಯದಲ್ಲಿ ಭಾರೀ ಕ್ಷೋಭೆ ಉಂಟುಮಾಡಿತು. ಬೋರ್ಡೆಕ್ಸ್‌ನ ಇಡೀ ಪ್ರಕರಣವನ್ನು ಉಚ್ಚ ನ್ಯಾಯಾಲಯ ಮತ್ತೊಮ್ಮೆ ವಿಚಾರಣೆಗೆ ಎತ್ತಿಕೊಂಡಿತು. ಆ ಸಂದರ್ಭದಲ್ಲಿ ಗಾರ್ನಿಯರ್ ತಾನು ತೋಳ-ಮನುಷ್ಯನಾಗಿ ಪರಿವರ್ತನೆ ಹೊಂದಲು ಕಾರಣವಾದ ಹಿನ್ನೆಲೆಯನ್ನು ವಿವರಿಸಿದ:

"ನಾನು ಹನ್ನೊಂದನೆ ವಯಸ್ಸಿನಲ್ಲಿದ್ದಾಗ ನೆರೆಮನೆಯ ದೆಲ್ ತಿಲ್ಲಾಯ್ರೆ ಎಂಬಾತ ದಟ್ಟ ಕಾಡಿನ ಮಧ್ಯೆ 'ನಾನು ಅರಣ್ಯದ ಒಡೆಯ' ಎಂದು ಹೇಳಿಕೊಳ್ಳುತ್ತಿದ್ದ ಕರಿಯ ವ್ಯಕ್ತಿಯೊಬ್ಬನಿಗೆ ನನ್ನನ್ನು ಪರಿಚಯಿಸಿದ. ಆತ ನನಗೂ ದೆಲ್ ತಿಲ್ಲಾಯ್ರೆಗೂ ಒಬ್ಬ ಗುಲಾಮನನ್ನು ಹಾಗೂ ತೋಳದ ಚರ್ಮವನ್ನು ನೀಡಿದ. ಅಂದಿನಿಂದ ನಾನು ತೋಳವಾಗಿ ರೂಪ ಪರಿವರ್ತನೆ ಹೊಂದಿ ಹಳ್ಳಿಗಳಲ್ಲಿ ಅಡ್ಡಾಡುತ್ತ ಚಿಕ್ಕ ಮಕ್ಕಳನ್ನು ಕೊಂದು ತಿನ್ನತೊಡಗಿದೆ."

ಗುಲಾಮ ಹಾಗೂ ತೋಳದ ಚರ್ಮದ ಸಹಾಯದಿಂದ ರೂಪ ಬದಲಾಯಿಸಿಕೊಂಡು ಮಕ್ಕಳನ್ನು ಕೊಲ್ಲುತ್ತಿದ್ದ. ಹಿಂದೆ ಉಲ್ಲೇಖಿಸಿದ ರೌಲೆಟ್ ಪ್ರಕರಣದ ಮಾದರಿಯಲ್ಲಿಯೇ ಗಾರ್ನಿಯರ್‌ನೂ ಅಸಾಂತ್ರೊಫಿ ಕಾಯಿಲೆಯಿಂದ ನರಳುತ್ತಿದ್ದಾನೆ ಎಂಬುದು ಸ್ಪಷ್ಟವಾಯಿತು. ನ್ಯಾಯಾಧೀಶರು ಮಾನವೀಯ ದೃಷ್ಟಿಯಿಂದ ಇಡೀ ಪ್ರಕರಣವನ್ನು ಪರಿಶೀಲಿಸಿ ಕೆಳಗಿನ ನ್ಯಾಯಾಲಯ ವಿಧಿಸಿದ್ದ ಮರಣ ದಂಡನೆ ಶಿಕ್ಷೆಯನ್ನು ರದ್ದುಗೊಳಿಸಿ ಗಾರ್ನಿಯರ್‌ನನ್ನು ಸುಧಾರಣೆಗಾಗಿ ಕ್ರೈಸ್ತ ಸನ್ಯಾಸಿ ಮಠವೊಂದಕ್ಕೆ ಕಳುಹಿಸಿದರು. ಕೆಲವು ವರ್ಷಗಳ ತರುವಾಯ ನ್ಯಾಯಾಧೀಶರು ಆ ಮಠಕ್ಕೆ ಭೇಟಿ

ನೀಡಿದಾಗ ಗಾರ್ನಿಯರ್ ಮಾನಸಿಕವಾಗಿ ಅಸ್ವಸ್ಥನಾಗಿದ್ದುದು ಅವರ ಗಮನಕ್ಕೆ ಬಂತು. ಗ್ರೇನಿಯರ್ ಸಾಯುವತನಕವೂ ತಾನೊಬ್ಬ ತೋಳ-ಮನುಷ್ಯನೆಂದೇ ನಂಬಿದ್ದ. ಸಾಧ್ಯವಾದಷ್ಟು ಹೆಚ್ಚು ಮಕ್ಕಳನ್ನು ಕೊಂದು ತಿನ್ನಬೇಕೆಂಬ ಆಸೆಯನ್ನು ಆತ ಆಗಾಗ ವ್ಯಕ್ತ ಪಡಿಸುತ್ತಿದ್ದನಂತೆ. ೧೬೧೧ರಲ್ಲಿ ಗಾರ್ನಿಯರ್ ತೀರಿಕೊಂಡ. ಅನಂತರದ ದಿನಗಳಲ್ಲಿ ಬೋರ್ಡೆಕ್ಸ್‌ನಲ್ಲಿ ಸ್ಥಳೀಯ ಮಂದಿ ಗಾರ್ನಿಯರ್ ಎಂಬ ಹೆಸರಿನ ಯಾರನ್ನೇ ಆಗಲಿ ಅನುಮಾನದಿಂದ ನೋಡುತ್ತಿದ್ದರಂತೆ.

ತೋಳ-ಮನುಷ್ಯರ ಕುರಿತು ಒಂದಕ್ಕಿಂತ ಒಂದು ಮಿಗಿಲಾದ, ಮೈನವಿರೇಳಿಸುವ ರೋಚಕ ವೃತ್ತಾಂತಗಳಿವೆ. ಒಂದನೆ ಶತಮಾನದ ರೋಮನ್ ವಿಡಂಬನಾ ಸಾಹಿತಿ ಪೆಟ್ರೋನಿಯಸ್ ತೋಳ-ಮನುಷ್ಯನ ಕತೆಯೊಂದನ್ನು ಉಲ್ಲೇಖಿಸಿದ್ದಾನೆ.

ಜರ್ಮನಿಯ ಅತಿ ಕುಖ್ಯಾತ ತೋಳ-ಮನುಷ್ಯ ಪೀಟರ್ ಸ್ಟಬ್ ಅಥವಾ ಸ್ಟಂಪ್ ಎಂಬಾತ. ೧೫೮೯ರಲ್ಲಿ ಜರ್ಮನಿಯ ಪಟ್ಟಣವೊಂದರಲ್ಲಿ ಅವನ ವಿಚಾರಣೆ ನಡೆಯಿತು. ಸಮಕಾಲೀನ ಇತಿಹಾಸಕಾರನೊಬ್ಬ ಈ ವಿಚಾರಣೆಯ ಬಗ್ಗೆ ಬರೆದಿದ್ದಾನೆ. "ನಾನು ಧರಿಸಿದ್ದ ಮಾಂತ್ರಿಕ ಬೆಲ್ಟ್ ನನ್ನನ್ನು ಆಸೆಬುರುಕ ಕ್ರೂರ ತೋಳ-ಮನುಷ್ಯನಾಗಿ ಪರಿವರ್ತಿಸಿತು." ಎಂದು ವಿಚಾರಣೆ ಸಂದರ್ಭದಲ್ಲಿ ಪೀಟರ್ ಸ್ಟಬ್ ಹೇಳಿದ. ಆತ ದೃಢಕಾಯನಾಗಿದ್ದ. ಕಣ್ಣುಗಳು ಅಗಲವೂ, ತೀಕ್ಷ್ಣವೂ ಆಗಿದ್ದವು. ರಾತ್ರಿ ವೇಳೆ ಅವು ಕೆಂಡ ಉಗುಳುತ್ತಿರುವಂತೆ ತೋರುತ್ತಿದ್ದವು. ಹರಿತವಾದ ಹಲ್ಲುಗಳು, ಶಕ್ತಿಯುತ ಪಂಜಾಗಳು ಅವನಿಗಿದ್ದವು. ಪೀಟರ್ ಸ್ಟಬ್‌ನನ್ನು ಅಮಾನುಷವಾಗಿ ಹಿಂಸಿಸಿ ಕೊಂದರು. ಅವನ ಶರೀರದ ಹಲವು ಭಾಗಗಳನ್ನು ಚಾಕುವಿನಿಂದ ಇರಿದು ಮಾಂಸ ಹೊರತೆಗೆದರು. ಕಾಲು ಹಾಗೂ ತೋಳುಗಳನ್ನು ಕೊಡಲಿಯಿಂದ ಕತ್ತರಿಸಿ ಎಸೆದರು. ತಲೆಯನ್ನು ಕತ್ತರಿಸಿ ತೆಗೆದರು. ಅನಂತರ ನಿರ್ಜೀವ ದೇಹದ ಭಾಗಗಳನ್ನು ಸುಟ್ಟು ಹಾಕಿದರು.

ಮಧ್ಯಯುಗದಲ್ಲಿ ಪ್ರಚಲಿತವಿದ್ದ ತೋಳ-ಮನುಷ್ಯನ ಇನ್ನೊಂದು ಕತೆ ಕುತೂಹಲ ಕೆರಳಿಸುವಂತಿದೆ:

ರಶಿಯದ ಕುಲೀನಮನೆತನದ ಶ್ರೀಮಂತ ಮಹಿಳೆಯೊಬ್ಬಳಿಗೆ ಯಾರೇ ಆಗಲಿ ತಾವು ಬಯಸಿದಾಗ ಪ್ರಾಣಿಗಳಾಗಿ ರೂಪ ಪರಿವರ್ತನೆ ಹೊಂದುವ ಶಕ್ತಿ ಇರುತ್ತದೆ ಎಂಬ ಮಾತಿನಲ್ಲಿ ನಂಬಿಕೆಯೇ ಇರಲಿಲ್ಲ. ಅವಳ ಸೇವಕನೇ ಒಂದು ದಿನ ತೋಳವಾಗಿ ಪರಿವರ್ತನೆ ಹೊಂದಿದ. ಒಡತಿಯ ನಾಯಿಗಳು ಈ ತೋಳವನ್ನು ಬೆನ್ನಟ್ಟಿ ಸುತ್ತುವರಿದು ಕಚ್ಚಿದಾಗ ತೋಳದ ಒಂದು ಕಣ್ಣಿಗೆ ತೀವ್ರವಾದ ಗಾಯವಾಯಿತು. ಸೇವಕ ತಿರುಗಿ ತನ್ನ ಒಡತಿಯ ಬಳಿ ಹೋದಾಗ ಅವನ ಒಂದು ಕಣ್ಣಿಗೆ ಆಳವಾದ ಗಾಯವಾಗಿರುವುದು ಪತ್ತೆಯಾಯಿತು.

ತೋಳ-ವನಿತೆ

ತೋಳ ಮನುಷ್ಯರಿಗೆ ಸಂಬಂಧಿಸಿದ ಮತ್ತೊಂದು ಸುಪ್ರಸಿದ್ಧ ಪ್ರಕರಣ ೧೫೫೮ರಲ್ಲಿ ಮಧ್ಯ ಫ್ರಾನ್ಸಿನ ಅವೆರಗ್ನೆ ಎಂಬಲ್ಲಿ ಸಂಭವಿಸಿತೆಂದು ಪ್ರತೀತಿ ಇದೆ. ಒಬ್ಬ ಬೇಟೆಗಾರ ಬೇಟೆಗೆಂದು ಕಾಡಿಗೆ ಹೊರಟಾಗ ರಸ್ತೆಯಲ್ಲಿ ತನಗೆ ಪರಿಚಯವಿದ್ದ ಶ್ರೀಮಂತ ಮನೆತನದ ಯುವಕನೊಬ್ಬನನ್ನು ಭೇಟಿಯಾದ. ಬೇಟೆ ಯಶಸ್ವಿಯಾದರೆ ಅದರ ಕುರುಹಾಗಿ ಪ್ರಾಣಿಯ ಶರೀರದ ಯಾವುದಾದರೊಂದು ಭಾಗವನ್ನು ತನಗೆ ತಂದೊಪ್ಪಿಸಬೇಕೆಂದು ಶ್ರೀಮಂತ ಯುವಕ ಬೇಟೆಗಾರನಿಗೆ ಸೂಚಿಸಿದ. ಕಾಡಿನಲ್ಲಿ ಉಗ್ರಸ್ವರೂಪಿ ತೋಳವೊಂದು ಬೇಟೆಗಾರನ ಮೇಲೆ ನೆಗೆಯಿತು. ಬೇಟೆಗಾರ ಜೀವ ಉಳಿಸಿಕೊಳ್ಳಲು ತೋಳದ ಮೇಲೆ ಕತ್ತಿ ಬೀಸಿದಾಗ ತೋಳದ ಪಂಜಾವೊಂದು ಕತ್ತರಿಸಿ ಹೋಯಿತು. ಬೇಟೆಗಾರ ಅದನ್ನೇ ದಿವ್ಯ ಸ್ಮರಣಿಕೆಯಾಗಿ ಜೇಬಿನಲ್ಲಿರಿಸಿಕೊಂಡು ಶ್ರೀಮಂತನ ನಿವಾಸದತ್ತ ತೆರಳಿದ. ಧನಿಕ ಯುವಕನನ್ನು

ಭೇಟಿಯಾಗಿ ಕಾಡಿನಲ್ಲಿ ತೋಳದ ಆಕ್ರಮಣದ ಬಗ್ಗೆ ತಿಳಿಸಿ ಅದರೊಂದಿಗೆ ಹೋರಾಡಿ ಅದರ ಪಂಜಾವನ್ನು ಕತ್ತರಿಸಿ ತಂದುದಾಗಿ ಹೇಳಿದ. ತುಂಡಾದ ಪಂಜಾವನ್ನು ಹೊರತೆಗೆಯಲು ಯತ್ನಿಸಿದಾಗ ಜೇಬಿನಲ್ಲಿ ಪಂಜಾದ ಬದಲು ಹೆಣ್ಣಿನ ಕೋಮಲವಾದ ಅಂಗೈಯಿತ್ತು. ಅಂಗೈಯ ಒಂದು ಬೆರಳಲ್ಲಿ ಚಿನ್ನದ ಉಂಗುರ ವಿತ್ತು. ಶ್ರೀಮಂತ ಯುವಕ ತಕ್ಷಣ ತನ್ನ ಮಲಗುವ ಕೊಠಡಿಗೆ ಧಾವಿಸಿ ನೋಡಿದಾಗ ಅಲ್ಲಿ ಅವನ ಪತ್ನಿ ತೀವ್ರ ರಕ್ತಸ್ರಾವವಾಗುತ್ತಿದ್ದ ಮುಂಗೈಗೆ ಔಷಧಿ ಹಚ್ಚಿ ಬ್ಯಾಂಡೇಜ್ ಬಿಗಿಯು ತ್ತಿದ್ದುದು ಕಾಣಿಸಿತು. ತಾನು ತೋಳ ವನಿತೆಯಾ ಗಿದ್ದೆ ಎಂಬುದನ್ನು ಆಕೆ ಒಪ್ಪಿಕೊಂಡಳು. ಅನಂ ತರ ಆಕೆಯನ್ನು ಜೀವಂತ ಸುಟ್ಟು ಕೊಲ್ಲ ಲಾಯಿತು.

ತನ್ನ ಒಡೆಯನೊಂದಿಗೆ ಬೇಟೆಗೆ ಹೊರಟ ಸೈನಿಕನ ವೃತ್ತಾಂತವಿದು. ಇಬ್ಬರೂ ಕಾಡಿನ ದಾರಿಯಲ್ಲಿ ಹೋಗುತ್ತಿದ್ದಾಗ ಸೈನಿಕ ಇದ್ದಕ್ಕಿ ದ್ದಂತೆ ರಸ್ತೆಬದಿಯಲ್ಲಿ ಬಟ್ಟೆಗಳನ್ನು ಕಳಚಿ ತೋಳವಾಗಿ ಪರಿವರ್ತನೆ ಹೊಂದಿದ್ದನ್ನು ಗಮ ನಿಸಿ ಸೇವಕನಿಗೆ ದಿಗ್ಭ್ರಮೆಯಾಯಿತು. ತೋಳ ತೀಕ್ಷ್ಣವಾಗಿ ಊಳಿಡುತ್ತ ಕಾಡಿನ ಪೊದೆಗಳ ನಡುವೆ ನುಗ್ಗಿ ಕಣ್ಮರೆಯಾಯಿತು. ಸೇವಕ ತನ್ನ ನಿವಾಸಕ್ಕೆ ಹಿಂತಿರುಗಿದಾಗ ಆಗಷ್ಟೇ ಕ್ರೂರ ತೋಳವೊಂದು ನೆರೆಮನೆಗೆ ನುಗ್ಗಿ ಜಾನುವಾರುಗಳ ಮೇಲೆ ದಾಳಿ ನಡೆಸಿ ಮಕ್ಕ ಳನ್ನು ಕಚ್ಚಿ ಕೊಂದು ಅಪಾರ ಹಾನಿಯೆಸಗಿದ ಘಟನೆಯ ಬಗ್ಗೆ ಮನೆಯ ಮಂದಿ ಮಾತ ನಾಡುತ್ತಿದ್ದರು. ನೆರೆಮನೆಯಾತ ಭರ್ಚಿಯನ್ನು ತೋಳದ ಕತ್ತಿಗೆ ಗುರಿಯಿಟ್ಟು ಎಸೆದಾಗ ತೋಳ ನೋವಿನಿಂದ ಕಿರಿಚುತ್ತ ಓಡಿ ಹೋಯಿತಂತೆ. ಸೇವಕ ನಂತರ ಕಾಡಿನ ದಾರಿಯಲ್ಲಿ ಹಿಂತಿರುಗಿ ತನ್ನ ಯಜಮಾನ ಬಟ್ಟೆಗಳನ್ನು ಕಳಚಿ ಹಾಕಿದ ಸ್ಥಳಕ್ಕೆ ಬಂದ. ಅಲ್ಲಿ ಬಟ್ಟೆಗಳಿರಲಿಲ್ಲ. ಒಂದಷ್ಟು ರಕ್ತ ಹರಡಿತ್ತು. ಸೇವಕ ಸೈನಿಕನ ನಿವಾಸಕ್ಕೆ ಹಿಂತಿರುಗಿದಾಗ ಕತ್ತಿನಲ್ಲಿ ಆಳವಾದ ಗಾಯವಾಗಿ ರಕ್ತಸ್ರಾವವಾಗುತ್ತಿರುವುದನ್ನು ನಿಲ್ಲಿಸಲು ವೈದ್ಯರು ಸೈನಿಕನನ್ನು ಉಪ ಚರಿಸುತ್ತಿದ್ದ ದೃಶ್ಯ ಕಂಡಿತು.

ಸೈಂಟ್ ಕ್ಲಾಡ್‌ನ ತೋಳ-ಮನುಷ್ಯರು

೧೫೯೮ರಲ್ಲಿ ನಮೂದಿಸಲಾಗಿರುವ ದಾಖಲೆಯೊಂದು ಪಶ್ಚಿಮ ಫ್ರಾನ್ಸ್‌ನಲ್ಲಿ ಇಡೀ ಒಂದು ಕುಟುಂಬವೇ ತೋಳ ಮನುಷ್ಯರ ಕುಟುಂಬವಾಗಿತ್ತೆಂಬುದನ್ನು ಮೈನವಿರೇಳುವಂತೆ ನಿರೂಪಿಸಿದೆ. ಈ ಕುಟುಂಬದ ಇಬ್ಬರು ಸೋದರಿಯರು ಹಾಗೂ ಒಬ್ಬ ಸೋದರನನ್ನು ಅಂದಿನ ದಿನಗಳಲ್ಲಿ ಸೈಂಟ್ ಕ್ಲಾಡ್‌ನ ತೋಳ ಮನುಷ್ಯರೆಂದು ಕರೆ ಯುತ್ತಿದ್ದರು. ಹುಡುಗಿಯರಲ್ಲಿ ಒಬ್ಬಾಕೆಯ ಹೆಸರು ಪೆರೊನೆಟ್ಟೆ. ಆಕೆ ಅಸಾಂತ್ರೊಫಿ (ಹಿಸ್ಟೀ ರಿಯಾ) ಕಾಯಿಲೆಯಿಂದ ನರಳುತ್ತಿದ್ದಳು. ಆಕೆ ತೋಳಗಳಂತೆ ಎರಡೂ ಮುಂಗೈಗಳನ್ನು ನೆಲಕ್ಕೆ ಊರಿ ನಡೆಯುತ್ತಿದ್ದಳು. ಒಂದು ದಿನ ಆಕೆ ತೋಟದಲ್ಲಿ ಹಣ್ಣು ಕೀಳುತ್ತಿದ್ದ ನಾಲ್ಕು ವರ್ಷದ ಬಾಲಕ ಹಾಗೂ ಅವನ ತಂಗಿಯ ಮೇಲೆ ಆಕ್ರಮಣ ನಡೆಸಿದಳು. ಹುಡುಗ ತನ್ನ ತಂಗಿ ಯನ್ನು 'ತೋಳವನಿತೆ'ಯ ಬಾಯಿಯಿಂದ ರಕ್ಷಿ ಸಲು ಹೆಣಗಾಡಿದ. ಆಗ ಪೆರೆನೆಟ್ಟೆ ಹರಿತವಾದ ಹಲ್ಲುಗಳಿಂದ ಹುಡುಗನ ಕತ್ತಿಗೆ ಬಲವಾಗಿ ಕಚ್ಚಿ ಮಾಂಸ ಹೊರಗೆಳೆದಳು. ಬಾಲಕ ಕೊನೆಯುಸಿರೆಳೆಯುವ ಮೊದಲು ತೋಳಕ್ಕೆ ಮಾನವ ಹಸ್ತಗಳಿದ್ದವು ಎಂಬುದನ್ನು ದೃಢ ಪಡಿಸಿದ. ಪೆರೊನೆಟ್ಟೆಯ ಸಹೋದರಿಯೂ ಅಸಾಂತ್ರೊಫಿ ಕಾಯಿಲೆಯಿಂದ ನರಳುತ್ತಿದ್ದಳು. ಆಲಿಕಲ್ಲು ಉತ್ಪಾದಿಸುವ ವಿಶೇಷ ಶಕ್ತಿ ಆಕೆಗಿತ್ತು ಎಂಬ ಪ್ರತೀತಿಯೂ ಇದ್ದಿತು. ಆಕೆ ತನ್ನ ನಿವಾ ಸಕ್ಕೆ ಆಡಿನ ರೂಪದಲ್ಲಿ ಭೇಟಿ ನೀಡುತ್ತಿದ್ದ ಗಂಡು ದೆವ್ವದೊಂದಿಗೆ ಮಲಗುತ್ತಿದ್ದಳಂತೆ. ಪೆರೊನೆಟ್ಟೆ ಸಹೋದರಿಯರನ್ನು ಹಾಗೂ ಸೋದರ ಪಿಯರ್ರೆಯನ್ನು ಬಂಧಿಸಿ ನ್ಯಾಯಾ ಲಯದಲ್ಲಿ ವಿಚಾರಣೆಗೆ ಗುರಿಪಡಿಸಲಾಯಿತು.

ತಾನು ತೋಳವಾಗಿ ರೂಪ ಪರಿವರ್ತನೆ ಹೊಂದುತ್ತಿದ್ದೆ ಎಂಬುದನ್ನು ಸೋದರ ಪಿಯರ್ರೆ ಒಪ್ಪಿಕೊಂಡ.

ಗಂಭೀರ ಅಪಾಯದ ಸುಳಿಗೆ ಸಿಲುಕಿದ ನತದೃಷ್ಟರನ್ನು ಕಾಪಾಡುವ ಶಕ್ತಿಯುಳ್ಳ ತೋಳ ಮನುಷ್ಯರೂ ಇದ್ದರು. ಅಂತಹ ತೋಳ ಮನುಷ್ಯನಿಗೆ ಸಂಬಂಧಿಸಿದ ಆಸಕ್ತಿಕರ ವೃತ್ತಾಂತವೊಂದಿದೆ.

ಜೀವ ಉಳಿಸಿದ ತೋಳ-ಮಾನವ

೧೬-೧೭ನೇ ಶತಮಾನದ ಫ್ರಾನ್ಸಿನಲ್ಲಿ ಕೆಥೋಲಿಕ್‌ರ ಹಿಂಸೆ, ಕಿರುಕುಳದ ವಿರುದ್ಧ ಹೋರಾಡುತ್ತಿದ್ದ ಫ್ರೆಂಚ್ ಪ್ರಾಟೆಸ್ಟಂಟ್ ಹ್ಯೂನಾಟ್ಸ್‌ಗಳಿಗೆ ಸಂಬಂಧಿಸಿದ ವೃತ್ತಾಂತದಲ್ಲಿ ತೋಳ-ಮಾನವನ ಪ್ರಸ್ತಾಪವಿದೆ. ಸಮುದ್ರದಲ್ಲಿ ಪ್ರಚಂಡ ಬಿರುಗಾಳಿಗೆ ಸಿಲುಕಿ ಮುಳುಗುತ್ತಿದ್ದ ಹಡಗಿನ ಕ್ಯಾಪ್ಟನ್ನನನ್ನು (ಆತ ಕೆಥೋಲಿಕ್ ಆಗಿದ್ದ) ಬಲಿಷ್ಠ ಹಸ್ತವೊಂದು ನೀರಿನಿಂದ ಮೇಲಕ್ಕೆತ್ತಿತ್ತು. ಕ್ಯಾಪ್ಟನ್ ಮೇಲಕ್ಕೆ ಬರುತ್ತಿದ್ದಂತೆ ತನ್ನನ್ನು ಬಿಗಿಯಾಗಿ ಹಿಡಿದ ಹಸ್ತದ ಕಡೆಗೆ ದಿಟ್ಟಿಸಿದಾಗ ಅವನಿಗೆ ಅತ್ಯಾಶ್ಚರ್ಯವಾಯಿತು. ತಾನು ಹಿಡಿದುಕೊಂಡಿದ್ದ ಕೈ ಮಾನವನದಾಗಿರದೆ ತೋಳದ ಪಂಜಾ ಆಗಿತ್ತು. ತನ್ನನ್ನು ರಕ್ಷಿಸಿದವನು ತೋಳ ಮನುಷ್ಯನೇ ಎಂಬುದು ಕ್ಯಾಪ್ಟನ್‌ಗೆ ಖಾತ್ರಿಯಾಗಿತ್ತು. ಅನಂತರ ಈ ತೋಳ ಮನುಷ್ಯ ಕ್ಯಾಪ್ಟನ್ನನನ್ನು ಗ್ರಾಮದ ಹೊರವಲಯದಲ್ಲಿದ್ದ ತನ್ನ ಮನೆಗೆ ಕರೆದೊಯ್ದ. ಮನೆಯೊಳಗೆ ಪ್ರವೇಶಿಸಿದ ಕೂಡಲೇ ಕೊಠಡಿಯ ಲಾಂದ್ರದ ಬೆಳಕಿನಲ್ಲಿ ಕ್ಯಾಪ್ಟನ್ ತೋಳ ಮನುಷ್ಯನ ಮುಖವನ್ನು ಸ್ಪಷ್ಟವಾಗಿ ನೋಡಿದನಂತೆ. ಕತ್ತಿನವರೆಗೆ ಮನುಷ್ಯಾಕೃತಿ, ಉಳಿದ ಭಾಗವೆಲ್ಲ ತೋಳದ ಆಕೃತಿ ಹೊಂದಿದ್ದ ಆ ವಿಲಕ್ಷಣ ಜೀವಿಯನ್ನು ನೋಡಿ ಭಯದಿಂದ ತತ್ತರಿಸಿದನಂತೆ ಕ್ಯಾಪ್ಟನ್. ಸ್ವಲ್ಪಹೊತ್ತಿನ ಬಳಿಕ ಆ ತೋಳ ಮನುಷ್ಯ ಕೊಠಡಿಗೆ ಹೊರಗಿನಿಂದ ಬೀಗ ಜಡಿದು ಹೊರಟು ಹೋಯಿತಂತೆ. ಕ್ಯಾಪ್ಟನ್ ಆ ಕೊಠಡಿಯಲ್ಲಿ ಬಂಧಿತನಾಗಿದ್ದ. ಕೊಠಡಿಯ ಸುತ್ತ ಕಣ್ಣಾಡಿಸಿದಾಗ ಮೂಲೆಯಲ್ಲಿ ಹರೆಯದ ಹೆಣ್ಣೊಬ್ಬಳ ರಕ್ತಸಿಕ್ತ ಶವ ಬಿದ್ದಿತ್ತು. ತನಗೂ ಈ ಹೆಣ್ಣಿನ ಗತಿಯೇ ಬರಬಹುದೇನೋ ಎಂದು ಕ್ಯಾಪ್ಟನ್ ತತ್ತರಿಸಿದ. ಮರುದಿನ ಮುಂಜಾನೆ ತೋಳ ಮನುಷ್ಯ ಪೂರ್ತಿ ಮಾನವರೂಪದಲ್ಲಿ ಕಾಣಿಸಿಕೊಂಡ. ಆತ ಹ್ಯೂನಾಟ್ ಸಚಿವನಾಗಿದ್ದ. ಕೊಠಡಿಯಲ್ಲಿ ಹೆಣವಾಗಿ ಬಿದ್ದಿರುವವಳು ತನ್ನ ಪತ್ನಿ ಎಂದ ಆತ. ಹಿಂದಿನ ದಿನ ಕ್ಯಾಪ್ಟನ್ನನ ಕೆಥೋಲಿಕ್ ಮಂದಿ ಗ್ರಾಮದ ಮೇಲೆ ಏರಿ ಬಂದು ಹ್ಯೂನಾಟ್ ಸಚಿವನ ಮನೆಯ ಮೇಲೆಯೂ ದಾಳಿ ನಡೆಸಿ ಅವನ ಪತ್ನಿಯನ್ನು ಕ್ರೂರವಾಗಿ ಹಿಂಸಿಸಿ ಕೊಂದಿದ್ದರು.

ಪೂರ್ತಿ ಮನುಷ್ಯ ರೂಪದಲ್ಲಿ ಹಿಂತಿರುಗಿದ ಹ್ಯೂನಾಟ್ ಸಚಿವ ತಾನು ತೋಳ ಮನುಷ್ಯನಾಗಿ ಪರಿವರ್ತಿತವಾಗಲು ಕಾರಣವಾದ ಹಿನ್ನೆಲೆಯಲ್ಲಿ ವಿವರಿಸಿದ:

"ನಿಜ ನಾನು ತೋಳ ಮನುಷ್ಯನಾಗಿದ್ದೆ. ಕೆಲವು ವರ್ಷಗಳ ಹಿಂದೆ ಜರ್ಮನ್ ಮಹಿಳೆ ಗ್ರೇನಿಯರ್ ಎಂಬಾಕೆ ನಮ್ಮ ಗ್ರಾಮದ ಹಿಂದಿರುವ ಕಾಡಿನಲ್ಲಿ ನೆಲೆಸಿದ್ದಳು. ಆಕೆಯೇ ನನ್ನ ಮೇಲೆ ಕ್ರೂರ ಮಾಟವಿದ್ಯೆ ಪ್ರಯೋಗಿಸಿ ತೋಳ-ಮನುಷ್ಯನನ್ನಾಗಿ ಪರಿವರ್ತಿಸಿದಳು. ಕತ್ತಲಾದ ತಕ್ಷಣ ನನ್ನ ರೂಪ ಪರಿವರ್ತನೆಯಾಗುತ್ತದೆ. ನಿನ್ನೆ ದಿನ ಕುರಿಯೊಂದನ್ನು ಬೆನ್ನಟ್ಟುತ್ತ ಸಮುದ್ರದ ಬದಿಗೆ ಬಂದಾಗ ನೀನು ಸಮುದ್ರದಲ್ಲಿ ಮುಳುಗುತ್ತಿರುವುದನ್ನು ನೋಡಿದೆ. ನಿನ್ನನ್ನು ರಕ್ಷಿಸಿದೆ. ನಿನ್ನ ಕಡೆಯವರು ನನ್ನ ಹೆಂಡತಿಯನ್ನು ಕೊಂದರು. ನನ್ನ ಸರ್ವಸ್ವವನ್ನೂ ದೋಚಿ ನನ್ನನ್ನೂ ನಾಶಮಾಡಿದರು. ಆದರೂ ನಿನ್ನನ್ನು ಬದುಕಿಸಿದೆ. ನೀನು ನೀರಿನಲ್ಲಿ ಮುಳುಗಿ ಸಾಯುವುದಕ್ಕಿಂತಲೂ ಹೆಚ್ಚು ಶಾಂತಿಯಿಂದ ಸಾಯಬೇಕೆಂದು ನಾನು ಬಯಸುತ್ತೇನೆ. ನಿನ್ನನ್ನು ಕೊಲ್ಲಬಹುದಿತ್ತು. ಆದರೆ ಕೊಲ್ಲುವುದು, ನಾಶಗೊಳಿಸುವುದು ನನ್ನ ಸ್ವಭಾವವಲ್ಲ," ಎಂದ

ತೋಳ ಮನುಷ್ಯ. ತೋಳ ಮನುಷ್ಯನ ವಿವರಣೆ ಕೇಳಿ ಕ್ಯಾಪ್ಟನ್ನನ ಮನಕರಗಿತು. ಆತ ಜೀವನವಿಡೀ ಹ್ಯೂನಾಟ್‌ಗಳ ಮಿತ್ರನಾಗಿಯೇ ಉಳಿದ.

ವಾಸ್ತವ ಸಂಗತಿ

ಇತಿಹಾಸಪೂರ್ವ ಕಾಲದಲ್ಲಿ ಮಾನವ ಹಸಿವು ಹಿಂಗಿಕೊಳ್ಳಲು ಕ್ರೂರ ಮೃಗಗಳನ್ನು ಬೇಟೆಯಾಡುತ್ತಿದ್ದ. ಆಗ ತನ್ನ ನಿಜಸ್ವರೂಪ ಮರೆಮಾಚಿಕೊಳ್ಳಲು ಪ್ರಾಣಿಗಳ ಚರ್ಮ ಧರಿಸಿ ಬೇಟೆಯಾಡುವ ಕ್ರಮವೂ ಜಾರಿಯಲ್ಲಿದ್ದಿತು. ಪ್ರಾಣಿಗಳ ಶಕ್ತಿಯನ್ನು ಶರೀರದಲ್ಲಿ ಆವಾಹನೆ ಮಾಡಿಕೊಳ್ಳಲು ಪ್ರಾಣಿಗಳ ಚರ್ಮ ಧರಿಸುವ ಪರಿಪಾಠ ಆದಿಮಾನವನಿಗಿತ್ತು.

ಬ್ರಿಟಿಷ್ ಲೇಖಕ ಡಾ. ರಾಬರ್ಟ್ ಐಸ್ಲರ್ 'ಮ್ಯಾನ್ ಇನ್‌ಟು ವುಲ್ಫ್' ಎಂಬ ಕೃತಿಯನ್ನು ರಚಿಸಿದ್ದಾನೆ. ಇತಿಹಾಸದಲ್ಲಿ ಆಳವಾದ ವಿದ್ವತ್ತು ಹೊಂದಿದ್ದ ಆತ ತೋಳ-ಮನುಷ್ಯನ ಮೂಲದ ಬಗ್ಗೆ ಹೊಸ ಸಿದ್ಧಾಂತವನ್ನು ರೂಪಿಸಿದ್ದಾನೆ. ಅವನ ಸಿದ್ಧಾಂತದ ಸಾರ ಇಷ್ಟು:

"ಇತಿಹಾಸಪೂರ್ವ ಕಾಲದಲ್ಲಿ ಮಾನವ ಸಸ್ಯಾಹಾರಿಯಾಗಿರುತ್ತಿದ್ದ. ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಉದಾಹರಣೆಯಾಗಿ ಹಿಮಯುಗ ಆರಂಭದ ಸಂದರ್ಭದಲ್ಲಿ ಆತ ಹೊಸ ಬಗೆಯ ಆಹಾರದ ಅನ್ವೇಷಣೆಯಲ್ಲಿ ತೊಡಗಬೇಕಾಗುತ್ತಿತ್ತು. ಹಸಿವು ಹಿಂಗಿಸಿಕೊಳ್ಳಲು ಮಾಂಸ ತಿನ್ನಬೇಕಾಗುತ್ತಿತ್ತು. ಚಳಿಯಿಂದ ರಕ್ಷಿಸಿಕೊಳ್ಳಲು ಪ್ರಾಣಿಗಳ ಚರ್ಮ ಧರಿಸುತ್ತಿದ್ದ. ಕ್ರೂರ ಮೃಗಗಳ ಪ್ರವೃತ್ತಿಯನ್ನು ಆತ ಅಧ್ಯಯನ ಮಾಡಿದ. ಪ್ರಾಣಿಗಳಂತೆ ಆತ ರಕ್ತದಾಹದಿಂದ ಒದ್ದಾಡತೊಡಗಿದ. ಪ್ರಾಯಶಃ ಆ ಕಾಲದಲ್ಲಿಯೇ ಆತ ನರ ಮಾಂಸ ತಿನ್ನುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರಬೇಕು. ಸಸ್ಯಾಹಾರ ಹಾಗೂ ಮಾಂಸಾಹಾರಗಳ ಕೊರತೆ ಎನಿಸಿದಾಗ ಆತ ನರಮಾಂಸ ಭಕ್ಷಣೆ ಕೈಗೊಂಡಿರಬೇಕು. ಇಂತಹ ಹಿಂಸಾತ್ಮಕ ಪ್ರವೃತ್ತಿ ಮಾನವನ ಸುಪ್ತ ಪ್ರಜ್ಞೆಯಲ್ಲಿ ದೀರ್ಘ ಕಾಲ ನೆಲೆಯೂರಿರಬೇಕು. ತೋಳ-ಮನುಷ್ಯರಿಗೆ ಸಂಬಂಧಿಸಿದ ಚಿತ್ರ-ವಿಚಿತ್ರ ವಿಲಕ್ಷಣ ಪರಿಕಲ್ಪನೆಗಳು ಹುಟ್ಟಿಕೊಳ್ಳಲು ಇಂತಹ ಪರಿಸ್ಥಿತಿಯೇ ಹಿನ್ನೆಲೆಯಾಗಿರಬೇಕು."

ಪಾಶ್ಚಾತ್ಯ ದೇಶಗಳಲ್ಲಿ ಜನ ಚಳಿಯಿಂದ ರಕ್ಷಿಸಿ ಕೊಳ್ಳಲು ಫರ್ (ತುಪ್ಪಳ) ಉಡುಪುಗಳನ್ನು ಧರಿಸುವುದಿದೆ. ಇಂಥ ಉಡುಪು ಧರಿಸಿದವನನ್ನು ಪ್ರಾಣಿಯೆಂದು ತಪ್ಪಾಗಿ ಭಾವಿಸುವ ಸಾಧ್ಯತೆಗಳೂ ಇಲ್ಲದಿಲ್ಲ. ಹೀಗಿದ್ದರೂ ತೋಳ ಮನುಷ್ಯನ ಕುರಿತಾಗಿ ಐಸ್ಲರ್‌ನ ಸಿದ್ಧಾಂತವೇ ಹೆಚ್ಚು ವಾಸ್ತವಿಕವೆನಿಸುತ್ತದೆ. ಮನುಷ್ಯ ತೋಳವಾಗಿ ರೂಪ ಪರಿವರ್ತನೆ ಹೊಂದುವುದು ತೀರಾ ಅಸಂಭವವೆನಿಸಿದರೂ ಪ್ರಾಣಿಗಳ ಚರ್ಮ ಧರಿಸಿ ಅವುಗಳ ಸ್ವಭಾವ ನಡವಳಿಕೆಗಳನ್ನು ಅನುಸರಿಸುವ ಪ್ರವೃತ್ತಿ ಮಾನವನಲ್ಲಿ ಮೂಡಿದರೆ ಅದು ಅಸಹಜವೆನಿಸಲಾರದು.

ತೋಳ-ಮನುಷ್ಯರಿಗೆ ಪರ್ಯಾಯವೆನಿಸಿದ ವಿಲಕ್ಷಣ ಜೀವಿಗಳು ಜಗತ್ತಿನ ಎಲ್ಲ ಭಾಗಗಳಲ್ಲಿ ಕಂಡುಬರುತ್ತವೆ. ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಅವುಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಭಾರತದಲ್ಲಿ ಹುಲಿ-ಮಾನವರು, ಆಫ್ರಿಕಾದಲ್ಲಿ ಚಿರತೆ ಮಾನವರು, ಮೊಸಳೆ ಮನುಷ್ಯರು; ರಶಿಯದಲ್ಲಿ ಕರಡಿ-ಮನುಷ್ಯರು ಜೀವಿಸಿದ್ದರೆಂಬ ಪ್ರಕರಣಗಳು ಇತಿಹಾಸದಲ್ಲಿ ಉಲ್ಲೇಖವಾಗಿವೆ. ಇಲಿಯಟ್ ಡೊನ್ನೆಲ್ ಎಂಬ ಪಾಶ್ಚಾತ್ಯ ಅನ್ವೇಷಕ, ಭಾರತೀಯ ಯುವಕನೊಬ್ಬ ಹುಲಿಯಾಗಿ ರೂಪ ಪರಿವರ್ತನೆ ಹೊಂದಿದ ಹಾಗೂ ಜಾವಾದ ಇಬ್ಬರು ಮಕ್ಕಳು ಜಾಗ್ವಾರ್‌ಗಳಾಗಿ (ಒಂದು ಜಾತಿಯ ಚಿರತೆ) ಪರಿವರ್ತನೆ ಹೊಂದಿದ ವಿಲಕ್ಷಣ ವಿದ್ಯಮಾನವನ್ನು ತನ್ನ ಒಂದು ಕೃತಿಯಲ್ಲಿ ನಿರೂಪಿಸಿದ್ದಾನೆ. ಆದರೆ ಆಮೆ ಮಾನವರ ಬಗ್ಗೆ ನಿದರ್ಶನಗಳು ಕಡಿಮೆ. (ಆಧಾರ: 'ದಿ ಜೈಂಟ್ ಬುಕ್ ಆಫ್ ದಿ ಅನ್ನೋನ್')

ಎದೆ ಸುಭದ್ರ ಸಂದುಕ

ತನ್ನ ಮಗುವನ್ನು ಎದೆಗವುಚಿಕೊಳ್ಳುವುದು ಹೆತ್ತ ತಾಯಿಗೆ ಸಹಜ ಅಭ್ಯಾಸ. ಹಾಲುಗಲ್ಲಕೆ ಮತ್ತ ಮತ್ತ ಮುತ್ತನಿತ್ತು ಅವಳು ಪಡೆವ ಆ ಸಂತಸವೆಷ್ಟೋ! ಅದು ಅವಳಿಗೇ ಗೊತ್ತು. ಅದು ಅವಳದೇ ಸೊತ್ತು. ಆ ಮಗು ಕುವರನೋ ಕುವರಿಯೋ, ಏನಿದ್ದರೂ ಸರಿ, ಅದು ಅವಳ ಕರುಳಕುಡಿ ತಾನೇ! ಮಗು ಎಳೆವಯದಲ್ಲಿ ಕಾಲವಶವಾದರೆ ತಾಯಿಯ ಎದೆಯಾಳದ ಗೋಳು ಹೇಳಲಾಸಲ್ಲ. ಎದೆ ಎದೆ ಹೊಡೆದುಕೊಂಡು ಹುಚ್ಚಿಯಂತೆ ಹಲುಬುವ ಆ ದಾರುಣ ಸನ್ನಿವೇಶ ಯಾವ ಕಲ್ಲೆದೆಯನ್ನೂ ಅಲುಗಿಸುವಂಥದು. ಅವಳ ಎದೆ ನೋಡಲು ಕಲ್ಲುಗುಂಡಿನಂತಿದ್ದರೂ ಬೆಣ್ಣೆಯಂತೆ ಬಲು ಮೃದು. ತಾಪತ್ರಯ ತುಸುವೇ ಸೋಂಕಿದರೆ ಸಾಕು, ತ್ವರಿತವಾಗಿ ಕರಗುವಂಥದು. ಅದೇ ಕಣ್ತೆರೆದ ಹಸುಳೆಗೂ ಅದು ಚೆನ್ನಾಗಿ ಗೊತ್ತು. ಅದರ ಬಾಯಿಯ ಬಿಸಿ ನಸು ತಗುಲಿದರಾಯಿತು, ಅವಳ ಎದೆಯಾಳದಿಂದ ಅಮೃತಧಾರೆ ಹರಿಯುವುದು. ಹೆಂಗಸು ಎಂಬ ಪದವೇ ನಿರ್ದೇಶಿಸುವಂತೆ ಆಕೆಯು ಪೆಣ್‌ಕೂಸು = ಹೆಂಗೂಸು = ಹೆಂಗಸು! ಎಳೆತನದಿಂದ ಮುದಿತನದ ತನಕ ಆಕೆ ಕೂಸಿಗೆ ಸಮಾನ. ಅವಳ ಎದೆ ಪ್ರೀತಿ, ಭೀತಿಗಳಂತಹ ಕರುಣೆ, ಸಹನೆಗಳಂತಹ ಹತ್ತುಹಲವಾರು ಭಾವನೆಗಳ ಆವಾಸಸ್ಥಾನ.

ಜನನಿಯಂತೆ ಜನಕನೂ ಶೋಕಾಕುಲನೇ. ಆದರೆ ಹಿತ ತನ್ನೆದೆಯ ಅಳಲನ್ನು ತೋಡಿಕೊಳ್ಳುವವನಲ್ಲ. ತೆಪ್ಪಗೆ ಕುಳಿತುಕೊಳ್ಳುವವನು. ಗಂಡಸು ಎಂಬ ಪದದ ಒಳಗಿರುವ ಸೊನ್ನೆ (೦) ಆತನ ಎದೆಯೊಳಗಣ ದಯೆ-ಅನುಕಂಪ ಇವುಗಳ ಅಭಿವ್ಯಕ್ತಿಯ ಅಭಾವದ ಸಂಕೇತವೋ ಏನೋ! ಸೊನ್ನೆ ಹೊಡೆದು ಹಾಕಿದರೆ "ಗಡಸು" ಎಂದು ಎನಿಸುತ್ತಾನೆ. ಎನಿಸುವುದೇನು ಬಂತು ? ಈ "ಗಡಸುತನ" ಆತನ ಜಾಯಮಾನ. ಅವನದು ಕಲ್ಲೆದೆ. ಬೀರು ಬಾಟಲುಗಳನ್ನಿಡುವ "ಶೀತ ಬೀರು"ವಿನಲ್ಲಿಟ್ಟಿರುವ ಬೆಣ್ಣೆಯಂತೆ, ಗೋಲ್ಫ್ ಆಟದ ಚೆಂಡಿನಂತೆ ಗಟ್ಟಿಯಾದುದು. ತುಂಬು ಬಸುರಿಯನ್ನು ಹಿಂದುಮುಂದೆನ್ನದ ಅಡವಿಗಟ್ಟಿದ ಭಂಡತನದ ಗಂಡೆದೆ ಅದು. ಕಾಡಿನಲ್ಲಿ ಕಲ್ಲು-ಮುಳ್ಳು ತುಳಿಯುತ್ತ ನೆರಳಿನಂತೆ ತನ್ನನ್ನು ಹಿಂಬಾಲಿಸಿದ ಅಬಲೆಯು ನಿದ್ರಿಸುತ್ತಿದ್ದಂತೆಯೇ ಅವಳ ಉಟ್ಟ ಬಟ್ಟೆಯನ್ನು ಕತ್ತರಿಸಿ ಅದನ್ನೇ ತನ್ನ ಬರಿಮೈಗೆ ಸುತ್ತಿಕೊಂಡು ಬಹುದೂರ ನಿರ್ಗಮಿಸಿದ ನಿರ್ದಯಿ ಪಾಷಾಣ ಸದೃಶ ಎದೆ ಅದು.

ಪುರುಷ ಎಷ್ಟೇ ಕಲ್ಲೆದೆಯವನಾದರೂ ಸಂದರ್ಭವೊದಗಿದಾಗ ವಜ್ರದಂತೆ ಕಠೋರವಾದ ಅವನ ಎದೆ ಕೂಡ ಕರಗಿ ನೀರಾಗುತ್ತದೆ. ಕಂಬನಿಯ ಕೋಡಿ ಹರಿಯುತ್ತದೆ. ಸೀತೆ ಲಕ್ಷ್ಮಣರೊಂದಿಗೆ ಚಿರಕಾಲ ತಾನು ವಾಸವಾಗಿದ್ದ ಸುಪರಿಚಿತವಾದ ಜನಸ್ಥಾನದ ಪ್ರದೇಶವನ್ನು ರಾಮನು ಮಗದೊಮ್ಮೆ ಕಂಡಾಗ ಹುಲುಮಾನವನಂತೆ ಹಲುಬಿದನು. ಆತನ ಅಳುವನ್ನು ಗಮನಿಸಿ ಭವಭೂತಿಯು, "ಅಪಿ ಗ್ರಾವಾ ರೋದಿತ್ಯಪಿ ದಲತಿ ವಜ್ರಸ್ಯ ಹೃದಯಮ್"- ಬಂಡೆಗಲ್ಲು ಸಹ ರೋದಿಸಿತು. ಅತ್ಯಂತ ಕಠಿಣವಾದ ವಜ್ರದ ಹೃದಯ ಕೂಡ ಬಿರಿಯಿತು ಎಂದು ಉದ್ಗರಿಸಿದ್ದಾನೆ ತನ್ನ "ಉತ್ತರ ರಾಮಚರಿತ" ನಾಟಕದಲ್ಲಿ.

ವಾಲ್ಮೀಕಿ ಋಷಿಪುಂಗವ. ಸರ್ವಸಂಗ ಪರಿತ್ಯಾಗಿ. ಕ್ರೌಂಚ ಪಕ್ಷಿಯು ನೆತ್ತರಿನ ಮಡುವಿನಲ್ಲಿ

ವಿಲಿವಿಲಿ ಒದ್ದಾಡಿ ಕೊನೆಯುಸಿರೆಳೆಯುತ್ತಿರುವಂತೆಯೇ ಕರುಳು ಕೊರೆಯುವಂತೆ ಅದರ ಹೆಣ್ಣು ಪಕ್ಷಿ- ಕ್ರೌಂಚಿಯು ಕಿರುಚಿಕೊಳ್ಳತೊಡಗಿದುದನ್ನು ಆಲಿಸಿದ ಆ ಮಹರ್ಷಿಯ ಸಂತಾಪವೇ ಶಾಪದ ರೂಪ ತಳೆದು ಹೊರಹೊಮ್ಮಿತು. ಆತನ ಎದೆಯಾಳದ ಈ ಉಮ್ಮಳವೇ ರಾಮಾಯಣದಂತಹ ಅಮರ ಕಾವ್ಯದ ಚಿಲುಮೆ ಚಿಮ್ಮಿಸಿದುದು. ಮಹಾಪುರುಷರ ಅನುಭವವೇ ಹೀಗಿರಬೇಕಾದರೆ ಸಾಮಾನ್ಯರ ಪಾಡೇನು ?

ಬೆಳಗಿನ ಹೊತ್ತು ಹಾಸಿಗೆಯಿಂದೆದ್ದು ವೃತ್ತಪತ್ರಿಕೆಯನ್ನು ಕೈಗೆತ್ತಿಕೊಂಡಾಕ್ಷಣ ಕಣ್ಣಿಗೆ ಬೀಳುವ ಸುದ್ದಿ ಅಲ್ಲಿ ರಸ್ತೆ ಅಪಘಾತ, ಇಲ್ಲಿ ರೈಲು ದುರಂತ, ಮತ್ತೊಂದೆಡೆ ವಿಮಾನ ಅಪಘಾತ, ಇಷ್ಟು ಜನ ಸ್ಥಳದಲ್ಲೇ ಮೃತಪಟ್ಟರು, ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸುವಾಗ ಇನ್ನಷ್ಟು ಜನರ ಪ್ರಾಣಪಕ್ಷಿ ಹಾರಿಹೋಯಿತು ಇತ್ಯಾದಿ, ಇತ್ಯಾದಿ. ಆಳೆದೆಯ ಯಾವ ಓದುಗನ ಹೃದಯವೂ ಸ್ಪಂದಿಸುವ ದಾರುಣ ವೃತ್ತವಿದೆಲ್ಲ ! ಅಯ್ಯೋ ! ಆಧುನಿಕತೆಯೇ ನೀನು ಕೊಡಮಾಡಿದ ಸೌಕರ್ಯವು ಅತ್ಯವಸರದ ಪ್ರಯಾಣದ ಹುಚ್ಚು ಹವ್ಯಾಸವನ್ನು ಬೆಳೆಯಿಸಿ ಎಂತಹ ದುರಂತವನ್ನು ತಂದೊಡ್ಡುತ್ತಿದೆಯಲ್ಲ ! ಎಂದು ಉದ್ಗರಿಸದಿರಲಾರ ! ಪುರಂದರದಾಸರಂತಹ ಸಂತರು ತೀರಿಹೋದ ತನುಜನನ್ನು ನೆನೆದು, "ಗಿಳಿಯು ಪಂಜರದೊಳಿಲ್ಲ"- ಎಂದು ಮೊದಲಾಗಿ ದುಃಖದಿಂದ ಹಾಡಿದರೆಂದು ಹೇಳಲಾಗುತ್ತದೆ. ಇಲ್ಲಿಯ ಗಿಳಿಯೇ ಪ್ರಾಣಪಕ್ಷಿ.


ಈ ಹಕ್ಕಿಯಾಗಲಿ, ಇದರ ರೆಕ್ಕೆಯಾಗಲಿ, ಇದರ ಹಾರಾಟವಾಗಲಿ ಎಲ್ಲವೂ ಅಗೋಚರ. ಈ ಹಕ್ಕಿಗೆ ಠಾವು ಯಾವುದು ? "ಉರಃಕಂಠಚರಃ ಪ್ರಾಣೋಽ ತ್ರ ಮೂರ್ಧಗಃ" ಎಂಬ ವಾಗ್ಭಟನ ಹೇಳಿಕೆಯಂತೆ ಎದೆ ಮತ್ತು ಗಂಟಲಿನಲ್ಲಿ ಸಂಚರಿಸುವ ಪ್ರಾಣದ ನೆಲೆಯು ತಲೆಯೆ ? ಅಥವಾ ಶರೀರಕ್ಕೆಲ್ಲ ಶಾಖ-ಚೈತನ್ಯಗಳನ್ನು ಒದಗಿಸುವ ರಕ್ತದ ಸೆಲೆಯಾದ ಹೃದಯವೂ ಶರೀರದ ಹತ್ತು ಹಲವು ಚಟುವಟಿಕೆಗಳನ್ನು ನಿರ್ದೇಶಿಸುವ ಶ್ವಾಸಕೋಶಗಳೂ- ಇವುಗಳ ಬೀಡಾದ ಎದೆಯಾಗಿರಬಹುದೆ ? ತಲೆಯಾದರೋ ಎಲುಬಿನ ಬುರುಡೆ. ಗೂಡಿನಾಕಾರ ಅದರದು. ಎದೆಯೋ ಮೂಳೆಗಳ ಪಂಜರ; ಸುರಕ್ಷಿತವಾದ ಕೋಟೆ. ಸುಭದ್ರ ಸಂದುಕ. ಪ್ರಾಣದೇವನ ಠಾಣವು ಇವುಗಳಲ್ಲಿ ಯಾವುದು ?

ಹಾಗೆ ನೋಡಿದರೆ ಇಡೀ ದೇಹವೆ ಎಲುವುಗಳ ಹಂದರ. ಈ ಹಂದರವನ್ನು ಬಳಸಿಕೊಂಡು ಜೀವವೆಂಬ ಬಳ್ಳಿ ಜನನದೊಡನೆ ಚಿಗುರಿ, ಹಲವು ಕಾಲ ಚಲ್ಲವರಿದು, ಯಾವುದೋ ಒಂದು ಚಣ ಮರಣದೊಡನೆ ಕಮರಿ ಹೋಗುವುದು. ಏನಿದ್ದರೂ ಸರಿ. ಬದುಕಿನಲ್ಲಿ ಎದೆಯು ಹಿರಿಮೆಯ ಹೆಗ್ಗುರುತು. ಪ್ರೀತಿಯನ್ನು ವ್ಯಕ್ತಪಡಿಸುವಾಗ ಬಿಗಿಯಾಗಿ ಅಪ್ಪಿಕೊಳ್ಳಲು ಮುಂದಾಗುವುದು ಎದೆ. "ಈ ನಾಡು ನಮ್ಮದು, ಈ ಬೀಡು ನಮ್ಮದು," ಎಂದು ಮೈಯುಬ್ಬಿ ಮನದುಂಬಿ ಹಾಡುವಾಗ ತಟ್ಟಿಕೊಳ್ಳುವ ಎದೆ ಅಭಿಮಾನದ ಸಂಕೇತ.

ಧೈರ್ಯ-ಸ್ಥೈರ್ಯಗಳಿಗೆ ವೀರರ ಎದೆ ತವರ್ಮನೆ ಎನಿಸಿದರೆ, ಹೇಡಿಗಳ ಅಳ್ಳೆದೆ ಭೀತಿ ಸಂದೇಹಗಳ ಶಾಶ್ವತವಾದ ನಿಕೇತನ. ಅಂಜುಗುಳಿಗಳು ಪ್ರತ್ಯಕ್ಷ ಮೃತ್ಯುವಿಗೆ ಮುನ್ನವೇ ಹಲವು ಬಾರಿ ಎದೆಗುಂದಿ ಎದೆಯೊಡೆದುಕೊಂಡೇ ಸಾಯುತ್ತಾರೆ ಎಂಬ ಆಂಗ್ಲ ಉಕ್ತಿ ಎದೆ ಗಟ್ಟಿಯಾಗಿರಬೇಕೆಂಬುದನ್ನೇ ಬೋಧಿಸುತ್ತದೆ.

●

ಲಲಿತ ಪ್ರಬಂಧ



● ಪ್ರೊ. ಜೆ.ಡಿ. ಸಾದಕರ್ಣಿ

"ಬಡಿಗೆಯ ಬಡಿವಾರ ನೋಡೋಣ ಬನ್ನಿರೇ (ಅಥವಾ ಬನ್ನಿರೋ!!)" ಎಂದು ತಮ್ಮನ್ನು ಆಹ್ವಾನಿಸಿದರೆ, ಬಹುಶಃ ಮೊದಲ ನೋಟಕ್ಕೆ ಇದರ ಸ್ವಾರಸ್ಯದ ಕಲ್ಪನೆ ಬರಲಿಕ್ಕಿಲ್ಲ. ಒಂದು ಯಃಕಶ್ಚಿತ್ ವಿಷಯದ ಬಗ್ಗೆ ತಿಳಿದುಕೊಳ್ಳುವುದಾದರೂ ಏನಿದೆ? ಎಲ್ಲ ಬಾಲಿಶ ವಿಚಾರ ಎಂದು ಎನಿಸಬಹುದು. ಆದರೆ, ಬಡಿಗೆಯ ಪ್ರಾಚೀನತೆ, ಅದರ ಸೌಮ್ಯ-ರುದ್ರರೂಪ, ರಾಜಗಾಂಭೀರ್ಯ, ಆಸರೆ-ನೆರವು, ವಿವಿಧ ಬಗೆಯ ಉಪಯುಕ್ತತೆಗಳನ್ನು ಅರಿತ ಮೇಲೆ, ಬಡಿಗೆಯ ಪ್ರಯೋಗ ರುಚಿಕರವಾಗದಿದ್ದರೂ, ಬಡಿಗೆಯ ವಿವಿಧ ರೂಪಗಳು ರಸಿಕರನ್ನು ಆಕರ್ಷಿಸದೆ ಬಿಡವು!

ಬಡಿಗೆಯ ಕಲ್ಪನೆ ಹುಟ್ಟಿದ್ದು ಚಾಕು-ಚೂರಿ ಸಂಸ್ಕೃತಿಗಿಂತ ಮೊದಲೇ. ಹೊಡಿ-ಬಡಿ-ಕಡಿ ಎಂಬ ಮಾನವನ ಕಾಡು ಸಂಸ್ಕೃತಿಯ ಹಿಂಸಾಚಾರದಲ್ಲಿದೆ ಬಡಿಗೆಯ ಉಗಮ. "ನಿನ್ನ ಬಡೀತೇನಿ ನೋಡು!" ಎಂದು ದರ್ಪದಿಂದ ಗಡಸು (ಗಂಡಸು?) ಧ್ವನಿಯಲ್ಲಿ ಎಚ್ಚರಿಕೆ ಕೊಡುವಲ್ಲಿಯೇ ಬಡಿಗೆಯ ಕ್ರಿಯಾಶೀಲತೆಯ ಸ್ವರೂಪ ತಿಳಿದುಬರುತ್ತದೆ. "ಯಾರನ್ನಾದರೂ ಬಡಿಯಲಿಕ್ಕಾಗಿಯೇ ಜನ್ಮತಾಳಿರುವದು ಬಡಿಗೆ." ಎಂದು ಎಳ್ಳಷ್ಟೂ ವ್ಯಾಕರಣ ತಿಳಿಯದ ವ್ಯಕ್ತಿ ಕೂಡ ವಿವರಿಸಬಹುದು. ಶಿಷ್ಟರನ್ನು ರಕ್ಷಿಸಲು, ದುಷ್ಟರನ್ನು ಶಿಕ್ಷಿಸಲು ಪರಮಾತ್ಮನು ಸ್ವತಃ ಅವತರಿಸುತ್ತಾನೆಂಬ ಮಾತನ್ನು ನಾಸ್ತಿಕನು ಒಪ್ಪಲಿಕ್ಕಿಲ್ಲ. ಆದರೆ, ಸ್ವಲ್ಪ ಧಡೂತಿ ಆಸಾಮಿಯ ಕೈಯಲ್ಲಿಯ ಬಡಿಗೆಯನ್ನು ಕಂಡೊಡನೆ, ಅಲ್ಲಿ ಅವನ ಅಭಿಪ್ರಾಯದ ಪ್ರಶ್ನೆಯೇ ಇಲ್ಲ! ಆದರೆ, ಬಡಿಗೆ ಸ್ವತಃ ದುಷ್ಟರನ್ನಷ್ಟೇ ಶಿಕ್ಷಿಸುತ್ತದೆಂದು ಖಂಡಿತ ಹೇಳಲು ಬರುವಂತಿಲ್ಲ; ಅದರ ಪ್ರಯೋಗ ಬಡಿಗೆ ಹಿಡಿದವನ ಸ್ವಭಾವವನ್ನು ಅವಲಂಬಿಸಿರುತ್ತದೆ. ಆದರೆ, ಬಡಿಗೆಯ ಅವತಾರಕ್ಕೂ, ದುಷ್ಟರ ಶಿಕ್ಷೆಗೆಂದು "ಯುಗೇ, ಯುಗೇ" ಅವತರಿಸುವ ಪರಮಾತ್ಮನಿಗೂ ಇರುವ ಸಾಮ್ಯ ಆಶ್ಚರಿಯುಂಟು ಮಾಡುವಂಥದು. ಹಾಗೆ ನೋಡಿದರೆ, ಬಡಿಗೆಯೇ ಹೆಚ್ಚು ಜಾಗೃತ, ಕರ್ತವ್ಯಶೀಲ! ಅದು ಯುಗಕ್ಕೊಮ್ಮೆ ಜನಿಸದೆ, ದಿನೇದಿನೇ ಅಥವಾ ಕ್ಷಣೇಕ್ಷಣೇ ಅವತರಿಸಿ, ಪರಮಾತ್ಮನನ್ನೂ ಮೀರಿಸಿದ್ದೇನೆಂದು ಜಂಬಕೊಚ್ಚಿಕೊಳ್ಳಲೂಬಹುದು.

ಕನ್ನಡದ ಬಡಿಗೆಯೇ ಸುಸಂಸ್ಕೃತವಾಗಿ, ಸಂಸ್ಕೃತದ "ದಂಡ"ವಾಯಿತು. ಹಿಂದೆ, ರಾಜ-

ಮಹಾರಾಜರು ಸ್ವತಃ ದಂಡ ಹಿಡಿಯದಿದ್ದರೂ, ಅವರ ಎಡ-ಬಲಕ್ಕೆ ದಂಡಧಾರಿಗಳು ಇದ್ದೇ ಇರುತ್ತಿದ್ದರು. ಅವರು ದಂಡಪ್ರಯೋಗ ಜನರ ಮೇಲೆ ಮಾಡದಿದ್ದರೂ, ದಂಡವು ಅಧಿಕಾರದ, ಸತ್ತೆಯ ಸ್ಪಷ್ಟ ಸಂಕೇತ. ಅಪರಾಧಿಯು ಇಷ್ಟು ಹಣ "ದಂಡ" ಕೊಡಬೇಕು ಎಂದು ಅಧಿಕಾರಿಯು ಆಜ್ಞೆ ಹೊರಡಿಸುವಲ್ಲಿ ಮತ್ತೆ, ದಂಡ (ಬಡಿಗೆಯ) ರೂಪ ಪ್ರತ್ಯಕ್ಷ! ಮರಣ ದಂಡನೆ ಎಂಬಲ್ಲಿ ಕೂಡ, ಈ ದಂಡ ವ್ಯಕ್ತವಾಗಿಯೇ ತೀರುತ್ತದೆ. 'ದಂಡಿಸು' ಎಂಬ ಕ್ರಿಯಾಪದಕ್ಕೆ ಆಧಾರವಾಗಿಯೇ ಇದೆ- ಈ ದಂಡ! "ಇಷ್ಟೊಂದು ಹಣ ದಂಡವಾಯಿತಲ್ಲ!" ಎಂದು ನಿರಾಶೆಯಿಂದ ನುಡಿಯುವ ಶ್ರೀಸಾಮಾನ್ಯನ ಮಾತಿನಲ್ಲಿ ಮತ್ತೊಂದು ಅರ್ಥದಲ್ಲಿ ದಂಡ ಕಾಣಿಸಿಕೊಳ್ಳುತ್ತದೆ. ಸಂನ್ಯಾಸಿಗಳೆದುರು ಭಕ್ತನು ದಂಡವತ್ ಪ್ರಣಾಮ ಸಲ್ಲಿಸಬೇಕೆಂದು ಹೇಳುವ ಉಕ್ತಿಯಲ್ಲಿ ನಮಗರಿಯದೆಯೇ ದಂಡದ (ಬಡಿಗೆ) ಮಹತ್ವವನ್ನು ವ್ಯಕ್ತಪಡಿಸುತ್ತೇವೆ.

ಕನ್ನಡದ ಬಡಿಗೆಗೆ ಸಂಸ್ಕೃತದಲ್ಲಿಯ ಅದರ ಸಹೋದರನ (ದಂಡ) ಗಾಂಭೀರ್ಯ-ಅಧಿಕಾರಗಳು ಇಲ್ಲವಾದರೂ, ಸರಿಪಡಿಸಲು, ಶಿಸ್ತನ್ನು ಕಾಪಾಡಲು, ಶ್ರಮಿಸುವ ಬಡಿಗೆಯನ್ನು ಯಾರೂ ಕೊಂಡಾಡದೆ ಇರಲಾರರು. ರಾಜರ ಕಾಲ ಹೋಗಿ ಪ್ರಜಾಪ್ರಭುತ್ವ ಬಂದಾಗಲೂ, ಬಡಿಗೆಯ ಬಡಿವಾರ ಎಳ್ಳಷ್ಟೂ ಕಡಿಮೆಯಾಗಿಲ್ಲ. ಹಿಂದೆ ಮಕ್ಕಳಿಗೆ ಕನ್ನಡ



ವರ್ಣಮಾಲೆ ಕಲಿಸುವಾಗ, ಇದ್ದ 'ಅರಸ' ಎಂಬುದು ಈಗ 'ಅಗಸ' ಎಂದು ಬದಲಾಯಿಸಲ್ಪಟ್ಟಿದೆ. ಹಾಗೆಯೇ, ರಾಜದಂಡ ಹೋಗಿ, ದನಕಾಯುವ ಹುಡುಗನ ಕೈಯ್ಯಲ್ಲಿಯ ಬಡಿಗೆಯಾಗಿ ಮಾರ್ಪಾಟಾಗಿದೆ. ಅಂತೂ, ರಾಜರ ಕಾಲವೇ ಇರಲಿ, ಬಡಪ್ರಜೆಗಳ ಕಾಲವೇ ಇರಲಿ, ಬಡಿಗೆಯ ಅಸ್ತಿತ್ವಕ್ಕೆ ಎಂದು ಧಕ್ಕೆ ಬಂದಿಲ್ಲ! "ದನ ಬಡಿದ ಹಾಗೆ ಜನರನ್ನು ಬಡಿದರು" ಎಂದು ಹೇಳುವಾಗ ಕೂಡ, ಬಡಿಗೆಯ ಸಾಮರ್ಥ್ಯವನ್ನು ನಾವು ತಿಳಿದೋ, ತಿಳಿಯದೆಯೋ ಗುರುತಿಸುತ್ತಲೇ ಇರುವೆವು.

ಬಡಿಗೆ ಬಹುರೂಪಿ ಎಂಬುದು ನಿಜ. ಇದು ಹಿಂಸೆಯ ಕ್ರೂರಸ್ವರೂಪ ಬಿಟ್ಟು, ಧಾರ್ಮಿಕ ರಂಗ ಪ್ರವೇಶಿಸಿದೆ. ಕೆಲವು ಸಂನ್ಯಾಸಿಗಳೂ ದಂಡಧಾರಿಗಳಾಗಿರುತ್ತಾರೆ. ಅಲ್ಲಿ ಬಲಪ್ರಯೋಗ ಮಾಡುವ ಪ್ರಶ್ನೆಯೇ ಇಲ್ಲದಿದ್ದರೂ ವಿರಕ್ತ ಸಂನ್ಯಾಸಿಗಳ ಕೈಯಲ್ಲಿಯೂ ಈ ಬಡಿಗೆ ರಾರಾಜಿಸುತ್ತದೆ. "ದಂಡ-ಕಮಂಡಲು" ಇಲ್ಲದ ಸಂನ್ಯಾಸಿಯನ್ನು ಸಂಪ್ರದಾಯದ ಜನ ಗೌರವಿಸಬಹುದೆ? ಇಂಥ ಸಂನ್ಯಾಸಿಗಳಿಗೆ ಆಸ್ತಿಕರು ಉದ್ದಂಡ ನಮಸ್ಕಾರ ಮಾಡಿ, ಉದ್ದಂಡ ಆಯುಷ್ಯವನ್ನೂ ಯಾಚಿಸುವುದರಲ್ಲಿ ತಪ್ಪೇನು? "ದಶಕುಮಾರ ಚರಿತ" ರಚಿಸಿದ ಪ್ರಸಿದ್ಧ ಕವಿ ದಂಡಿ ತನ್ನ ಹೆಸರಿನಲ್ಲಿ ಕೂಡ, ದಂಡದಿಂದಲೇ ಹೆಸರು ಪಡೆದನೆಂಬುದು ಪ್ರಸ್ತುತವಾಗಿದೆ.

ಶಿಕ್ಷಣ ಕ್ಷೇತ್ರಕ್ಕೂ ಬಡಿಗೆಗೂ ಬಹಳ ಹಿಂದಿನ ಕಾಲದ ನಂಟು! ಶಾಲಾ ಮಾಸ್ತರರ ಕೈಯಲ್ಲಿಯ ಛಡಿಯಾಗಿ ಮಾರ್ಪಟ್ಟು, ಬಡಿಗೆ ಹಿಂದಿನ ವಿದ್ಯಾರ್ಥಿವೃಂದದಲ್ಲಿ ಶಿಸ್ತು, ತಪ್ಪಿಲ್ಲದ ಶುದ್ಧ ಬರೆಹ-ಗಣಿತಗಳನ್ನು ಮೈಗೂಡಿಸಿಕೊಳ್ಳುವಲ್ಲಿ ತುಂಬ ಮಹತ್ವದ ಪಾತ್ರವನ್ನಾಡಿದೆ. ಈಗಿನ ಸುಧಾರಿಸಿದ ಶಿಕ್ಷಣ ಕ್ರಮದಲ್ಲಿ ಛಡಿ ನಿವೃತ್ತಿ ಹೊಂದಿದ್ದರೂ, ಒಂದು ತಲೆಮಾರಿನಲ್ಲಿ ಉಡಾಳತನ ಬಿಡಿಸಿ, ಸತತ ಅಭ್ಯಾಸ, ವಿಧೇಯತೆಗಳನ್ನು ರೂಢಿಸುವ ಶ್ಲಾಘ್ಯ ಕೆಲಸ ಮಾಡಿದ್ದು ಸುಳ್ಳಲ್ಲ. ವಿದ್ಯಾರ್ಥಿ ತಪ್ಪು ಮಾಡಿದಾಗ ಶಾಲಾಮಾಸ್ತರರ ಛಡಿ ಪ್ರಯೋಗವು ತಮ್ಮ ಮೈ-ಮನಗಳಲ್ಲಿ ಇಂದಿಗೂ ಹಸಿರಾಗಿ ಉಳಿದದ್ದು, ಇಂದು ವೃದ್ಧರ ಸಾಲಿಗೆ ಸೇರಿದ ಜನ ಮರೆಯುವಂತಿಲ್ಲ! ಇದು ಕೆಲ ಶಿಕ್ಷಕರಲ್ಲಿ ಹಿಂದೆ ಮಿತಿಮೀರುತ್ತಿತ್ತು ಎನ್ನುವುದು ನಿಜವಾದರೂ, ಆದರಿಂದ ಒಳ್ಳೆಯ ಪ್ರಯೋಜನವಾದದ್ದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಛಡಿ ಪ್ರಯೋಗವಾಗಿರದಿದ್ದರೆ, ಆ ಶಿಕ್ಷಕನು ನೀಡಿದ ವಿದ್ಯೆಯಾಗಲಿ, ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದ ಅವನ ರುದ್ರ ಚಿತ್ರವಾಗಲಿ ಸಾಯುವವರೆಗೆ ಮರೆಯದೆ ಉಳಿಯುತ್ತಿತ್ತೇ? ಛಡಿ ಉಪಯೋಗಿಸದ, ಇಂದಿನ ಅಹಿಂಸಾವಾದಿ ಶಿಕ್ಷಕನು ಸ್ಮರಿಸಲ್ಪಡುವುದು ಕೇವಲ ಸಪ್ಟೆಂಬರ್ ಐರಂದು ಯಾಂತ್ರಿಕವಾಗಿ ನಡೆಯುವ "ಶಿಕ್ಷಕ ದಿನಾಚರಣೆ"ಯಂದು ಮಾತ್ರ!

ಸ್ವಾತಂತ್ರ್ಯ ಹೋರಾಟದ ಕಾಲಕ್ಕೂ, ಈ ಬಡಿಗೆಯು ಹಿಂದೆ ಬಿದ್ದಿಲ್ಲ. ಆಗ ಅದರ ಸ್ವರೂಪವು ಬ್ರಿಟಿಶರ ಕಾಲದ ಪೋಲೀಸರ ಕೈಯಲ್ಲಿಯ ಲಾಠಿಯಾಗಿತ್ತು! ಮಹಾತ್ಮಾ ಗಾಂಧಿಯವರ ಆದೇಶದಂತೆ, ಅಹಿಂಸಾತ್ಮಕ ಚಳವಳಿ ನಡೆಸುವ ಅನೇಕ ದೇಶಪ್ರೇಮಿಗಳು, ಏನನ್ನು ಮರೆತರೂ ಪೋಲೀಸರ ಲಾಠಿಚಾರ್ಜಿಗೆ ಬಲಿಯಾಗಿ ನೋವು ಅನುಭವಿಸಿದ್ದನ್ನು ಮರೆಯಲಾರರು! ಮೈ-ಕೈಗಳಿಗೆ ಬಾಸುಂಡೆ ಏಳುವಷ್ಟು ಪೋಲೀಸರ ಲಾಠಿಚಾರ್ಜನ್ನು ತಿಳಿದೂ ತಿಳಿದೂ, ನಗುತ್ತ ಸಹಿಸುವ ಹೋರಾಟಗಾರನಲ್ಲಿ ದೇಶಪ್ರೇಮದ ಪರಾಕಾಷ್ಠೆಯನ್ನು ಕಾಣುತ್ತೇವೆ. ಬಾಂಬ್ ಸ್ಫೋಟಿಸುವ ಇಂದಿನ ಭಯೋತ್ಪಾದಕರ ಮಾತು ಬೇರೆ; ಆದರೆ ಲಾಠಿ ಚಾರ್ಜಿನ ನೋವನ್ನು ತಾಳ್ಮೆಯಿಂದ ಸಹಿಸುವ ನಿಷ್ಠೆಯೇ ಬೇರೆ! ಅಂತೂ ಚಳವಳಿಗಾರರ ದೇಶಪ್ರೇಮವನ್ನು ಒರೆಗೆ ಹಚ್ಚಿ ಪರೀಕ್ಷಿಸುವ ಮೂಲಕ ಪೋಲೀಸರ ಲಾಠಿಯು ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯುತ್ತದೆ.

ಬಡಿಗೆಯು ಯಾವ ರೂಪ ಬೇಕಾದರೂ ಪಡೆಯಬಹುದು; ಅಂದಮೇಲೆ ಅದು ಕುಟುಂಬ ಜೀವನವನ್ನು ಪ್ರವೇಶಿಸಿ, ಅಜ್ಜನ ಕೋಲಿನ ರೂಪ ಪಡೆಯುವಲ್ಲಿ ಹಿಂದೆ ಬೀಳಲಿಲ್ಲ. ವೃದ್ಧಾಪ್ಯದಿಂದ ನಡೆಯುವಾಗ ಜೋಲಿಹೊಡೆಯುವ ಅಜ್ಜನಿಗೆ, ಮಕ್ಕಳು ಯಾರೂ ನೆರವಿಗೆ ಬಾರದಿದ್ದರೂ ಖಂಡಿತ ನೆರವಿಗೆ ಬರುವುದು-ನಿರ್ಜೀವವೆಂದು ನಾವು ತಿಳಿದಿರುವ ಅಜ್ಜನ ಕೋಲೇ ಸರಿ! ಒಂದೇ ಜೀವಮಾನದಲ್ಲಿ, ಎರಡು ಕಾಲು, ಮೂರು ಕಾಲು ಮತ್ತು ನಾಲ್ಕು ಕಾಲಿನ ಮೇಲೆ ನಡೆಯುವ ಪ್ರಾಣಿಯನ್ನು ಗುರುತಿಸುವ ಒಗಟಿನ ವಿನೋದವನ್ನು ಎಲ್ಲರೂ ಬಲ್ಲರು. ಮಗುವಾಗಿದ್ದಾಗ ನಾಲ್ಕು, ಯುವಕ ನಾದಾಗ ಎರಡು ಕಾಲಿನ ಮೇಲೆ ನಡೆಯುವ ಮಾನವ ಎಂಬ ಪ್ರಾಣಿಯು, ವೃದ್ಧಾಪ್ಯದಲ್ಲಿ ಕೋಲು ಹಿಡಿದು ಮೂರುಕಾಲಿನ ಮೇಲೆ ನಡೆ ಯುವ ಅಪರೂಪದ ಪ್ರಾಣಿಯಾಗುತ್ತಾನೆ. ಬಡಿ ಗೆಯ ಈ ರೂಪವು ಈಗ ಅಜ್ಜನ ಕೋಲು ಆಗಿ, ವೃದ್ಧರಿಗೆ ಕೈ ನೀಡುವ ಆಸರೆಯಾಗುತ್ತದೆ. ಹೆಂಡತಿ, ಮಗ, ಸೊಸೆ- ಇವರೆಲ್ಲರೂ ಕೈ ಬಿಟ್ಟರೂ, ವೃದ್ಧನ ಎಂದೂ ಕೈಬಿಡದ ಏಕ ಮೇವ ಮಿತ್ರನೆಂದರೆ ಈ ಕೋಲು! ಬಡಿಗೆಯ ಈ ರೂಪವು ಈಗ ಪೂರ್ತಿ ಅಹಿಂಸಾಮಯ ವಾಗಿದ್ದು, ಆತ್ಮರಕ್ಷಣೆಯ ಸ್ವರೂಪವನ್ನೂ ದಾಟಿ, ಕೇವಲ ಪರೋಪಕಾರಿಯ ರೂಪ ಪಡೆ ಯುತ್ತದೆ. ಅನ್ಯರನ್ನು ಬಡಿಯುವ ಬಡಿಗೆ ಎತ್ತ? ವೃದ್ಧ ಅಸಹಾಯಕರಿಗೆ ಮೌನದಿಂದ ನಿರಪೇಕ್ಷ ನೆರವು

ನೀಡುವ ಅಜ್ಜನ ಕೋಲು ಎತ್ತ? ಇಷ್ಟರಿಂದಲೇ ತೃಪ್ತವಾಗದ ಅಜ್ಜನ ಕೋಲು, ಪ್ರೀತಿಯ ಮೊಮ್ಮಗನ ಆಟದ ಕುದುರೆಯಾಗಿ ಮಾರ್ಪಾಟು ಹೊಂದಿ ಅಜ್ಜ-ಮೊಮ್ಮಗನ ನಡುವಿನ ಪ್ರೀತಿಯನ್ನು ಬೆಸೆಯುತ್ತದೆ! (ಹಾಗೆಯೇ ಬಡಿಗೆ, ಅಜ್ಜಿಯ ಮಡಿಬಟ್ಟೆ ಒಣಗಲು ಹಾಕುವ ಮಡಿಯ ಕೋಲಿನ ಸ್ವರೂಪವನ್ನು ಪಡೆದಿದೆ.)

ಹಿಂಸೆಯ ಸ್ವರೂಪ ಮೊದಲೇ ಬಿಟ್ಟು, ವೃದ್ಧರಿಗೆ ಆಸರೆಯೂ ಆಗದೆ, ಕೇವಲ ವಿಲಾಸದ, ನಾಜೂಕಿನ, ಸೊಗಸಿನ ರೂಪವನ್ನು ಬಡಿಗೆ ಪಡೆಯುತ್ತದೆ. ಯಾವಾಗ? ಎಂದು ಕೇಳುವಿರಾ? ಸಾಯಂಕಾಲ ವಾಯುವಿಹಾರಕ್ಕೆಂದು ಹೊರಟ ನಿವೃತ್ತ ಅಧಿಕಾರಿಯ ಕೈಯಲ್ಲಿಯ ವಾಕಿಂಗ್ ಸ್ಟಿಕ್ ಆದಾಗ! ಭಾರವಲ್ಲದ, ತೆಳ್ಳಗಿನ ಈ ಬಡಿಗೆಯ ರೂಪವು ಹಿಂದೆ ವರ್ಣಿಸಿದ ಅನೇಕ ರೂಪಗಳಿಗಿಂತ ತೀರ ಭಿನ್ನ! ಇಂಥ ಬಡಿಗೆಯ ಪ್ರಯೋಜನವೇನು? ಎಂದು ಕೇಳುವಂತಿದೆ. ಇದು ಆತ್ಮರಕ್ಷಣೆಗಾಗಿ ಎಂದು ಕೂಡ ಹೇಳುವಂತಿಲ್ಲ! ಆ ಸಾಮರ್ಥ್ಯವು ಕೂಡ ಇದರಲ್ಲಿ ಇಲ್ಲ. ವಾಕಿಂಗ್ ಸ್ಟಿಕ್‌ನ್ನು ಸುಮ್ಮನೆ ತಿರುವುತ್ತ, ವಿಲಾಸದಿಂದ ವಾಯುವಿಹಾರಕ್ಕೆಂದು ಹೊರಟ ನಿವೃತ್ತ ಅಧಿಕಾರಿಯ ಕೈಯಲ್ಲಿಯ ಬಡಿಗೆಯ ಈ ರೂಪವು ಎಲ್ಲ ವ್ಯಾಖ್ಯೆಯನ್ನು ಮೀರಿ ನಿಲ್ಲುತ್ತದೆ! ಪ್ರಪಂಚದಲ್ಲಿಯ ಕೆಲವು ವಸ್ತುಗಳ ಪ್ರಯೋಜನವೇನು? ಎಂಬುದು ಎಷ್ಟು ತಲೆ ಕೆಡಿಸಿಕೊಂಡರೂ ಹೊಳೆಯದೆ ಹೋಗುತ್ತದೆ! ಅಂಥವುಗಳಲ್ಲಿ ಅಗ್ರಗಣ್ಯವಾದುದು ಈ ವಾಕಿಂಗ್ ಸ್ಟಿಕ್!

ಮಂಗನನ್ನು ಆಡಿಸುವ ಮನುಷ್ಯನು ತನ್ನ ಕೋಲನ್ನು ಹೊರಳಿಸುವ ವಿವಿಧ ರೀತಿಯಿಂದ ಮಂಗವು ಹೇಗೆ ಆಡಬೇಕೆಂಬುದನ್ನು ಅದಕ್ಕೆ ಕಲಿಸಿ ಕೊಟ್ಟಿರುತ್ತಾನೆ. ಅದರ ರಹಸ್ಯವು ಅವನಿಗೆ ಮತ್ತು ಆ ಮಂಗನಿಗೆ- ಇಬ್ಬರಿಗೇ ಗೊತ್ತು. ಇದನ್ನೇ ಅಕ್ಕಮಹಾದೇವಿಯವರು ತಮ್ಮ ಒಂದು ವಚನದಲ್ಲಿ ಪರಮಾತ್ಮನನ್ನು ಕುರಿತು, "ಕೋಲ ತುದಿಯ ಕೋಡಗದಂತೆ ನೀನು ಆಡಿಸಿದಂತೆ ನಾನು ಆಡುವೆ" ಎಂದು ತಮ್ಮ ಸರ್ವಾರ್ಪಣ ಭಾವದ ಭಕ್ತಿಯನ್ನು ಸುಂದರವಾಗಿ ನಿರೂಪಿಸಿದ್ದಾರೆ. ಇಲ್ಲಿಯೂ ಬಡಿಗೆಯ ಮತ್ತೊಂದು ರೂಪ ಸುವ್ಯಕ್ತ.

ಹುಡುಗಿಯರ ಕೋಲಾಟದಲ್ಲಿ ಬಡಿಗೆಯ ಒಂದು ರೂಪಕ್ಕೆ ಸ್ಥಾನ ದೊರೆತರೂ, ಬಡಿಗೆ ಪುರುಷ ಪಕ್ಷಪಾತಿ ಎಂದೇ ತೋರುತ್ತದೆ. ಬಡಿಗೆ ಹಿಡಿಯುವುದು ಪುರುಷನ ವಿಶಿಷ್ಟ ಹಕ್ಕು ಎಂದರೆ ತಪ್ಪಿಲ್ಲ. ಅಬಲೆಯು ಪ್ರಬಲೆಯಾದಾಗಲೂ (ಒನಕೆ ಓಬವ್ವನಂಥ ಒಬ್ಬಿಬ್ಬ ವೀರನಾರಿಯರನ್ನು ಬಿಟ್ಟರೆ) ಬಡಿಗೆ ಹಿಡಿದು ಮಹಿಳೆ ಅಧಿಕಾರ ಚಲಾಯಿಸಿದ ಸನ್ನಿವೇಶಗಳು ನನ್ನ ಕಣ್ಣಿಗಂತೂ ಬಿದ್ದಿಲ್ಲ! ಬಹುಶಃ ನಿಸರ್ಗವು ಮಹಿಳೆಗೆ ತೀಕ್ಷ್ಣವಾದ ನಾಲಿಗೆ ಕೊಟ್ಟಮೇಲೆ ಅವಳಿಗೆ ಮತ್ತೆ ಏಕೆ ಬಡಿಗೆ ಬೇಕು? ಎಂದು ವಿಚಾರ ಮಾಡಿ, ಬಡಿಗೆಯ ಉಪಯೋಗವನ್ನು ಪುರುಷನಿಗೇ ಸೀಮಿತಗೊಳಿಸಿರಬೇಕೆಂದು ಅನಿಸುತ್ತದೆ! ಮಹಿಳಾಜಾಗೃತಿ, ಮಹಿಳೆಯರ ಹಕ್ಕುಗಳು ಎಂದೆಲ್ಲ ಪ್ರತಿಪಾದಿಸುತ್ತಿರುವಾಗ, ಅವಳಿಗೆ ದಂಡ ಹಿಡಿಯುವ ಅಧಿಕಾರವನ್ನು ಬೇಡುವುದನ್ನು ಮರೆತಂತೆ ಕಾಣುತ್ತದೆ. ಆದರೆ, ಮನೆಯಲ್ಲಿ ಬಡಿಗೆಯನ್ನು ಬಹಳ ಮಟ್ಟಿಗೆ ಹೋಲುವ ಲಟ್ಟಣಿ, ಸೌಟು, ಕಸಬರಿಗೆ ಮುಂತಾದವು ಗೃಹಿಣಿಯ ಕೈಯಲ್ಲಿದ್ದಾಗ, ಅವಳನ್ನು ಬಹಳ ಸಿಟ್ಟಿಗೆಬ್ಬಿಸಬಾರದೆಂಬುದು ಯಾವ ಗೃಹಸ್ಥನಿಗೆ ತಾನೆ ಗೊತ್ತಿಲ್ಲ?

●

ಅದೃಷ್ಟವೆನ್ನುವುದು ಒಂದು ರೀತಿಯಲ್ಲಿ ಸಂತೆಯಿದ್ದಂತೆ. ಸ್ವಲ್ಪ ಹೊತ್ತಿನಲ್ಲಿ ಅದರ ಬೆಲೆ ಬಿಟ್ಟು ಹೋಗಬಹುದು.

– ಫ್ರಾನ್ಸಿಸ್ ಬೇಕನ್

ನಂಬಿಕೆ ಮತ್ತು ಶಂಕೆ

ಹಿರಿಯರು ಹೇಳಿದ್ದನ್ನು, ಹಿಂದಿನಿಂದ ನಡೆದುಕೊಂಡು ಬಂದದ್ದನ್ನು ನಂಬುವುದು ಒಂದು ಗುಣ; ಶಂಕಿಸುವುದು ಇನ್ನೊಂದು ಗುಣ. ಇವೆರಡೂ ಗುಣಗಳೂ ಪ್ರತಿಯೊಬ್ಬ ಮಾನವನಲ್ಲಿಯೂ ಕಂಡು ಬರುತ್ತವೆ.

ನಂಬಿಕೆ ಇಲ್ಲದಿದ್ದರೆ ಬಾಳಲ್ಲಿ ಸ್ಥಿರತೆ ಇರುವುದಿಲ್ಲ, ಶಾಂತಿ ಇರುವುದಿಲ್ಲ. ಅದು ಹೆಚ್ಚಾದರೆ ಚಿಂತನೆ, ವಿಮೋಚನೆ, ಸುಧಾರಣೆ ಕುಂಠಿತವಾಗುತ್ತದೆ. ಶಂಕೆ ಇಲ್ಲದಿದ್ದರೆ ಶೋಧನೆ ಇರುವುದಿಲ್ಲ, ಬದಲಾವಣೆ ಇರುವುದಿಲ್ಲ. ಅದು ಹೆಚ್ಚಾದರೆ ಸಮಾಧಾನವಿರುವುದಿಲ್ಲ, ಸಂಬಂಧಗಳು ಇರುವುದಿಲ್ಲ.

ನಂಬಿಕೆ ನಿಲ್ಲಿಸುತ್ತದೆ, ಭದ್ರತೆಯನ್ನು ಕೊಡುತ್ತದೆ. ಶಂಕೆ ತಳ್ಳುತ್ತದೆ, ತಬ್ಬಿಬ್ಬು ಮಾಡುತ್ತದೆ, ಛಿದ್ರಿಸುತ್ತದೆ. ಸಮಾಜದ ದೋಣಿ'ಗೆ ನಂಬಿಕೆ ಲಂಗರು. ಆದರೆ ಶಂಕೆ ಹುಟ್ಟು. ನಂಬಿಕೆ 'ಟಾನಿಕ್' ಆದರೆ ಶಂಕೆ 'ಪರ್ಗೆಟಿವ್'. ನಂಬಿಕೆ ಶಂಖವಾದರೆ, ಶಂಕೆ ತ್ರಿಶೂಲ.

ಇವೆರಡರಿಂದ ಎಷ್ಟು ಪ್ರಯೋಜನ ಉಂಟೋ ಅಷ್ಟೇ ಅಪಾಯವೂ ಉಂಟು. ನಂಬಿಕೆಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಾಗ ಮೂಢ ನಂಬಿಕೆಗಳಾಗುತ್ತವೆ. ನಂಬಿಕೆಗಳು ಬೌದ್ಧಿಕ ದಾಸ್ಯಕ್ಕೆ ದಾರಿಯಾಗಬಹುದು. ವ್ಯಕ್ತಿಪೂಜೆಗೆ, ಅಂಧಾನುಕರಣೆಗೆ ಎಡೆಗೊಡಬಹುದು. ಶಂಕೆಗಳು ಮೌಲ್ಯಗಳನ್ನು ಮೆಟ್ಟಿ, ಪೂಜಿಸಲು ಯಾವುದೇ ಆದರ್ಶವಿಲ್ಲದಂತೆ ಮಾಡಬಹುದು. ಬಾಳನ್ನೇ ಶೂನ್ಯ ಮಾಡಬಹುದು.


ನಂಬಿಕೆ ಧರ್ಮರಾಯನ ವಾಹನ, ಶಂಕೆ ದುರ್ಯೋಧನನ ವಾಹನ. ನಂಬಿಕೆ ಜೋಡಿಸುತ್ತದೆ. ಶಂಕೆ ಬಿಡಿಸುತ್ತದೆ. ನಂಬಿಕೆ ಕಟ್ಟುತ್ತದೆ, ಶಂಕೆ ಕುಟ್ಟುತ್ತದೆ. ನಂಬಿಕೆಯಿಂದ ಸಂಪ್ರದಾಯ, ಶಂಕೆಯಿಂದ ಬಂಡಾಯ.

ಒಳ್ಳೆಯದನ್ನು ಉಳಿಸಲು ನಂಬಿಕೆ ಬೇಕು. ಕೆಟ್ಟದ್ದನ್ನು ವರ್ಜಿಸಲು ಶಂಕೆ ಬೇಕು. ಒಳ್ಳೆಯದನ್ನೇ ವರ್ಜಿಸಲು ಶಂಕೆ ತೊಡಗಿದಾಗ, ಕೆಟ್ಟದ್ದನ್ನೇ ಉಳಿಸಲು ನಂಬಿಕೆ ಮುಂದಾದಾಗ ಕಾಲ ಕೆಡುತ್ತದೆ.

ಹುರುಳಿಲ್ಲದ ನಂಬಿಕೆಗಳನ್ನು ಉರುಳಿಸಲು ಶಂಕೆ ಬೇಕು. ಉರುಳಿಸಿದ ನಂತರ ಆ ಜಾಗದಲ್ಲಿ ಹೊಸ ಹುರುಳಿರುವ ನಂಬಿಕೆ ಅರಳದಿದ್ದರೆ ಶಂಕೆ ಶೂನ್ಯಕ್ಕೆ, ಅಧೋಗತಿಗೆ ಕಾರಣವಾಗುತ್ತದೆ. ಆದುದರಿಂದ ಶಂಕೆಗೂ ಒಂದು ಅಂಕೆ ಇರಬೇಕು.

ನಂಬಿಕೆ ನಾರಾಯಣನಾದರೆ, ಶಂಕೆ ಶಂಕರನಾದರೆ ಈ ಭೂಮಿ ಸ್ವರ್ಗವಾದೀತು.

● ಹಾಲಾಡಿ ಮಾರುತಿರಾವ್




ಶ್ರೀರಂಗರ ಸಾನ್ನಿಧ್ಯದಲ್ಲಿ

• ಕೆ.ಜಿ. ಹಲಸಿಗಿ

ನನ್ನ ಜೀವನದ ಸಂಧ್ಯಾಕಾಲದಲ್ಲಿ ಹಳೆಗಾಲದ ನೆನಹುಗಳನ್ನು ಮೆಲುಕು ಹಾಕುತ್ತಿರುವಾಗ ನೆನಪಿನ ಸುರುಳಿ ತಾನಾಗಿಯೆ ಬಿಚ್ಚಿಕೊಳ್ಳತೊಡಗುತ್ತದೆ.

ಸುಮಾರು ೧೯೩೨-೩೩ನೆಯ ಇಸವಿ. ನಾನಾಗ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿದ್ದೆ. ಮಗ ಐ.ಸಿ.ಎಸ್. ಪರೀಕ್ಷೆ ಪಾಸಾಗಿ ದೊಡ್ಡ ಆಫೀಸರರಾಗಿ ಬರಬೇಕೆಂಬ ಅಭಿಲಾಷೆಯಿಂದ ಅವರ ತಂದೆ ಶ್ರೀರಂಗರನ್ನು ಇಂಗ್ಲೆಂಡಿಗೆ ಕಳಿಸಿದ್ದರು. ತಮ್ಮ 'ಆತ್ಮ ಜಿಜ್ಞಾಸೆ'ಯಲ್ಲಿ ಶ್ರೀರಂಗರೇ ಕಾಣಿಸಿದಂತೆ ಬಾಲ್ಯದಿಂದಲೂ ಅವರಿಗೆ ನಾಟಕದ ಗೀಳು. ಇಂಗ್ಲೆಂಡಿನಲ್ಲಿ ಕೆಲವು ಸಲ ಹಣವಿಲ್ಲದಾಗ ಉಪವಾಸವಿದ್ದರೂ ಚಿಂತೆಯಿಲ್ಲ, ನಾಟಕಗಳನ್ನು ನೋಡುವುದನ್ನು ಮಾತ್ರ ತಪ್ಪಿಸಿಕೊಳ್ಳುತ್ತಿರಲಿಲ್ಲವಂತೆ. ನಾಟಕದ ಗುಂಗಿನಲ್ಲಿಯೆ ಮುಳುಗಿರುತ್ತಿದ್ದ ಅವರಿಗೆ ಐ.ಸಿ.ಎಸ್. ಪಾಸಾಗುವುದಿರಲಿ, ತಮ್ಮ ತಂದೆಯ ಸೂಚನೆಯ ಪ್ರಕಾರ ಬ್ಯಾರಿಸ್ಟರ್ ಪದವಿಯನ್ನು ತಡೆಯಲೂ ಸಾಧ್ಯವಾಗದೆ ಕೊನೆಗೆ ಭಾಷಾಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ಭಾರತಕ್ಕೆ ಹಿಂದಿರುಗಿದರು. ಬಳಿಕ ಕರ್ನಾಟಕ ಕಾಲೇಜಿನಲ್ಲಿ ಪ್ರೊಫೆಸರರೆಂದು ನಿಯಮಿಸಲ್ಪಟ್ಟು ಸಂಸ್ಕೃತವನ್ನು ಹೇಳುತ್ತಿದ್ದರು.

ನನಗೆ ಶಾಸ್ತ್ರಗ್ರಂಥಗಳನ್ನು ಓದುವ ಅಭಿರುಚಿ ಮೊದಲಿನಿಂದಲೂ ಇದ್ದುದರಿಂದ ಸಂಸ್ಕೃತವನ್ನೇ ಮುಖ್ಯ ವಿಷಯವನ್ನಾಗಿ ತೆಗೆದುಕೊಂಡಿದ್ದೆ. ಆಗ ಸಂಸ್ಕೃತವನ್ನೋದುವವರು ಬಹಳ ಜನರಿರುತ್ತಿರಲಿಲ್ಲ. ಹೀಗಾಗಿ ವಿದ್ಯಾರ್ಥಿಗಳಿಗೂ ಪ್ರಾಧ್ಯಾಪಕರಿಗೂ ನಿಕಟವಾದ



ಸಂಬಂಧ ಬರುತ್ತಿತ್ತು. ಶ್ರೀರಂಗರು ಆಗಲೆ ಕೆಲವು ನಾಟಕಗಳನ್ನು ರಚಿಸಿ ಪ್ರಯೋಗಿಸಿದ್ದರು. ನನಗೂ ಅವರ ನಾಟಕಗಳೆಂದರೆ ಇಷ್ಟ. ಈ ವಿಷಯ ಶ್ರೀರಂಗರಿಗೂ ತಿಳಿದಿತ್ತು.

ಒಂದು ದಿನ ಪಾಠ ಪ್ರಾರಂಭವಾಗುವುದಕ್ಕೆ ಕೆಲ ನಿಮಿಷಗಳಿರುವಾಗ ನಾವು ವಿದ್ಯಾರ್ಥಿಗಳು ಕಟಾಂಜನದ ಹತ್ತಿರ ನಿಂತಿದ್ದೆವು. ಶ್ರೀರಂಗರು (ಆಗಿನ್ನೂ ಅವರು ಆರ್.ಎ. ಜಹಗೀರದಾರರು) ಬರುತ್ತಿದ್ದುದನ್ನು ನೋಡಿ, ಅವರಿಗೆ ಗೌರವವನ್ನು ಸೂಚಿಸಲು ಸ್ವಲ್ಪ ಸರಿದು ನಿಂತುಕೊಂಡೆವು. ಆದರೆ, ಅವರು ನೇರವಾಗಿ ನನ್ನ ಹತ್ತಿರ ಬಂದು, "ಏನಂತೀರಿ ಹಲಸಿಗಿ?" ಎಂದು ಕನ್ನಡದಲ್ಲಿ ಮಾತನಾಡಿಸಿದರು. ಆಗಿನ ಕಾಲದಲ್ಲಿ ಕಾಲೇಜಿನ ಆವರಣದಲ್ಲಿ ಕನ್ನಡ ಮಾತನಾಡುವ ಪ್ರೊಫೆಸರರನ್ನು ಕಾಣುವುದೇ ಶಕ್ಯವಿರಲಿಲ್ಲ. ಇಂಚು ಇಂಚಿಗೂ ಇಂಗ್ಲಿಷಿನ ವಾತಾವರಣ. ಕನ್ನಡ ಮಾತನಾಡುವುದು ಅಶಿಕ್ಷಿತರ ಲಕ್ಷಣ ಎಂಬ ಭಾವನೆ ಎಲ್ಲೆಡೆ ಸಾರ್ವತ್ರಿಕವಾಗಿದ್ದ ಕಾಲ. ಇಂತಹುದರಲ್ಲಿ ಅವರು ಕನ್ನಡದಲ್ಲಿ ಮಾತನಾಡಿಸಿದಾಗ ನನಗೆ ರೋಮಾಂಚನವಾಗದೆ ಇರಲಿಲ್ಲ. ಲೋಕಾಭಿರಾಮವಾಗಿ ಆ ಮಾತು ಈ ಮಾತು ಆಡಿ, ನಾಟಕವಾಡುವ ಅಭಿರುಚಿಯವರೆಲ್ಲ ತಮ್ಮ ನಾಟಕಗಳನ್ನು ಆಡುವುದರಲ್ಲಿಯೂ ಆಸಕ್ತಿ ವಹಿಸಬೇಕೆಂದು ಸೂಚಿಸಿದರು. ಈ ಘಟನೆಯೇ ನನಗೆ ಅವರ ನಿಕಟ ಪರಿಚಯವನ್ನು ಮಾಡಿಕೊಳ್ಳಲು ಅನುವಾಯಿತು.

ಆಗ ಕರ್ನಾಟಕ ಕಾಲೇಜಿನಲ್ಲಿಯೇ ಪ್ರೊಫೆಸರರಾಗಿದ್ದ ದಿವಂಗತ ಎ.ಟಿ. ಸಾಸನೂರರು 'ಧಾರವಾಡ ಅಮೇಚೂರ್ಸ್' ಎಂಬ ಹೆಸರಿನಿಂದ ಹವ್ಯಾಸಿಗಳ ಸಂಘ ಕಟ್ಟಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಶ್ರೀರಂಗರಿಗೆ ಈ ಹೆಸರು ಒಪ್ಪಿಗೆಯಾಗದ್ದರಿಂದ 'ಅಮೇಚೂರ್ಸ್' ಶಬ್ದದ ಬದಲು 'ನಾಟ್ಯ ವಿಲಾಸಿಗಳು' ಎಂಬ ಶಬ್ದವನ್ನು ಉಪಯೋಗಿಸಲು ಸೂಚಿಸಿದರು. ನಮಗೂ ಅವರ ಸೂಚನೆ ಸರಿಯೆಂದು ತೋರಿದ್ದರಿಂದ ನಮ್ಮ ಗುಂಪು 'ಕನ್ನಡ ನಾಟ್ಯ ವಿಲಾಸಿಗಳು' ಎಂಬ ಹೆಸರನ್ನು ಪಡೆಯಿತು.

ಶ್ರೀರಂಗರು ಆಗಿನ್ನೂ ಅವಿವಾಹಿತರು. ಮಾಳಮಡ್ಡಿಯ ಸ್ಟೇಶನ್ ರಸ್ತೆಯಲ್ಲಿರುವ ರೋಣ ಅವರ ಮನೆಯ ಎದುರು ಒಂದು ಬಾಡಿಗೆ ಕೋಣೆಯಲ್ಲಿರುತ್ತಿದ್ದರು. ಮನೆಗೆಲಸಕ್ಕೊಂದು ಆಳು. ಹೆಸರು ರಜಾಕ್. ಯಾವುದೋ ಒಂದು ನಾಟಕದ ರಂಗತಾಲೀಮಿಗಾಗಿ ಅವರ ಕೋಣೆಗೆ ಹೋಗುವ ಪ್ರಸಂಗ ಬಂದಿತ್ತು. ಆಗ ಬೆಳಗಿನ ಎಂಟು ಗಂಟೆ. ಶ್ರೀರಂಗರು ಏನೋ ಬರೆಯುತ್ತಿದ್ದರು. ವಿಶೇಷವಾಗಿ ಉಪಚರಿಸುವುದು ನಾಟಕೀಯತೆ ಎಂದು ಅವರ ಭಾವನೆಯಿದ್ದಿರಬೇಕು. "ಬಾ" ಎನ್ನಲಿಲ್ಲ. ರಜಾಕ್ ಎರಡು ದೊಡ್ಡ ಕಪ್ಪಿನ ತುಂಬ ಚಹಾ ತಂದಿಟ್ಟು ಹೋದ. ಮನೆಗೆ ಹೋದಾಗ ಪ್ರೊಫೆಸರರು ಚಹಾ ಕೊಟ್ಟರೆಂದರೆ! ಈ ವಿಚಾರದಿಂದಲೇ ನನ್ನ ಮೈ ಉಬ್ಬಿತು. ಶ್ರೀರಂಗರು ತಮ್ಮ ಬರವಣಿಗೆಯನ್ನು ಒಂದು ಕ್ಷಣ ನಿಲ್ಲಿಸಿ, ಒಂದು ಕಪ್ಪನ್ನು ತೆಗೆದುಕೊಂಡು ಚಹವನ್ನು ಹೀರುತ್ತ ಬರೆಯತೊಡಗಿದರು. ಇನ್ನೊಂದು ಕಪ್ಪು ನನಗಾಗಿ ಇದ್ದರೂ ಗುರುಗಳು ಹೇಳಿದ ಹೊರತು ಕುಡಿಯುವುದು ಹೇಗೆ? ಎಂಬ ಆತಂಕ ನನಗೆ. ಒಂದು ಕಪ್ಪು ಚಹಾ ಮುಗಿಯಿತು. ಶ್ರೀರಂಗರು ಎರಡನೆಯ ಕಪ್ಪನ್ನೂ ಮುಗಿಸಿದರು. ನನದೋ ಇಂಗು ತಿಂದ ಮಂಗನ ಸ್ಥಿತಿ. ಇದು ಶ್ರೀರಂಗರಿಗೂ ಅರ್ಥವಾಗಿರಬೇಕು. ಅವರು ನನ್ನತ್ತ ನೋಡಿ, "ನಿಮಗೂ ಚಹಾ ಬೇಕಾಗಿತ್ತೇನು?" ಅಂದರು. "ಇಲ್ಲ, ನಾನು ಕುಡಿದೇ (ಚಹಾ) ಬಂದಿದ್ದೇನೆ." ಎಂದೆ. ಶ್ರೀರಂಗರು ಹೆಚ್ಚು ಒತ್ತಾಯಿಸಲಿಲ್ಲ. ಅದು ಅವರ ಪದ್ಧತಿಯೂ ಆಗಿರಲಿಲ್ಲ. ನಾವು ಪ್ರದರ್ಶಿಸಬೇಕಾಗಿದ್ದ ನಾಟಕದ ಬಗೆಗೆ ಕೆಲವು ಮಾತು ಹೇಳಿದರು. ಕೇಳಿಕೊಂಡು ಮನೆಗೆ ಬಂದೆ. ಹೀಗೆ ನಮ್ಮ ಪರಿಚಯ ಬೆಳೆಯುತ್ತ ನಡೆಯಿತು.

ಆಗಿನ ಸ್ತ್ರೀ ಪಾತ್ರಗಳ ಬಗೆಗೆ ಒಂದೆರಡು ಮಾತುಗಳನ್ನು ಹೇಳುವುದು ಇಲ್ಲಿ ಅಪ್ರಸ್ತುತ

ವಾಗಲಿಕ್ಕಿಲ್ಲವೇನೋ. ನಾಟಕಗಳಲ್ಲಿ ಭಾಗವಹಿಸುವುದೆಂದರೆ ಮರ್ಯಾದೆಗೆ ಕುಂದು ಎಂಬ ಭಾವನೆ ಸಾರ್ವತ್ರಿಕವಾಗಿದ್ದುದರಿಂದ ಆಗ ಕಂಪನಿ ನಾಟಕಗಳಲ್ಲಾಗಲಿ ನಾಟ್ಯವಿಲಾಸಿಗಳ ಗುಂಪಿನಲ್ಲಾಗಲಿ ಭಾಗವಹಿಸಲು ಸ್ತ್ರೀಯರು ಮುಂದೆ ಬರುತ್ತಿರಲಿಲ್ಲ. ಶ್ರೀರಂಗರೇ ತಮ್ಮ 'ಆತ್ಮಜಿಜ್ಞಾಸೆ'ಯಲ್ಲಿ ಹೇಳಿದಂತೆ ನಾಟಕಗಳಲ್ಲಿ ನಟಿಸುವಂತೆ ಅವರನ್ನು ಕೇಳುವ ಧೈರ್ಯ ಯಾರಿಗೂ ಇರಲಿಲ್ಲ. ಅಕಸ್ಮಾತ್ತಾಗಿ ಯಾರಾದರೂ ಒಪ್ಪಿದರೆ ಸಾರ್ವಜನಿಕರಲ್ಲಿ ಅವರ ಬಗೆಗೆ ನಾನಾ ಬಗೆಯ ಊಹಾಪೋಹಗಳು ಏಳುವ ಸಾಧ್ಯತೆಯೂ ಇತ್ತು. ಆದ್ದರಿಂದ ಗಂಡಸರೇ ಅನಿವಾರ್ಯವಾಗಿ ಸ್ತ್ರೀಪಾತ್ರಗಳನ್ನು ಮಾಡಬೇಕಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಧಾರವಾಡದ ಕೋರ್ಟಿನಲ್ಲಿ ಕೆಲಸ ಮಾಡುತ್ತಿದ್ದ ಕೆ.ವಿ. ಜೋಶಿಯವರು ಹಾಗೂ ಕೆ.ಎ. ಕುಲಕರ್ಣಿಯವರು ಸ್ತ್ರೀಪಾತ್ರಗಳನ್ನು ಮಾಡಲು ಮುಂದೆ ಬಂದು ನಮಗಿದ್ದ ಅಡಚಣೆಯನ್ನು ಸ್ವಲ್ಪಮಟ್ಟಿಗಾದರೂ ದೂರ ಮಾಡಿದರು. ಅಷ್ಟೇ ಅಲ್ಲ, ಸ್ತ್ರೀ ಪಾತ್ರಗಳನ್ನು ಅವರು ಚೆನ್ನಾಗಿ ಅಭಿನಯಿಸಿ ಜನರ ಮೆಚ್ಚುಗೆಯನ್ನೂ ಪಡೆದರು. ಅವರು ಸ್ತ್ರೀ ಪಾತ್ರವನ್ನು ಮಾಡುವಾಗ ತಮ್ಮ ಮನೆಯವರಿಂದ ಸೀರೆಯನ್ನು ಉಟ್ಟುಕೊಳ್ಳುವುದರಲ್ಲಿ ತರಬೇತಿ ಪಡೆದೇ ಬರುತ್ತಿದ್ದರು. ಇದರಲ್ಲಿ ಅವರು ಪರಿಣತರಾದ ಮೇಲೆ ಬೇರೆ ಬೇರೆ ಶಾಲೆ-ಕಾಲೇಜುಗಳಲ್ಲಿ ಬೇರೆಯವರು ನಾಟಕ ಮಾಡುವಾಗ ಸ್ತ್ರೀ ಪಾತ್ರಗಳಿಗೆ ಸೀರೆ ಉಡಿಸುವುದಕ್ಕೆಂದೇ ಇವರನ್ನು ಕರೆದುಕೊಂಡು ಹೋಗತೊಡಗಿದರು.

ಇವರು ಸ್ತ್ರೀ ಪಾತ್ರಗಳಲ್ಲಿ ನಟಿಸುತ್ತಿದ್ದಾಗ ನಡೆದ ಕೆಲ ಘಟನೆಗಳು ನನ್ನ ಮನಸ್ಸಿನಲ್ಲಿಂದೂ ಹಸಿರಾಗಿವೆ. ಯಾವುದೋ ಒಂದು ನಾಟಕದಲ್ಲಿ ಕೆ.ಎ. ಕುಲಕರ್ಣಿಯವರು ನಟಿಸುತ್ತಿದ್ದಾಗ ಉಟ್ಟ ಪೀತಾಂಬರದ ಸಡಿಲಾದ ನಿರಿಗೆಗಳು ಬಿಚ್ಚತೊಡಗಿದವು. ಆಗ ಅವರು ತೋರಿದ ಸಮಯಪ್ರಜ್ಞೆಯನ್ನು ಮರೆಯುವಂತಿಲ್ಲ. ಕೂಡಲೇ ಸೀರೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಹತ್ತಿರವೇ ಇದ್ದ ಒಂದು ಸೋಫಾದ ಮೇಲೆ ಕುಳಿತುಕೊಂಡು ಮಾತನಾಡತೊಡಗಿದರು. ಸೂಕ್ಷ್ಮ ದೃಷ್ಟಿಯವರಿಗೆ ಮಾತ್ರ ಇದು ಗೊತ್ತಾಯಿತೇ ಹೊರತು ಉಳಿದವರಿಗೆ ಇದರ ಸುಳಿವೇ ಹತ್ತಲಿಲ್ಲ. ಆ ದೃಶ್ಯ ಮುಗಿದು ಅವರು ಒಳಗೆ ಬಂದಾಗ ಅವರ ಸಮಯಪ್ರಜ್ಞೆಯನ್ನು

ಜಿ.ಜಿ. ಪುರಾಣಿಕ
ಮತ್ತು
ಶ್ರೀಮತಿ ಪುರಾಣಿಕರು



ನಾವೆಲ್ಲ ಹೊಗಳಿದ್ದೇ ಹೊಗಳಿದ್ದು.

ಇನ್ನೊಂದು ಸಂದರ್ಭದಲ್ಲವರು ತಲೆಗೆ ಟೋಪನ್ (ವಿಗ್) ಹಾಕಿಕೊಂಡು ಸಿದ್ಧರಾಗಿ ನಿಂತಾಗ ಅದರ ಒಂದು ದಾರಕ್ಕೆ ಸಿಕ್ಕ ಟೋಪನ್ ಪರದೆಯ ಸಂಗಡವೇ ಮೇಲಕ್ಕೆ ಹೋಯಿತು. ಇದನ್ನು ಕಂಡ ಪ್ರೇಕ್ಷಕರು ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದು ಆಶ್ಚರ್ಯವಲ್ಲ, ಆದರೆ ಆಗ ಏನು ಮಾಡಲೂ ಸಾಧ್ಯವಿರಲಿಲ್ಲ. ಅವರು ಒಳಗೆ ಹೋಗಿ ಟೋಪನ್ನನ್ನು ಸರಿಯಾಗಿ ಹಾಕಿಕೊಂಡು ಬಂದ ನಂತರ ನಾಟಕವನ್ನು ಮುಂದುವರಿಸಿದೆವು.

ಕ್ರಮೇಣವಾಗಿ ಸಮಾಜದಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಮುಂದೆ ನಾವು ಪ್ರದರ್ಶಿಸಿದ ಎಷ್ಟೋ ನಾಟಕಗಳಲ್ಲಿ ಜಿ.ಜಿ. ಪುರಾಣಿಕ ದಂಪತಿಗಳೂ, ಎ.ಎಂ. ಇನಾಮದಾರ ದಂಪತಿಗಳೂ ನಿರ್ಭಯರಾಗಿ ನಟಿಸಿ ನಾಟಕಗಳಿಗೆ ಕಳೆ ತುಂಬಿದರು.

ಒಮ್ಮೆ ಧಾರವಾಡದ ಬಾಸೆಲ್‌ಮಿಶನ್ ಹೈಸ್ಕೂಲಿನ ರಂಗಮಂದಿರದಲ್ಲಿ ಒಂದು ನಾಟಕವನ್ನು ಪ್ರದರ್ಶಿಸಿದ್ದೆವು. ಅದರಲ್ಲಿ ಸ್ತ್ರೀ ಪಾತ್ರಕ್ಕೆ ಒಬ್ಬ ವಯಸ್ಸಿಗೆ ಬಂದ ಬಾಲಿಕೆಯನ್ನು ತೆಗೆದುಕೊಂಡಿದ್ದೆವು. ನನ್ನದು ಹರಿದಾಸನ ಪಾತ್ರ. ಒಂದು ಸಂದರ್ಭದಲ್ಲಿ ನಾನವಳನ್ನು ಮುಟ್ಟಿ, ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಬೇಕಾಗಿತ್ತು. ರಂಗತಾಲೀಮನ್ನು ಪ್ರಾರಂಭಿಸುವುದಕ್ಕಿಂತ ಮೊದಲೇ ಆ ಬಾಲಕಿಯಿಂದಲೂ ಅವಳ ತಾಯಿಯಿಂದಲೂ ಹಾಗೆ ಮಾಡಲು ಅನುಮತಿಯನ್ನು ಪಡೆದುಕೊಂಡ ನಂತರವೇ ರಂಗತಾಲೀಮನ್ನು ಪ್ರಾರಂಭಿಸಿದ ಕಾಲವೆಲ್ಲಿ, ಈಗಿನ ಚಲನಚಿತ್ರಗಳಲ್ಲಿ, ಟಿ.ವಿ.ಯಲ್ಲಿ ಗಂಡು-ಹೆಣ್ಣುಗಳು ಅರೆನಗ್ನ ವೇಷದಲ್ಲಿ ಸಭ್ಯತೆಯ ಮೇರೆಯನ್ನೂ ಮೀರಿ ಅಂಗಾಂಗಗಳನ್ನು ಪ್ರದರ್ಶಿಸುತ್ತ ಒಬ್ಬರನ್ನೊಬ್ಬರು ತಬ್ಬಿಕೊಳ್ಳುವ ಕಾಲವೆಲ್ಲಿ? ಇದನ್ನು ಯಾರಾದರೂ ಆಕ್ಷೇಪಿಸಿದರೆ ಅವರಿಗೆ ತೀರ ಹಿಂದುಳಿದವರೆಂಬ ಹಣೆಪಟ್ಟಿ ಅಂಟಿಕೊಳ್ಳುತ್ತದೆ. ಕಾಲಾಯ ತಸ್ಮೈ ನಮಃ.

ನಾನಿನ್ನೂ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿರುವಾಗ ಶ್ರೀರಂಗರು ಒಮ್ಮೆ ಕಾಲೇಜಿನ ನಾಟ್ಯಪ್ರೇಮಿಗಳನ್ನು ಕೂಡಿಸಿಕೊಂಡು ತಮ್ಮ 'ದರಿದ್ರ ನಾರಾಯಣ' ನಾಟಕವನ್ನು ಪ್ರದರ್ಶಿಸಿದರು. ನಾಟಕದ ಪ್ರಯೋಗ ನಡೆದದ್ದು ಕಾಲೇಜಿನ ಮಹಡಿಯ ಮೇಲಿನ ದೊಡ್ಡ ಹಾಲ್‌ನಲ್ಲಿ. ನಾಟಕ ಪ್ರಾರಂಭವಾಗುವುದಕ್ಕಿಂತ ಮೊದಲು ಎಲ್ಲ ಪಾತ್ರಗಳನ್ನು ಪರಿಶೀಲಿಸಿ ಸಲಹೆ ಸೂಚನೆಗಳನ್ನು ಕೊಡುವುದು ಶ್ರೀರಂಗರ ಪದ್ಧತಿ. ಆದರೆ ಅಂದು ಅದು ಹೇಗೋ ಮುಖ್ಯ ಪಾತ್ರ ಧರಿಸಿದವ ಅವರ ಕಣ್ಣಿಗೆ ಬೀಳಲೇ ಇಲ್ಲ. ನಾಟಕದ ಪರದೆ ಮೇಲೆದ್ದಿತು. ದರಿದ್ರ ನಾರಾಯಣನ ಪಾತ್ರಧಾರಿ ಅತ್ಯುತ್ತಮವಾದ ಸೂಟ್ ಹಾಕಿಕೊಂಡು ವೇದಿಕೆಯನ್ನು ಪ್ರವೇಶಿಸಿದಾಗ ಶ್ರೀರಂಗರಿಗೆ ಆಘಾತವೇ ಆಯಿತು. ತಾವೇ ವೇದಿಕೆಯ ಮೇಲೆ ಬಂದು ಆ ಪಾತ್ರಧಾರಿಯನ್ನು ಬೈದು, ಹೊರಹಾಕಿ, ಪ್ರೇಕ್ಷಕರ ಕ್ಷಮೆ ಕೇಳಿ ತಾವೇ ಆ ಪಾತ್ರದಲ್ಲಿ ನಟಿಸಿದರು. ಈ ಘಟನೆಯನ್ನು ಅವರು ತಮ್ಮ 'ಆತ್ಮ ಜಿಜ್ಞಾಸೆ'ಯಲ್ಲೂ ಸ್ವಲ್ಪಮಟ್ಟಿಗೆ ಕಾಣಿಸಿದ್ದಾರೆ.

ನಾಟಕ ಕನ್ನಡದ್ದೇ ಇರಲಿ, ಮರಾಠಿಯದೇ ಇರಲಿ, ಆಗಿನ ಕಾಲದ ನಾಟಕಗಳಲ್ಲಿ ಸಂಗೀತಕ್ಕೇ ಪ್ರಾಧಾನ್ಯ. ಅದಕ್ಕೆಂದೇ ನಾಟಕ ಕಂಪನಿಗಳಲ್ಲಿ ಸುಪ್ರಸಿದ್ಧ ಗಾಯಕರ ನೇಮಕವಾಗುತ್ತಿತ್ತು. ಅವರ ಹಾಡುಗಳನ್ನು ಕೇಳಲೆಂದೇ ಎಷ್ಟೋ ಜನ ದುಡ್ಡುಕೊಟ್ಟು ನಾಟಕಕ್ಕೆ ಹೋಗುತ್ತಿದ್ದರು. ನಾಟಕ ಕಂಪನಿಗಳ ಉದ್ದೇಶ ಹಣಗಳಿಸುವುದಾದರೆ ಶ್ರೀರಂಗರ ನಾಟಕಗಳ ಉದ್ದೇಶ ಸಮಾಜದಲ್ಲಿ, ರಾಜಕೀಯದಲ್ಲಿ ಸುಧಾರಣೆಯನ್ನುಂಟು ಮಾಡುವುದು. ಹೀಗಾಗಿ ಅವರ ನಾಟಕಗಳಲ್ಲಿ ಸಂಗೀತಕ್ಕೆ ಸ್ಥಾನವೇ ಇಲ್ಲ.

ನಾಟಕದಲ್ಲಿ ಸಂಗೀತ ಹೇಗೆ ಆಭಾಸಕರವಾಗಬಲ್ಲದೆಂಬುದಕ್ಕೆ ಶ್ರೀರಂಗರು ಈ

ಉದಾಹರಣೆಯನ್ನು ಕೊಡುತ್ತಿದ್ದುದುಂಟು. ಒಂದು ಐತಿಹಾಸಿಕ ನಾಟಕ. ಪ್ರಜಾವತ್ಸಲನಾದ ರಾಜ ರಾಜ್ಯವಾಳುತ್ತಿದ್ದಾಗ ಇನ್ನೊಬ್ಬ ರಾಜ ಕೋಟೆಗೆ ಮುತ್ತಿಗೆ ಹಾಕಿದ. ಈ ಸುದ್ದಿ ತಿಳಿದ ಕೂಡಲೇ ಆ ಪ್ರಜಾವತ್ಸಲನಾದ ರಾಜ ವೀರಾವೇಶದಿಂದ ಯುದ್ಧಕ್ಕೆ ಹೊರಡಲು ಸಿದ್ಧನಾದ. ಆದರೆ ಈ ಸುದ್ದಿಯನ್ನು ತನ್ನ ಪ್ರೀತಿಯ ರಾಣಿಗೆ ಹೇಳದೆ ಹೋಗುವುದು ಹೇಗೆ? ಈ ಸಂದರ್ಭದಲ್ಲಿ ಹಾಡಲು, "ಪೋಗಿ ಬರ್ಪೆನಾ ನಾರೀ ಮಣಿಯೇ..." ಎಂದು ಪ್ರಾರಂಭವಾಗುವ ಹಾಡನ್ನು ಹಾಕಲಾಗಿತ್ತು. ಸರಿ. ನಾಟಕ ಪ್ರಾರಂಭವಾಯಿತು. ರಾಜಸೇವಕರು ವೈರಿ ಸೈನ್ಯ ಕೋಟೆಗೆ ಮುತ್ತಿಗೆ ಹಾಕಿದ್ದನ್ನು ರಾಜನಿಗೆ ತಿಳಿಸಿದರು. ಆತ ಅಂತಃಪುರಕ್ಕೆ ತೆರಳಿದ. ರಂಗಸ್ಥಳದ ಮುಂದೆ ಕುಳಿತ ತಬಲಾಪೇಟಿಯವರು ಹಾಡನ್ನು ಬಾರಿಸಲು ಪ್ರಾರಂಭಿಸಿದರು. ರಾಜನ ಪಾತ್ರ ಹಾಕಿದವನೂ ಒಳ್ಳೇ ಸಂಗೀತಗಾರ. ಹಾಡು ಪ್ರಾರಂಭವಾಯಿತು. ಪಲ್ಲವಿಯನ್ನು ಹಾಡುವಾಗಲೇ ರಾಜ ತನ್ನ ಗಾನ ಕೌಶಲವನ್ನು ತೋರಿಸುತ್ತ ಐದು ನಿಮಿಷ ತೆಗೆದುಕೊಂಡ. ನುಡಿಗಳನ್ನು ಹಾಡಲು ಮತ್ತೆ ಹದಿನೈದು ನಿಮಿಷ. ಆಗ ಪ್ರೇಕ್ಷಕನೊಬ್ಬ ಎದ್ದು ನಿಂತು, "ಏ ಮಹರಾಯಾ, ನಿನ್ನ ರಾಜಧಾನಿಯನ್ನಷ್ಟೇ ಅಲ್ಲ, ನಿನ್ನ ಕೋಟೆಯ ಕಲ್ಲುಗಳನ್ನೂ ವೈರಿಗಳು ತೆಗೆದುಕೊಂಡು ಹೋದರು. ಇನ್ನಾದರೂ ನಿನ್ನ ಹಾಡನ್ನು ಸಾಕು ಮಾಡು," ಎಂದು ಒದರಿದ. ಆಗ ರಾಜನ ಸ್ಥಿತಿ ಹೇಗಾಗಿರಬೇಕು ಎನ್ನುವುದು ನಿಮ್ಮ ಊಹೆಗೇ ಬಿಟ್ಟ ವಿಷಯ.

ಇನ್ನೊಂದು ನಾಟಕ. ಪಾತ್ರಧಾರಿಯು ಹಾಡನ್ನು ಹಾಡುತ್ತ ಅದು ಮುಗಿದ ಕೂಡಲೇ ಕೆಳಗೆ ಬಿದ್ದು ಸಾಯುವ ಸಂದರ್ಭ. ಪಾತ್ರಧಾರಿಯು ಒಳ್ಳೇ ಸಂಗೀತಗಾರನಾಗಿದ್ದರಿಂದ ಹಾಡು ಮುಗಿದ ಕೂಡಲೆ ಪ್ರೇಕ್ಷಕರು 'ಒನ್ಸ್ ಮೋರ್' ಎಂದು ಕೂಗಹತ್ತಿದರು. ಅವರ ಒತ್ತಡಕ್ಕೆ ಮಣಿದು ಪರದೆ ಮತ್ತೆ ಮೇಲೇರಿತು. ಪಾತ್ರಧಾರಿ ಮತ್ತೆ ಹಾಡಿದ; ಮತ್ತೆ ಸತ್ತ. ಅಂದು ಪ್ರೇಕ್ಷಕರನ್ನು ತೃಪ್ತಿಪಡಿಸಲು ಆತ ವೇದಿಕೆಯ ಮೇಲೆ ಅನೇಕ ಸಲ ಸಾಯಬೇಕಾಯಿತಂತೆ! ಇಂತಹ ಆಭಾಸಗಳು ನಾಟಕದಲ್ಲಿರಬಾರದೆಂಬುದು ಶ್ರೀರಂಗರ ಅಭಿಪ್ರಾಯವಾಗಿತ್ತು.



'ಶೋಕ ಚಕ್ರ'ದಲ್ಲಿ
ಕೆ.ಜಿ. ಹಲಸಿಗಿ (ಹನುಮಂತಪ್ಪ)
ಡಾ. ವಿ.ಎಂ. ಇನಾಂದಾರ (ರಾಯರು)
ಹಾಗೂ ಇತರರು.

ಶ್ರೀರಂಗರ ನಾಟಕವೊಂದನ್ನು ಪ್ರದರ್ಶಿಸಲು ನಾವೆಲ್ಲ ಒಮ್ಮೆ ಧಾರವಾಡ ಜಿಲ್ಲೆಯ ದಕ್ಷಿಣ ದಲ್ಲಿರುವ ಬ್ಯಾಡಗಿಗೆ ಹೋಗಿದ್ದೆವು. ನಾಟಕ ರಾತ್ರಿ ಒಂಬತ್ತೂವರೆಗೆ ಶುರುವಾಗಬೇಕಾಗಿತ್ತು. ಆದರೆ ಹತ್ತು ಗಂಟೆಯಾದರೂ ಪ್ರೇಕ್ಷಕರ ಸುಳಿವೇ ಇಲ್ಲ. ಇದರಿಂದಾಗಿ ನಮಗೆಲ್ಲರಿಗೂ ಒಂದು ಬಗೆಯ ಆತಂಕ, ದುಗುಡ. ಅಂತೂ ಹತ್ತೂವರೆಗೆ ನಗರಸಭೆಯ ಸದಸ್ಯರೊಬ್ಬರು ಬಂದರು. ಅವರನ್ನು ವಿಚಾರಿಸಿದಾಗ, ಅವರು ಹೇಳಿದ್ದು: "ಇದು ವ್ಯಾಪಾರಸ್ಥರ ಊರು. ಇಂದು ಸಂತೆ ಬೇರೆ. ಅಂಗಡಿ ಮುಚ್ಚುವುದೇ ಹತ್ತುಗಂಟೆಯ ನಂತರ. ವ್ಯಾಪಾರಸ್ಥರು ಮನೆಗೆ ಹೋಗಿ ಊಟ ಮಾಡಿ ಬರಲು ಒಂದು ಗಂಟೆ ಯಾದರೂ ಬೇಡವೆ!" ಎಂದು. ಅಂತೂ ರಾತ್ರಿ ಹನ್ನೊಂದೂವರೆಗೆ ನಾಟಕ ಪ್ರಾರಂಭ ವಾಯಿತು. ವೇದಿಕೆಯ ಮುಂದೆ ಅಧ್ಯರಿಗಾಗಿ ಕಾಯ್ದಿರಿಸಿದ ಖುರ್ಚಿಗಳಲ್ಲಿ ಕೆಲವೇ ಕೆಲವು ಭರ್ತಿಯಾಗಿದ್ದವು. ಆಗಿನ ಕಾಲದ ಪದ್ಧತಿ ಯಂತೆ ನಾಲ್ಕಾಣೆ ಟಿಕೇಟುಧಾರಿಗಳೆಲ್ಲ ಹಿಂದೆ ಹಾಸಿದ ಚಾಪೆಯ ಮೇಲೆ ಕೂಡುತ್ತಿದ್ದರು. ಕೂಡುತ್ತಿದ್ದರು ಎನ್ನುವುದಕ್ಕಿಂತ ಮುಂದೆ ಕಾಲು ಚಾಚಿ ತೂಕಡಿಸುತ್ತಿದ್ದರು ಎಂದರೇನೇ ಸರಿ ಯಾದೀತೇನೋ. ಹಾವೇರಿಯ ಸುಪ್ರಸಿದ್ಧ ವಕೀಲರೂ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ರಾಯಚೂರು ಪುರುಷೋತ್ತಮಾ ಚಾರ್ಯರು ಅಂದಿನ ನಾಟಕ ಪ್ರಯೋಗಕ್ಕೆ ಅಧ್ಯಕ್ಷರಾಗಿ ಆಹ್ವಾನಿತರಾಗಿದ್ದರು. ನಾಟಕದ ಎರಡು ದೃಶ್ಯಗಳು ಮುಗಿದ ನಂತರ ಅವರು ವೇದಿಕೆಗೆ ಬಂದು ಭಾಷಣ ಮಾಡುತ್ತ, "ಈ ನಾಟಕವನ್ನು ಬರೆದ ಶ್ರೀರಂಗರು ಇಂಗ್ಲೆಂಡಿಗೆ ಹೋಗಿ ಬಂದವರು," ಎಂದ ಕೂಡಲೇ ಪ್ರೇಕ್ಷಕ ರಲ್ಲೊಬ್ಬ ತಾನು ಕೂತಲ್ಲಿಯೇ, "ಯಾರಿಗೂ ತಿಳಿಯದ ಇಂಥ ನಾಟಕ ಬರೆಯಲು ಈ ಮಹಾಶಯ ಇಂಗ್ಲೆಂಡಿನತನಕ ಯಾಕೆ ಹೋದ?" ಅಂದನಂತೆ. ಪ್ರೇಕ್ಷಕರ ಪ್ರತಿಕ್ರಿಯೆ ಯನ್ನು ತಿಳಿಯಲು ಶ್ರೀರಂಗರು ತನ್ನ ಪಕ್ಕದಲ್ಲೇ ಕುಳಿತಿದ್ದರೆಂಬುದು ಆ ಪ್ರೇಕ್ಷಕನಿಗೆ ಹೇಗೆ ತಾನೆ ತಿಳಿಯಬೇಕು? ಇದನ್ನು ಶ್ರೀರಂಗರಿಂದ ಕೇಳಿದ ನಾವು ನಕ್ಕಿದ್ದೇ ನಕ್ಕದ್ದು.

ಆ ಕಾಲದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸರಕಾರದ ಸಹಾಯದ ಮಾತಂತೂ ದೂರ ಉಳಿಯಿತು, ಸಾರ್ವಜನಿಕರ ಸಹಾ ಯವೂ ಇಲ್ಲದೆ ಸಾಲದಲ್ಲಿ ಬಿದ್ದು ಕೊರಗು ತ್ತಿತ್ತು. ಆಗ ಡಾ. ಕಮಲಾಪುರ ಕಾಂತರಾಯರು ಗೌರವ ಕಾರ್ಯದರ್ಶಿಗಳಾಗಿದ್ದರು. ಅವರ ಹಾಗೂ ನಮ್ಮೆಲ್ಲರ ಅಭಿಲಾಷೆಯಂತೆ ನಾವು ಕನ್ನಡ ನಾಟ್ಯ ವಿಲಾಸಿಗಳು ಬೇರೆ ಬೇರೆ ಸ್ಥಳ ಗಳಲ್ಲಿ ನಾಟಕಗಳನ್ನಾಡಿ ಅದರಿಂದ ಬಂದ ಹಣ ದಿಂದ ವಿದ್ಯಾವರ್ಧಕ ಸಂಘದ , ಸುಮಾರು ಇಪ್ಪತ್ತು ಸಾವಿರದವರೆಗಿನ ಸಾಲವನ್ನು ತೀರಿಸಿ ದೆವು. ನವರಾತ್ರಿಯ ಸಮಯದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ವತಿಯಿಂದ ಹತ್ತು ದಿನ ಗಳ ಕಾಲವೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮೊದಲಿನಿಂದಲೂ ನಡೆದು ಕೊಂಡು ಬಂದ ಪದ್ಧತಿ.

ಹೀಗೆಯೇ ಒಮ್ಮೆ ನವರಾತ್ರಿಯ ಸಂದರ್ಭ ದಲ್ಲಿ ವಿದ್ಯಾವರ್ಧಕ ಸಂಘದ ಸಹಾಯಾರ್ಥ ವಾಗಿ ಒಂದು ನಾಟಕವನ್ನು ಆಗಿನ ವಿಜಯ ನಾಟ್ಯಗೃಹದಲ್ಲಿ ಏರ್ಪಡಿಸಿದ್ದೆವು. ಊರೊಳಗಿನ ಸ್ತ್ರೀಸಮೂಹಕ್ಕೆಲ್ಲ ನಾಡಹಬ್ಬವೆಂದರೆ ಆಗ ದೊಡ್ಡ ಹಬ್ಬ. ಆದ್ದರಿಂದ ಸ್ತ್ರೀಯರಿಗೆ ಹೆಚ್ಚು ಅನುಕೂಲವಾಗಲಿ ಎಂಬ ಉದ್ದೇಶದಿಂದ ನಾಲ್ಕು ಆಣೆಯಂತೆ ಟಿಕೇಟು ಇಟ್ಟಿದ್ದೆವು. ಸಂಜೆ ಆರಕ್ಕೆ ಪ್ರಾರಂಭವಾಗಿ ರಾತ್ರಿ ಒಂಬತ್ತಕ್ಕೆ ನಾಟಕ ಮುಗಿಯುವುದಿತ್ತು. ಅಂದು ಸಂಜೆ ಐದು ಗಂಟೆ ಯೊಳಗೆ ಸಾವಿರಾರು ಟಿಕೇಟುಗಳು ಖರ್ಚಾಗಿ ನಾಟ್ಯಗೃಹ ತುಂಬಿಹೋಯಿತು. ಹೆಣ್ಣುಮಕ್ಕಳು ಒಬ್ಬರೇ ಬರುವರೆ? ಬರುವಾಗ ಮಕ್ಕಳು-ಮರಿ ಗಳನ್ನು ಕಟ್ಟಿಕೊಂಡು ಬಂದಿದ್ದರು. ಮಕ್ಕಳ ಅಳು, ಚೀರಾಟ, ಒದರಾಟಗಳ ಮಧ್ಯೆಯೇ ನಾಟಕ ಪ್ರಾರಂಭವಾಯಿತು. ಇನ್ನೂ ಧ್ವನಿ ವರ್ಧಕ ಬಳಕೆಗೆ ಬಾರದಿದ್ದ ಕಾಲ. ನಾಟಕ

> ನಿಷ್ಠಾವಂತ ಮನುಷ್ಯನೊಬ್ಬನ ಮತವನ್ನು ಕೊಳ್ಳುವಷ್ಟು ಸಿರಿವಂತಿಕೆ ಈ ಜಗತ್ತಿಗಿಲ್ಲ.
>
> • ಗ್ರಿಗೋರಿ ದಿ ಗ್ರೇಟ್

ಪ್ರಾರಂಭವಾಗಿ ಅರ್ಧ ಗಂಟೆಯಾದರೂ ಗದ್ದಲ ಕಡಿಮೆಯಾಗಲೇ ಇಲ್ಲ. ಆಗ ಶ್ರೀರಂಗರ ಜೊತೆಗೆ ನಾನೇ ಅಭಿನಯಿಸುತ್ತಿದ್ದೆ. ನಮ್ಮ ಮಾತುಗಳು ಪ್ರೇಕ್ಷಕರಿಗೆ ಕೇಳುವುದಿರಲಿ, ಪರಸ್ಪರ ನಮಗೇ ಕೇಳದಂತಾದಾಗ, ಶ್ರೀರಂಗರು ನಾಟಕದ ಮಾತುಗಳನ್ನು ಬಿಟ್ಟು ಇನ್ನಷ್ಟು ಗಟ್ಟಿಯಾಗಿ, "ಏನು ಬಂತ್ರೆಪಾ ಪ್ರಸಂಗ? ಇಂಥಾಪರಿಯಿಂದ ನಾಟಕ ಮಾಡುವುದಾದರೂ ಹೇಗೆ? ಏನಾದರೂ ಮಾಡಿ ಅರ್ಧ ಗಂಟೆಯಲ್ಲೇ ನಾಟಕ ಮುಗಿಸಬೇಕು," ಎಂದರು. "ಆದರೆ ಅಷ್ಟು ಬೇಗ ಮುಗಿಸುವುದಾದರೂ ಹೇಗೆ?" ಎಂದು ನಾನು ಕೇಳಿದಾಗ ಶ್ರೀರಂಗರು, "ಆದರ ಚಿಂತೆಯನ್ನು ನನಗೆ ಬಿಡಿರಿ," ಎಂದು ಹೀಗೆಯೇ ಐದಾರು ನಿಮಿಷಗಳವರೆಗೆ ಮಾತನಾಡುತ್ತ ನನಗೆ ಒಳಗೆ ಹೋಗಲು ತಿಳಿಸಿ ರಂಗದ ಇನ್ನೊಂದು ಪಾರ್ಶ್ವದಿಂದ ತಾವೂ ಒಳಗೆ ಹೋದರು. ಅಂತೂ ಹೇಗೋ ಮಾಡಿ ಮೂರು ಗಂಟೆಯಲ್ಲಿ ಮುಗಿಯುವ ನಾಟಕವನ್ನು ಒಂದೇ ಗಂಟೆಯಲ್ಲಿ ಮುಗಿಸಿದ್ದೆವು. ಆದರೆ ನಾಟಕ ಮುಗಿದದ್ದು ಪ್ರೇಕ್ಷಕರಿಗೆ ತಿಳಿಯಲೇ ಇಲ್ಲ. ಕೊನೆಗೆ ಶ್ರೀರಂಗರೇ ಹೊರಗೆ ಬಂದು, ದೊಡ್ಡ ಧ್ವನಿಯಿಂದ, "ನಾಟಕ ಮುಗಿಯಿತು. ಇನ್ನು ಎಲ್ಲರೂ ಹೋಗಬಹುದು," ಎಂದು ಘೋಷಿಸಿದರು. ಸಾವಕಾಶವಾಗಿ ನಾಟ್ಯಮಂದಿರ ಬರಿದಾಯಿತು.

ಶ್ರೀರಂಗರ 'ಹರಿಜನ್ವಾರ'ದ ಬಗೆಗೆ ಸಾಕಷ್ಟು ಚರ್ಚೆ, ವಿಮರ್ಶೆಗಳು ಈಗಾಗಲೇ ಬಂದಿರುವುದರಿಂದ ನಾನು ಆ ಕುರಿತು ಬರೆಯುವುದಿಲ್ಲ. ಆದರೆ ಒಂದು ಮಾತಂತೂ ನಿಜ. ನಾಟಕಕಾರನ ಉದ್ದೇಶವೇನೇ ಇರಲಿ, ಆ ನಾಟಕದಿಂದ ಬ್ರಾಹ್ಮಣ ಸಮಾಜದಲ್ಲಿ ದೊಡ್ಡ ಕ್ಷೋಭೆಯೇ ಉಂಟಾಯಿತು. ಆ ನಾಟಕವನ್ನು ಖಂಡಿಸಲು ನಾನಾ ಊರುಗಳಲ್ಲಿ ಸಭೆಗಳು ಜರುಗಿದವು. ಅವುಗಳಲ್ಲಿ ಧಾರವಾಡದ ವಿಠ್ಠಲ ಮಂದಿರದಲ್ಲಾದ ಸಭೆಯನ್ನು ನಾನೆಂದೂ ಮರೆಯಲಾರೆ. ಅಂದಿನ ಸಭೆಗೆ ಯಾರು ಅಧ್ಯಕ್ಷರಾಗಿದ್ದರು ಎನ್ನುವುದು ನೆನಪಿಲ್ಲ. ಆದರೆ ಅಂದು ಭಾಷಣ ಮಾಡಿದವರು ನಾಟಕವನ್ನು ಬಲವಾಗಿ ಖಂಡಿಸಿ ನಾಟಕಕಾರನನ್ನು ತೀವ್ರವಾಗಿ ತೆಗಳಿದರು. ಅಂದು ಆ ನಾಟಕದ ಪ್ರತಿಯನ್ನು ಸುಟ್ಟುಹಾಕಬೇಕೆಂಬ ನಿರ್ಣಯವೂ ಸ್ವೀಕರಿಸಲ್ಪಟ್ಟಿತು. ದುರ್ದೈವದಿಂದ ಆ ಸಭೆಯ ಒಂದು ಮೂಲೆಯಲ್ಲಿ ನಾನೂ ಕುಳಿತಿದ್ದೆ. ಇದನ್ನು ಗಮನಿಸಿದ ಯಾರೋ ಒಬ್ಬರು, "ಇವನೇ ಆ ಬ್ರಾಹ್ಮಣ ದ್ರೋಹಿ, ತಾತಾಚಾರಿ ಪಾರ್ಟ್ ಮಾಡಿದವ," ಎಂದು ಬಯ್ಯಾಡತೊಡಗಿದ. ನನ್ನ ಜಂಘಾಬಲವೇ ಉಡುಗಿದಂತಾಯಿತು. ಹೇಗೋ ಸಭೆಯಿಂದ ಪಾರಾಗಿ ಬಂದೆ. ತಮ್ಮ ಸಾಹೇಬರ ನಾಟಕದ ಬಗೆಗೇ ಸಭೆಯಿದ್ದುದರಿಂದ ಆ ದಿನದ ಸಭೆಗೆ ರಜಾಕನೂ ಬಂದಿದ್ದನಂತೆ. ಈ ನಾಟಕದ ಬಗೆಗೆ ಪತ್ರಿಕೆಗಳಲ್ಲಿ ಸಾಕಷ್ಟು ಟೀಕೆ, ವಿಮರ್ಶೆಗಳು ಬಂದವು. ಆದರೂ ಈ ನಾಟಕವನ್ನೇ ಕನ್ನಡ ನಾಟ್ಯ ವಿಲಾಸಿಗಳು ಬಾಗಲಕೋಟೆ, ವಿಜಾಪುರಗಳಲ್ಲಿಯೂ ಮಾಡಿದರು. ಆಗ ಅಲ್ಲಿ ಪೂರ್ಣ ನಾಟಕವನ್ನಾಡಲು ಅನುಮತಿ ದೊರೆಯಲಿಲ್ಲವಾದ್ದರಿಂದ ಮೊದಲಿನ ಎರಡು ಅಂಕಗಳನ್ನು ಮಾತ್ರ ಆಡಲಾಯಿತು. ಕೊನೆಯ ಅಂಕದ ಸಾರಾಂಶವನ್ನು ಶ್ರೀರಂಗರೇ ನಿವೇದಿಸಿದರು.

ಶ್ರೀರಂಗರ ಉಳಿದ ನಾಟಕಗಳ ಹಾಗೆ ರಾಜಕಾರಣಿಗಳ ಅಪಾಥಭೂತಿತನವನ್ನು ಎತ್ತಿ ತೋರಿಸುವ 'ಶೋಕಚಕ್ರ'ವೂ ಜನಮೆಚ್ಚುಗೆಯನ್ನು ಗಳಿಸಿತು. ಆ ನಾಟಕದಲ್ಲಿ ಬರುವ ಹನುಮಂತಪ್ಪ ಎಂಬ ರಾಜಕಾರಣಿಯ ಪಾತ್ರವನ್ನು ನನಗೆ ಕೊಡಲಾಗಿತ್ತು. ಒಂದು ಸನ್ನಿವೇಶದಲ್ಲಿ ಹನುಮಂತಪ್ಪ ತನ್ನ ಪಕ್ಷದ ಅಧ್ಯಕ್ಷರನ್ನು

ಸಾರ್ವಜನಿಕವಾಗಿ ಸನ್ಮಾನಿಸುವಾಗ, ಅವರ ಬದಿಗೆ ನಿಂತು, ಮಾಲೆಯನ್ನು ಹಿಡಿದು ಅವರನ್ನು ಹೊಗಳುತ್ತ, "ಇಂಥ ಮುಂದಾಳುಗಳಿಗೆ ನಿಮ್ಮೆಲ್ಲರ ಪರವಾಗಿ ಮಾಲಾರ್ಪಣೆ ಮಾಡುತ್ತೇನೆ," ಅಂದ. ಅಧ್ಯಕ್ಷ ಮಾಲೆ ಹಾಕಿಸಿಕೊಳ್ಳಲು ಕತ್ತು ಬಗ್ಗಿಸಿದ. ಆದರೆ ಹನುಮಂತಪ್ಪ ರಾಜಕಾರಣಿಗಳ ಸ್ವಭಾವಕ್ಕೆ ಸಹಜವಾಗಿ, ಮಾಲೆಯನ್ನು ಹಾಕದೆ ಹಾಗೆಯೆ ಭಾಷಣವನ್ನು ಮುಂದುವರೆಸಿದಾಗ ಆ ಅಧ್ಯಕ್ಷರ ಮುಖ ನೋಡಿ ಪ್ರೇಕ್ಷಕರು ನಕ್ಕಿದ್ದೇ ನಕ್ಕಿದ್ದು.

ಒಮ್ಮೆ ದಸರಾ ಮಹೋತ್ಸವದಲ್ಲಿ ನಾಟಕ ಪ್ರದರ್ಶಿಸುವುದಕ್ಕಾಗಿ ಮೈಸೂರಿನಿಂದ ಆಮಂತ್ರಣ ಬಂದಿತ್ತು. ಅಲ್ಲಿಯೂ ನಾವು 'ಶೋಕಚಕ್ರ'ವನ್ನೇ ಪ್ರದರ್ಶಿಸಿದೆವು. ಆದರೆ ಅಲ್ಲಿಯ ಅನುಭವ ಮಾತ್ರ ಮರೆಯಲಾಗದ್ದು.

ನಾಟಕಗಳನ್ನು ಆಡುವುದಕ್ಕಾಗಿ ಇಲ್ಲಿನ ದೊಡ್ಡಾಟದ ಅಟ್ಟದಂತೆ ಒಂದು ಅಟ್ಟವನ್ನು ಹಾಕಿದ್ದರು. ನಾಲ್ಕೂ ಬದಿಗೂ ಪರದೆಗಳು. ಮುಂದಿನ ಪರದೆಯನ್ನು ಎತ್ತಿದ ಕೂಡಲೇ ಕೊನೆಯ ಪರದೆಯ ದರ್ಶನ. ಬಣ್ಣ ಹಚ್ಚಿಕೊಳ್ಳಲು ಬೇರೆ ರೂಮಿನ ವ್ಯವಸ್ಥೆಯಿರಲಿಲ್ಲ. ಅಟ್ಟದ ಬದಿಯಲ್ಲೇ ಒಂದು ದೊಡ್ಡ ಬೋರ್ಡು. ಅಲ್ಲಿಯೇ ಮೇಕಪ್ ಮಾಡಿಕೊಳ್ಳಬೇಕು.

ಏನೇ ಇರಲಿ; ನಾಟಕ ಪ್ರಾರಂಭವಾಯಿತು. ಪ್ರೇಕ್ಷಕರಿಗೆ ಕೂಡಲು ಖುರ್ಚಿಗಳಾಗಲಿ ಜಮಖಾನೆಗಳಾಗಲಿ ಇರಲಿಲ್ಲ. ಟಿಕೇಟಿನ ಪ್ರಶ್ನೆಯಂತೂ ಇಲ್ಲವೇಯಿಲ್ಲ. ಬೇಕಾದರೆ ಪ್ರೇಕ್ಷಕ ಕೂಡಬಹುದು, ನಿಲ್ಲಬಹುದು. ಓಡಾಡುತ್ತ ಹರಟೆ ಹೊಡೆಯಬಹುದು. ಹೀಗಾಗಿ ಪ್ರೇಕ್ಷಕರಲ್ಲಿ ಹರಟೆ, ಕೂಗು, ಶಿಳ್ಳು ಹೊಡೆಯುವುದು ಅವ್ಯಾಹತವಾಗಿ ಸಾಗಿದ್ದವು. ಇಂಥದರಲ್ಲೇ ನಾಟಕವನ್ನು ಸಾಗಿಸಿದೆವು. ಮೊದಲೇ ಶ್ರೀರಂಗರ ನಾಟಕ. ಸಂಗೀತವಿಲ್ಲ, ಮನಮೋಹಕ ಸೀನರಿಗಳಿಲ್ಲ, ಶ್ರೀರಂಗರ ನಾಟಕದ ಮಾತುಗಳು ಅಲ್ಲಿಯ ಜನರಿಗೆ ತಿಳಿಯುವಂತೆಯೂ ಇರಲಿಲ್ಲ. ಹಿಂದೆ ಧಾರವಾಡದಲ್ಲಿ ಆದಂತೆ ನಾಟಕದ ಮಾತುಗಳು ನಮಗೇ ಕೇಳಿಸದಂತಾದವು. ಆಗಿನಂತೆಯೇ ಒಂದೇ ಗಂಟೆಯಲ್ಲಿ ನಾಟಕವನ್ನು ಮುಗಿಸಿದೆವು. ಪರದೆ ಮುಚ್ಚಿ ಹದಿನೈದು ನಿಮಿಷಗಳಾದರೂ ಅದು ಮತ್ತೆ ಮೇಲೇಳದಿದ್ದುದರಿಂದ ನಾಟಕ ಮುಗಿದಿರಬಹುದೆಂದು ಪ್ರೇಕ್ಷಕರು ಕ್ರಮೇಣ ಹೊರಟು ಹೋದರು.

ಗುರು ಶ್ರೀರಂಗರ ಒಡನಾಟದಲ್ಲಿ ಬಂದ ಅನುಭವಗಳನ್ನು ಹೀಗೆಯೇ ಬೆಳೆಸುತ್ತ ಹೋಗಬಹುದು. ಆದರೆ ಲೇಖನ ಬಹಳ ದೀರ್ಘವಾಗುವುದರಿಂದ ಅವರ ಬಗೆಗೆ ಒಂದೆರಡು ಮಾತುಗಳನ್ನು ಹೇಳಿ ಲೇಖನವನ್ನು ಮುಗಿಸುತ್ತೇನೆ.

ಶ್ರೀರಂಗರು ಧರ್ಮ ವಿರೋಧಿಗಳೆಂಬ ಭಾವನೆ ಬಹಳ ಜನರಲ್ಲಿದೆ. ವಾಸ್ತವವಾಗಿ ಅವರು ಡಾಂಭಿಕತೆಯ ವಿರುದ್ಧವಾಗಿದ್ದರೇ ಹೊರತು ಎಂದೂ ಧರ್ಮದ್ವೇಷಿಗಳಾಗಿರಲಿಲ್ಲ. ಅವರೊಬ್ಬ ಒಳ್ಳೆಯ ನಟನಾಗಿದ್ದರು. ತಮ್ಮ ಧ್ವನಿಯಲ್ಲಿಯೇ ಭಾವನೆಗಳನ್ನು ವ್ಯಕ್ತಪಡಿಸುವ ಜಾಣ್ಮೆ ಅವರಲ್ಲಿತ್ತು. ಅವರ ನಾಟಕದ ವ್ಯಂಗ್ಯ ಹರಿತ ಬುದ್ಧಿಯವರಿಗೆ ಮಾತ್ರ ಅರ್ಥವಾಗುವಂತಿತ್ತು. ಶ್ರೀರಂಗರ ನಾಟಕಗಳ ಬಗೆಗೆ ಯಾರೋ ಒಬ್ಬರು ಗರುಡ ಸದಾಶಿವರಾಯರನ್ನು ಕೇಳಿದಾಗ ಅವರು, "ಶ್ರೀರಂಗರ ನಾಟಕಗಳು ಜನಸಾಮಾನ್ಯರಿಗೆ ಸರಿಯಾಗಿ ಅರ್ಥವಾಗಲು ಐವತ್ತು ವರ್ಷಗಳಾದರೂ ಬೇಕು," ಎಂದು ಹೇಳಿದ್ದು ಯಥಾರ್ಥವಾಗಿಯೇ ಇದೆ.

ನಂಬಿಕೊಂಡ ತತ್ವಗಳಿಗಾಗಿ ಕಷ್ಟ-ನಷ್ಟಗಳನ್ನೆದುರಿಸಲು ಅವರೆಂದೂ ಹಿಂಜರಿಯುತ್ತಿರಲಿಲ್ಲ. ಈಗಿನ ಉತ್ತರ ಕರ್ನಾಟಕ ಆಗ ಮುಂಬಯಿಯ ಒಂದು ಭಾಗವಾಗಿತ್ತು. ವಾಡಿಕೆಯಂತೆ ಸರಕಾರಿ ನೌಕರರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡುವ ಪರಿಪಾಠವಿತ್ತು. ಶ್ರೀರಂಗರನ್ನಾಗ

ಧಾರವಾಡದಿಂದ ವರ್ಗ ಮಾಡಲಾಯಿತು. ಅದು ಶ್ರೀರಂಗರಿಗೆ ಒಪ್ಪಿಗೆಯಾಗಲಿಲ್ಲ.

ವರ್ಗವನ್ನು ರದ್ದುಪಡಿಸಬೇಕೆಂದು ಸರಕಾರವನ್ನು ಕೇಳಿಕೊಂಡರು. ಸರಕಾರ ಸ್ವಾಭಿಮಾನಕ್ಕೆ ಕಟ್ಟುಬಿದ್ದು ವರ್ಗವನ್ನು ರದ್ದುಪಡಿಸಲಿಲ್ಲ. ಆಗ ಧಾರವಾಡದವರೇ ಆಗಿದ್ದ ಹುಕ್ಕೇರಿಕರ ರಾಮರಾಯರು ವಿಧಾನಸಭೆಯ ಅಧ್ಯಕ್ಷರೂ ಆಗಿದ್ದರು. ಈ ವಿಷಯ ಅವರ ಗಮನಕ್ಕೆ ಬಂದಾಗ, "ಶ್ರೀರಂಗರು ಮಧ್ಯಾಹ್ನ ಧಾರವಾಡವನ್ನು ಬಿಟ್ಟು ಮರುದಿನ ಹನ್ನೊಂದು ಗಂಟೆಗೆ ಮುಂಬಯಿಯ ಕಾಲೇಜಿನಲ್ಲಿ ಹಾಜರಿ ಹಾಕಿ ಮುಂದೆ ಬೇಕಾದರೆ ಒಂದೇ ಗಂಟೆಯಲ್ಲಿ ಮುಂಬಯಿಯನ್ನು ಬಿಟ್ಟು ಬರಲಿ. ಉಳಿದದ್ದನ್ನು ನಾನು ನೋಡಿಕೊಳ್ಳುತ್ತೇನೆ," ಎಂದು ಸಲಹೆ ಮಾಡಿದ್ದರು. ಉದ್ದೇಶಪೂರ್ವಕವಾಗಿ ತಮ್ಮನ್ನು ವರ್ಗ ಮಾಡಲಾಗಿದೆಯೆಂದು ಭಾವಿಸಿದ ಶ್ರೀರಂಗರು ಯಾವುದಕ್ಕೂ ಜಗ್ಗಲಿಲ್ಲ. ಕೊನೆಗೆ ನೌಕರಿಯನ್ನು ಕಳೆದುಕೊಳ್ಳಬೇಕಾಯಿತು. ಇಂಥ ಪ್ರಸಂಗದಲ್ಲಿಯೂ ಅವರು ಧೈರ್ಯಗೆಡಲಿಲ್ಲ. ಧಾರವಾಡದಲ್ಲಿಯೇ ಇದ್ದು ದಿವಂಗತ ಶಂಭುಲಿಂಗಪ್ಪ ಕುಲಕರ್ಣಿಯವರ ಪ್ರಕಾಶನ ಸಂಸ್ಥೆಗೆ ಬರೆದುಕೊಟ್ಟು ಅದರಿಂದ ಬಂದ ಹಣದಿಂದ ಜೀವನ ಸಾಗಿಸಿದರು. ವಿದ್ವತ್ತಿನ ಮಣಿಗಳೇ ಆಗಿದ್ದ ಅವರು ಕೈತುಂಬ ಸಂಬಳ ತರುವ ಸ್ಥಾನಕ್ಕೆ ತಿಲಾಂಜಲಿ ನೀಡಿ ಬಡತನವನ್ನು ಸ್ವೀಕರಿಸಿದರೇ ಹೊರತು ತಾವು ನಂಬಿಕೊಂಡ ತತ್ವಗಳಿಗೆಂದೂ ತಿಲಾಂಜಲಿಯನ್ನೀಯಲಿಲ್ಲ.

ಅವರ ವಿದ್ವತ್ತಿಗೆ ಸರಕಾರ ಮನ್ನಣೆ ಕೊಟ್ಟು ನಾಟ್ಯಕಲೆಯಲ್ಲಿ ತರಬೇತಿ ಕೊಡುವುದಕ್ಕಾಗಿ 'ಆಕಾಶವಾಣಿ'ಯಲ್ಲಿ ಒಳ್ಳೆಯ ಸ್ಥಾನಮಾನವಿರುವ ನೌಕರಿಯನ್ನು ಕೊಟ್ಟಿತು. ಅವರು ಅಲ್ಲಿಯೂ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದಲೇ ನಿರ್ವಹಿಸಿದರು. ವಿಧಿನಿಯಮದ ಪ್ರಕಾರ ಕೆಲಕಾಲವಾದರೂ ಕಷ್ಟವನ್ನು ಅನುಭವಿಸುವುದು ಯಾರನ್ನೂ ಬಿಟ್ಟಿಲ್ಲ ಎನ್ನುವುದು ಸುಳ್ಳಲ್ಲ.

ಮುಂದೆ ಧಾರವಾಡದಲ್ಲಿಯೇ ಎರಡು-ಮೂರು ಹೊಸ ಹವ್ಯಾಸ ನಾಟ್ಯ ಸಂಘಗಳು ಹುಟ್ಟಿಕೊಂಡವು. ಅಲ್ಲದೆ ನಮ್ಮಲ್ಲಿಯೂ ಮೊದಲಿನ ಉತ್ಸಾಹ ಉಳಿದಿರಲಿಲ್ಲ. ಹೀಗಾಗಿ ಸುಮಾರು ೨೫ ವರ್ಷಗಳವರೆಗೆ ಕಾರ್ಯ ನಿರ್ವಹಿಸಿದ ನಮ್ಮ ಕನ್ನಡ ನಾಟ್ಯ ವಿಲಾಸಿಗಳ ಸಂಘ ನಿಂತು ಹೋಯಿತು. ಆದರೆ ನಾಟ್ಯ ವಿಲಾಸಿಗಳಾಗಿ ನಾವು ಸಾಧಿಸಿದ ಕಾರ್ಯದ ಬಗೆಗೆ ನಮಗಿನ್ನೂ ಹೆಮ್ಮೆಯಿದೆ, ಅಭಿಮಾನವಿದೆ. ಇಂದಿಗೂ ಗುಂಪಿನ ಹಳೆಯ ಸದಸ್ಯರು ಭೇಟಿಯಾದಾಗ ಹಿಂದೆ ನಡೆದ ಘಟನೆಗಳನ್ನು ನೆನೆಸಿಕೊಂಡು ಆನಂದಿಸುತ್ತೇವೆ. ●

ಸ್ಟಾಲಿನ್ನರ ಆಳ್ವಿಕೆಯಲ್ಲಿ ನಡೆದ ಅಮಾನುಷ ಕೃತ್ಯಗಳನ್ನು ಆಗಿನ ಸೋವಿಯತ್ ಪ್ರಧಾನಿ ನಿಕಿಟಾ ಕ್ರುಶ್ಚೇವ್ ಖಂಡಿಸುತ್ತಿದ್ದರು. ಸಭಾಗೃಹದ ಮೂಲೆಯೊಂದರಿಂದ ಯಾರೋ ಅವರನ್ನು ಛೇಡಿಸಿದರು.

"ಆ ಕಗ್ಗೊಲೆ ನಡೆಯುತ್ತಿದ್ದಾಗ ತಾವೆಲ್ಲಿದ್ದಿರಿ ಕಾಮ್ರೆಡ್ ಕ್ರುಶ್ಚೇವ್ ಅವರೇ ?"

ಅಲ್ಲಿ ಹರಡಿದ ಭಯಂಕರ ಮೌನದ ನಡುವೆ ಕ್ರುಶ್ಚೇವ್ ಕೇಳಿದರು, "ಈ ಮಾತನ್ನಾಡಿದ ವ್ಯಕ್ತಿ ದಯವಿಟ್ಟು ಎದ್ದು ನಿಲ್ಲುವಿರಾ ?"

ಯಾರೂ ಅಲುಗಾಡಲಿಲ್ಲ.

"ನೀವು ಯಾರೇ ಆಗಿರಿ. ನಿಮ್ಮ ಪ್ರಶ್ನೆಗೆ ನೀವೇ ಉತ್ತರಿಸಿಕೊಂಡಿದ್ದೀರಿ. ಈಗ ನೀವಿರುವ ಜಾಗದಲ್ಲೇ ಅಂದು ನಾನಿದ್ದೆ!" ಎಂದರು ಕ್ರುಶ್ಚೇವ್.

ಸಂಗ್ರಹ: ಟಿ. ಎಸ್. ಲಲಿತ



● ವಾಸುಕಿ

ಮಾಜಿ ಪ್ರಧಾನಿ ಮೌನ ಮುರಿದಾಗ....

"ನಿಮ್ಮ ಜಾತಕವನ್ನೊಮ್ಮೆ ಜ್ಯೋತಿಷಿಗೆ ತೋರಿಸಿ," ಎಂದು ದುಂಬಾಲು ಬಿದ್ದ ನಂದಾರ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲವಂತೆ ಪ್ರಧಾನಿ ನೆಹರೂ. ೧೯೬೨ರಲ್ಲೊಮ್ಮೆ ಅವರು ಅಸ್ವಸ್ಥರಾಗಿ ಮಲಗಿದ್ದಾಗ ನಂದಾ ಜ್ಯೋತಿಷಿಯೊಬ್ಬರನ್ನು ಕರೆತಂದರಂತೆ. 'ಕೆಲ ದಿನಗಳಲ್ಲಿಯೇ ಮಿತ್ರದ್ರೋಹದ ಪರಿಣಾಮವಾಗಿ ಪ್ರಧಾನಿ ಮಾನಸಿಕವಾಗಿ ನರಳಬೇಕಾಗುತ್ತದೆ... ನೆರೆರಾಷ್ಟ್ರವೊಂದು ದೇಶದ ಮೇಲೆ ದಾಳಿ ಮಾಡುವುದರಿಂದ ಈ ತೊಳಲಾಟ....' ಎಂಬ ಜ್ಯೋತಿಷಿಯ ನುಡಿ ಕೇಳಿ ನಕ್ಕು ಸುಮ್ಮನಾಗಿಬಿಟ್ಟರಂತೆ ನೆಹರೂ.

ಮುಂದೆ ಚೀನ ದಾಲು ಕೆದರಿತು. ಉತ್ತರದ ಗಡಿಯಲ್ಲಿ ಬಾಂಬು ಉಡಾಯಿಸಿತು. ಭಾರತದ ನೆಲವನ್ನು ಕಬಳಿಸಿ ಕೇಕೆ ಹಾಕಿತು. ಹಿಮವತ್ಪರ್ವತದಂತೆ ನೆಹರೂ ಕೂಡ ನಡುಗಿದರು. "ಜ್ಯೋತಿಷಿಯನ್ನು ಇನ್ನೊಮ್ಮೆ ಕರೆತನ್ನಿ," ಎಂದು ನಂದಾರಿಗೆ ಅವರು ದುಂಬಾಲು ಬೀಳಬೇಕಾಗಿ ಬಂತು. ಯುದ್ಧದ ಗಡಿಬಿಡಿ, ಪ್ರಧಾನಿಯ ಬಿಡುವಿರದ ಕೆಲಸಗಳಿಂದಾಗಿ ಜ್ಯೋತಿಷಿಯನ್ನು ಕರೆತರಲು ನಂದಾರಿಗೆ ಸಾಧ್ಯವಾಗಲೇ ಇಲ್ಲ. ಯುದ್ಧದ ಕಾವು ಇಳಿಯುವ ಹೊತ್ತಿಗೆ ನೆಹರೂ ತುಂಬ ಸುಸ್ತಾಗಿದ್ದರು.

ಈ ಸಲ ಜ್ಯೋತಿಷಿ ಸತ್ಯವನ್ನು ಮರೆಮಾಚುತ್ತಿದ್ದಾರೆಂದೆನಿಸಿತು ಪ್ರಧಾನಿಗೆ. 'ಕೆಲವೇ ದಿನಗಳಲ್ಲಿ ನೀವು ಕಣ್ಣುಮುಚ್ಚಲಿದ್ದೀರಿ' ಎಂಬ ಕಟುಸತ್ಯವನ್ನು ಜ್ಯೋತಿಷಿ ಹೇಗೆ ಬಾಯ್ಬಿಟ್ಟು ಹೇಳಿಯಾರು ? ಆದರೆ, ಎಂಥದನ್ನಾದರೂ ಸರಿ, ಹೇಳಿ... ಧೈರ್ಯದಿಂದ ಕೇಳುತ್ತೇನೆ, ಎಂಬ ಮಾತಿನಿಂದಾಗಿ ಜ್ಯೋತಿಷಿ ನಿಜ ನುಡಿಯಲೇಬೇಕಾಯಿತಂತೆ....

ಮೇಲಿನದು ನಿಜವೋ, ನೀಲಿಕಟ್ಟ ಸುದ್ದಿಯೋ ಎಂಬುದು ಇಲ್ಲಿ ಮುಖ್ಯವಲ್ಲ. ಆದರೆ ನೆಹರೂ ಅವರಿಗೆ ನಂದಾ ಅದೆಷ್ಟು ಹತ್ತಿರವಾಗಿದ್ದರು ಎಂಬುದನ್ನಂತೂ ಈ ಪ್ರಸಂಗ ಸಾಬೀತುಪಡಿಸುತ್ತದೆ. ಮುಂಬರುವ ಇತಿಹಾಸದ ಪುಟಗಳಲ್ಲಿ ನಂದಾ ಅವರ ಹೆಸರು ಪ್ರಧಾನಿಗಳ ಪಟ್ಟಿಯಲ್ಲಿ ದಾಖಲಿಸಲ್ಪಡುವುದೋ ಇಲ್ಲವೊ ಗೊತ್ತಿಲ್ಲ.

ಆದರೆ, ಅಧಿಕೃತ ದಾಖಲೆಗಳಲ್ಲಿ ಮಾತ್ರ ಅವರು ಎರಡು ಬಾರಿ ಪ್ರಧಾನಿಯಾಗಿದ್ದರೆಂಬ ಸಂಗತಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಮನಸ್ಸು ಮಾಡಿದ್ದರೆ 'ನೆಹರೂ ನಂತರ ಯಾರು ?' ಎಂಬ ಪ್ರಶ್ನೆಯೇ ಉದ್ಭವಿಸದ ಹಾಗೆ ಮಾಡಬಹುದಾಗಿದ್ದ ನಂದಾ, ಶಾಸ್ತ್ರೀಜಿ ತಾಷ್ಕೆಂಟಿನಲ್ಲಿ ತೀರಿಕೊಂಡ. ಮೇಲೂ ಪಟ್ಟು ಹಿಡಿದು ಪ್ರಧಾನಿ ಪಟ್ಟದಲ್ಲಿ ವಿಜೃಂಭಿಸಬಹುದಾಗಿದ್ದ ನಂದಾ ಮನಸ್ಸು ಮಾಡಲಿಲ್ಲ. "ನನಗೆ ಅಂಥ ವ್ಯಕ್ತಿತ್ವವಿಲ್ಲ," ಎಂದು ನಯವಾಗಿಯೇ ಹೇಳಿ ಹಿಂದೆ ಸರಿದುಬಿಟ್ಟವರು ಗುಲಜಾರಿಲಾಲ್. ಆದರೆ, ಶಾಸ್ತ್ರೀಜಿ ಪ್ರಧಾನಿಯಾಗುವುದಕ್ಕೆ ಮುನ್ನ ಮತ್ತು ಇಂದಿರಾ ರಾಜ್ಯಸೂತ್ರ ಹಿಡಿಯುವವರೆಗೆ ಹೀಗೆ ಎರಡು ಸಲ ರಾಷ್ಟ್ರ ರಥದ ಸಾರಥ್ಯವನ್ನು ಅವರು ಸಮರ್ಥರಾಗೇ ನಿರ್ವಹಿಸಿದರು.

ಈಗ ನಮ್ಮವರ ನೆನಪಿನಿಂದ ಪೂರ್ಣವಾಗಿ ಮರೆಯಾಗಿ ಹೋಗಿರುವ ನಂದಾ, ಕಳೆದ ಹದಿನೇಳು ವರ್ಷಗಳಿಂದಲೂ ರಾಜಕಾರಣದಿಂದ ದೂರವುಳಿದು, ಸುಖದಲ್ಲೂ-ಸಂಕಷ್ಟದಲ್ಲೂ ಸಮಚಿತ್ತದಿಂದ ಇದ್ದುಬಿಟ್ಟವರು. ತಾನು ಉಪೇಕ್ಷಿಸಲ್ಪಟ್ಟಿದ್ದೇನೆಂದಾಗಲಿ- ತನ್ನದು ಇಂಥಿಂಥ ಅಪೇಕ್ಷೆ ಎಂದಾಗಲಿ ಒಮ್ಮೆಯೂ ಹೇಳದೆ ಉಳಿದ ನಂದಾ, ತೊಂಬತ್ತೇಳರ ಇಳಿವಯಸ್ಸಿನಲ್ಲಿ (ಜನನ: ೪-೭-೧೮೯೮) ಮೊಟ್ಟಮೊದಲ ಬಾರಿ ಸುದೀರ್ಘ ಕಾಲದ ಮೌನ ಮುರಿದಿದ್ದಾರೆ.

ಅಹ್ಮದಾಬಾದ್(ಗುಜರಾತ)ನಲ್ಲಿ- ತಮ್ಮ ಮಗಳು ಡಾ. ಪುಷ್ಪಾ ಛೋಟೂಭಾಯಿ ನಾಯಕರ ಮನೆಯಲ್ಲಿ ವಾಸಿಸಿರುವ ಮಾಜಿ ಪ್ರಧಾನಿಯನ್ನು ತೀರ ಇತ್ತೀಚೆಗೆ ಕಂಡು 'ಕಸ್ತೂರಿ' ಮಾತನಾಡಿಸಿತು.

*

'ರಿತುರಾಜ್....'

ಅಹಮ್ಮದಾಬಾದಿನ (ಪಿನ್-೩೮೦ ೦೦೯) ನವರಂಗಪುರದ ಹಿಂದೂ ಕಾಲೊನಿಯಲ್ಲಿರುವ ೪೯ನೆಯ ನಂಬರಿನ ಬಂಗಲೆ. ಗುಜರಾತ ರಾಜ್ಯ ಸರಕಾರ ನಿಯಮಿಸಿರುವ ಒಬ್ಬ ಭದ್ರತಾ ಸಿಪಾಯಿಯನ್ನು ಬಿಟ್ಟರೆ ಉಳಿದ ಯಾವ ರಕ್ಷಣಾ ವ್ಯವಸ್ಥೆಯೂ ಇಲ್ಲದ ಮಹಡಿ ಮನೆ. ಸಾಮಾನ್ಯ ನೋಟಕ್ಕೆ ಭಾರತದ ಮಾಜಿ ಪ್ರಧಾನಿಯೊಬ್ಬರು ಇಲ್ಲಿ ವಾಸಿಸುತ್ತಿದ್ದಾರೆಂಬ ಯಾವ ಕುರುಹೂ ಕಾಣದ ಆ ಕಟ್ಟಡಕ್ಕೆ ತಿಂಗಳಿಗೊಮ್ಮೆ ಕೇಂದ್ರ ಸರಕಾರದಿಂದ 'ಮಾಜಿ ಲೋಕಸಭಾ ಸದಸ್ಯ ಹಾಗೂ ಸ್ವಾತಂತ್ರ್ಯ ಹೋರಾಟಗಾರ'ನೆಂಬ ಕಾರಣದಿಂದ ಮಾಸಾಶನದ ಮನಿಯಾರ್ಡರು ಹೊತ್ತುಬರುವ ಪೋಸ್ಟ್‌ಮನ್ನನಿಗೆ ಮಾತ್ರ ನಂದಾ ಎಂಬವರೊಬ್ಬರು ಅಲ್ಲಿದ್ದಾರೆಂಬುದು ಗೊತ್ತು.


ವರ್ಷಕ್ಕೊಮ್ಮೆ ಅವರ ಹುಟ್ಟುಹಬ್ಬದ ದಿನ ಗುಜರಾತಿನ ಮಂತ್ರಿಮಹೋದಯರು 'ರಿತುರಾಜ್'ಗೆ ಬಂದು ಮಾಲೆ ಹಾಕಿ ಕೈ ಮುಗಿದು ಹೋದರೆ ತೀರಿತು. ಅನಂತರ ಯಾರೂ ನಂದಾ ಅವರ ಗೋಜಿಗೇ ಹೋಗುವುದಿಲ್ಲ. ವಯಸ್ಸಿನ ಕಾರಣದಿಂದ ತೀರ ನಿಶ್ಶಕ್ತರಾಗಿರುವ ನಂದಾರಿಗೆ ದೃಕ್‌ಶಕ್ತಿ, ಶ್ರವಣಶಕ್ತಿ ಚೆನ್ನಾಗಿಯೇ ಇವೆ. ಮಾತನಾಡಲು ಕಷ್ಟವಾದ್ದರಿಂದ ಯಾರೊಂದಿಗೂ ಅವರು ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳಲು ಇಚ್ಛಿಸುವುದಿಲ್ಲ. ಕೆಲವು ದಿನಗಳ ಹಿಂದೊಮ್ಮೆ ಬಿದ್ದು ಬೆನ್ನಿಗೆ ಪೆಟ್ಟಾಗಿರುವ ಕಾರಣ ಅವರಿಗೆ ನಡೆಯುವುದಕ್ಕೂ ಕುಳಿತಲ್ಲೇ ಬಹಳ ಹೊತ್ತು ಕೂತಿರುವುದಕ್ಕೂ ಕಷ್ಟ. ಇಬ್ಬರು ನೌಕರರು ಅವರನ್ನು ಕೈಹಿಡಿದು ಅಷ್ಟಿಷ್ಟು (ಮನೆಯಲ್ಲೇ) ಓಡಾಡಿಸುತ್ತಾರೆ. ಸ್ನಾನ ಮಾಡಿಸುವುದು, ಬಟ್ಟೆ ಬದಲಿಸುವುದು, ಪತ್ರಿಕೆಗಳನ್ನು ಓದಿ ಹೇಳುವುದು ಮುಂತಾದ ಜವಾಬ್ದಾರಿಯೂ ಆ ನೌಕರರದೆ. ಸೂರ್ಯೋದಯದ ಹೊತ್ತಿಗಾಗಲೇ ಎದ್ದು ಕುಳಿತಲ್ಲೇ ಜಪ ಮಾಡುವ ನಂದಾಜಿಗೆ ಪುರಾಣ ಶ್ರವಣ, ಭಜನೆಗಳಲ್ಲಿ ಆಸಕ್ತಿ. ಇದಕ್ಕಾಗಿ ಬೇರೊಬ್ಬ ವ್ಯಕ್ತಿ ನಿಯಮಿಸಲ್ಪಟ್ಟಿದ್ದಾನೆ. ಮಿತ ಆಹಾರದಲ್ಲಿ ಮೊದಲಿನಿಂದಲೂ ನಂಬಿಕೆ ಇಟ್ಟವರು ನಂದಾ. ಈಗಲೂ ಅಷ್ಟೆ. ಗಾಂಧೀಜಿಯನ್ನು ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡಿರುವ ಅವರು ರಾಷ್ಟ್ರದಲ್ಲಿನ ಇಂದಿನ ಪರಿಸ್ಥಿತಿಗೆ ನಾವು ಮಹಾತ್ಮರ ತತ್ವಗಳನ್ನು ಮರೆತಿರುವುದೇ ಕಾರಣ ಎಂಬ ಅಭಿಪ್ರಾಯದವರು. ಭ್ರಷ್ಟಾಚಾರ, ಕೋಮು ರಾಜಕೀಯ, ಹಿಂಸೆಗಳೇ ಮೊದಲಾದವುಗಳಿಂದಾಗಿ ದೈನಂದಿನ ಬದುಕು ದುರ್ಭರವಾದ ಸುದ್ದಿಯನ್ನು ಓದಿ ತಿಳಿದಾಗಲೆಲ್ಲ ಅವರ ಮನಸ್ಸು ಮುದುಡುತ್ತದೆ. "ಓ ಮಹಾತ್ಮಾ" ಎಂಬ ನುಡಿಯೊಂದಿಗೆ ನಿಟ್ಟುಸಿ

ರೊಂದು ಹೊರಬೀಳುತ್ತದೆ.

ಮಹಾತ್ಮಾ ಎಂದಾಕ್ಷಣ ನಂದಾ ಭಾವುಕರಾಗುತ್ತಾರೆ. ಗಾಂಧೀಜಿಯನ್ನು ಮೊಟ್ಟಮೊದಲ ಬಾರಿಗೆ ಕಣ್ಣಾರೆ ನೋಡಿದ, ಕಿವಿಯಾರೆ ಕೇಳಿದ ಆ ದಿನವನ್ನು ನೆನಪಿಸಿಕೊಳ್ಳುತ್ತಾರೆ....

"೧೯೨೧ರ ಬೇಸಿಗೆ. ಮುಂಬಯಿಯಲ್ಲಿದ್ದೆ. ಆಗಷ್ಟೇ ಅರ್ಥಶಾಸ್ತ್ರದಲ್ಲಿ ಎಂ.ಎ. ಮುಗಿಸಿದ್ದೆ. ಅಲಹಾಬಾದ್ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಯೆಂದು ಆಯ್ಕೆಯೂ ಆಗಿತ್ತು. ಒಂದು ದಿನ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಬಾಪೂಜಿ ಮಾತನಾಡಿದರು. ಕೇಳುತ್ತ ಕೇಳುತ್ತ ನನ್ನೊಳಗೇನೋ ಪರಿವರ್ತನೆಯಾದಂತೆನ್ನಿಸಿತು. ಆ ರಾತ್ರಿಯಿಡೀ ಚೌಪಾಟಿಯ ಬೀಚಿನಲ್ಲಿ ಕುಳಿತು ವಿಶ್ವವಿದ್ಯಾಲಯಕ್ಕೆ ಹೋಗಲೋ, ರಾಷ್ಟ್ರಸೇವೆಗೆ ತೊಡಗಲೋ ಎಂದು ಚಿಂತಿಸಿದೆ. ಸೂರ್ಯ ಮೂಡುವ ಹೊತ್ತಿಗೆ ಇದ್ದಕಿದ್ದ ಹಾಗೆಯೇ ಗಾಂಧೀಜಿಯನ್ನು ಕಾಣುವ ತವಕ ಹೆಚ್ಚಿತು. ಮಣಿಭವನಕ್ಕೆ ನಡೆದೆ. ಪತ್ರಿಕಾ ವರದಿಗಾರರು, ಕಾಂಗ್ರೆಸ್ ಮುಂದಾಳುಗಳೊಂದಿಗೆ ಏನೋ ಮಾತನಾಡುತ್ತ ಕೈಯಲ್ಲೊಂದು ಹಾಲಿನ ಲೋಟ ಹಿಡಿದು ಕೂತಿದ್ದರು ಮಹಾತ್ಮಾ. ನೋಡಿದರು. ನಗೆಮೊಗದಿಂದ ಕೂಡೆಂಬಂತೆ ಸನ್ನೆ ಮಾಡಿದರು. ನಾನು ಪರಿಚಯ ಹೇಳಿಕೊಂಡೆ. ರಾಷ್ಟ್ರಸೇವೆಗೆ ತೊಡಗಲು ಆಶೀರ್ವಾದ ಬಯಸಿ ಬಂದಿದ್ದೇನೆ ಎಂದೆ. ಅಲ್ಲೇ ಇದ್ದರು ಲಾಲಾ ಲಜಪತ್‌ರಾಯ್. 'ಪಂಜಾಬಿನಿಂದ ಬಂದ ತರುಣನೆ, ನನ್ನೊಂದಿಗೆ ಪಂಜಾಬಿಗೆ ಬಾ. ಅಲ್ಲಿಂದಲೇ ಕೆಲಸವನ್ನು ಆರಂಭಿಸು,' ಎಂದರು. ಅಲ್ಲಿದ್ದ ಇನ್ನೊಬ್ಬರು- ಯಾರೆಂದು ನೆನಪಿಲ್ಲ- 'ಪಂಜಾಬಿಗ್ಯಾಕೆ ಹೋಗಬೇಕು ? ಈ ತರುಣ ಸ್ಫೂರ್ತಿ ಪಡೆದದ್ದು ಮುಂಬಯಿಯಲ್ಲಿಯೆ. ಆದ್ದರಿಂದ ಇಲ್ಲಿಯೇ ಇದ್ದುಕೊಂಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳಲಿ' ಎಂದು ವಾದಿಸಿದರು. ಗಾಂಧೀಜಿಗೆ ಅದು ಸತರ್ಕವಾದವೆನ್ನಿಸಿತು. ಮುಂಬಯಿಯಲ್ಲೇ ಕೆಲಸ ಮಾಡು ಎಂದು ಅಪ್ಪಣೆಯಿತ್ತರು."

ಮುಂಬಯಿಯ ನ್ಯಾಶನಲ್ ಕಾಲೇಜಿನಲ್ಲಿ ಉಪನ್ಯಾಸಕನೆಂದು ದುಡಿಯುತ್ತ, ಧರ್ಮಶಾಲೆಯೊಂದರಲ್ಲಿ ಇದ್ದುಕೊಂಡು, ಚರಖಾ ಪ್ರಚಾರ



ಮಾಡುತ್ತ ಆ ನಗರದ ಬೀದಿಗಳನ್ನು ಸುತ್ತಿದರು ನಂದಾ. ಇವರ ಚಟುವಟಿಕೆಗಳನ್ನು ಆಗಾಗ ತಿಳಿದುಕೊಳ್ಳುತ್ತಿದ್ದ ಗಾಂಧೀಜಿಗೆ ಈ ತರುಣ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಕಾರ್ಮಿಕರ ಕುರಿತಾಗಿ ಸಂಶೋಧನೆ ನಡೆಸಬೇಕಾಗಿತ್ತೆಂಬ ವಿಷಯ ಗೊತ್ತಾದಾಗ ಅವರಲ್ಲಿ ಹೊಸ ವಿಚಾರ ಮೊಳೆಯಿತು.

"ಅಹಮ್ಮದಾಬಾದಿಗೆ ಹೋಗಿ ಜವಳಿ ಕಾರ್ಮಿಕರ ಸಂಘಟನೆ ಮಾಡು ಎಂದು ಗಾಂಧೀಜಿಯಿಂದ ಆದೇಶ ಬಂತು. ಪಂಜಾಬಿನಲ್ಲಿ ಹುಟ್ಟಿ ಬೆಳೆದ ನಾನು ಒಂದೂ ಗುಜರಾತಿ ಶಬ್ದದ ಅರ್ಥವನ್ನರಿಯದ ಗುಜರಾತಿಯಾಗಿ ಅಹಮ್ಮದಾಬಾದಿನಲ್ಲಿ ಬಂದಿಳಿದೆ," ಅವರು ನೆನಪಿಸಿಕೊಂಡು ನಗುತ್ತಾರೆ.

ಅಲ್ಲಿ ಕಾರ್ಮಿಕರ ಸಂಘಟನೆಯಲ್ಲಿ ತೊಡಗಿದ ನಂದಾ ದೇಶದಲ್ಲೆ ಅತಿ ದೀರ್ಘಕಾಲದ್ದೆಂದು ಹೇಳಲಾಗುವ ಮುಷ್ಕರವನ್ನು ಏರ್ಪಡಿಸಿದರು. ಅದು ಶಾಂತಿಯಿಂದೊಡಗೂಡಿದ ಮುಷ್ಕರ. ಗಾಂಧೀಜಿ ಜೇಲಿನಲ್ಲಿದ್ದರು. ನಂದಾ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳಬೇಕಿತ್ತು. ಪರಿಣಾಮ ಗೊತ್ತೇ ಇದ್ದಿತಾದ್ದರಿಂದ ಮುಷ್ಕರವಿನ್ನೂ ನಡೆದಿದ್ದಾಗಲೇ ನಂದಾ

ಸಾವಿರಾರು ಕಾರ್ಮಿಕರನ್ನು ಮುಂಬಯಿಗೆ ಕರೆತಂದು ಬೇರೆ ಕೆಲಸ ಕೊಡಿಸಿದರು. ಅರವತ್ತೈದು ದಿನಗಳ ಆ ಮುಷ್ಕರ ಮುಗಿದಾಗ ಗುಲಜಾರಿಲಾಲ್ ಮನೆಮಾತಾಗಿಬಿಟ್ಟರು. ಅಹಮ್ಮದಾಬಾದ್ ಮುನಿಸಿಪಲ್ ಚುನಾವಣೆಗೆ ಉಮೇದುವಾರನಾಗುವಂತೆ ಮಹಾತ್ಮಾ ಆದೇಶವಿತ್ತರು. ನಂದಾ ನಿಂತರು, ಗೆದ್ದರು. (೧೯೨೬.) ಅಂದಿನಿಂದ ಮುಂದೆಂದೂ ನಂದಾ ಚುನಾವಣೆಗಳಲ್ಲಿ ಸೋತುದೇ ಇಲ್ಲ. (೧೯೭೭ರಲ್ಲಿ ಕಾಂಗ್ರೆಸ್ (ಐ) ಪಕ್ಷ ಶೋಚನೀಯ ಸೋಲು ಕಂಡ ಚುನಾವಣೆಗೆ ನಂದಾ ಸ್ಪರ್ಧಿಸಿರಲಿಲ್ಲ. ಅದಕ್ಕೂ ಮುನ್ನ ಅವರು ಹರ್‍ಯಾನಾದ ಒಂದು ಮತಕ್ಷೇತ್ರದ ಪ್ರತಿನಿಧಿಯಾಗಿ ಲೋಕಸಭೆಯಲ್ಲಿದ್ದರು.) ಕಾಲು ಶತಮಾನ ಗುಜರಾತಿನಲ್ಲಿಯೇ ಕಳೆದ ಗುಲಜಾರಿಲಾಲ್ ಸ್ವಾತಂತ್ರ್ಯ ಸೇನಾನಿಯಾಗಿ ಜೇಲು ಸೇರಿದ್ದು ಎಷ್ಟು ಬಾರಿಯೊ! ಸ್ವತಂತ್ರ ಭಾರತದ ಕನಸು ನನಸಾಗಿ, ಬಿ.ಜಿ. ಖೇರ್ ಮುಖ್ಯಮಂತ್ರಿಯಾಗಿದ್ದ ಮುಂಬಯಿ ರಾಜ್ಯದ ಕಾರ್ಮಿಕ ಮಂತ್ರಿಯೆಂದು ನಿಯುಕ್ತಿಗೊಂಡ ನಂದಾ ಮತ್ತೆ ಆ ಮಹಾನಗರದಲ್ಲಿ ಕಾಲೂರುತ್ತಿದ್ದ ಹಾಗೆಯೆ ದಿಲ್ಲಿ ಕರೆಯಿತು. ಕಾಂಗ್ರೆಸ್ ಪಕ್ಷದ ಆರ್ಥಿಕ ಠರಾವುಗಳನ್ನು ರೂಪಿಸುತ್ತಿದ್ದ ಅವರನ್ನು ಯಾವುದೋ ಒಂದು ರಾಜ್ಯದ ಮಂತ್ರಿಯಾಗಿರಲು ನೆಹರೂ ಬಿಡಲಿಲ್ಲ. ಹೊಸದಾಗಿ ನೇಮಕವಾಗಿದ್ದ ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ ಗುಲಜಾರಿಲಾಲರನ್ನು ನೇಮಿಸಿದರು. ಮೊದಲಿನ ಮೂರು ಪಂಚವಾರ್ಷಿಕ ಯೋಜನೆಗಳ ರೂಪುರೇಷೆಯಲ್ಲಿ ನಂದಾ ಶ್ರಮಿಸಿದರು. ನೆಹರೂ ಇಷ್ಟಕ್ಕೇ ಸುಮ್ಮನಾಗಲಿಲ್ಲ. ಕೇಂದ್ರ ಸಂಪುಟದಲ್ಲಿ ಮಂತ್ರಿಯಾಗುವಂತೆ ಮನವೊಲಿಸಿದರು. "ಮಂತ್ರಿಮಂಡಲದ ಎಲ್ಲ ಸದಸ್ಯರೂ ಒಮ್ಮತದಿಂದ ಒಪ್ಪುವುದಾದರೆ ಮಾತ್ರ ನಾನು ಸಂಪುಟದಲ್ಲಿ ಸೇರುವೆ," ಎಂದರು ನಂದಾ. ನೆಹರೂ ಮರುದಿನವೇ, "ಯಾರ ಅಭ್ಯಂತರವೂ ಇಲ್ಲ," ಎಂದುಬಿಟ್ಟರಂತೆ.

ನೆಹರೂ ಯಾರನ್ನೂ ಸಂಪರ್ಕಿಸಿಯೇ ಇರಲಿಲ್ಲ, ರಾಜಾಜಿ ನಂತರ ಆಕ್ಷೇಪಿಸಿದರೆಂಬ ವಿಷಯ ನಂದಾಗೆ ತಡವಾಗಿ ತಿಳಿಯಿತು. ಯೋಜನೆ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಖಾತೆಯ ಜವಾಬ್ದಾರಿ ಗುಲಜಾರಿಲಾಲರಿಗೆ.

ರಾಜಕೀಯ ನೀತಿ ನಡಾವಳಿಗಳು ಗಾಂಧೀಜಿಯ ಕಾಲಕ್ಕಿಂತ ಸ್ವತಂತ್ರ ಭಾರತದಲ್ಲಿ ಭಿನ್ನವಾಗತೊಡಗಿದ್ದುದನ್ನು ನಂದಾ ನೋಡಿದ್ದಾರೆ. ಅದರ ಮೊದಲ ಅನುಭವ ಅವರಿಗಾದದ್ದು ಪ್ರಥಮ ಮಹಾಚುನಾವಣೆಯ ಸಂದರ್ಭದಲ್ಲಿ. "ಕಾಂಗ್ರೆಸ್ ಪಕ್ಷದ ಹುರಿಯಾಳುಗಳ ಆಯ್ಕೆಯ ಪಟ್ಟಿ ಸಿದ್ಧಪಡಿಸುವುದು ನನ್ನ ಹೊಣೆಯಾಗಿತ್ತು. ಅದು ಎಷ್ಟು ಗುರುತರ ಜವಾಬ್ದಾರಿ- ಎಂಬ ಅರಿವು ಇದ್ದರೂ ನಿರ್ಧಾರ ತೆಗೆದುಕೊಳ್ಳುವುದು ಸುಲಭವಾಗಿರಲಿಲ್ಲ. ನನ್ನ ಮನೆ ಹುರಿಯಾಳಾಗಬಯಸುವವರ ಪಾಲಿನ ತೀರ್ಥಕ್ಷೇತ್ರದಂತಾಯಿತು. ಬರುವ ಪ್ರತಿಯೊಬ್ಬನೂ ತಾನು ಎಷ್ಟು ಪರಿಶುದ್ಧ, ಇನ್ನೊಬ್ಬನೆಷ್ಟು ನೀತಿಗೆಟ್ಟವನೆಂಬುದನ್ನು ಬಿಂಬಿಸುವ ಪ್ರಯತ್ನದಲ್ಲಿರುತ್ತಿದ್ದ. 'ಆತ ಬದ್ಮಾಶರೀ... ಹೆಂಡಗುಡುಕ...' ಎಂಬುದೇ ಒಬ್ಬ ಮತ್ತೊಬ್ಬನ ಕುರಿತು ಹೇಳುತ್ತಿದ್ದ ಮಾತಾಗಿರುತ್ತಿತ್ತು. ಹೇಸಿಗೆ ತರುವಂಥ ಕೆಲಸ ಅದು. ಆದರೆ ಅವರೆಲ್ಲರ ಮಾತಿನಂತೆ ಆಯ್ಕೆ ಮಾಡಲು ಕೂತಿದ್ದರೆ ಪಟ್ಟಿ ಸಿದ್ಧವಾಗುತ್ತಲೇ ಇರಲಿಲ್ಲ," ಎಂದು ನೆನಪಿಸಿಕೊಳ್ಳುವ ನಂದಾ ಆ ಪಟ್ಟಿಯನ್ನು ನೆಹರೂಗೆ ಕೊಟ್ಟರಂತೆ. ತೂಕಬದ್ಧವಾದ ಆಯ್ಕೆ ಎಂದು ಪ್ರಶಂಸಿಸಿದ ಜವಾಹರರು ಅದರಲ್ಲಿ ನಂದಾ ಅವರ ಹೆಸರನ್ನೂ ಸೇರಿಸಿ ಗುಜರಾತಿನ ಸಬರಕಂಠಾ ಕ್ಷೇತ್ರದಿಂದ ಸ್ಪರ್ಧಿಸುವಂತೆ ಹೇಳಿದರಂತೆ.

"ನೆಹರೂರ ಇಚ್ಛೆಯಂತೆ ನಾನು ಸಬರಕಂಠಾಕ್ಕೆ ಹೋದೆ. ಅಲ್ಲಿ ನೋಡಿದರೆ ಮಾಜಿ ಮಹಾರಾಜನೇ ಅಭ್ಯರ್ಥಿ. ಜನ ಆತನಲ್ಲಿನ್ನೂ ಗೌರವವಿಟ್ಟುಕೊಂಡಿದ್ದರು. ಅವನಿಗೇ ಅವರ ಮತ ಎಂದು ಯಾರಾದರೂ ಹೇಳಿಬಿಡಬಹುದಾದಂಥ ಸ್ಥಿತಿಯಿತ್ತು. ನಾನೋ ಅಲ್ಲಿ ಹೊಸಬ. ಗೆಲ್ಲುವುದಿರಲಿ, ಆತನಿಗೆ ಸಮನಾಗಿ ನಿಲ್ಲುವುದೂ ಅಸಾಧ್ಯವೆನಿಸಿತು. ಮಹಾರಾಜ ಕೂತಲ್ಲಿಯೇ ಮತದಾರರನ್ನು ಕರೆಸಿಕೊಂಡು ಆದೇಶ ಕೊಡಬಲ್ಲವನಾಗಿದ್ದ. ಹಳ್ಳಿ ಹಳ್ಳಿ ತಿರುಗಿ ಜನಕ್ಕೆ ನಾನು 'ಯಾರು' ಎಂಬುದನ್ನು ಹೇಳಬೇಕಾದ್ದು ನನ್ನ ಅನಿವಾರ್ಯತೆ. ಪಾರ್ಟಿ ಕೊಟ್ಟ ಎರಡು ಕಾರುಗಳು, ನನ್ನ ಬಳಿಯಿದ್ದ ೧೪,೦೦೦ ರೂಪಾಯಿಗಳೊಂದಿಗೆ ನಾನೇನು ಮಾಡಬಲ್ಲವನಾಗಿದ್ದ? ಅತಿನಿಧಿಯ ಅತಿರಥಿಯ



ತೊಂಬತ್ತಾರರ ನಂದಾ. ಪಕ್ಕದಲ್ಲಿ ಅವರ ಮಗಳು ಡಾ. ಪುಷ್ಪಾ ನಾಯಕ

ದುರು ನಿಂತು ಪ್ರತಿನಿಧಿಯಾಗುವ ಕನಸು ಕಾಣುವುದು ಕೂಡ ಸಾಧ್ಯವಿರಲಿಲ್ಲ. ನಿದ್ರೆ ಬಂದರೆ ತಾನೆ ಕನಸು ಕಾಣುವುದು....

"ಗ್ರಾಮವೊಂದರಲ್ಲಿ ನನ್ನ ಪ್ರಚಾರ ಭಾಷಣ. ಕೆಲವು ದಿನಗಳಿಂದ ನಿದ್ದೆಗೆಟ್ಟು, ಹಳ್ಳಿ-ಹಳ್ಳಿ ತಿರುಗಾಡಿದ್ದರಿಂದಾಗಿ ಅಸ್ವಸ್ಥನಾಗಿದ್ದೆ. ಇನ್ನೇನು ಮಾತು ಶುರು ಮಾಡಲು ಏಳಬೇಕು. ಕಣ್ಣಿಗೆ ಕತ್ತಲಾವರಿಸಿದಂತಾಗಿ ಬಿದ್ದುಬಿಟ್ಟೆ. ಎಚ್ಚರ ತಿಳಿದಾಗ ನನ್ನನ್ನು ಮನೆಯೊಂದಕ್ಕೆ ಕರೆತಂದು ಉಪಚರಿಸಿದ್ದು ತಿಳಿಯಿತು. ಹೊರಗೆ ಜನರ ಗುಜುಗುಜು ಮಾತು. ಕೇಳಿಬರುತ್ತಿತ್ತು. ನನ್ನ ಭಾಷಣ ಕೇಳಲು ಅವರೆಲ್ಲ ಕಾದಿದ್ದಾರೆಂದು ಯಾರೋ ಹೇಳಿದರು.

"ಚುನಾವಣೆ ಮುಗಿಯಿತು. ಮತಗಳ ಎಣಿಕೆ ಆರಂಭವಾಗುವ ದಿನ ಮಹಾರಾಜ ನನ್ನನ್ನು ಚಹಾ ಪಾನಕ್ಕೆ ಆಮಂತ್ರಿಸಿದ. ಹೋದೆ. ಆತ ನನ್ನ ಕೈ ಕುಲುಕಿ ಹೃತ್ಪೂರ್ವಕವಾಗಿ ಹೇಳಿದ- 'ನಂದಾಜಿ, ಖಂಡಿತ ನೀವು ೬೦,೦೦೦ಕ್ಕೂ ಹೆಚ್ಚು ಮತಗಳಿಂದ ಗೆಲ್ಲುತ್ತೀರಿ...' ಫಲಿತಾಂಶ ಗೊತ್ತಾದಾಗ ಮಹಾರಾಜನ ಮಾತು ಕರಾರುವಾಕ್ಕೆನಿಸಿತು. ಆದರೆ ನನಗೆ ವ್ಯಸನವುಂಟು ಮಾಡಿದ ಸಂಗತಿಯೆಂದರೆ ಮಹಾರಾಜ ತನ್ನ ಎಲ್ಲ ಮಂಡಳಿಯೊಂದಿಗೆ ಸಬರಕಂಠಾದಿಂದ ಹೊರಟು ಹೋಗಿಬಿಟ್ಟದ್ದು. ಮುಂದೆಂದೂ ಆತ ಸಬರಕಂಠಾಕ್ಕೆ ಬರಲಿಲ್ಲ."

ಕೇಂದ್ರ ಸಂಪುಟದಲ್ಲಿ ನಂದಾಗೆ ಯೋಜನಾ ಇಲಾಖೆಯೇ ಬಂತು. ಅವರ ಪ್ರೀತಿಯ ಖಾತೆ ಅದು. ಆದರೆ ಗೋವಿಂದ ವಲ್ಲಭ ಪಂತರ ನಿಧನ ಕಾಂಗ್ರೆಸ್ ಪಕ್ಷಕ್ಕೊಂದು ದೊಡ್ಡ ಪೆಟ್ಟಾಗಿ ಪರಿಣಮಿಸಿತು. ನೆಹರೂ ಮತ್ತೆ ನಂದಾರ ನೆರವು ಕೇಳಿದರು. ಗೃಹಮಂತ್ರಿಯಾಗಲು ಇವರಿಗೆ ಇಷ್ಟವಿರಲಿಲ್ಲ. ನೆಹರೂ ದೃಷ್ಟಿಯಲ್ಲಿ ನಂದಾ ಅವರೇ ಗೃಹಖಾತೆಗೆ ಅತ್ಯಂತ ಯೋಗ್ಯ ವ್ಯಕ್ತಿ. 'ದಂಡಿಯ ಸಂತ'ನ ಶಿಷ್ಯ 'ದಂಡಧಾರಿ'ಯಾಗಬೇಕಾಯಿತು.

ಗೃಹಖಾತೆಯನ್ನು ವಹಿಸಿಕೊಂಡ ಹೊಸತಿನಲ್ಲೇ ಕಲಕತ್ತಾ ಭುಗಿಲೆದ್ದಿತು. ದೊಂಬಿ ಜಮಶೇಡ್‌ಪುರ ಮತ್ತು ರೂರ್ಕೆಲಾಗಳಿಗೂ ಪಸರಿಸತೊಡಗಿದಾಗ ನಂದಾ ಯಾರಿಗೂ ತಿಳಿಸದೆ ವಿಮಾನವೇರಿ ಕಲಕತ್ತಾಕ್ಕೆ ಹೋದರು. ಏರ್‌ಪೋರ್ಟಿನಿಂದ ರಾಜಭವನಕ್ಕೆ ಹೊರಟಾಗ ರಸ್ತೆಯ ಇಕ್ಕೆಲಗಳಲ್ಲೂ

ಅವರಿಗೆ ಕಂಡದ್ದು ಹೊತ್ತುರಿಯುತ್ತಲಿದ್ದ ಗುಡಿಸಲುಗಳು. ಮುಖ್ಯಮಂತ್ರಿ ಪಿ.ಸಿ. ಸೇನ್‌ರನ್ನು ಸಂಪರ್ಕಿಸಿದಾಗ, "ಯಾರದೋ ಜಾಗದಲ್ಲಿ ನಿರ್ಮಿಸಿಕೊಂಡ ಗುಡಿಸಲುಗಳವು. ಜಾಗದ ಒಡೆಯರು ಒಮ್ಮೆಲೇ ದಂಡೋಪಾಯ ಕೈಗೊಳ್ಳುತ್ತಾರೆಂದು ಕೊಂಡಿರಲಿಲ್ಲ. ಇಡೀ ಕಲಕತ್ತೆಗೇ ಈ ಹಿಂಸಾಚಾರ ಹಬ್ಬುತ್ತದೆಂಬ ನಿರೀಕ್ಷೆಯೂ ಇರಲಿಲ್ಲ. ಈಗ ಪರಿಸ್ಥಿತಿ ಕೈ ಮೀರಿದೆ. ಏನು ಮಾಡಲಿ ?" ಎಂದು ಕೈ ಕೈ ಹಿಸುಕಿಕೊಂಡರು. ಸುಗ್ರೀವಾಜ್ಞೆಯೊಂದನ್ನು ಪಾಸು ಮಾಡಿಸಿಕೊಳ್ಳುವುದು ಅನಿವಾರ್ಯವಾಯಿತು. "ಒಂದೇ ಒಂದು ಗುಡಿಸಲು ಸುಟ್ಟ ಘಟನೆ ಸಂಭವಿಸಿದರೂ ಗುಡಿಸಲು ಕಳೆದುಕೊಂಡಾತನಿಗೇ ಆ ಜಾಗದ ಒಡೆತನ ಹಾಗು ಮನೆ ನಿರ್ಮಿಸಿಕೊಳ್ಳಲು ಅನುಮತಿ ನೀಡಲ್ಪಡುತ್ತದೆ." ನಂತರ ಒಂದೇ ಒಂದು ಅಗ್ನಿ ಪ್ರಕರಣವೂ ವರದಿಯಾಗಲಿಲ್ಲ. ಆದರೆ ದೊಂಬಿಯ ಸ್ವರೂಪ ಬದಲಾಯಿತು. ನಂದಾ ಪೊಲೀಸು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. "ಇನ್ನು ೩೬ ಗಂಟೆಗಳಲ್ಲಿ ಶಾಂತಿ ನೆಲಸದಿದ್ದರೆ ನೀವೆಲ್ಲ ಮನೆಗೆ ಹೋಗಬೇಕಾದೀತು."

ಕಲಕತ್ತಾ ತಣ್ಣಗಾಯಿತು.

ನಂದಾ ಗೃಹಖಾತೆಯನ್ನು ವಹಿಸಿಕೊಂಡು ವರ್ಷವಿನ್ನೂ ಕಳೆದಿರಲಿಲ್ಲ. ಕಾಕತಾಳೀಯವೆಂಬಂತೆ ಜ್ಯೋತಿಷಿಯ ಮಾತು ನಿಜವಾಯಿತು. ೧೯೬೪ರ ಮೇ ೨೭. ನಗೆಮೊಗದ ನೆಹರೂ ನಡೆದುಬಿಟ್ಟರು. ದೇಶ ಕಣ್ಣೀರಲ್ಲಿ ಮುಳುಗಿತು. ತಮ್ಮ ಉತ್ತರಾಧಿಕಾರಿ ಎಂದು ಯಾರನ್ನೂ ಬೆಳೆಸಿರದ ನೆಹರೂ, 'ನಂತರ ಯಾರು ?' ಎಂಬ ಪ್ರಶ್ನೆಯನ್ನು ಪರಿಹರಿಸದೆ ಹೊರಟು ಹೋಗಿದ್ದರು.

ಗೃಹಮಂತ್ರಿ ನಂದಾ ಹಂಗಾಮಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಕಾಂಗ್ರೆಸ್ ಪಕ್ಷ 'ಸೂಕ್ತ ವ್ಯಕ್ತಿಯನ್ನು' ಆಯ್ಕೆ ಮಾಡುವವರೆಗಿನ ತಾತ್ಕಾಲಿಕ ವ್ಯವಸ್ಥೆ ಅದು.

"ಮೂರು ವಾರಗಳವರೆಗೆ ನಾನು ಪ್ರಧಾನಿಯಾಗಿದ್ದೆ. ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ದ್ವಂದ್ವದಲ್ಲಿದ್ದರು. ಅವರಿಗೆ ನಾನೇ ಮುಂದುವರಿಯಬೇಕೇ ಬೇಡವೇ ಎಂಬ ಜಿಜ್ಞಾಸೆ. ಪಕ್ಷದಲ್ಲಿ ಅನೇಕರಿಗೆ ನನ್ನ ಮುಂದುವರಿಕೆಯ ಕುರಿತು ಒಲವಿತ್ತು. ನನಗೋ ಅದು ಬೇಡವಾಗಿತ್ತು. ಲಾಲಬಹಾದ್ದೂರರನ್ನು ಕಂಡು ಹೇಳಿದೆ- ಈ ದೌಡಿನಲ್ಲಿ ನಾನು ಓಡಲಾರೆ."

ಶಾಸ್ತ್ರೀಜಿ ಭಾರತದ ಪ್ರಧಾನಿಯಾದರು. ಎಲ್ಲವೂ ಸುಸೂತ್ರವಾಯಿತೆಂದುಕೊಳ್ಳುವಷ್ಟರಲ್ಲಿ ಮತ್ತೆ ಪ್ರಧಾನಿ ಕುರ್ಚಿ ಖಾಲಿಯಾಯಿತು. ಶಾಸ್ತ್ರೀಜಿ ತಾಷ್ಕೆಂಟಿನಲ್ಲಿ ಕಣ್ಣುಮುಚ್ಚಿದರು. ಆಗಲೂ ಗೃಹಮಂತ್ರಿಯೇ ಆಗಿದ್ದ ನಂದಾ ಎರಡನೆಯ ಸಲ ಹಂಗಾಮಿ ಪ್ರಧಾನಿಯಾಗಬೇಕಾಗಿ ಬಂತು.

"ನೀವು ನಮ್ಮ ತಂದೆಯ ಒಡನಾಡಿಗಳು. ಅನುಭವಿಕರು. ನಿಷ್ಠ-ನಿಷ್ಠುರರು. ಪ್ರಧಾನಿಯಾಗಿ ಮುಂದುವರಿಯಲು ಮನಸ್ಸು ಮಾಡಿ," ಎಂದರು ಇಂದಿರಾ. ಜತೆಗೆ ಅಪಾರ ಬೆಂಬಲವೂ ಇತ್ತು. ಆದರೆ ತಾನು ಆ ರೇಸಿಗೆ ತಕ್ಕ ಕುದುರೆಯಲ್ಲ ಎಂದೇ ನಂದಾರ ಅಭಿಪ್ರಾಯ. ಕಾಲ ಬದಲಾಗಿತ್ತು. ಧೋರಣೆಗಳು ಬದಲಾಗಿದ್ದವು. ಜತೆಗೆ ಮೌಲ್ಯಗಳೂ. ಖಂಡಿತವಾದ ಖಂಡಿತಕ್ಕೂ ಆ ಸಂತೆಯಲ್ಲಿ ಬೇಡದ ವಸ್ತು.

"ನೀವು ನೆಹರೂ ಪುತ್ರಿ. ನನಗೆ ಸಾಕಷ್ಟು ಅವಕಾಶಗಳನ್ನಿತ್ತ ನೆಚ್ಚಿನ ನಾಯಕನ ಪುತ್ರಿ. ನನಗೆ ಆ ಪಟ್ಟದಲ್ಲಿ ಗಟ್ಟಿಯಾಗಿ ಕೂಡುವ ಕೆಟ್ಟ ಮಹತ್ವಾಕಾಂಕ್ಷೆಯಿಲ್ಲ. ಪಕ್ಕದಲ್ಲಿ ನಿಂತುಕೊಳ್ಳುವುದೇ ನನಗೆ ಇಷ್ಟ," ಎಂದು ಹೇಳಿದ ನಂದಾ ಮೌನವಾಗುಳಿದುಬಿಟ್ಟರು. ಅವರಿಗೆ ತೆರೆಯ ಮರೆಯಲ್ಲಿ ನಡೆಯುತ್ತಿದ್ದ ತಯಾರಿಗಳ ಅರಿವಿತ್ತು. ಕಾಮರಾಜರು ಇತರರೊಂದಿಗೆ ಸೇರಿ ಇಂದಿರಾರನ್ನೇ ಮುಂದೆ ತರುವ ಸನ್ನಾಹ ನಡೆಸಿದ್ದರು.

"ಅವರಿಗೆಲ್ಲ ನನ್ನ ಜಾಯಮಾನ ಗೊತ್ತಿತ್ತು. ಎಷ್ಟೋ ಜನಕ್ಕೆ ಗೃಹಮಂತ್ರಿಯಾಗಿ ನಾನು ಕೈಗೊಂಡ ಕ್ರಮಗಳ ಕುರಿತು ಅಸಮಾಧಾನವೂ ಇತ್ತು. ವಿಶೇಷವಾಗಿ ಭ್ರಷ್ಟಾಚಾರ ನಿರ್ಮೂಲನಾ ಕ್ರಮಗಳು.... ಬಹ್ವಂಶ ರಾಜ್ಯಗಳ ಮುಖ್ಯಮಂತ್ರಿಗಳೂ ನನ್ನ ವಿರುದ್ಧವೇ ಇದ್ದರು. ಕಾಲಸೂಕ್ಷ್ಮತೆ-ಸ್ಥಿತಿ ಸೂಕ್ಷ್ಮತೆಯನ್ನು ನಿರ್ಲಕ್ಷಿಸಿ ಪ್ರಧಾನಿಯಾಗಿದ್ದರೆ ನಾನು ಅಲ್ಲಿ ಕೆಲವೇ ದಿನಗಳ ಉತ್ಸವಮೂರ್ತಿಯಾಗಿರುತ್ತಿದ್ದೆ. ಒಳದನಿಯೊಂದು ಎಚ್ಚರಿಸಿ ನನ್ನನ್ನು ರಕ್ಷಿಸಿತು. ಇಂದಿರಾ ಅಧಿಕಾರ ಸ್ವೀಕರಿಸಿ

ದರು. 'ನಂದಾಜಿ, ನನಗೆ ನಿಮ್ಮ ಮಾರ್ಗದರ್ಶನ ಯಾವತ್ಕಾಲಕ್ಕೂ ಬೇಕು. ಸಂಪುಟ ರಚನೆಗೆ ನಿಮ್ಮ ಸಲಹೆಯ ಅವಶ್ಯಕತೆಯಿದೆ. ನಿಮ್ಮ ನಿವಾಸಕ್ಕೆ ನಾಳೆ ನಾನೇ ಬರುತ್ತೇನೆ' ಎಂದ ಇಂದಿರಾ ಬರಲೇ ಇಲ್ಲ. ಈಗ ಬಂದಾರು, ಆಗ ಬಂದಾರೆಂದು ಮನೆಯಲ್ಲೇ ಕಾದು ಕುಳಿತಿದ್ದಾಗ ಬಂದವರು ಬೇರೆಯ. 'ನಂದಾಜಿ, ಅಲ್ಲಿ ಚದುರಂಗದ ಆಟ ಶುರುವಾಗಿದೆ. ಕಾಯಿಗಳು ಬದಲಾಗುತ್ತಿವೆ. ನಿಮ್ಮನ್ನು ನಿವಾರಿಸುವುದು ಹೇಗೆ ಎಂದು ಅವರೆಲ್ಲ ಪ್ಲಾನು ಮಾಡುತ್ತಿದ್ದಾರೆ' ಎಂದರು.

"ಗೃಹಮಂತ್ರಿಯಾಗಿ ನಾನಿರುವುದು ಅವರಾರಿಗೂ ಬೇಡವಾಗಿತ್ತು. ಇಂದಿರಾರನ್ನು ಕಾಣಬೇಕಾಗಿ ಬಂತು. 'ನಂದಾಜಿ, ನೀವು ಮುಖ್ಯಮಂತ್ರಿಗಳ ಫೋನುಗಳ ಕದ್ದಾಲಿಕೆಯಲ್ಲಿ ತೊಡಗಿದ್ದೀರೆಂದು ಕಾಣುತ್ತದಲ್ಲಾ...' ಎಂದರು. ಎರಡೇ ದಿನದಲ್ಲಿ ಆಕೆಯ "ಧ್ವನಿ" ಬದಲಾಗಿತ್ತು! 'ಇಲ್ಲಿಲ್ಲ, ನಾನೆಂದೂ ಹಾಗೆ ಮಾಡಿಲ್ಲ. ಆದರೆ ಹಾಗೆ ಮಾಡುವುದರಲ್ಲಿ ಏನೂ ತಪ್ಪಿಲ್ಲ ಎಂದುಕೊಂಡಿದ್ದೇನೆ. ಅಂದಹಾಗೆ, ನಾನು ಗೃಹಮಂತ್ರಿಯಾಗಿ ಮುಂದುವರಿಯಬಾರದೆಂಬುದಕ್ಕೆ ಆದೇನು ಕಾರಣ ಹೇಳಿ' ಎಂದೆ. ಆಕೆ ಮಾತನಾಡಲೇ ಇಲ್ಲ. ಮನೆಗೆ ಬಂದೆ.

"ಕೆಲವು ದಿನಗಳ ಮೇಲೆ ಒಂದು ಮಧ್ಯರಾತ್ರಿ. ಪ್ರಧಾನಿ ನಿವಾಸಕ್ಕೆ ಬರಬೇಕೆಂದು ಬುಲಾವು ಬಂತು. ಹೋಗಿ ನೋಡಿದರೆ ಆಕೆಯ ಸುತ್ತ ದಿನೇಶ್ ಸಿಂಗ್ ಮತ್ತಿತರರು! ಅವರು ನನ್ನತ್ತ ನೋಡಿದ ರೀತಿಯೇ ಎಲ್ಲವನ್ನೂ ಹೇಳಿಬಿಟ್ಟಿತು. 'ನಂದಾಜಿ, ನೀವು ಗೃಹಮಂತ್ರಿಯಾಗಿಯೇ ಮುಂದುವರಿಯಲು ಅಭ್ಯಂತರವೇನಿಲ್ಲ... ಆದರೆ... ಗುಪ್ತಚರ ವಿಭಾಗ ಮಾತ್ರ ಪ್ರಧಾನಿಯ ಸುಪರ್ದಿನಲ್ಲಿರಲಿ....' ಎಂದರು. 'ಗುಪ್ತಚರ ವಿಭಾಗವಿರದ ಗೃಹಖಾತೆಯ ? ಹಾಗೆಂದರೇನರ್ಥ ?' ಎಂದು ಕೇಳಿದ ನಾನು ಅವರ ಪ್ರಸ್ತಾಪವನ್ನು ಒಪ್ಪದೇ ವಾಪಸ್ಸಾದೆ."

ಯಾಕೋ ಏನೋ ಗೊತ್ತಿಲ್ಲ, ಇಂದಿರಾ ಸಂಪುಟದಲ್ಲಿಯೂ ನಂದಾರಿಗೆ ಗೃಹಖಾತೆಯೇ ಬಂತು. ಅದೂ ಯಾವ ಅಧಿಕಾರವೂ ಮೊಟಕುಗೊಳ್ಳದ ರೀತಿಯಲ್ಲಿ! ನಂದಾರಿಗೆ ಯಾವ ಅಡ್ಡಿಯೂ ಇಲ್ಲದೆ ಕಾರ್ಯ ನಿರ್ವಹಿಸಬಹುದೆಂಬ ನಂಬಿಕೆ ಬಂದಾಗ, "ಎರಡು ವರ್ಷಗಳಲ್ಲಿ ದೇಶದಲ್ಲಿ ಶಾಂತಿ-ಸುವ್ಯವಸ್ಥೆ ನೆಲೆನಿಲ್ಲುವಂತೆ ಮಾಡುತ್ತೇನೆ," ಎಂಬ ಆತ್ಮವಿಶ್ವಾಸವೂ ಮೂಡಿತು. ಆದರೆ ಕೆಲವು ಜನ ಕಾಂಗ್ರೆಸ್ಸಿಗರು ಹಾಗೂ ಮಂತ್ರಿಗಳು ಮಾತ್ರ ಒಳಗೊಳಗೇ ಕತ್ತಿ ಮಸೆಯತೊಡಗಿದ್ದರು.

"ಅದೇ ವೇಳೆಗೆ 'ಗೋ-ಹತ್ಯೆ'ಯ ವಿಷಯದಲ್ಲಿ ಗೊಂದಲ ಶುರುವಾಯಿತು. ಗೋಹತ್ಯೆಯನ್ನು ವಿರೋಧಿಸಿ ದಿಲ್ಲಿಯಲ್ಲಿ ಬೃಹತ್ ಮೆರವಣಿಗೆ ಏರ್ಪಾಡಾಗಿತ್ತು. ಇದ್ದಕ್ಕಿದ್ದಂತೆಯೇ ಮೆರವಣಿಗೆ ಮುರಿದು ಹಿಂಸೆಗಿಳಿಯಿತು. ಗೋಲಿಬಾರೂ ಆಗಬೇಕಾದಷ್ಟು ಪ್ರಕ್ಷುಬ್ಧ ವಾತಾವರಣ ಅದು. ನನ್ನ ರಾಜಕೀಯ ವಿರೋಧಿಗಳು ಇದರ ಲಾಭವನ್ನು ಚೆನ್ನಾಗಿಯೇ ಪಡೆಕೊಂಡರು. ಸಾರ್ವಜನಿಕವಾಗಿಯೇ, 'ಇದೆಲ್ಲ ಏನು ನಡೆಯುತ್ತಿದೆ ನಂದಾಜಿ ? ಶಾಂತಿ-ಸುವ್ಯವಸ್ಥೆ ನೆಲೆನಿಲ್ಲುವಂತೆ ಮಾಡುತ್ತೇನೆ ಎಂದು ಹೇಳಿಕೊಂಡಿದ್ದಿರಲ್ಲ...' ಎಂದು ಹಂಗಿಸಿದರು. ನನಗೆ ಎಲ್ಲವೂ ಅರ್ಥವಾಗಿ ಹೋಯಿತು. ಮನಸ್ಸು ರೋಸಿಹೋಗಿತ್ತು. ನನ್ನ ವಿರೋಧಿಗಳು ಆ ಮೆರವಣಿಗೆಯಲ್ಲಿ ಗೂಂಡಾಗಳನ್ನು ಸಾಧುಗಳ ವೇಷದಲ್ಲಿ ಸೇರಿಸಿಬಿಟ್ಟಿದ್ದರು.

'ಕಸ್ತೂರಿ'ಯ ವಿನಂತಿಯ ಮೇರೆಗೆ ಅಹಮ್ಮದಾಬಾದ್ ಕರ್ನಾಟಕ ಸಂಘದ ಅಧ್ಯಕ್ಷ ಎಚ್. ವಾಸುದೇವ ಮೂರ್ತಿಯವರು ಸಂಘದ ಸದಸ್ಯರಾದ ಗುರುರಾಜ್, ಹರಿನಾಥ್ ಹಾಗೂ ರಂಗಕರ್ಮಿ ಸಿದ್ಧರಾಜ್ ಕಲ್ಯಾಣಕರ್ ಅವರೊಂದಿಗೆ ನಂದಾ ಅವರನ್ನು ದಿ. ೧೯-೧೦-೧೯೯೪ರಂದು ಭೇಟಿ ಮಾಡಿ ಬಂದರು. ಅವರು ಕಳಿಸಿದ ವಿವರಗಳು ಮತ್ತು 'ಸೊಸೈಟಿ' ಪತ್ರಿಕೆಯಲ್ಲಿ ಪ್ರಕಟವಾದ ಮಧು ವಲ್ಲೂರಿ ನಡೆಸಿದ ನಂದಾ ಸಂದರ್ಶನಗಳನ್ನು ಆಧರಿಸಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

● ಸಂಪಾದಕ

ಹೇಗಾದರೂ ಗಲಭೆಯೆಬ್ಬಿಸಿ ಆ ಕಾರಣದಿಂದ ನನ್ನನ್ನು ತೊಲಗಿಸುವುದೇ ಅವರ ಉದ್ದೇಶ. ಭ್ರಷ್ಟಾಚಾರದ ವಿರುದ್ಧ ನಾನು ಸಾರಿದ್ದ ಯುದ್ಧದಿಂದ ತ್ರಸ್ತರಾದವರು ಇನ್ನೇನು ತಾನೆ ಮಾಡುತ್ತಾರೆ? ಮನೆಯ ಕಂಪೌಂಡಿನಲ್ಲಿ ಶಾಮಿಯಾನಾ ಹಾಕಿಸಿ ಯಾರು ಬೇಕಾದರೂ ಬಂದು ತಮ್ಮ ತೊಂದರೆಗಳನ್ನು ಹೇಳಿಕೊಳ್ಳಬಹುದೆಂದು ಬೇರೆ ಢಾಣಾಢಂಗುರವಾಗಿ ಸಾರಿದ್ದೆನಲ್ಲ... ಒಬ್ಬೊಬ್ಬನ ಬಣ್ಣವೂ ಬಯಲಾಗುತ್ತಲೇ ಇತ್ತಲ್ಲ... ನಿವೃತ್ತ ನ್ಯಾಯಾಧೀಶರು, ಪ್ರಾಮಾಣಿಕ ಅಧಿಕಾರಿಗಳು ಬಂದು ಭ್ರಷ್ಟರ ಪಟ್ಟಿಯನ್ನೇ ಒಪ್ಪಿಸುತ್ತಿದ್ದರಲ್ಲ... ಒಡಿಸ್ಸಾದ ಮುಖ್ಯಮಂತ್ರಿಯನ್ನು ಭ್ರಷ್ಟಾಚಾರದಲ್ಲಿ ತೊಡಗಿದ ತಪ್ಪಿಗಾಗಿ ಪದಚ್ಯುತಗೊಳಿಸಿದ್ದೆ. ನನ್ನ ರಾಜಕೀಯ ವಿರೋಧಿಗಳನ್ನು ಇದು ನಿದ್ದೆಗೆಡಿಸಿತ್ತು. ಯಾರು ಯಾವ ಹೊತ್ತಿನಲ್ಲಿ ಸಿಕ್ಕುಬೀಳುವರೋ ಎಂಬ ಆತಂಕ ಆ ಜನಕ್ಕೆ. ಅಷ್ಟೇ ಅಲ್ಲ, ರಾಂಚಿಯಲ್ಲೊಂದು ಅನೌಪಚಾರಿಕ ಎ.ಐ.ಸಿ.ಸಿ. ಸಭೆ ಸೇರಿ 'ಈ ನಂದಾನನ್ನು ಹ್ಯಾಗೆ ಮನೆಗೆ ಕಳಿಸುವುದು?' ಎಂಬ ವಿಷಯವಾಗಿ ದಿನವಿಡಿ ಚರ್ಚಿಸಲಾಯಿತಂತೆ. ನನ್ನ ಎಡಬಲ ಇದ್ದವರೇ ಈ ಸಭೆಯಲ್ಲಿಯೂ ಹಾಜರಿದ್ದರು! ನನ್ನ ಆಪ್ತ ಕಾರ್ಯದರ್ಶಿಯೂ ಈ ಮಸಲತ್ತಿನಲ್ಲಿ ಭಾಗಿಯಾಗಿದ್ದ!

"ನಾನು ಇಂದಿರಾರ ಬಳಿ ಹೋದೆ. 'ನನಗೆ ಎಲ್ಲವೂ ಗೊತ್ತಿದೆ. ಈ ಜನ ನಿಮ್ಮನ್ನು ಇಷ್ಟಪಡುತ್ತಿಲ್ಲ. ಗೃಹಖಾತೆಯನ್ನು ನಿಮ್ಮಿಂದ ಕಸಿದುಕೊಳ್ಳುವ ಹುನ್ನಾರ ಅವರದು,' ಎಂದರು ನಿರ್ವಿಕಾರವಾಗಿ. ಆ ಧ್ವನಿಯ ಹಿಂದೆ ಅಡಗಿದ್ದುದೇನೆಂದು ಅರ್ಥವಾಗದಿರುವಷ್ಟು ಮುಗ್ಧನೆ ನಾನು? ಒಂದೆರಡು ವಾರಗಳಲ್ಲಿಯೇ ಎಲ್ಲವೂ ಬದಲಾಗಿಹೋಯಿತು. ಯಾರೊಬ್ಬನೂ ನನ್ನ ಬಳಿ ಸುಳಿಯುತ್ತಿರಲಿಲ್ಲ. ನಾನು ಹೇಳುವುದೊಂದು, ಆ ಜನ ಮಾಡುವುದು ಇನ್ನೊಂದು. ಸುವ್ಯವಸ್ಥೆಗೆ ಹೆಸರಾಗಿದ್ದ ನನ್ನ ಖಾತೆಯಲ್ಲಿ ಅವ್ಯವಸ್ಥೆ ತಾಂಡವವಾಡತೊಡಗಿತು. ಎಲ್ಲರೂ ನನ್ನನ್ನು ಈ ಯುಗಕ್ಕೆ ಸಲ್ಲದ ಹಳಬನೆಂಬಂತೆ ನೋಡತೊಡಗಿದರು... ೧೯೬೬ರಲ್ಲಿ ನಾನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಇತ್ತೆ."

ಇಂದಿರಾಗೆ ಮನೆಯ ಹಿರಿಯನೊಬ್ಬ ಬೇಸತ್ತು ಬೆಂಗಾಡಿಗೆ ಹೊರಟು ಹೋದಂತೆನಿಸತೊಡಗಿತು. ನಂದಾರ ಗೈರು ಹಾಜರಿ ಅವರನ್ನು ಬಾಧಿಸತೊಡಗಿತು. ಸಂಪುಟದಲ್ಲಿ ನಂದಾ ಇದ್ದಾಗಿನ ಲಕ್ಷಣವೇ ಬೇರೆ. ಮತ್ತೆ ಅವರು ಬಂದು ಸಂಪುಟದ ಶೋಭೆ ಹೆಚ್ಚುವಂತಾಗಬೇಕು ಎಂದು ಆಶಿಸಿದರು. ಪ್ರಧಾನಿ ನಿವಾಸದಿಂದ ಮತ್ತೆ ಕರೆ ಬಂತು. ರೇಲ್ವೆ ಆರ್ಥಿಕವಾಗಿ ತುಂಬ ಹೀನಾಯ ಸ್ಥಿತಿ ತಲಪಿದ್ದ ದಿನಗಳವು.

"ಪಬ್ಲಿಕ್ ಸೆಕ್ಟರ್‌ನ ಜವಾಬ್ದಾರಿ ನನಗೆ ಬಿಡಿ. ಅದನ್ನು ಹೇಗೆ ನಿರ್ವಹಿಸುತ್ತೇನೆಂದು ನೋಡಿ," ಎಂದರು ನಂದಾ.

"ನಂದಾಜಿ, ನನಗಿರುವ ಕಾಳಜಿ ರೇಲ್ವೆಯ ಬಗ್ಗೆ. ಆ ಇಲಾಖೆಯನ್ನು ನಿಮಗೆ ಒಪ್ಪಿಸುತ್ತೇನೆ," ಎಂದರು ಇಂದಿರಾ.

ನಂದಾ ರೇಲ್ವೆ ಮಂತ್ರಿಯಾದರು.

ಗೃಹಖಾತೆಯನ್ನು ನಿರ್ವಹಿಸಿದ ನಂದಾಗೆ ಯಾವ ಆಳದಲ್ಲಿ ಎಂಥ ನೆಲೆ, ಯಾವ ಸೆಲೆ ಎಂಬುದು ಸುಲಭದಲ್ಲೇ ಗೊತ್ತಾಯಿತು. ಅಂಥ 'ಸೆಲೆ'ಗಳನ್ನೆಲ್ಲ ಗಚ್ಚು ಹಾಕಿ ಮುಚ್ಚುವ ಕೆಲಸಕ್ಕೆ ನಿಂತರು. ವರ್ಷ ಮುಗಿಯುವ ವೇಳೆಗೆ ರೇಲ್ವೆ ಸುಗಮವಾಗಿ- ಲಾಭದಾಯಕವಾಗಿ ಓಡಲಾರಂಭಿಸಿತು.

"ಇದೆಲ್ಲ ಹೇಗೆ ಸಾಧ್ಯವಾಯಿತೆಂದು ನನಗೆ ಇಂದಿಗೂ ಅರ್ಥವಾಗಿಲ್ಲ. ಆದರೆ ಕಚೇರಿಯಲ್ಲಿ ಕೂತು ಎಲ್ಲವನ್ನೂ ನಿಯಂತ್ರಿಸಬಹುದು ಎಂಬುದರಲ್ಲಿ ನಂಬಿಕೆ ಇಲ್ಲದವ ನಾನು. ಸ್ವತಃ ರೈಲುಗಳನ್ನು ಹತ್ತಿ ಹೋಗುತ್ತಿದ್ದೆ. ಯಾವ ಹೊತ್ತಿನಲ್ಲಿ, ಯಾವ ಊರಿನಲ್ಲಿ ನಾನು ಯಾವ ರೈಲಿನಲ್ಲಿ ಕಾಣಿಸಿಕೊಳ್ಳುತ್ತೇನೆಂಬುದು ಯಾರಿಗೂ ಗೊತ್ತಿರುತ್ತಿರಲಿಲ್ಲ. ಮುಂಬಯಿಯ ಲೋಕಲ್ ಟ್ರೇನುಗಳನ್ನೇ ತೆಗೆದುಕೊಳ್ಳಿ. ಅವುಗಳನ್ನು ಆ ಗದ್ದಲದಲ್ಲಿ ಏರುವುದಕ್ಕೆ ಎಂಟೆದೆಯೇ ಬೇಕು. ತೆಳ್ಳನೆಯ ಮನುಷ್ಯ ನಾನು. ತೂರಿಕೊಂಡು ಒಳಸೇರಬಲ್ಲವನಾಗಿದ್ದೆ. ನನ್ನೊಂದಿಗೆ ಇರುತ್ತಿದ್ದ ಅಧಿಕಾರಿಗಳಿಗೆ ಇದೊಂದು ಪ್ರಯಾಸದ ಕೆಲಸ. ಅವರೆಲ್ಲ ಫಸ್ಟ್ ಕ್ಲಾಸ್ ಬೋಗಿಗಳಲ್ಲಿ ತೊಟ್ಟ ಬಟ್ಟೆ ಮುದುಡದ ಹಾಗೆ ಓಡಾಡಿದವರು. ಅವರಿಗೆಲ್ಲ ಸಾಮಾನ್ಯ ದರ್ಜೆಯ ಬೋಗಿಗಳನ್ನು ಏರುವ ಅಭ್ಯಾಸ ಮಾಡಿ

ಸಿದೆ. ಯಾವ ನಿಲ್ದಾಣವೆಂದು ನೆನಪಿಲ್ಲ. ಅಲ್ಲಿ ಎರಡು ವರ್ಷಗಳಿಂದಲೂ 'ದೂರುಗಳ ಪೆಟ್ಟಿಗೆ'ಯನ್ನು ತೆರೆದೇ ಇರಲಿಲ್ಲ.... ತೆಗೆಸಿ ನೋಡಿದೆ. ದೂರುಗಳು-ಸಲಹೆಗಳು ಒಟ್ಟಿಕೊಂಡಿದ್ದವು. ಕೆಂಪುಪಟ್ಟಿಯ ಕಡತಗಳನ್ನೂ ನಾಚಿಸುವಂತಿತ್ತು ಆ ಪೆಟ್ಟಿಗೆ."

೧೯೭೧ರ ಮಹಾಚುನಾವಣೆಯಲ್ಲಿಯೂ ನಂದಾ ಆಯ್ಕೆಯಾದರು. ಆದರೆ ಇಂದಿರಾ ಸಂಪುಟದಲ್ಲಿ ಅವರ ಹೆಸರು ಸೇರ್ಪಡೆಯಾಗಲಿಲ್ಲ. ಎಂ.ಪಿ.ಯಾಗಿಯೇ ಮುಂದುವರಿದರು.

"ತುರ್ತು ಪರಿಸ್ಥಿತಿ ಸಾರಿದ ದಿನ ನಾನು ಅದನ್ನು ಪ್ರತಿಭಟಿಸಿ ಆಕೆಗೆ ಪತ್ರ ಬರೆದೆ. 'ಇದರ ಪರಿಣಾಮ ತುಂಬ ಭೀಕರವಾಗಬಹುದು' ಎಂಬುದು ಆ ಪತ್ರದ ಮುಖ್ಯಾಂಶ. ಎರಡು ದಿನಗಳ ನಂತರ (ಜುಲೈ ೪) ಉತ್ತರದ ಬದಲು ಸ್ವತಃ ಆಕೆಯೇ ನನ್ನ ಮನೆಗೆ ಬಂದದ್ದು ನನಗೆ ಅಚ್ಚರಿ ತಂದಿತು. ನನ್ನ ಹುಟ್ಟುಹಬ್ಬದ ಸಂದರ್ಭ. ಶುಭ ಹಾರೈಸಲು ಬಂದ ಇಂದಿರಾ 'ನಾನು ತಪ್ಪು ಮಾಡಿದ್ದೇನೆಂಬುದು ನನಗೆ ಚೆನ್ನಾಗಿ ಗೊತ್ತಿದೆ' ಅಂದರು. 'ಆದರೆ ಪತ್ರಿಕೆಗಳು ನಿಮ್ಮ ಕ್ರಮವನ್ನು ಸಮರ್ಥಿಸುತ್ತಿವೆ' ಎಂದೆ. ಆಕೆ ಪ್ರತಿಯಾಗಿ ಏನೂ ಹೇಳಲಿಲ್ಲ." ನಂದಾ ನೆನಪಿಸಿಕೊಂಡರು.

"ವಿರೋಧಿಗಳ ಬಾಯಿ ಮುಚ್ಚಿಸುವುದಕ್ಕಾಗಿ ಆಕೆಯ ಬಳಿ ಇದ್ದ ಅಸ್ತ್ರಗಳು ವಿಶಿಷ್ಟ ರೀತಿಯವು. ನಾನು ತುರ್ತುಸ್ಥಿತಿ ವಿರೋಧಿಸಿ ರ್‍ಯಾಲಿ ಏರ್ಪಡಿಸಿದೆ. ಭಾಗವಹಿಸಿದವರನ್ನು ಹಿಡಿದು ಬಡಿದರು.



ಅಂದಿನ ರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್ ಸಮ್ಮುಖದಲ್ಲಿ ನಂದಾ ಪ್ರಮಾಣವಚನ

ಸಭೆ ಚದುರಿ ಹೋಗುವಂತೆ ಮಾಡಿದರು. ನನ್ನನ್ನು ಆಕೆ ಮುಟ್ಟಲಿಲ್ಲ. ಆದರೆ ನನ್ನ ಸುತ್ತಲಿನ ಜನರನ್ನು ಕಟ್ಟಿ ಎಳೆದೊಯ್ಯುವಂತೆ ನೋಡಿಕೊಂಡರು.''

ನಂದಾ ತಮ್ಮ ಪತ್ರದಲ್ಲಿ ಇಂದಿರಾಗೆ ಬರೆದಿದ್ದಂತೆ ಪರಿಣಾಮ ಭೀಕರವೇ ಆಯಿತು. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸು ಪರಾಭವಗೊಂಡದ್ದು, ಜನತಾಪಕ್ಷ ಅಧಿಕಾರಕ್ಕೆ ಬಂದದ್ದು ಎಲ್ಲರಿಗೂ ಗೊತ್ತು. ನಂದಾ ಈ ಚುನಾವಣೆಯಿಂದ ದೂರವುಳಿದುಬಿಟ್ಟಿದ್ದರು. ದೇಶದ ಜನಕ್ಕೆ ಹೊಸ ಆಡಳಿತೆಯಿಂದಾಗಿ ಹೊಸ ಆಸೆಗಳು ಚಿಗುರಿಕೊಂಡಿದ್ದವು. ಆದರೆ ನಂದಾರ ಪಾಲಿಗೆ ದುರ್ದಶೆಯ ಆರಂಭದ ದಿನಗಳವು. ಅವರ ಮನೆಯ ಸುತ್ತ ಭೀತಿ ಕುಣಿದಾಡಿತು.


“ಗೂಂಡಾಗಳು ಗರ್ಜಿಸತೊಡಗಿದರು. ನನ್ನನ್ನು ಆ ಮನೆಯಿಂದ ಉಚ್ಚಾಟಿಸುವುದಕ್ಕೆ ತೊಡಗಿದರು. ಪೀಠೋಪಕರಣಗಳನ್ನು ನಾಶ ಮಾಡಿದರು. ಪುಸ್ತಕಗಳನ್ನು ಕಿತ್ತು ಬಿಸಾಡಿದರು. ಆ ಮನೆ ನನ್ನ ಮಟ್ಟಿಗೆ ದೆವ್ವದ ಮನೆಯಂತಾಯಿತು. ಸ್ಥಳಾಂತರಗೊಳ್ಳುವುದೊಂದೇ ನನಗಿದ್ದ ಹಾದಿ. ಡಿಫೆನ್ಸ್ ಕಾಲನಿಯ ಫ್ಲ್ಯಾಟ್ ಒಂದನ್ನು ಬಾಡಿಗೆಗೆ ಪಡೆದು ವಾಸಿಸತೊಡಗಿದೆ. ಯಾರೂ ನನ್ನ ನೆರವಿಗೆ ಬರಲಿಲ್ಲ. ಜನತಾ ಆಡಳಿತದಲ್ಲಿ ನಾನು ಅನಾಥನಾದೆ. ಜಗಜೀವನರಾಮ್ ಒಂದು ಸಲ ಹೇಳಿದರು- 'ಚರಣಸಿಂಗ್-ಮೊರಾರ್ಜಿ ದೇಸಾಯಿಗಳಿಗೆ ನಿಮ್ಮನ್ನು ಕಂಡರೆ ಆಗುವುದಿಲ್ಲ. ನಿಮಗೆ ವಾಸಿಸಲು ಮನೆಯೂ ಸಿಗದ ಹಾಗೆ ವ್ಯವಸ್ಥೆ ಮಾಡಿಬಿಟ್ಟಿದ್ದಾರೆ.' ನಾನು ಏನೂ ಹೇಳಲಿಲ್ಲ. ಇನ್ನೊಬ್ಬರು ಸಲಹೆ ನೀಡಿದರು- 'ನಂದಾಜಿ, ನೀವು ಮೊರಾರ್ಜಿಯನ್ನೇಕೆ ಸಂಪರ್ಕಿಸಬಾರದು ?' ಅವರಿಗೆ ತಟ್ಟನೆ ಉತ್ತರಿಸಿದೆ- 'ಯಾಕೆ ಸಂಪರ್ಕಿಸಬೇಕು ? ಹೋಗಿ ಹೋಗಿ ಅಂಥ ಹಠಮಾರಿಯೆದುರು ತಲೆಬಾಗಲೇನು ? ಖೇರ್ ಸಂಪುಟದಲ್ಲಿ ನಾವಿಬ್ಬರೂ ಮಂತ್ರಿಗಳಾಗಿದ್ದೆವು. ಆಗಿನಿಂದಲೂ ಮೊರಾರ್ಜಿಯ ಸ್ವಭಾವ ಗೊತ್ತಿರುವವ ನಾನು.' ಬಂದದ್ದು ಬರಲೆಂದು ಸುಮ್ಮನಾಗಿಬಿಟ್ಟೆ.''

ಡಿಫೆನ್ಸ್ ಕಾಲನಿಯ ಮನೆಯನ್ನೂ ಅವರು ಬಿಟ್ಟುಕೊಡಬೇಕಾಯಿತು. 'ಹಿಂದು-ಸಿಖ್ಖರ ನಡುವೆ ಸಂಧಾನ ಯತ್ನ' ನಡೆಸಿದ ಕಾರಣಕ್ಕಾಗಿ ಸಿಖ್ ಉಗ್ರಗಾಮಿಗಳ 'ಬಲಿಪಟ್ಟಿ'ಯಲ್ಲಿ ನಂದಾರ ಹೆಸರು ಸೇರಿಸಲ್ಪಟ್ಟಿತು.

ಆದರೆ, ಯಾರೂ ಅವರ ನೆರವಿಗೆ ಬರಲಿಲ್ಲ. ಮೊನ್ನೆ ಮೊನ್ನೆ ದಿಲ್ಲಿಯ ಅವರ ಮನೆಯನ್ನು ಸರಕಾರ ವಶಪಡಿಸಿಕೊಂಡಾಗ ಅಹಮ್ಮದಾಬಾದಿನಲ್ಲೇ ಇದ್ದ ನಂದಾ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಕಾಲ ಸರಿಯಿತು. ಜನ ಮರೆತರು. ನಂದಾ ಮರೆತುಹೋದ ವ್ಯಕ್ತಿಯಾಗಿಬಿಟ್ಟರು.

ಗಾಂಧಿಯನ್ನು, ಗಾಂಧಿಯ ಹಾದಿಯಲ್ಲಿ ನಡೆದವರನ್ನು ದೇಶ ಮರೆತಿದೆ. ಆದರೆ, “ಗಾಂಧೀ ಸಿದ್ಧಾಂತಗಳೇ ಈ ದೇಶವನ್ನು ರಕ್ಷಿಸಬಲ್ಲವು. ಪ್ರಾಮಾಣಿಕತೆ, ಸತ್ಯ, ಸರಳ ಜೀವನ, ಬಡಬಗ್ಗರ ಉದ್ಧಾರದ ನಿಜ ಧ್ಯೇಯ, ದೇಶಕ್ಕಾಗಿ ಸ್ವಾರ್ಥತ್ಯಾಗ ಮುಖ್ಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ದುಡಿದರೆ ದೇಶ ಖಂಡಿತ ಸುಖಿಯಾಗುತ್ತದೆ. ಸಮೃದ್ಧಿ-ಸಹೋದರ ಭಾವಗಳಿಂದ ದೇಶ ನಂದನವನವಾಗುತ್ತದೆ,'' ಎಂಬುದು ನಂದಾ ನಂಬಿಕೆ.

ನಂದಾ ಅವರ ವರ್ಣಛಾಯಾಚಿತ್ರ ಹರಿನಾಥ್ ಸೆರೆಹಿಡಿದದ್ದು



“ನಿನ್ನ ಹೆಸರೇನಮ್ಮ?”
“ನಂದಾ.”
“ಹೌದು ನಿಂದೇ.”
“ನಂದಾ.”
“ಹೌದಮ್ಮಾ ನಿಂದೇ.”
“ನಂದಾ ಅಂತ್ಲೇ ನನ್ಗೆ ಹೆಸರಿಟ್ಟಿರೋದು.” – 'ವೀರಪ್ಪನ್'

ವಿಡಂಬನೆ

ಡೊಂಕು ಬಾಲದ ನಾಯಕರೇ

"ಅಮೆರಿಕದಲ್ಲಿ ಕಿವುಡು-ಮೂಗರ ಸಮ್ಮೇಳನದಲ್ಲಿ ನಾನಾ ದೇಶಗಳಿಂದ ಭಾಗವಹಿಸಿದ್ದ ಪ್ರತಿನಿಧಿಗಳು, ನಾಲ್ಕೈದು ದಿನಗಳ ಕಾಲ ಕೂಡಿ ನಲಿದು, ಒಮ್ಮತದ ತೀರ್ಮಾನಗಳನ್ನು ಕೈಗೊಂಡು, ಸಂತೋಷದ ಸವಿನೆನಪುಗಳೊಂದಿಗೆ ಸ್ವದೇಶಗಳಿಗೆ ಮರಳಿದರು."- ಸುದ್ದಿ.

"ದೆಹಲಿಯಲ್ಲಿ ರಾಷ್ಟ್ರೀಯ ಏಕತಾ ಸಮಿತಿಯ ಸದಸ್ಯರು ಸೇರಿದ ಸಭೆಯಲ್ಲಿ ತೀರ್ಮಾನಗಳೇ ಆಗದೆ, ಗಲಭೆ ಗೊಂದಲಗಳೊಂದಿಗೆ ನಾಲ್ಕೈದು ಗಂಟೆಗಳ ಕಾಲ ಕಾದಾಡಿ ಸ್ವ-ರಾಜ್ಯಗಳಿಗೆ ಹಿಂದಿರುಗಿದರು."- ಸುದ್ದಿ.

ಈ ಎರಡೂ ಸಂದರ್ಭಗಳಲ್ಲಿಯೂ ಕಣ್ಣಿಗೆ ಕಾಣದ ಏನೋ ಒಂದನ್ನು ಹುಡುಕಲಾರಂಭಿಸಿದಾಗ ನಮ್ಮ ಅರಿವಿಗೆ ಬರುವುದು ಈ ಎರಡರಲ್ಲಿಯೂ ಮುಖ್ಯವಾದ ಮಿಸ್ಸಿಂಗ್ ಲಿಂಕ್- ಭಾಷಾ ಮಾಧ್ಯಮ. ಈ ಎರಡೂ ಗುಂಪುಗಳು ಯಾವ ಭಾಷೆಯಲ್ಲಿ ತಮ್ಮ ಸಭೆಗಳನ್ನು ನಡೆಸಿದರು ?

ಇದರಿಂದ ಮುಖ್ಯವಾಗಿ ತಿಳಿದು ಬರುವ ಸಂಗತಿಯೆಂದರೆ ನಮಗೆ ಭಾಷೆಯೇ ಪ್ರಮುಖವಾದ ವಿಷಯ. ಮಾನವನಿಗೆ ಇಂದು- ದೀನರಾಗಲಿ, ದಲಿತರಾಗಲಿ, ಬಡವರಾಗಲಿ, ಬಲ್ಲಿದರಾಗಲಿ, ಅಕ್ಷರಿಗಳಾಗಲಿ, ನಿರಕ್ಷರಿಗಳಾಗಲಿ, ಪಂಡಿತರಾಗಲೀ, ಪಾಮರರಾಗಲೀ, ಹೆಣ್ಣಾಗಲೀ, ಗಂಡಾಗಲೀ- ಸರ್ವರಿಗೂ ಅರಿವಾಗಬಲ್ಲ ಏಕೈಕ ಭಾಷೆ ಎಂದರೆ ಹಸಿವು-ಅನ್ನ. ಭಾರತದ ಹೆಚ್ಚುವರಿ ತೆಲುಗು, ಕನ್ನಡ, ತಮಿಳು, ಹಿಂದಿ, ಮರಾಠಿ, ಸಂಸ್ಕೃತ ಭಾಷೆಗಳಲ್ಲಿ ಅನ್ನವನ್ನು 'ಅನ್ನ'ವೆಂದೇ ಕರೆಯುವರು. ಆದರೆ ಕರ್ನಾಟಕದಲ್ಲಿ ಇನ್ನು ನಮಗೆ ಮುಖ್ಯವಾದ ಕಾರ್ಯವೆಂದರೆ ಕನ್ನಡವನ್ನು ಆಡುಭಾಷೆಯಾಗಿ ಮಾಡುವ ತೀರ್ಮಾನ ಕೈಗೊಂಡು ಈ ಕ್ಷಣ ಕಾರ್ಯಗತಗೊಳಿಸುವದು.

● ಬೋನ್ಸಾಯ್ ಶ್ರೀನಿವಾಸ

ಹಾಂ, ಕನ್ನಡದ ಮೇಲಿನ ಪ್ರೇಮ ಅರ್ಥಪೂರ್ಣವಾಗಿರಬೇಕು. ತೀರಾ ಮಡಿವಂತಿಕೆಯಾದರೆ ಆಭಾಸವಾಗುತ್ತದೆ. 'ಪೊಲೀಸ್' ಪದದ ಅರ್ಥ ಹಳ್ಳಿಯ ಗಮಾರನಿಗೂ ತಿಳಿದಿದೆ. ಆದರೆ 'ಆರಕ್ಷಕ' ? ಯಾರಿಗೆ ಗೊತ್ತಾಗಬೇಕು ? ನಮ್ಮ ಶ್ರೀಸಾಮಾನ್ಯ ಅಂದುಕೊಳ್ಳುವ 'ರಕ್ಷಣೆಯೇ ಇಲ್ಲದವರೆಂಬ' ಅರ್ಥ ಪರಿಪೂರ್ಣವಾದುದು ಹಾಗೂ ಅರ್ಥವತ್ತಾದದ್ದು.

ಯಾವುದೂ ಅತಿಯಾದರೆ ಒಳ್ಳೆಯದಲ್ಲ. ಕನ್ನಡದಲ್ಲಿ ಸೊಗಸಾದ ಜಾಣ್ನುಡಿಯೊಂದಿದೆ, 'ಮಗು ಮುದ್ದಾದರೆ ಮಗುವಿನ .... ಮುದ್ದೇ ?' ಪ್ರಸ್ತುತ ವಿಷಯಕ್ಕೆ ಈ ನುಡಿ ತೀರ ಸಮಂಜಸ. ಮಡಿವಂತಿಕೆಯಲ್ಲಿ ಎಂತಹ ಅನರ್ಥ ? ನನ್ನ ಸ್ನೇಹಿತನೋರ್ವನಿಗೆ ಕಾಲೇಜಿನ ದಿನಗಳಿಂದ ಕದ್ದು ಸಿಗರೇಟು ಸೇದುವ ಚಟ. ಮನೆಯವರಿಗೆ ವಾಸನೆ ತಿಳಿಯದಿರಲೆಂದು, ಇಡೀ ದಿನ ಸೇದಿ ಮನೆಗೆ ಮರಳುವ ಮುನ್ನ ಘಮಘಮಿಸುವ ಕಸ್ತೂರಿ ಮಾತ್ರೆಗಳನ್ನು ಬಾಯಿಗೆ ಹಾಕಿಕೊಳ್ಳುತ್ತಿದ್ದ. ಇದರ ಚಟ ಸಿಗರೇಟಿನ ಚಟವನ್ನು ಮೀರಿಸಿತು; ಇದರಿಂದಾಗಿ ಕಾಮಾಲೆ ಉಂಟಾಯಿತು. ಈಗ ಧೂಮಪಾನ ಬಿಟ್ಟಿದ್ದಾನೆ; ಆದರೆ ಕಸ್ತೂರಿ ಮಾತ್ರೆಯ ಚಟ (ಮಿತಿಯಲ್ಲಿ) ಹಾಗೆಯೇ ಇದೆ.

ಇದನ್ನು ಯಾತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮಲ್ಲಿ ಪದಗಳ ಬಳಕೆ ಇಲ್ಲದಾಗ ಆ ಭಾಷೆಯಿಂದ ಬಂದ ಪದಗಳನ್ನೇ ಬ್ರಿಟಿಷರು ಸಂಸ್ಕೃತ ಮತ್ತು ಕನ್ನಡ ಪದಗಳನ್ನು ಆಂಗ್ಲೀಕರಿಸಿದಂತೆ ನಾವೂ ಕನ್ನಡೀಕರಿಸಿದರೆ ಎಷ್ಟು ಸೊಗಸು !

'ಆರಕ್ಷಕ'ವೊಂದೇ ಅಲ್ಲ, ಇನ್ನೂ ಹಲವಾರು ಪದಗಳನ್ನು ಕನ್ನಡೀಕರಿಸಿದವ ನಿಜವಾಗಿ ಬುದ್ಧಿವಂತನಾಗಿರಲೇಬೇಕು. ಅವನಲ್ಲಿ ಹಾಸ್ಯಪ್ರಜ್ಞೆ ಯಥೇಚ್ಚವಾಗಿದ್ದಿರಬೇಕು. ನಮ್ಮ ಸಮಾಜದ ಬುಡಮೇಲುಗಳನ್ನು ಆತ ಅತ್ಯಂತ ಸೂಕ್ಷ್ಮವಾಗಿ ತಿಳಿದಿರಲೇಬೇಕು.

'ಆರಕ್ಷಕ' ನಿಜವಾಗಿಯೂ ಪೊಲೀಸರಿಗೆ ಅನ್ವರ್ಥನಾಮ. ಈ ಸಂದರ್ಭದಲ್ಲಿ ನಾನು ಸಣ್ಣವನಿದ್ದಾಗ ನೋಡಿದ ತಮಿಳು ಚಿತ್ರವೊಂದರ ದೃಶ್ಯ ಇವತ್ತಿಗೂ ಕಣ್ಮುಂದೆ ಸುಳಿಯುತ್ತಿದೆ. (ಈಗ ಸಿನಿಮಾ ಚಟವೇ ಬಿಟ್ಟು ಹೋಗಿದೆ. ಯಾಕೆಂದರೆ ತಮಿಳು ಚಿತ್ರ ನೋಡಲು ಹೋದರೆ ಕಲ್ಲೇಟಿನ ಭಯ; ಕನ್ನಡ ಚಿತ್ರ ನೋಡಲು ಆಸೆಯಾದರೂ ಚಿತ್ರಮಂದಿರದ ಹತ್ತಿರ ಸುಳಿಯಲು ಪ್ರಾಣಭಯ.) ಆ ದೃಶ್ಯದಲ್ಲಿ ಗ್ರಾಮದ ಶ್ರೀಮಂತರ ಮಗಳಿಗೆ ಮದುವೆ. ಕಿರಿಯ-ಹಿರಿಯ ಎಲ್ಲ ಅಧಿಕಾರಿಗಳಿಗೂ ಆಮಂತ್ರಣ ತಲುಪಿದೆ. ಸಭಾಭವನ 'ಹೌಸ್‌ಫುಲ್' ಆಗಿದೆ. ಮುಂದಿನ ಸಾಲಿನ ಸೋಫಾದಲ್ಲಿ ಗ್ರಾಮದ ರಾಜನಾಪ ಪೊಲೀಸ್‌ಪೇದೆ ತನ್ನ 'ಫುಲ್ ಡ್ರೆಸ್'ನಲ್ಲಿ ಆಸನಾರೂಢನಾಗಿದ್ದಾನೆ. ಸ್ವಲ್ಪ ಸಮಯದ ನಂತರ ಎಸ್.ಐ. ಬರುತ್ತಾನೆ. ಸ್ಥಳಾಭಾವದ ಕಾರಣ, ಪೇದೆ ತಕ್ಷಣ ಎದ್ದು ನಿಂತು, 'ಫುಲ್ ಸೆಲ್ಯೂಟ್' ಹೊಡೆದು ಸ್ಥಳ ಬಿಟ್ಟು ಹಿಂದೆ ನಿಲ್ಲುತ್ತಾನೆ ಇನ್ಸ್‌ಪೆಕ್ಟರ್ ಬರುತ್ತಾನೆ- ತಮಿಳರು ಪೊಲೀಸ್ ಇನ್ಸ್‌ಪೆಕ್ಟರ್‌ಗೆ 'ಪೊಲೀಸಿಲ ಹಿಂಸೆಪಟ್ಟವರ್' ಎನ್ನುತ್ತಾರೆ) ಎಸ್.ಐ. ಅವನಿಗೆ ಸ್ಥಳ ಬಿಟ್ಟು ಹಿಂದೆ ನಿಲ್ಲುತ್ತಾನೆ. ಎಸ್.ಪಿ. ಬರುತ್ತಾನೆ.... ಡಿ.ಐ.ಜಿ..... ಐ.ಜಿ.ಪಿ..... ಹೀಗೆ ಕೊನೆಗೆ ಮಂತ್ರಿ ಬಂದಾಗ ಐ.ಜಿ.ಪಿ. ಸ್ಥಾನ ತೆರವು ಮಾಡಿ ಹಿಂದೆ ನಿಲ್ಲುತ್ತಾನೆ.


ಮಂತ್ರಿಗಳಿಂದ ಗೃಹಮಂತ್ರಿ, ಖಾತೆ ಮಂತ್ರಿ, ಐ.ಜಿ.ಪಿ., ಡಿ.ಐ.ಜಿ., ಡಿ.ಸಿ.ಪಿ., ಎಸ್.ಪಿ., ಡಿ.ವೈ.ಎಸ್.ಪಿ., ಎಸ್.ಐ. ಸೇರಿದಂತೆ ಪೇದೆಗಳಿಗೆ, ಮೇಲಿನಿಂದ ಬಂದ ಆದೇಶದಂತೆ ಪೊಲೀಸರು ನಿರಪರಾಧಿ, ಅಪರಾಧಿಗಳನ್ನು ಏನು ಬೇಕಾದರೂ ಮಾಡಿಯಾರು. 'ಆಹಾ ರಕ್ಷಕರೇ' !

ಇಂಗ್ಲೀಷಿನ ಪದಗಳನ್ನು, ಅಂತೆಯೇ ಕನ್ನಡಕ್ಕೆ ಪಾಕವಿಳಿಸಿದಾಗ ಒಮ್ಮೊಮ್ಮೆ ಪರಿಪೂರ್ಣಾರ್ಥ ಹೊಂದಿ ಸೂಕ್ತವಾಗಿರುತ್ತದೆ. ಉದಾ: 'ಕಾನ್‌ಸ್ಟೇಬಲ್'ನ್ನು ಕನ್ನಡದಲ್ಲಿ 'ಕನಿಷ್ಠ ಬಿಲ್ಲೆ' ಎಂದು ಯಾರೋ ಕರೆದರು. ಆ ಕಾಲದಲ್ಲಿ ಅದರ ಅರ್ಥ ಕನಿಷ್ಠವಾದ ತಾಮ್ರದ ತೂತಿನ ಮೂರು ಕಾಸು. ಅಂಥ ಬಿಲ್ಲೆಯೊಂದನ್ನು ರಾತ್ರಿ ದೀಪವಿಲ್ಲದೆ ಸೈಕಲ್ ಓಡಿಸಿ ಸಿಕ್ಕಿಬಿದ್ದಾಗ ಪೊಲೀಸ್ ಪೇದೆಯ ಕೈಯಲ್ಲಿಟ್ಟರೆ, ಯಾವ ತೊಂದರೆಯೂ ಇಲ್ಲ

ದಂತೆ ನೇರವಾಗಿ ಮನೆ ತಲುಪಬಹುದಾಗಿತ್ತು. ಎಷ್ಟು ಸುಂದರ ಈ ಅರ್ಥ! ಅಂದಿನಿಂದಲೂ ಈ ಹೆಸರು ಹಾಗೆಯೇ ಉಳಿದಿದೆ. (ಆದರೆ ಅವನಿಗೆ ನೀಡಬೇಕಾದ ಬಿಲ್ಲೆಯ ಗಾತ್ರ ಮಾತ್ರ ದೊಡ್ಡದಾಗಿರಬೇಕು.)

ಪಿ.ಡಬ್ಲ್ಯು.ಡಿ. ಇಲಾಖೆಯ 'ಚೀಫ್ ಇಂಜಿನಿಯರ್', 'ಅಸಿಸ್ಟಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್', 'ಎಕ್ಸಿಕ್ಯೂಟಿವ್ ಇಂಜಿನಿಯರ್' ಇತ್ಯಾದಿಗೆ, ಕನ್ನಡದಲ್ಲಿ ಅನುಕ್ರಮವಾಗಿ 'ಮುಖ್ಯ ಅಭಿಯಂತರು', 'ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು', 'ಕಾರ್ಯನಿರ್ವಾಹಕ ಅಭಿಯಂತರು' ಇತ್ಯಾದಿಯಾಗಿ ಅರ್ಥೈಸಿ, ಕಚೇರಿಗಳ ಮುಂದೆ ಭಾರೀ ನಾಮಫಲಕಗಳನ್ನು ಕನ್ನಡದಲ್ಲಿ ಮುದ್ದಾಗಿ ಬರೆದಿರುತ್ತಾರೆ.

ಹತ್ತಾರು ತಿಂಗಳುಗಳ ಕಾಲ ಬಂಡವಾಳವನ್ನು ಹೂಡಿ, ಬಿಸಿಲಿನ ಝಳದಲ್ಲಿ ದುಡಿದು ಕಾರ್ಯಪೂರ್ಣಗೊಳಿಸಿದ (?) ಕಂಟ್ರಾಕ್ಟರುಗಳು, ತಮ್ಮ ಬಿಲ್ಲಿನ ಪಾವತಿಗಾಗಿ ಬಾಣಗಳನ್ನು ಕಳುಹಿಸಿದಾಗ, ಸೂಕ್ತವಾದ ಬಾಣ



ವಿಡಂಬನೆ

ಮುಂಗಡವಾಗಿ ಮುಟ್ಟಿರದಿದ್ದಲ್ಲಿ, ಆ ಅರ್ಜಿಯನ್ನು ತಮ್ಮ ಧಾರಾಳವಾದ 'ಅಭ್ಯಂತರ'ಗಳಿಂದ ಹಿಂದಿರುಗಿಸಬಲ್ಲ ಅಧಿಕಾರಿಗಳಿಗೆ ಇದು ಸೂಕ್ತವಾದ ನಾಮಕರಣವಲ್ಲದೇ ಇನ್ನೇನು ?

ಸರ್ಕಾರದ 'ಬ್ಯುರೋಕ್ರೇಟ್ಸ್'ನ್ನು (ಬೀರುಗಳಲ್ಲಿ ನೋಟಿನ ಕಂತೆ ಮತ್ತು ಕ್ರೇಟ್‌ಗಳ ತುಂಬ ಬೀರು ?!) 'ಬೀರು ಕ್ರೇಟ್ಸ್' ಎಂದು ಕನ್ನಡೀಕರಿಸಿದರೆ ಎಷ್ಟೊಂದು ಸೊಗಸಾಗುತ್ತದ !

ಸರ್ಕಾರದ 'ಡಿವಿಜನಲ್ ಕಮೀಶನರ್', 'ಡೆಪ್ಯುಟಿ ಕಮೀಶನರ್', 'ಕಮೀಶನರ್' ಇತ್ಯಾದಿ ಸರ್ಕಾರಕ್ಕೂ ಮತ್ತು ಪ್ರಜೆಗಳಿಗೂ ಮಧ್ಯವರ್ತಿ 'ಕಮೀಶನ್ ಏಜೆಂಟರೇ' ಆಗಿದ್ದಾರೆ. 'ವಿಭಾಗೀಯ ಕಮೀಶನರ್', 'ಉಪ ವಿಭಾಗೀಯ ಕಮೀಶನರ್' ಇತ್ಯಾದಿ ಹೀಗೇ ಉಳಿಸಿಕೊಂಡರೆ ಕನ್ನಡ ಸಾಹಿತ್ಯ ಅತ್ಯಂತ ಶ್ರೀಮಂತವಾಗಬಲ್ಲದು.

ನೀವು ಸ್ವಯಂ ಉದ್ಯೋಗದ ಅಡಿ- 'ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್'- ಸಾಲಕ್ಕಾಗಿ ಯಾವುದೇ ಬ್ಯಾಂಕಿಗೆ ಅರ್ಜಿ ಸಲ್ಲಿಸಲು ಬಂದಾಗ ಅಲ್ಲಿ ನೋಡುವಿರಿ: 'ಸಹಾಯಕ ಪ್ರಬಂಧಕರು', 'ಹಿರಿಯ ಪ್ರಬಂಧಕರು' ಮತ್ತು 'ಮುಖ್ಯ ಪ್ರಬಂಧಕರು.' ಕಿವಿಗಳಿಗೆ ಆಪ್ಯಾಯಮಾನ ನೀಡಬಲ್ಲ ಹೆಸರುಗಳಿವು. ಯಾವ ಕನ್ನಡಿಗನೂ ಗರ್ವಪಡಲೇಬೇಕು ! ಸಾಲಕ್ಕಾಗಿ ಇವರನ್ನೆಲ್ಲ ಗೋಗರೆದು ಒಪ್ಪಿಗೆ ದೊರಕುವ ವೇಳೆಗೆ ನೀವು ಒಂದು ದೊಡ್ಡ "ಪ್ರಬಂಧ"ವನ್ನೇ ಬರೆದು ಇವರಿಗೆ ಒಪ್ಪಿಸಿರಬೇಕಾಗಿರುತ್ತದೆ.

ಒಂದು ಪ್ರಸಂಗ ಜ್ಞಾಪಕಕ್ಕೆ ಬಂತು. (ಕಥೆ ಹೇಳುವ ಹರಿಕಥೆ ದಾಸರ, ಉಪಕಥೆಯೇ ಮುಖ್ಯ ಕಥೆಯಾದಂತೆ, ನನ್ನ ಲೇಖನ ಉಪ ಕಥೆಗಳಿಂದಲೇ ಕೂಡಿದೆ. ಕ್ಷಮಿಸಿ.)

ಕಾಲು ಶತಮಾನಕ್ಕೂ ಹಿಂದೆ ನಮ್ಮೂರಿನಲ್ಲಿ ಕೋರ್ಟು ಮತ್ತು ಕಚೇರಿಗಳಿರಲಿಲ್ಲ. (ಜನ ಅತ್ಯಂತ ಪ್ರಾಮಾಣಿಕರೂ ಮರ್ಯಾದಸ್ಥರೂ ಆಗಿದ್ದರು) ಸಾರ್ವಜನಿಕ ಹಿತಾಸಕ್ತಿಯನ್ನು ಕಾಯುವ, ಅದೇ ಹೊಸದಾಗಿ ಚುನಾಯಿತನಾಗಿರುವ ಎಮ್ಮೆಲ್ಲೆಯ ಪ್ರಭಾವದಿಂದ ಮ್ಯಾಜಿಸ್ಟ್ರೇಟರ ಕೋರ್ಟೊಂದು ಆಂಗ್ಲಭಾಷೆಯಲ್ಲಿ 'ಮ್ಯಾಜಿಸ್ಟ್ರೇಟ್ಸ್ ಕೋರ್ಟ್' ಎಂಬ ಫಲಕ ಹೊತ್ತು ಅಸ್ತಿತ್ವಕ್ಕೆ ಬಂದಿತು. ಹೆಚ್ಚಿನ ದೂರುಗಳೇನೂ ಇರಲಿಲ್ಲ; ಮ್ಯಾಜಿಸ್ಟ್ರೇಟರಿಗೆ ಸಾಕಷ್ಟು ಕೆಲಸ ಇರಲಿಲ್ಲ. ಆದರೆ, ನೋಡಿ- ಇಬ್ಬರೇ ಇಬ್ಬರು ವಕೀಲರಿದ್ದ ಆ ಕೋರ್ಟಿಗೆ ಅದೆಲ್ಲಿಂದ ಬಂದರೋ, ಬಂದರು ಎಂಟು ಹತ್ತು ಕಪ್ಪು ಕೋಟಿನವರು; ಜತೆಯಲ್ಲೇ ಬಂತು ಕೇಸುಗಳ ದಾಳಿ. ಕೋರ್ಟಿನ ಕಾರ್ಯಭಾರ ವಿಪರೀತವಾಯಿತು. ಕೇಸುಗಳೂ ಇತ್ಯರ್ಥವಾಗದೆ ಮುಂದೋಡಿ ಮುಂದೋಡಿ ಬಾಕಿ ಏರುತ್ತ ಹೋಯಿತು. ನಾಲ್ಕಾರು ಮ್ಯಾಜಿಸ್ಟ್ರೇಟರು ವರ್ಗಾವಣೆಯಾದರು. ವಾತಾವರಣ ಭಾರತದ ಇತರ ಎಲ್ಲ ಕೋರ್ಟು ಕಚೇರಿಗಳಂತೆಯೇ ಸಂತೃಪ್ತ ಪರಿಸ್ಥಿತಿ ಮುಟ್ಟಿತು.

ಒಂದು ದಿನ ಕಾರ್ಯ ನಿಮಿತ್ತ ಕೋರ್ಟಿಗೆ ಹೋದೆ. ಹೋಗಿ ನೋಡಿದಾಗ, 'ಮ್ಯಾಜಿಸ್ಟ್ರೇಟ್ ಕೋರ್ಟ್' ಬೋರ್ಡೇ ಇರಲಿಲ್ಲ. ಗಾಬರಿಯಿಂದ, ಕೋರ್ಟನ್ನು ಮುಚ್ಚುವಷ್ಟು ಪರಿಸ್ಥಿತಿ ಕೆಟ್ಟಿದೆಯೆ ? ಎಂಬ ಶಂಕೆಯಿಂದ, ಅವರಿವರನ್ನು ಕೇಳಿದಾಗ ಅಂತಹುದೇನೂ ಆಗಿಲ್ಲವೆಂದೂ, 'ಕನ್ನಡಾಭಿಮಾನಿ ಸಮೂಹ'ದ ಆಗಮನದಿಂದಾಗಿ (ದೂರ್ವಾಸ ಮುನಿಗಳ ಶಿಷ್ಯಕೋಟಿ ದ್ರೌಪದಿಯ ಆಶ್ರಮಕ್ಕೆ ಬಂದ ಕಥೆ ನೆನಪುಂಟಾಗುತ್ತದೆ) ಈಗ ಅದೇ ಬೋರ್ಡು ಭಾಷೆ ಮತ್ತು ಅಕ್ಷರಗಳೆರಡನ್ನೂ ಕನ್ನಡೀಕರಿಸಿಕೊಂಡು ವಿಜೃಂಭಿಸುತ್ತಿತ್ತು. ಓದಿದೆ; ಏಕಕಾಲದಲ್ಲಿ ಸಂತಾಪವೂ ನಗೆಯೂ ಹೊಮ್ಮಿತು. ಏನೇ ಇರಲಿ; ಇದ್ದುದನ್ನು ಇದ್ದ ಹಾಗೆ ಬರೆಯಬಾರದಿತ್ತು. ಆ ಫಲಕವು ಯಾವ ಬದಲಾವಣೆಯೂ ಇಲ್ಲದೆ,

ವಿಡಂಬನೆ

ಭಾರತದ ಯಾವುದೇ ಸರ್ಕಾರದ, ಅಧಿಕಾರಿಯ ಕಚೇರಿಯ ಆವರಣದಲ್ಲಿ ಯಾವ ಮಾನನಷ್ಟ ಮೊಕದ್ದಮೆಗಳ ಭಯವೂ ಇಲ್ಲದೆ ಹಾಕಬಹುದಾಗಿತ್ತು.

ಮಾನನಷ್ಟ ಎಂದ ಕೂಡಲೇ ಒಂದು ಸಂಗತಿ ನೆನಪಿಗೆ ಬರುತ್ತದೆ. ಗ್ರಾಮದ ಪಟೇಲನೊಬ್ಬ (ಹಳೆಯಕಾಲದವನು. ಸ್ನೇಹಪರ ಮತ್ತು ತೀವ್ರ ಭೋಳೇ ಸ್ವಭಾವದವ) ಯಾರನ್ನು ನೋಡಿದರೂ ಪ್ರೀತಿಯಿಂದ, 'ಬಡ್ಡೀ ಮಗನೆ, ಮುಂಡೇ ಮಗನೇ' ಎಂದು ಸಂಬೋಧಿಸುತ್ತಿದ್ದ. ಇದು ಅವನ ರೂಢಿ. ಈ ಅಭ್ಯಾಸವನ್ನು ಬಿಡಿಸಬೇಕೆಂದು ತೀರ್ಮಾನಿಸಿದ ಕೆಲವರು ಅವನನ್ನು ನ್ಯಾಯಾಲಯಕ್ಕೆಳೆದರು.


ವಕೀಲರು: ಪಟೇಲರೇ ಸಾಕ್ಷಿಗಳ ಹೇಳಿಕೆಯ ಅನುಸಾರ ನೀವು ರಾಮಯ್ಯನವರನ್ನು 'ಬಡ್ಡೀ ಮಗನೇ' ಎಂದು ಸಂಬೋಧಿಸಿದಿರೇ ?

ಪಟೇಲ: (ವಕೀಲರು ಚಿರಪರಿಚಿತರಾದ ಅವರ ನೆರೆಹೊರೆಯವರೇ.) ಹೌದೋ, 'ಬಡ್ಡೀ ಮಗ' ಅಂದೆ. ಆದರೆ ಈ 'ಬಡ್ಡಿ ಮಗ'ನನ್ನು ನಾನು 'ಬಡ್ಡೀ ಮಗ' ಎಂದೆ ಅಂತ ಯಾವ 'ಬಡ್ಡೀ ಮಗ'ನೋ ನಿನಗೆ ಹೇಳಿದ್ದು ?

ನ್ಯಾಯಾಧೀಶ: ಐವತ್ತು ರೂಪಾಯಿ ದಂಡ ವಿಧಿಸಿದ್ದೇನೆ.

ಪಟೇಲ: ಸ್ವಾಮಿ, ಆಗಬಹುದು. ದಂಡ ತೆರುತ್ತೇನೆ. ಆದರೂ ನನಗೊಂದು ವಿಷಯ ತಿಳಿಸ್ತೀರಾ ?

ನ್ಯಾಯಾಧೀಶ: ಏನು ?



“ಏನೂ.... ನಾಯಿ ಬಿಸ್ಕತ್ತಾ ? ಸರಿ, ಇಲ್ಲೇ ತಿಂತಿರೋ ಪ್ಯಾಕ್ ಮಾಡಲೋ ?”

ಪಟೇಲ: ಈ 'ಬಡ್ಡೀ ಮಗ'ನನ್ನು ನಾನು ಇನ್ನುಮುಂದೆ ರಾಮಯ್ಯ ಎಂದು ಕರೆಯಬಹುದ ?

ನ್ಯಾಯಾಧೀಶ: ಖಂಡಿತವಾಗಿ.

ಪಟೇಲ: ನಮಸ್ಕಾರ ರಾಮಯ್ಯನವರೇ, ನಾಳ ಬೆಳಿಗ್ಗೆ ಎಂದಿನಂತ ಭೇಟಿ ಮಾಡೋಣ.

ಪಟಪಟನೆ ಇಷ್ಟು ಹೇಳಿದವನೇ ಕಂಬಿಕಿತ್ತ.

ಅಯ್ಯೋ ! ಮುಖ್ಯವಾದುದನ್ನೇ ಹೇಳಲು ಮರೆತೆ. ಆ ಬೋರ್ಡಿನ ವಿಷಯ. ಅದನ್ನು ಹೇಳಲು ತುಂಬ ಸಂಕೋಚ; ಆದರೂ ಪರವಾಯಿಲ್ಲ ಹೇಳುತ್ತೇನೆ. ಯಾಕೆಂದರೆ ಈಗ ಕಾಲ ಬದಲಾಗಿದೆ- ಅಲ್ಲ, ಕಾಲ ಅಂದು ಹೇಗಿತ್ತೋ ಇಂದೂ ಹಾಗೆಯೇ ಇದೆ; ಜನ ಬದಲಾಗಿದ್ದಾರೆ, ಮೌಲ್ಯಗಳು ತಮ್ಮ ಬೆಲೆ ಅಪಮೌಲ್ಯಗೊಳಿಸಿಕೊಂಡಿವೆ. ದೊಡ್ಡ ದೊಡ್ಡ ಮನುಷ್ಯರೆಲ್ಲ ಮನುಸ್ಮೃತಿಯಲ್ಲಿ ಯಾವುದ್ಯಾವುದನ್ನು ನಿಷೇಧಿಸಿದೆಯೋ, ಅವನ್ನೆಲ್ಲ ಮಾಡಿಯೇ ಇಂದು ದೊಡ್ಡವರಾಗಿರುವುದು.

ನೋಡಿ. ಜ್ಞಾಪಕಕ್ಕೆ ಬಂತು. ಇನ್ನು ಇದನ್ನು ಹೀಗೆಯೇ ಬೆಳೆಯಲು ಬಿಡುವುದಿಲ್ಲ. ಆ ಬೋರ್ಡಿನಲ್ಲಿ ಕನ್ನಡದಲ್ಲಿ ಬರೆದಿತ್ತು, ದಪ್ಪ ದಪ್ಪ ಅಕ್ಷರದಲ್ಲಿ: "ನ್ಯಾಯ ದಂಡಾಧಿಕಾರಿಗಳು."

ಹಳೆಯ ಕಥೆಯೊಂದು ನೆನಪಿನ ಹಂದರದಿಂದ ಮೇಲೇಳುತ್ತದೆ. ರಾಜನೊಬ್ಬ ಅತ್ಯಂತ ಸುಂದರವಾದ ದಿರಿಸನ್ನು (ಡ್ರೆಸ್) ತಯಾರಿಸಲು ದರ್ಜಿಯೊಬ್ಬನನ್ನು ನೇಮಿಸಿಕೊಳ್ಳುತ್ತಾನೆ. ಆ ಕಳ್ಳ ದರ್ಜಿ ಸವಿ ಸವಿ ಮಾತುಗಳಿಂದ ರಾಜನನ್ನು ತಾನು ಸುಂದರವಾದ ಉಡುಪನ್ನು ಧರಿಸಿರುವೆನೆಂಬ ಭ್ರಮೆಯಲ್ಲಿ ದೂಡುತ್ತಾನೆ. ಊರ ಜನರೆಲ್ಲ ತನ್ನ ಸುಂದರ ದಿರಿಸನ್ನು ನೋಡಲೆಂದು, ರಾಜ ಬರಿಮೈಯಲ್ಲೇ ಹೊರಡುತ್ತಾನೆ. ಪ್ರತಿಯೊಬ್ಬನೂ ಭಯಾಶ್ಚರ್ಯಗಳಿಂದ ಚಕಾರವೆತ್ತದೆ ವೀಕ್ಷಿಸುತ್ತಿದ್ದಾಗ ಮುಗ್ಧ ಹಸುಳೆಯೊಂದು ಕೈತಟ್ಟಿಕೊಂಡು ಕುಣಿಯುತ್ತ, ಕುಣಿಯುತ್ತ "ಅಯ್ಯೋ, ರಾಜ ಬೆತ್ತಲೆ" ಎಂದು ಕೇಕೆ ಹಾಕತೊಡಗಿತು.

ನಾವೆಲ್ಲ ಸತ್ಯವನ್ನು ಕಂಡೂ ಕಂಡಿದ್ದೇವೆಂದು ಹೇಳಲಾಗದ ಸ್ಥಿತಿಯಲ್ಲಿದ್ದೇವೆ. ಅಂಥದೊಂದು ಪೊರೆ ನಮ್ಮನ್ನು ಆವರಿಸಿದೆ. ಆ ಪೊರೆ ಕಳಚಬೇಕು. ಇದಕ್ಕಿದೆ ಸೊಗಸಾದ ಒಂದೇ ಒಂದು ಆಂಗ್ಲ ಪದ "ಮೆಟಮಾರ್ಫಸಿಸ್" (ರೂಪಾಂತರ).

ಹೌದು. ನಮ್ಮ ರಾಜಕಾರಣಿಗಳನ್ನು ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿದೆ. ಆದರೂ ತಕ್ಷಣ ದಾಸರ ಪದವೊಂದು ನೆನಪಿಗೆ ಬರುತ್ತದೆ. "ಡೊಂಕು ಬಾಲದ ನಾಯಕರೇ..." ●

❄

ಉದ್ದೇಶ

ಐದು ಪಂಚತಾರಾ ಭೋಜನ ಶಾಲೆಯಲ್ಲಿ ಉಪಾಹಾರ ಮುಗಿಸಿದ ಗಿರಾಕಿ, ವೇಟರ್‌ನಿಗೆ ಬಿಲ್ ಹಣ ತೆತ್ತುವ ಮುನ್ನ ಸುಮ್ಮನೆ ಕೇಳಿದ:

"ಆ್ಯಶ್ ಟ್ರೇ ಇಟ್ಟೇದ್ದೀರಲ್ಲ, ಒಳ್ಳೇ ಸ್ಫಟಿಕದಲ್ಲಿ ಮಾಡಿದ್ದಿರಬೇಕು. ಬಟ್ಟಲದ ಕೆಳಭಾಗದಲ್ಲಿ ಒಂದಿಷ್ಟು ನೀರ ಹನಿಗಳನ್ನು ಹಾಗೆ ಬಿಟ್ಟದ್ದು, ಸಿಗರೇಟು ನಂದಬೇಕೆಂದು ಅಲ್ಲವೆ ?"

"ಸ್ವಲ್ಪ ಮಟ್ಟಿಗೆ ಹೌದು. ಆದರೆ ಯಾವುದೇ ಗಿರಾಕಿ ಈ ಬೆಲೆಯುಳ್ಳ ಬಟ್ಟಲನ್ನು ಕೋಟಿನ ಕಿಸೆಗೆ ಸರಳವಾಗಿ ಇಳಿಸಬಾರದೆಂಬುದೇ ನಿಜವಾದ ಕಾರಣ." ವೇಟರ್ ಉತ್ತರಿಸಿದ.

ಇದು ಭಾರತ!

ರಾವಣನೆಂದರೆ ಪ್ರೀತಿ.... ಹನುಮನೆಂದರೆ ದ್ವೇಷ.....

ಮಹಾನ್ ಶಿವಭಕ್ತ ಎಂಬ ಖ್ಯಾತಿ ಲಂಕಾಧಿಪತಿ ರಾವಣನಿಗೆ. ಆದರೆ ಭಾರತದಲ್ಲಿ ಆತನನ್ನು ದ್ವೇಷಿಸುವವರೇ ಹೆಚ್ಚು ಜನ! ಹನುಮಂತನ ಗುಡಿಯಿಲ್ಲದ ಊರು ಭಾರತದಲ್ಲಿ ಎಲ್ಲೂ ಇಲ್ಲವೆಂದೇ ನಂಬಿಕೆ. ಆದರೆ ಆತನನ್ನು ದ್ವೇಷಿಸುವ ಊರು ನಮ್ಮ ದೇಶದಲ್ಲಿದೆ!

● 'ಎಂ. ದೀಪಾ'

ಕಾರ್ಯಾರಂಭದ ಮೊದಲು ಗಣೇಶನನ್ನು ಪೂಜಿಸುವುದು ಮೊದಲಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯ. ಆದರೆ ರಾವಣನನ್ನು ಪೂಜಿಸುವ ಸಂಪ್ರದಾಯವೂ ಒಂದೆಡೆ ಚಾಲ್ತಿಯಲ್ಲಿದೆಯೆಂದರೆ ನಂಬುತ್ತೀರಾ?

ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಅಂಥ ಹಳ್ಳಿಯಿರುವುದು ದಕ್ಷಿಣ ಭಾರತದಲ್ಲಲ್ಲ, ಆರ್ಯ ಸಂಸ್ಕೃತಿಯೇ ಪ್ರಧಾನವಾಗಿರುವ ಉತ್ತರ ಭಾರತದಲ್ಲಿ. ಮಧ್ಯಪ್ರದೇಶದ ವಿದಿಶಾದಿಂದ ನಲವತ್ತೈದು ಕಿಲೋಮೀಟರ್‌ನಷ್ಟು ಉತ್ತರಕ್ಕೆ ಸಾಗಿದರೆ ರಾವಣನ ಪೂಜೆಗೆ ಅಗ್ರಪ್ರಾಶಸ್ತ್ಯವಿರುವ ಈ ಹಳ್ಳಿಯಿದೆ. ಹಳ್ಳಿಯ ಹೆಸರೇ ರಾವಣ.

ಆ ಹಳ್ಳಿಯ ಅಂಚಿನಲ್ಲೊಂದು ಕೆರೆ. ಕೆರೆಯ ತೀರದ ಮೇಲೆಯೇ ಧರಾಶಾಯಿಯಾಗಿರುವ ಹನ್ನೆರಡಡಿಯ ರಾವಣನ ಮೂರ್ತಿ. ರಾವಣನೆಂದ ಮೇಲೆ ಹತ್ತು ತಲೆ, ಇಪ್ಪತ್ತು ಕೈಗಳು ಇರಲೇಬೇಕಲ್ಲ, ಅವೆಲ್ಲವೂ ಇವೆ. ಒಂದೊಂದು ಕೈಯಲ್ಲೂ ಶತ್ರುವಿನ ಸಂಹಾರಕ್ಕಾಗಿ ಒಂದೊಂದು ಆಯುಧ. ಆದರೆ

ಮೂರ್ತಿಯ ಮುಖದ ಮೇಲೆ ರೌದ್ರ ಕಳೆಯಿಲ್ಲ. ಅತಿ ಗಂಭೀರ ಮುದ್ರೆಯಲ್ಲಿ ಪವಡಿಸಿರುವ ರಾವಣ ನೋಡುಗರ ದೃಷ್ಟಿಯಲ್ಲಿ ಅವರವರ ಭಾವನೆಯಂತೆ ಯಾವ ಭಾವನೆಯನ್ನಾದರೂ ಮೂಡಿಸಬಹುದು; ಆದರೆ ಭಯದ ಭಾವನೆಯನ್ನಂತೂ ಖಂಡಿತ ಮೂಡಿಸುವುದಿಲ್ಲ. ಮೂರ್ತಿಯನ್ನು ಕಟೆದ ರೀತಿಯೇ ಹಾಗೆ.

ಆದರೆ ಈ ಮೂರ್ತಿಯನ್ನು ಯಾರು ಕಟೆದರೆನ್ನುವುವಾಗಲಿ ಏಕೆ ಕಟೆದರೆನ್ನುವುವಾಗಲಿ, ಯಾವಾಗ ಕಟೆದರೆನ್ನುವುದಾಗಲಿ ಯಾರಿಗೂ ತಿಳಿಯದು. ಮೂರ್ತಿಯನ್ನು ಕಟೆದ ರೀತಿಯನ್ನು ನೋಡಿದರೆ ಪರಮಾರರ ಕಾಲದಲ್ಲಿ ಯಾರೋ ಅದನ್ನು ಕಟೆದಿರಬೇಕು. ಯಾರೇ ಕಟೆದಿರಲಿ, ಏಕೇ ಕಟೆದಿರಲಿ, ಮೂರ್ತಿ ಆರುನೂರು ವರ್ಷಗಳಿಗಿಂತ ಹಳೆಯದಲ್ಲ. ಆಗ ರಾವಣನನ್ನು ಪೂಜಿಸುವ ಸಂಪ್ರದಾಯ ಏಕೆ ಪ್ರಾರಂಭವಾಯಿತೆನ್ನುವುದು ಈಗ ಇತಿಹಾಸದ ಗರ್ಭಕ್ಕೆ ಸೇರಿದ ಚಿದಂಬರ ರಹಸ್ಯ.

ರಾವಣ ಗ್ರಾಮದಲ್ಲಿರುವವರ ಪೈಕಿ ಶೇಕಡಾ ಎಪ್ಪತ್ತರಷ್ಟು ಜನ ಕಾನ್ಯಕುಬ್ಜ ಬ್ರಾಹ್ಮಣರು. ರಾವಣ ಅವರ ವಂಶಕ್ಕೇ ಸೇರಿದವನಂತೆ. ರಾವಣನ ಪ್ರಭಾವ ಸುತ್ತಲಿನ ಹಳ್ಳಿಗಳಿಗೂ ವ್ಯಾಪಿಸಿದೆ. ಹೀಗಾಗಿ ಅಲ್ಲಿ ರಾವಣನಿಗೆ ಅಗ್ರಪೂಜೆ ಸಲ್ಲಿಸಿದ ನಂತರವೇ ಯಾವುದೇ ಶುಭಕರ ಕಾರ್ಯದ ಆರಂಭ. ಹೊಸದಾಗಿ ಮದುವೆಯಾದ ಹೆಣ್ಣುಮಗಳು ತವರುಮನೆಯಿಂದ ಮೆರವಣಿಗೆಯಲ್ಲಿ ರಾವಣನಲ್ಲಿಗೆ ಹೋಗಿ ಪೂಜೆ ಸಲ್ಲಿಸಿದ ನಂತರವೇ ಅತ್ತೆಯ ಮನೆಯತ್ತ ಪ್ರಯಾಣ. ರಾವಣನ ವಂಶಕ್ಕೆ ಸೇರಿದ್ದೇವೆಂದು ಹೇಳಿಕೊಳ್ಳುವವರು ರಾವಣನನ್ನು ಪೂಜಿಸುವುದು ದೊಡ್ಡ ಮಾತಲ್ಲ. ಆದರೆ ರಘುವಂಶಕ್ಕೆ ಸೇರಿದವರೆಂದು ಹೇಳಿಕೊಳ್ಳುವವರೇ ಅಲ್ಲಿ ರಾವಣನ ಭಕ್ತರಾಗಿರುವುದು ನಿಜಕ್ಕೂ ಆಶ್ಚರ್ಯದ ವಿಷಯವೇ ಸರಿ.

ಆದರೆ, ತೀರ ತಡವಾಗಿಯಾದರೂ ಆರ್ಯ ಸಂಸ್ಕೃತಿಯ ಪ್ರಭಾವವೀಗ ಆ ಪ್ರದೇಶಕ್ಕೂ ವಿಸ್ತರಿಸುತ್ತಿದೆ. ಉತ್ತರ ಭಾರತದಲ್ಲಿ ಇತರೆಡೆ ಪ್ರಚಲಿತವಿದ್ದಿರುವ ಪದ್ಧತಿಯ ಹಾಗೆ ವಿಜಯ ದಶಮಿಯ ದಿನ ಸಂಜೆಯ ಸಮಯದಲ್ಲಿ ಕಾಗದದಿಂದ ಮಾಡಿದ ರಾವಣನನ್ನು ಇತ್ತೀಚೆಗೆ ಅಲ್ಲಿ ಸುಡಲಾಗುತ್ತಿದೆ. ಆದರೆ ಆ ದಿನ ರಾವಣನ ಮೂರ್ತಿಗೆ ಭರ್ಜರಿಯಾದ ಪೂಜೆಯನ್ನು ಸಲ್ಲಿಸಿದ ನಂತರವೇ ಈ ಕಾಗದದ ಮೂರ್ತಿಯನ್ನು ಸುಡಲಾಗುತ್ತದೆನ್ನುವುದನ್ನು ಅಲಕ್ಷಿಸುವಂತಿಲ್ಲ.

ಇಲ್ಲಿ ರಾವಣನ ಬಗೆಗೆ ಭಕ್ತಿಯಿದ್ದರೆ ಪಕ್ಕದಲ್ಲೇ ಇರುವ ಉತ್ತರ ಪ್ರದೇಶದ ದ್ರೋಣಗಿರಿಯಲ್ಲಿ ಹನುಮಂತನ ಬಗೆಗೆ ಸಿಟ್ಟು. ದ್ರೋಣಗಿರಿಯಿರುವುದು ಉತ್ತರಪ್ರದೇಶದ ಚಾಮೋಲಿ ಜಿಲ್ಲೆಯಲ್ಲಿ. ಊರು ತುಂಬ ಚಿಕ್ಕದು. ಊರಿನ ಅಂಚಿನಲ್ಲಿ ಸದಾ ಹಿಮಾಚ್ಛಾದಿತವಾದ ದ್ರೋಣಗಿರಿ- ಅಥವಾ ದ್ರೋಣ ಪರ್ವತ.

ಹಿಂದೆ ಒಂದಾನೊಂದು ಕಾಲದಲ್ಲಿ ಈ ಪರ್ವತ ಔಷಧೀಯ ಸಸ್ಯಗಳಿಂದ ಆವೃತವಾಗಿತ್ತಂತೆ. ಸಂಜೀವನಿ ವೃಕ್ಷ ಈ ಪರ್ವತವಲ್ಲೆ ಇದ್ದುದರಿಂದ ಹನುಮಂತ ದ್ರೋಣಗಿರಿಯ ಒಂದು ತುಂಡನ್ನೇ ಕಿತ್ತುಕೊಂಡು ಹೋದನಂತೆ. ಈಗಲೂ ಪರ್ವತದ ಒಂದು ಭಾಗ ಮುಕ್ಕಾದಂತೆ ಇರುವುದು ಅಲ್ಲಿನ ಜನರ ಭಾವನೆಗೆ ಪುಷ್ಟಿಯೊದಗಿಸುತ್ತದೆ. ಎಲ್ಲರಿಗೂ ಪೂಜ್ಯವಾದ ದ್ರೋಣಗಿರಿಯ ಒಂದು ಭಾಗವನ್ನೇ ತುಂಡರಿಸಿದ್ದರಿಂದ ಅಲ್ಲಿನ ಎಲ್ಲರಿಗೂ ಹನುಮಂತನ ಮೇಲೆ ಸಿಟ್ಟು.

ಸಮುದ್ರ ಮಟ್ಟದಿಂದ ಹನ್ನೊಂದೂವರೆ ಸಾವಿರ ಅಡಿಗಳಷ್ಟು ಎತ್ತರದ ಮೇಲಿರುವ ದ್ರೋಣಗಿರಿಯಲ್ಲಿ ಹೆಚ್ಚು ಜನವಸತಿಯಿಲ್ಲ. ವರ್ಷದಲ್ಲಿ ಐದಾರು ತಿಂಗಳು ಇಡೀ ಹಳ್ಳಿಯೇ ಹಿಮಾವೃತವಾಗಿರುವುದರಿಂದ ಹಿಮಬೀಳಲು ಪ್ರಾರಂಭಿಸಿದ ಕೂಡಲೆ ಹಳ್ಳಿಯ ಜನ ಸರಕು-ಸರಂಜಾಮು ಸಮೇತವಾಗಿ ಬೆಟ್ಟದಡಿಯಿಂದ ಕೆಳಗಿಳಿದು ಸುರಕ್ಷಿತ ಸ್ಥಳ ಸೇರುತ್ತಾರೆ. ಬೇಸಿಗೆ

ಯಲ್ಲಿ ಹಿಮ ಕರಗಿದಾಗ ಮತ್ತೆ ದ್ರೋಣಗಿರಿಗೆ ಹಿಂದಿರುಗಿ ಕೃಷಿಯನ್ನಾರಂಭಿಸುತ್ತಾರೆ.

ಮಂಗೋಲ ಮುಖಾಕೃತಿಯ ಈ ಜನ ಭೋಟಿಯಾ ಜನಾಂಗಕ್ಕೆ ಸೇರಿದವರು. ಶೌರ್ಯ-ಸಾಹಸಗಳು ಈ ಜನರಲ್ಲಿ ರಕ್ತಗತ ವಾಗಿಯೆ ಬಂದಿವೆ. ಶೌರ್ಯಕ್ಕೆ ಸರಿಸಮವಾಗಿ ಇವರು ಕಷ್ಟಸಹಿಷ್ಣುಗಳೂ ಹೌದು. ಇವೆರಡು ಗುಣಗಳಿಂದಾಗಿಯೇ ಈ ಜನ ದ್ರೋಣಗಿರಿ ಯನ್ನು ಬಿಡಲೊಲ್ಲರು.

ಸತ್ತವರನ್ನು ಅಗ್ನಿಸಂಸ್ಕಾರಕ್ಕೆ ಒಳಪಡಿಸಿದರೆ ಅದರಿಂದ ಹೊರಟ ಹೊಗೆ ಪರ್ವತವನ್ನು ಅಪ ವಿತ್ರಗೊಳಿಸುವುದೆಂದು ಇಲ್ಲಿನ ಜನ ಸತ್ತವರಿಗೆ ಅಗ್ನಿಸಂಸ್ಕಾರ ನೀಡುವುದಿಲ್ಲ. ಊರ ಮಧ್ಯದಲ್ಲೆ ಒಂದು ಪ್ರಸ್ತರಮಯವಾದ ಗುಡ್ಡ. ಶಿಲೆಯ ಮೇಲೆ ಅಲ್ಲಲ್ಲಿ ಕೆಂಪು ಚುಕ್ಕೆಗಳು. ಹನುಮಂತ ದ್ರೋಣಗಿರಿಯನ್ನು ಕೊಂಡೊಯ್ಯುವಾಗ ಅದ ರಿಂದ ಸುರಿದ ರಕ್ತದ ಹನಿಗಳೇ ಈ ಕೆಂಪು ಚುಕ್ಕೆ ಗಳೆಂದು ಭೋಟಿಯಾ ಜನ ನಂಬಿದ್ದಾರೆ.

ವಿಜಯದಶಮಿ ಹಾಗೂ ಕೃಷ್ಣಾಷ್ಟಮಿಗಳ ಮಧ್ಯೆ ಒಂದು ಒಳ್ಳೆಯ ಮುಹೂರ್ತ ನೋಡಿ ಆ ದಿನದಂದು ಉತ್ಸವವನ್ನಾಚರಿಸಲು ಇಲ್ಲಿನ ಜನ ನಿಶ್ಚಯಿಸುತ್ತಾರೆ. ಅಂದು ದ್ರೋಣಗಿರಿಯ ಜನ ರಷ್ಟೇ ಅಲ್ಲ, ಸುತ್ತಲಿನ ಹಳ್ಳಿಗಳಿಂದಲೂ ಜನ ಸೇರಿ ಒಳ್ಳೆ ವಿಜೃಂಭಣೆಯಿಂದ ಉತ್ಸವವನ್ನು ಆಚರಿಸುತ್ತಾರೆ.

ಮನೆಗಳೆಲ್ಲವೂ ಅಂದು ಸಿಂಗರಿಸಲ್ಪಡು ತ್ತವೆ. ಎಲ್ಲರೂ ಸೇರಿ ಜಾತಿಭೇದವಿಲ್ಲದೆ ಒಂದೆಡೆ ಸೇರಿ ಭೋಜನಕೂಟದಲ್ಲಿ ಪಾಲ್ಗೊಳ್ಳುತ್ತಾರೆ. ಒಟ್ಟನಲ್ಲಿ ಈ ದ್ರೋಣಗಿರಿಯ ಆತ್ಮ ಪ್ರವೇಶಿಸಿ ಮುಂಬರುವ ಘಟನೆಗಳನ್ನು ಕುರಿತು ಒಡನುಡಿಯುತ್ತದೆ. ಮುಂದೆ ಎಂಥ ಪ್ರಸಂಗವೇ ಬರಲಿ, ಭಕ್ತರನ್ನು ರಕ್ಷಿಸುವುದಾಗಿ ಪರ್ವತದ ಆತ್ಮ ಪಾತ್ರೆಯ ಮೂಲಕ ಒಡನುಡಿಯುವುದರೊಂದಿಗೆ ಉತ್ಸವ ಕೊನೆಗೊಳ್ಳುತ್ತದೆ.

ಎಲ್ಲರಿಗೂ ರಾಮ ಆರಾಧ್ಯದೈವವಾದರೆ ಮಧ್ಯಪ್ರದೇಶದ 'ರಾವಣ'ದಲ್ಲಿ ಮಾತ್ರ ರಾವಣ ಆರಾಧ್ಯದೇವತೆ. ಹನುಮಂತನನ್ನು ಎಲ್ಲರೂ ಆರಾಧಿಸಿದರೆ ದ್ರೋಣಗಿರಿಯ ಜನರಿಗೆ ಮಾತ್ರ ಹನುಮಂತನ ಮೇಲೆ ಸಿಟ್ಟು! ಭಾವನೆಯ ಲೋಕವೇ ವಿಚಿತ್ರ ಅಲ್ಲವೆ? ●

(ಆಧಾರ: 'ಧರ್ಮಯುಗ'ದಲ್ಲಿ ಅವಧ ಶ್ರೀವಾತ್ಸವ ಹಾಗೂ ಪ್ರಕಾಶ ಪುರೋಹಿತರ ಲೇಖನಗಳು)

ಬೀChi ಉವಾಚ

"ಜಗತ್ತಿನ ಅರ್ಧ ಜನರು ಮಾತನಾಡುವ ಭಾಷೆಯೂ, ಸಹಸ್ರಾರು ವರ್ಷಗಳಿಂದ ಬೆಳೆದು ಶ್ರೀಮಂತವಾಗಿರುವ ಭಾಷೆಯೂ ಆದ ಇಂಗ್ಲೀಷನ್ನು ಓಡಿಸಬೇಕೆಂದು ನಮ್ಮ ಕನ್ನಡಿಗರು ಹೇಳಿದಾಗ ನನಗೆ ವ್ಯಥೆಯಾಗುತ್ತದೆ. ನಷ್ಟವಾಗುವದು ನಮಗೇ ಹೊರತು ಇಂಗ್ಲಿಷ್‌ಗಲ್ಲ. ಆಂಗ್ಲರನ್ನು ಓಡಿಸಿದ್ದು ಎಷ್ಟು ಒಳ್ಳೆಯ ಕೆಲಸವೋ, ಆಂಗ್ಲಭಾಷೆಯನ್ನು ಓಡಿಸುವುದು ಅಷ್ಟೇ ದಡ್ಡ ಕೆಲಸ. ಇದು ನನ್ನ ಅನಿಸಿಕೆ. ನಾನು ಓದುವುದು ಇಂಗ್ಲಿಷನ್ನೇ. ಆದರೆ ಬರೆಯುವುದು ಮಾತ್ರ ಕನ್ನಡವನ್ನೇ. ಕನ್ನಡ ನನಗೆ ಮಾತೃಭಾಷೆಯಾದರೆ, ಇಂಗ್ಲಿಷ್ ಪಿತೃಭಾಷೆ. ಇದರಿಂದ ನನಗಾಗಲೀ ಕನ್ನಡಕ್ಕಾಗಲೀ ಅವಮಾನ ಆಗಿಲ್ಲ. ಭಾಷೆ ಎನ್ನುವುದು ಒಬ್ಬರ ವಿಚಾರಗಳನ್ನು ಇನ್ನೊಬ್ಬರಿಗೆ ತಿಳಿಸುವ ಅತ್ಯವಶ್ಯಕವಾದ ವಾಹನ ಮಾತ್ರ. ವಿಚಾರಕ್ಕಿಂತಲೂ ವಾಹನವೇ ದೊಡ್ಡದಾದರೆ ? ಅತಿರೇಕದ ಭಾಷಾಭಿಮಾನ ಒಳ್ಳೆಯದಲ್ಲ."

ಸಂಗ್ರಹ: ಎಸ್.ವಿ. ರಾಮಚಂದ್ರ

ನಮ್ಮ ಊರಿನ ಪುಣ್ಯಜೀವಿಗಳು

ಶಂಕರಮ್ಮ

ಮಕ್ಕಳು ಮರಿಯಿಲ್ಲದ ವಯಸ್ಸಾದ ವಿಧವೆ. ಮೇಲಾಗಿ ಬಡವಿ. ಅಂಥವರಿಗೆ ನೆಂಟರು-ಇಷ್ಟರು ಇರಲು ಸಾಧ್ಯವೆ? ಅಂತೂ ಶಂಕರಮ್ಮನವರು ಏಕಾಂಗಿ. ಆದರೆ ಆಕೆ ಭಿಕ್ಷೆಯಿಂದ ಜೀವನ ಮಾಡಲಿಲ್ಲ. ಮಾಡುತ್ತಲೂ ಇಲ್ಲ. ದೇಹವನ್ನು ದಂಡಿಸಿ ಜೀವನ ಸಾಗಿಸುವುದು ಶಂಕರಮ್ಮನವರ ಕ್ರಮ.

ಒಂದು ಚಿಕ್ಕ ಕೊಠಡಿಯೇ ಅವರ ಮನೆ. ಸರಿ. ಉದರಂಭರಣ? ಅದು ಹೀಗೆ:

"ಶಂಕರಮ್ಮನವರೆ, ನಮ್ಮ ಮನೆಯಲ್ಲಿ ಶ್ರೀಸತ್ಯನಾರಾಯಣ ವ್ರತ. ಮನೆಯವರ ಮಟ್ಟಿಗೆ ಮಾತ್ರ. ಆದರೂ ಮಗಳು, ಅಳಿಯ, ಮಗ ಸೊಸೆ- ಹೀಗೆ ಹತ್ತಿಪ್ಪತ್ತು ಜನರಾಗಬಹುದು."

"ಆಗಲಿ. ದೇವರ ಪ್ರಸಾದವಲ್ಲದೆ ಹೆಚ್ಚಿಗೆ ಅಡಿಗೆ ಏನು ಮಾಡಬೇಕಮ್ಮ? ಅಂದಾಜು ಜನ ಎಷ್ಟಾಗಬಹುದು?"

ಬಂದಾಕೆ ಇಂತಿಷ್ಟು ಜನ, ಇಂತಿಂಥ ಅಡಿಗೆ ಮಾಡಬೇಕೆಂದು ಹೇಳಿ "ಏನು ಕೊಡಬೇಕು?" ಅಂತ ಕೇಳಿದರೆ-

"ಆ ಸತ್ಯನಾರಾಯಣ ನಿಮಗೆ ಏನು ಬುದ್ಧಿ ಕೊಡುತ್ತಾನೋ ಅಷ್ಟನ್ನ ಕೊಡಿ. ನಾನು ಬೆಳಗಿನ ಆರು ಘಂಟೆಗೆ ಬರುತ್ತೇನೆ," ಎಂದು ಬಿಡುವುದು ಅವರ ಜಾಯಮಾನ.

ಆಸುಪಾಸಿನಲ್ಲಿ ನಡೆಯುವ ಮಂಗಳಗೌರಿವ್ರತ, ಅನಂತನ ಹಬ್ಬ, ವೈಭವಲಕ್ಷ್ಮಿ ಪೂಜೆ, ನಾಮಕರಣ ಮೊದಲಾದ ಶುಭ ಸಮಾರಂಭಗಳು ವೈದೀಕ, ವೈಕುಂಠ ಸಮಾರಾಧನೆ ಮುಂತಾದ ಕಾರ್ಯಕ್ರಮಗಳಿಗೂ ಶಂಕರಮ್ಮನವರಿಗೆ ಆಹ್ವಾನ. ಯಾರಿಗೂ ಇಲ್ಲವೆನ್ನುತ್ತಿರಲಿಲ್ಲ ಈಕೆ.

ಶಂಕರಮ್ಮ ಹೀಗೆ ಬಂದ ಹಣದಲ್ಲಿ ಅಲ್ಪ ಸ್ವಲ್ಪ ಉಳಿಸಿ ಹಾಸನದ ಶಂಕರಮಠಕ್ಕೆ, ಶ್ರೀ ಸೀತಾರಾಮಾಂಜನೇಯ ದೇವಸ್ಥಾನದ ಕಟ್ಟಡ ಜೀರ್ಣೋದ್ಧಾರಕ್ಕೆ ವಂತಿಗೆಯನ್ನು ಸಲ್ಲಿಸಿದ್ದಾರೆ. ವಿದ್ಯಾರ್ಥಿನಿಲಯಕ್ಕೂ ಶಕ್ತ್ಯಾನುಸಾರ ಕೊಟ್ಟಿದ್ದಾರೆ. ವಿದ್ಯಾರ್ಥಿನಿಲಯಕ್ಕೂ ಶಕ್ತ್ಯಾನುಸಾರ ಕೊಟ್ಟಿದ್ದಾರೆ. ಅಣ್ಣನ ಮಗನನ್ನು ಹತ್ತಿರ ಇಟ್ಟುಕೊಂಡು ಓದಿಸಿ ಇಂಜನಿಯರಿಂಗ್ ಪದವೀಧರನನ್ನಾಗಿ ಮಾಡಿದ್ದಾರೆ.

ಈಗವರಿಗೆ ವಯಸ್ಸಾಗಿದೆ. ಅಶಕ್ತಿ. ಕಣ್ಣು ಕಾಣುವುದಿಲ್ಲ. ಚಟ್ನಿಪುಡಿ ಮೆಣಸಿನಪುಡಿ ಮಾರಿ ಉಳಿಸಿದ್ದ ಹಣವನ್ನು ಕೊಟ್ಟು ಶಂಕರಮ್ಮ ಮೈಸೂರಿನ ವೃದ್ಧಾಶ್ರಮ ಸೇರಿ ಕಾಲಕ್ಷೇಪ ಮಾಡುತ್ತಿದ್ದಾರೆ.


● ಕೆ. ಎಸ್. ಶ್ರೀಕಂಠಯ್ಯ

ಗುರುಸಂಗಪ್ಪ ವಾರದ

ವಿಜಾಪುರ ಜಿಲ್ಲೆ ಸಿಂದಗಿಯ ಗುರುಸಂಗಪ್ಪ ವಾರದ ಅವರು ಸರಳ ಸಜ್ಜನಿಕೆಯ ಸಾಕಾರ ಮೂರ್ತಿ. ನಗೆಮೊಗ, ಶುಭ್ರ ಉಡುಗೆ, ಸನ್ನಡತೆ, ಮೃದುಮಾತು, ಎಲ್ಲರನ್ನೂ ಗೌರವಿಸುವ ಗುಣ ಅವರದು. ಬಂಗಾರದ ಚಮಚೆಯನ್ನು ಬಾಯಲ್ಲಿಟ್ಟುಕೊಂಡು ಹುಟ್ಟಿದರೂ ಶ್ರೀಮಂತಿಕೆಯ ಗತ್ತಿನಿಂದ

ದೂರ. ವೃತ್ತಿಯಿಂದ ವ್ಯಾಪಾರಿಯಾದರೂ ಬಡಜನರ ಏಳಿಗೆಯನ್ನೇ ಬಯಸುವ ಹೃದಯ.

ಗುರುಸಂಗಪ್ಪಣ್ಣ ಬಿ.ಎಸ್.ಸಿ. ಪದವೀಧರ. ಪದ್ಮರಾಜ ವಿದ್ಯಾವರ್ಧಕ ಸಂಘದ ಆಧಾರಸ್ತಂಭವಾಗಿರುವ ಅವರು ತಾಲೂಕು ಬಸವ ಸಮಿತಿ ಅಧ್ಯಕ್ಷ. ವ್ಯಾಪಾರಸ್ಥರ ಸಂಘದ ಅಧ್ಯಕ್ಷ. ಸಿಂದಗಿ ಸಹಕಾರಿ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷ. ವಿಜಾಪುರ ಜಿಲ್ಲಾ ಮೂರನೇ



ಸಾಹಿತ್ಯ ಸಮ್ಮೇಳನದ ಉಸ್ತುವಾರಿ ಅಧ್ಯಕ್ಷರಾಗಿದ್ದ ಅವರು ಸಾಹಿತ್ಯಾಸಕ್ತರೂ ಹೌದು. ಆ ಭಾಗದ ಅನೇಕ ಚಳವಳಿಗಳ ಧುರೀಣರಾಗಿ ಜನತೆಯ ನೋವು-ನಲಿವುಗಳಿಗೆ ಸ್ಪಂದಿಸುತ್ತಿರುವ ಗುರುಸಂಗಪ್ಪ, ಬಯಸಿದ್ದರೆ ಎಂದೋ ಶಾಸಕನೋ, ಸಚಿವನೋ ಆಗಬಹುದಿತ್ತು. ಆದರೆ ಅದು ಅವರಿಗೆ ಬೇಕಿಲ್ಲ. ಬೇಕಾಗಿರುವುದು ಸಮಾಜಸೇವೆ. ಅದಕ್ಕೆಂದೇ ಅವರು ನಮ್ಮ ಜಿಲ್ಲೆಯ ಹೆಮ್ಮೆಯ ಕುವರ

● ಭಾರತಿ ಪಾಟೀಲ

ಶಿರಾಳಕೊಪ್ಪದ ಸೋಮಣ್ಣ

ಅಷ್ಟಮದಗಳಲ್ಲಿ ಒಂದಿದ್ದರೂ ಮನುಷ್ಯನನ್ನು ಹಿಡಿಯುವುದು ಕಠಿಣ. ಅಂಥಾದ್ದರಲ್ಲಿ ಶಾಸಕ ಸ್ಥಾನ, ಕಾನೂನು ಪದವಿ, ಅರ್ಥಬಲ, ಸಂಘ-ಸಂಸ್ಥೆಗಳ ಧುರೀಣತ್ವ, ಜನಪ್ರಿಯತೆ ಇತ್ಯಾದಿಗಳಿದ್ದರೂ ಶಿವಮೊಗ್ಗ ಜಿಲ್ಲೆ ಶಿರಾಳಕೊಪ್ಪದ ಸೋಮಣ್ಣನವರು ಅಂತಃಕರಣ ತುಂಬಿಕೊಂಡ ವ್ಯಕ್ತಿ.

ಮೂವತ್ತು ವರ್ಷಗಳ ಹಿಂದಿನ ಮಾತು. ಬಿ.ಡಿ. ಜತ್ತಿಯವರು ಆಹಾರ ಸಚಿವರು. ನಮ್ಮದು ರೈತ ಕುಟುಂಬ. ನಮ್ಮ ಮೇಲಿದ್ದ ಲೆವಿ ಖಟ್ಲೆಯ ಕುರಿತು ಸಚಿವರಲ್ಲಿ ಮಾತನಾಡಬೇಕಿತ್ತು. ಮಧ್ಯಸ್ತಿಕೆ ಯಾಚಿಸಿ ಸೋಮಣ್ಣನವರ ಮನೆಗೆ ಹೋದೆವು. ರಾತ್ರಿ ಎಂಟಾಗಿತ್ತು. ಯಾರೋ ಬಂದಿದ್ದಾರೆಂದು ತಿಳಿದು ಲುಂಗಿಯ ಮೇಲೆ ಹೊರಗೆ ಬಂದರು. ಆ ಕೂಡಲೇ ಅವರ ಜೀಪಿನಲ್ಲಿ ಅವರ ಸಾಮಿಲ್ಲಿಗೆ ಹೋಗಿ ದೂರವಾಣಿ ಮುಖಾಂತರ ಜತ್ತಿಯವರೊಂದಿಗೆ ಮಾತಾಡಿ ಪುನಃ ಸೋಮಣ್ಣನವರ ಮನೆಗೆ ಬಂದೆವು. ನಮ್ಮನ್ನು ಬಲವಂತವಾಗಿ ಊಟಕ್ಕೆ ಒಪ್ಪಿಸಿ ತಾವೇ ನಮಗೆ ನೀರು ಕೊಟ್ಟರು. ಒಳಗೆ ನೋಡುತ್ತೇವೆ, ಒಂದು ಎಲೆಯಲ್ಲಿ ಉಪ್ಪು, ಉಪ್ಪಿನ ಕಾಯಿ ಬಡಿಸಿಟ್ಟದ್ದು ಹಾಗೇ ಇದೆ. ಊಟಕ್ಕೆಂದು ಕುಳಿತವರು ನಾವು ಬಂದದ್ದು ತಿಳಿದು ಹಾಗೇ ಎದ್ದು ಬಂದಿದ್ದರು. ನಾವು ಅವರಿಗೆ ಯಾವುದೇ ರೀತಿಯಲ್ಲಿ ಸಂಬಂಧಿಕರಾಗಿರದಿದ್ದರೂ ನಮ್ಮ ಅಹವಾಲನ್ನು ಕೇಳಲು ಊಟ ಬಿಟ್ಟೆದ್ದು ಬಂದಿದ್ದ ಅವರ ಮುಂದೆ ನಾವು ತೃಣವಾಗಿದ್ದೆವು. ಇಂಥ ರಾಜಕಾರಣಿಗಳನ್ನು ಈಗ ಎಲ್ಲಿ ಹುಡುಕುವುದು !

● ಜಿ. ವಿ. ಗಂಗಾಧರಪ್ಪ

ಟ್ರೆಂಟ್‌ಬ್ರಿಜ್ ವಿಜೃಂಭಿಸಿದ ಪೊಲ್ಲಾಕ್



ಕ್ರಿಕೆಟ್ ಪ್ರಾಟ

• ಅಮೋಘವರ್ಷ

ಅಂದಿನ ಆಟ!
ಇಂದಿನ ನೋಟ!

ಅಣ್ಣ-ತಮ್ಮ ಒಂದೇ ಆಟದಲ್ಲಿ ಭಾಗವಹಿಸಿ ಅಪೂರ್ವ ಸಾಧನೆಗೈದ ದೃಷ್ಟಾಂತಗಳು ಹಲವಾರಿವೆ. ಕ್ರಿಕೆಟ್ ಕೂಡ ಇದಕ್ಕೆ ಹೊರತಲ್ಲ. ಗ್ರೇಸ್ ಸೋದರರು, ಮೊಹಮ್ಮದ ಸೋದರರು, ಚಾಪೆಲ್ ಸೋದರರು, ಹ್ಯಾಡ್ಲಿ ಸೋದರರು ಕ್ರಿಕೆಟ್‌ನಲ್ಲಿ ಮಿಂಚಿದ್ದು ನಮಗೆಲ್ಲ ಗೊತ್ತೇ ಇದೆ. ೧೯೬೫ರಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಎರಡನೆ ಟೆಸ್ಟ್‌ನಲ್ಲಿ ದಕ್ಷಿಣ ಆಫ್ರಿಕದ ಗ್ರೇಮ್ ಮತ್ತು ಪೀಟರ್ ಅವರು ಕ್ರಿಕೆಟ್ ರಂಗದ ಅಪೂರ್ವ ಸೋದರರಾಗಿ ಹೊರಹೊಮ್ಮಿದರು. ಇಂಗ್ಲೆಂಡ್ ವಿರುದ್ಧ ಜಯಭೇರಿ ಬಾರಿಸಬೇಕೆಂಬ ದಕ್ಷಿಣ ಆಫ್ರಿಕದ ದಶಕದ ಕನಸನ್ನು ನನಸು ಮಾಡಿದರು.

ಮೈಕ್ ಸ್ಮಿತ್ ನೇತೃತ್ವದಲ್ಲಿ, ಆಡಿದ ಹದಿನಾಲ್ಕು ಟೆಸ್ಟ್‌ಗಳಲ್ಲಿ ಯಶಸ್ವಿಯಾಗಿದ್ದ ಇಂಗ್ಲೆಂಡ್ ತಂಡ ವಿಜಯದ ಮತ್ತಿನಲ್ಲಿತ್ತು. ಪಂದ್ಯದ ಮೊದಲನೆ ದಿನವೇ ಮೋಡಗಳ ಜಾತ್ರೆ ನೆರೆದದ್ದನ್ನು ಕಂಡ ಸ್ಮಿತ್‌ನಲ್ಲಿ ಮತ್ತೊಂದು ಜಯದ ಆಸೆ ಅಂಕುರಿಸಿತು. ಮೋಡ ಕವಿದ ವಾತಾವರಣವನ್ನು ಗೆಲುವಿನ ಸೋಪಾನವನ್ನಾಗಿ ಮಾಡಿಕೊಳ್ಳಬಲ್ಲ ಮಧ್ಯಮ ವೇಗದ ಬೌಲರ್ ಟಾಮ್ ಕಾರ್ಟ್‌ರೈಟ್ ತನ್ನ ತಂಡದಲ್ಲಿದ್ದುದು ಆತನ ವಿಶ್ವಾಸಕ್ಕೆ ಕಾರಣ. ದಕ್ಷಿಣ ಆಫ್ರಿಕ ಪಂಗಡದ ಕಪ್ತಾನ ಪೀಟರ್

ಮೈದಾನದಲ್ಲಿ ಸೋದರರು

ವ್ಯಾಂಡರ್ ಮರ್ವೆ ಟಾಸ್ ಗೆದ್ದು ಬ್ಯಾಟಿಂಗನ್ನು ಆಯ್ದುಕೊಂಡಾಗ ಸ್ಮಿತ್ ಮುಗುಳ್ನಕ್ಕ.

ಮೈದಾನದಲ್ಲಿ

ಎಂತಹ ದಾಂಡಿಗ ಘಟಾನುಘಟಿಗಳನ್ನೂ ಗಲಿಬಿಲಿಗೊಳಿಸಬಲ್ಲ, ಅವರ ಗೊಂದಲದಿಂದ ಮತ್ತಷ್ಟು ಉಮೇದುಗೊಳ್ಳುವ ಬೌಲರ್ ಕಾರ್ಟ್‌ರೈಟ್ ದಕ್ಷಿಣ ಆಫ್ರಿಕ ಆಟಗಾರರ ಸೆಣಸಾಟಕ್ಕೆ ದಿಗ್ಬಂಧನವಿಧಿಸಿದ. ಅವನ ಎಸೆತವನ್ನು ಕೆಣಕಿದರೆ ಕ್ಯಾಚು, ಸುಮ್ಮನೆ ಬಿಟ್ಟರೆ ಬೌಲ್ಡ್. ಓಟಗಳ ಮೊತ್ತ ೮೦ ಆಗುವ ಹೊತ್ತಿಗೆ ಅರ್ಧದಷ್ಟು ವಿಕೆಟ್‌ಗಳನ್ನು ಕಳೆದುಕೊಂಡ ದ. ಆಫ್ರಿಕನ್ನರು ಇನ್ನು ಹೋರಾಟ ವ್ಯರ್ಥ ಎಂದುಕೊಂಡಿದ್ದರು. ಆದರೆ ಎತ್ತರದ ಸೊಗಸುಗಾರ, ಎಡಗೈ ಆಟಗಾರ ಗ್ರೇಮ್ ಪೊಲ್ಲಾಕ್ ಕ್ರೀಸ್‌ಗೆ ಅಂಟಿಕೊಂಡು ಲೀಲಾಜಾಲವಾಗಿ ಆಡಿದ.

ಪಂದ್ಯ: ಇಂಗ್ಲೆಂಡ್-ದಕ್ಷಿಣ ಆಫ್ರಿಕ ಎರಡನೆ ಟೆಸ್ಟ್ ೧೯೬೫.
ಸ್ಥಳ: ಟ್ರೆಂಟ್‌ಬ್ರಿಜ್
ದಿನಾಂಕ: ಆಗಸ್ಟ್ ೫, ೬, ೭, ೯.


ನೆಟ್‌ನಲ್ಲಿ ತಾಲೀಮು ಮಾಡುತ್ತಿದ್ದಷ್ಟು ಆರಾಮವಾಗಿತ್ತು ಆತನ ಶೈಲಿ.

ಬ್ಯಾಟಿನಿಂದ ಸಿಡಿದ ಚೆಂಡು ಸ್ಲಿಪ್‌ನಲ್ಲಿದ್ದ ಕಾಲಿನ್ ಕೌಡ್ರೆಯ ಕೈ ಸೇರುವುದರೊಂದಿಗೆ ಕಾರ್ಟ್‌ರೈಟ್ ಕೊನೆಗೂ ಪೊಲ್ಲಾಕ್‌ನ ಹೋರಾಟಕ್ಕೆ ಮಂಗಳ ಹಾಡಿದ. ಆ ವೇಳೆಗೆ ದ. ಆಫ್ರಿಕ ೧೬೦ ಓಟಗಳನ್ನು ಗಳಿಸಿತ್ತು. ಆ ಮೊತ್ತದಲ್ಲಿ ೨೧ ಬೌಂಡರಿಗಳೊಂದಿಗೆ ಪಂದ್ಯದ ಅತಿ ಹೆಚ್ಚು (೧೨೫) ರನ್ ಮಾಡಿದ್ದ ಪೊಲ್ಲಾಕ್ ತನ್ನ ತಂಡಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟಿದ್ದ. ಜೊತೆ ಆಟಗಾರ, ನಾಯಕ ವ್ಯಾಂಡರ್ ಮರ್ವೆ ೭೦ ನಿಮಿಷಗಳಲ್ಲಿ ಕೇವಲ ೧೦ ಓಟಗಳನ್ನು ಕೂಡಿ ಹಾಕಿದರೆ ಪೊಲ್ಲಾಕ್ ೯೧ ಓಟ ಮಾಡಿದ್ದರ ಹಿನ್ನೆಲೆಯಲ್ಲಿ ಆತನ ವೇಗದ ಅಂದಾಜು ಆದೀತು. ೨೧ರ ಯುವ ಆಟಗಾರನ ಅಪೂರ್ವ ಸಾಧನೆ ಅದು.

೨೬೯ಕ್ಕೆ ದಕ್ಷಿಣ ಆಫ್ರಿಕದ ಎಲ್ಲ ವಿಕೆಟ್‌ಗಳೂ ಉರುಳಿಬಿದ್ದವು. ೯೪ಕ್ಕೆ ಆರು ಹುದ್ದರಿಗಳನ್ನು ಪೆವಿಲಿಯನ್‌ಗೆ ಕಳಿಸಿದ್ದ ಕಾರ್ಟ್‌ರೈಟ್, ಇಂಗ್ಲೆಂಡ್ ಏನಾದರೂ ಗೆಲುವು ಪಡೆದಿದ್ದರೆ ಅದರ ರೂವಾರಿಯಾಗುತ್ತಿದ್ದ. ಆದರೆ ದುರಾದೃಷ್ಟ, ಅವನು ಕೈಬೆರಳು ಮುರಿದುಕೊಂಡು ಪಂದ್ಯದಿಂದ ನಿರ್ಗಮಿಸಿದ. ತಂಡದ ಕೈಯೂ ಮುರಿದಂತಾಯಿತು.

ಗ್ರೇಮ್ ಪೊಲ್ಲಾಕ್‌ನ ಅದ್ಭುತ ಬ್ಯಾಟಿಂಗ್ ಕೌಶಲದ ಮಾತುಕತೆ ಮತ್ತು ಅತ್ಯಲ್ಪ ಅವಧಿಯಲ್ಲಿ ಒಂದು ಓಟ ನೀಡಿ ಜೆಫ್ ಬಾಯ್ಕಾಟ್ (೦) ಹಾಗೂ ಕೆನ್ ಬ್ಯಾರಿಂಗ್ಟನ್ (೧) ಅವರನ್ನು ವಾಪಸು ಕಳಿಸಿದ ಪೀಟರ್ ಪೊಲ್ಲಾಕ್‌ನನ್ನು 'ನಾಳೆ ಹೇಗೆ ಎದುರಿಸುವುದು?' ಎಂಬ ಆತಂಕದೊಡನೆ ಇಂಗ್ಲೆಂಡ್ ತಂಡ ರಾತ್ರಿಯನ್ನು ಕಳೆಯಿತು.

ಪಂದ್ಯದ ಎರಡನೆ ದಿನ ಪೀಟರ್ ೫೩ಕ್ಕೆ ಐದು ವಿಕೆಟ್ ಪಡೆಯುವುದರೊಂದಿಗೆ ಇಂಗ್ಲೆಂಡ್ ೨೪೦ಕ್ಕೆ ಆಲೌಟ್ ಆಗುವಂಥ ಒತ್ತಡ ಹೇರಿದ. ಅಧಿಕಾರಯುತ ಸೆಂಚುರಿ ಬಾರಿಸಿದ ಕಾಲಿನ್



ಗ್ರೇಮ್ ಪೊಲ್ಲಾಕ್‌ನ ಒಂದು ಭಂಗಿ.

ಕೌಡ್ರೆ (೧೦೫) ಮಾತ್ರ ಇಂಗ್ಲೆಂಡ್‌ಗೆ ಆಶಾ ಕಿರಣವಾಗಿದ್ದ.

ಕಾರ್ಟ್‌ರೈಟ್‌ನ ಅನುಪಸ್ಥಿತಿಯಲ್ಲಿ ಜೆಫ್ ಬಾಯ್ಕಾಟ್‌ನನ್ನು ದಾಳಿಗೆ ಅಣಿಗೊಳಿಸಿದ ಇಂಗ್ಲೆಂಡ್ ನಾಯಕ ಮೈಕ್ ಸ್ಮಿತ್. ಜಿಪುಣತನದಿಂದ ಬೌಲ್ ಮಾಡಿದ ಬಾಯ್ಕಾಟ್, ದ. ಆಫ್ರಿಕದ ಮೊದಲ ಕ್ರಮಾಂಕದ ದಾಂಡಿಗರು ಆತನ ೧೯ ಓವರ್‌ಗಳಲ್ಲಿ ೨೫ ಓಟಗಳನ್ನು ಕಿತ್ತುಕೊಳ್ಳಲು ತಿಣುಕಾಡಬೇಕಾಯಿತು. ಆದರೆ ಆತನ ಉಳಿದ ಏಳು ಓವರ್‌ಗಳಲ್ಲಿ ಕೊನೆಯ ಕ್ರಮಾಂಕದ ದಾಂಡಿಗರು ೩೫ ಓಟಗಳನ್ನು ಬಾರಿಸಿದರು.

ಪ್ರಚಂಡ ವೇಗಕ್ಕೆ ಹೆಸರಾದ ಡೇವಿಡ್ ಲಾರ್ಟರ್ (೭೦ಕ್ಕೆ ೫ ವಿಕೆಟ್) ಮತ್ತು ಜಾನ್ ಸ್ನೋ (೮೩ಕ್ಕೆ ೩ ವಿಕೆಟ್) ಅವರ ದಾಳಿ ಯನ್ನು ಎಡ್ಡೀ ಬಾರ್ಲೊ (೭೬), ಅಲಿ ಬಾಚರ್ (೬೭), ಗ್ರೇಮ್ ಪೊಲ್ಲಾಕ್ (೫೯) ಅವರು ಎದುರಿಸಿ ತಮ್ಮ ತಂಡವನ್ನು ಸುಸ್ಥಿತಿಯಲ್ಲಿಟ್ಟರು.

ದಕ್ಷಿಣ ಆಫ್ರಿಕ ೨೮೯ಕ್ಕೆ ಎಲ್ಲ ವಿಕೆಟ್ ಗಳನ್ನು ಕಳೆದುಕೊಂಡಿತು. ಇಂಗ್ಲೆಂಡ್ ತಾನು ಗೆಲ್ಲಬೇಕಾದರೆ ೩೧೯ ಓಟ ಗಳಿಸಬೇಕಾಯಿತು. ಆದರೆ ತಂಡದ ಮೊತ್ತ ಕೇವಲ ೧೪ ಆಗಿರುವಾಗಲೇ ನಾಲ್ಕು ಹುದ್ದರಿಗಳು ಪೆವಿಲಿಯನ್ ಸೇರಿದರು. ಇಬ್ಬರು ದಾಂಡಿಗರು ಒಂದೂ ರನ್ ಇಲ್ಲದೆ ಮರಳಿ ಬಂದರು. ೧೬ ಓಟ ಮಾಡಲು ಎರಡೂವರೆ ತಾಸು ತೆಗೆದುಕೊಂಡ ಬಾಯ್ಕಾಟ್‌ನನ್ನು ಅಥೊಲ್ ಮೆಕ್ಕಿನ್ನನ್ ಕ್ಲೀನ್ ಬೌಲ್ಡ್ ಮಾಡಿದಾಗ ದಿಬ್ಬ ಎಂದು ಭಾವಿಸಿದ್ದ ಗುರಿ ಗುಡ್ಡದೆತ್ತರಕ್ಕೆ ಬೆಳೆದು ನಿಂತಂತಾಯಿತು ಇಂಗ್ಲೆಂಡ್ ಆಟಗಾರರಿಗೆ. ತಂಡಕ್ಕೆ ನೀರೆರೆಯಬೇಕೆಂಬ ಪೀಟರ್ ಪಾರ್ಫಿಟ್ (೮೬) ಹಾಗೂ ಜಿಮ್ ಪಾರ್ಕ್ಸ್ (೪೪ ಅಜೇಯ) ಅವರ ಆಸೆ ಕೈಗೂಡಲೇ ಇಲ್ಲ. ಇನ್ನೂ ಒಂದು ದಿನ ಇರುವಂತೆಯೇ ದಕ್ಷಿಣ ಆಫ್ರಿಕ ತಂಡ ೯೪ ಓಟಗಳ ಅನಾಯಾಸ ಗೆಲುವನ್ನು ಸಾಧಿಸಿತು.

ಪೊಲ್ಲಾಕ್ ಸೋದರರಲ್ಲಿ ಹಿರಿಯವನಾದ ಪೀಟರ್ ಎರಡೂ ಇನ್ನಿಂಗ್ಸ್‌ಗಳಲ್ಲಿ ಒಟ್ಟು ೮೭ ಓಟ ನೀಡಿ ೧೦ ಹುದ್ದರಿಗಳನ್ನು ಕೆಡಪಿದ. ಗ್ರೇಮ್ ೧೮೪ ಓಟಗಳ ವೈಯಕ್ತಿಕ ಸ್ಕೋರು ಮಾಡಿದನಲ್ಲದೆ ಸ್ಲಿಪ್‌ನಲ್ಲಿ ಅದ್ಭುತವಾದ ಕ್ಯಾಚೊಂದನ್ನು ಹಿಡಿದ. ಎರಡನೆ ಇನ್ನಿಂಗ್ಸ್‌ನಲ್ಲಿ ಅತ್ಯಮೂಲ್ಯ ವಿಕೆಟ್ ಆಗಿದ್ದ ಮೈಕ್ ಸ್ಮಿತ್‌ನನ್ನು ಐದು ಎಸೆತಗಳ ಓವರ್‌ನಲ್ಲಿ ಪೆವಿಲಿಯನ್‌ಗೆ ಮರಳಿ ಕಳಿಸಿದ. ಆದ್ದರಿಂದಲೇ ಕ್ರಿಕೆಟ್ ಲೋಕದಲ್ಲಿ ಈ ಸೋದರರ ಹೆಸರು ಎಂದೆಂದಿಗೂ ಮರೆಯಲಾರದಂಥದು.

"ಟಾಮ್ ಕಾರ್ಟ್‌ರೈಟ್ ನಮ್ಮ ತಂಡ ದವರಲ್ಲಿ ಗಲಿಬಿಲಿ ಹುಟ್ಟಿಸಿದ್ದನ್ನು ಕಂಡೆ. ಉದ್ವಿಗ್ನಗೊಳ್ಳಗಾಗದೆ ನನ್ನ ಎಂದಿನ ಆಟವನ್ನು ಪ್ರದರ್ಶಿಸಲು ನಿರ್ಧರಿಸಿದೆ. ಗಾಳಿಯಲ್ಲಿ ತೇಲಿ ಬಂದು ಅನಿರೀಕ್ಷಿತವಾಗಿ ಕ್ರೀಸ್‌ನಿಂದ ಹೊರಚಿಮ್ಮುತ್ತಿದ್ದ ಆತನ ಎಸೆತವನ್ನು ರಕ್ಷಣಾತ್ಮಕವಾಗಿ ಎದುರಿಸುವುದು ಆತ್ಮಘಾತುಕವೆಂದು ನನಗನಿಸಿತು." ಮಿಂಚಿನ ಬ್ಯಾಟಿಂಗ್‌ನಿಂದ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರನಾದ ಗ್ರೇಮ್ ತನ್ನ ಶೈಲಿಯನ್ನು ಸಮರ್ಥಿಸಿಕೊಂಡ.

"ಮೊದಲ ಇನ್ನಿಂಗ್ಸ್‌ನಲ್ಲಿ ಗ್ರೇಮ್ ಹೊಡೆತಗಳ ವೈಖರಿಯ ಬಗ್ಗೆ ನನಗೆ ಅತೀವ ಹೆಮ್ಮೆ. ಆತನ ಆಟ ನನ್ನನ್ನಷ್ಟೇ ಅಲ್ಲದೆ ತಂಡದ ಎಲ್ಲರಲ್ಲೂ ಸ್ಫೂರ್ತಿಯನ್ನು ಚಿಮ್ಮಿಸಿತು," ಎಂದು ನುಡಿದು ಪೀಟರ್ ತಮ್ಮನ ಬೆನ್ನು ಚಪ್ಪರಿಸಿದ.

"ಟ್ರೆಂಟ್‌ಬ್ರಿಜ್‌ನಲ್ಲಿ ಈ ಆಟ ನಡೆದಾಗ ನಾನಿನ್ನೂ ಶಾಲಾ ವಿದ್ಯಾರ್ಥಿ. ಗ್ರೇಮ್ ಪೊಲ್ಲಾಕ್ ಅನಾವರ್ಣಗೊಳಿಸಿದ ಶತಕವನ್ನು ಅಚ್ಚರಿಯಿಂದಲೇ ವೀಕ್ಷಿಸಿದ್ದೆ. ಆತ ನನ್ನ ಆರಾಧ್ಯಮೂರ್ತಿ. ನಾನು ಕೆಲ ವರ್ಷಗಳ ಬಳಿಕ ಶಾಲಾ ಮಕ್ಕಳೊಂದಿಗೆ ದಕ್ಷಿಣ ಆಫ್ರಿಕಕ್ಕೆ ಹೋದಾಗಲೂ ಆತ ಶತಕಗಳ ಒಡೆಯನಾಗಿ ಮುಂದುವರಿದಿದ್ದ. 'ಹೀ ವಾಸ್ ಎ ರೀಯಲ್ ಮಾಸ್ಟರ್.' " ಹೀಗೆನ್ನುವಾಗ ಪ್ರಖ್ಯಾತ ಆಟಗಾರ ಡೇವಿಡ್ ಗೋವರ್‌ನ ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿತ್ತು.

ರೂಪಾಂತರ

"ಯಾವುದಕ್ಕೂ ನಾಶವೆಂಬುದಿಲ್ಲ;
ಆದರೆ, 'ರೂಪಾಂತರ' ಇದೆ."
-ಎಂದು ವಿಜ್ಞಾನ ಹೇಳುವ ಮಾತು,
ಇತ್ತೀಚೆಗೆ ನನಗೂ
ಸತ್ಯ ಎನ್ನಿಸತೊಡಗಿದೆ!
"ಕಟ್ಟಿಗೆಗಳನ್ನು ಬೆಳೆಯುವ ಕಾಡುಗಳನ್ನು
ಜನ ಕಡಿ-ಕಡಿದು ನಾಶಗೊಳಿಸುತ್ತಿದ್ದಾರೆ;
ಕಾಡುವಾಸಿಗಳಾದ ಕಾಡುಮೃಗಗಳೂ
ಈ ಮೂಲಕ ನಾಶವಾಗುತ್ತಿವೆ;
ಇದು ಸಾಲದೆಂಬಂತೆ
ಅವುಗಳಿಗೆ ಗುಂಡಿಟ್ಟು,
ಕೊಂದು, ಅವುಗಳ
ಸಂತತಿಯನ್ನೂ
ನಾಶ ಮಾಡಲಾಗುತ್ತಿದೆ"
-ಎಂದು
ಇಂದು ಪುಕಾರು ಎದ್ದಿದೆ!
ಸ್ವಾಮಿ, ನಾನು
ಯಾವುದನ್ನು ನಂಬಲಿ?
ಈ ಪುಕಾರನ್ನೇ?
ಆ ವಿಜ್ಞಾನ ಸೂತ್ರವನ್ನೇ?
ನಾನಂತೂ
"ನಾಶವೆಂಬುದಿಲ್ಲವೇ ಇಲ್ಲ;
ಬರೀ ರೂಪಾಂತರ ಇದೆ"- ಎಂಬ
ವಿಜ್ಞಾನ ಸೂತ್ರವನ್ನೇ ನಂಬುತ್ತೇನೆ.
ಏಕೆಂದರೆ,
ಕಟ್ಟಿಗೆಯ ಕಾಡು ರೂಪಾಂತರ ಹೊಂದಿ
ಇಂದು ಇಟ್ಟಿಗೆಯ ಕಾಡಾಗಿದೆ!
= ಕಾಡು ರೂಪಾಂತರ ಹೊಂದಿ
ನಾಡಾಗಿದೆ.
ಕಾಡಿನ ಎಲ್ಲ ಪಶು-ಪಕ್ಷಿ-ಕ್ರಿಮಿ-ಕೀಟಗಳೂ
ಇಂದು, ನಾಡಿನಲ್ಲಿ ರೂಪಾಂತರ ಹೊಂದಿ
ಸುಂದರ ಮಾನವ ರೂಪದಲ್ಲಿ ಬಂದಿವೆ!
ನೋಡಿ:
ಮನುಷ್ಯನ ರೂಪದ ಒಳಗೆ
ಅದೆಷ್ಟು ಹುಲಿ-ಕರಡಿ! ಚಿರತೆ!
ಆನೆ-ಸಿಂಹಗಳು!?
ಅದೆಷ್ಟು ನಾಯಿ-ನರಿ! ಗುಳ್ಳೆನರಿ!
ಗೂಬೆ! ಹಾವು! ಚೇಳು!....?
ಇತ್ಯಾದಿ... ಇತ್ಯಾದಿಗಳು?!
ಇನ್ನೂ ವಿಚಿತ್ರವೆಂದರೆ,
ಹುಲಿ-ಸಿಂಹ-ಚಿರತೆಗಳೂ
ತಮ್ಮ ಗರ್ಜನೆ ಬಿಟ್ಟು
ತಂತಿ ಮೀಟಿದಂತೆ ದನಿಸುತ್ತವೆ!
ಬುಸುಗುಟ್ಟುವ ಹಾವು-ಚೇಳುಗಳೂ
ಕೋಗಿಲೆಯನ್ನೂ ನಾಚಿಸುವಂತೆ
ಗುನುಗುನಿಸುತ್ತವೆ!!
ಇವರು ಮುಗುಳ್ನಕ್ಕು,
ಮಂದಹಾಸ ಬೀರಿದಾಗ,
ಅಲ್ಲಿ
ಮೊಸಳೆಯೊಂದು ಮಿನುಗಿ-
ಮಾಯವಾಗುತ್ತದೆ!!
ಅಬ್ಬಾ! ನಿಜಕ್ಕೂ
ಎಂಥ ಅದ್ಭುತ ರೂಪಾಂತರ!
ಅಲ್ಲವೇ ಸ್ವಾಮಿ?
ಛೆ! ಎಷ್ಟೊಂದು ಸತ್ಯ
ಆ ವಿಜ್ಞಾನ ಸೂತ್ರ!!

ಅದಕ್ಕೇ ಸ್ವಾಮಿ, ನಾನು ಹೇಳಿದ್ದು:
"ನಾನು ವಿಜ್ಞಾನ ಸೂತ್ರವನ್ನೇ
ನಂಬುತ್ತೇನೆ," ಎಂದು!

● ಇಟಗಿ ಈರಣ್ಣ

ಐದು ಮಿನಿ ಕಥೆಗಳು

ಕನ್ನಡದಲ್ಲಿ ಸಣ್ಣ ಕಥೆಗಳು ಸಮೃದ್ಧವಾಗಿಯೇ ಸಿಗುತ್ತವೆ. 'ಶ್ರೀನಿವಾಸ' ನಾಮದಿಂದ ಬರೆದ ಮಾಸ್ತಿಯವರ ಸಣ್ಣ ಕಥೆಗಳಂತೂ ಕನ್ನಡದಲ್ಲಿ ಕಥೆ ಬರೆಯುವವರಿಗೆಲ್ಲ ಮಾರ್ಗದರ್ಶಿ ಎನಿಸಿವೆ. ಭಾರತೀಯ ಭಾಷೆಗಳ ಸಾಹಿತ್ಯ ಕ್ಷೇತ್ರದಲ್ಲಿ ಮಾಸ್ತಿ ಕಥೆಗಳಿಗೊಂದು ವಿಶಿಷ್ಟ ಛಾಪು ಇದೆ.

ಇಲ್ಲಿ ತೀರ ಇತ್ತೀಚೆಗೆ ಕಥೆ ಬರೆಯಲಾರಂಭಿಸಿದ ಐದು ಜನ ಲೇಖಕ-ಲೇಖಕಿಯರ ಒಂದೊಂದು ಸಣ್ಣ ಕಥೆಯನ್ನು ಆಯ್ದುಕೊಂಡು ಮುಂದಿನ ಪುಟಗಳಲ್ಲಿ ನೀಡುತ್ತಿದ್ದೇವೆ.

ಈ ಹಿಂದೆ ದೇಶ-ವಿದೇಶಗಳ ಲಘು ಕಥೆಗಳ 'ಮೋದಕ'ವನ್ನು ನೀವೆಲ್ಲ ಆಸ್ವಾದಿಸಿದ್ದೀರಿ. ಈಗ ನಿಮಗಾಗಿ ಈ ಐದು ಮಿನಿ ಕಥೆಗಳು. ಇವೆಲ್ಲ ಅಪ್ಪಟ ಕನ್ನಡಿಗರೇ ಬರೆದ ಮಿನಿ ಕಥೆಗಳೆಂಬುದು ಹೆಮ್ಮೆಯ ವಿಷಯ.

• ಸಂಪಾದಕ

ಐದು ಮಿನಿ ಕಥೆಗಳು

❄

ಹುಟ್ಟು ಗುಣ

• ಭಾರತೀ ಕಾಸರಗೋಡು

ಕುಸುಮ ಹೆಸರಿಗೆ ತಕ್ಕ ಹಾಗೆ ಮುದ್ದಾದ ಹುಡುಗಿ. ಮಾಟವಾದ ನಿಲುವು, ಅರಳು ಕಂಗಳು. ನೀಳ ನಾಸಿಕ, ಚೆಂದುಟಿ... ಒಟ್ಟಿನಲ್ಲಿ ಲಲಿತಾಂಗಿ. 'ಸ್ತ್ರೀ ರೂಪಮೆ ರೂಪಂ ಶೃಂಗಾರಮೆ ರಸಂ' ಎಂದು ರಸಿಕ ಪಂಪ ಬಹುಶಃ ಈಕೆಯಂಥವರನ್ನೇ ಕಂಡು ಉದ್ಗರಿಸಿರಬೇಕೇನೋ!

ಕುಸುಮ ದಿನಾಲೂ ಕೆಲಸಕ್ಕೆ ಹೋಗುವಾಗ ಆ ಗುಲಾಬಿ ತೋಟದ ಮನೆಯನ್ನು ಹಾದು ಹೋಗುತ್ತಿದ್ದಳು. ವಾಸ್ತವವಾಗಿ ಅಲ್ಲಿ ಎರಡು ನಿವೇಶನಗಳಿದ್ದವು. ಒಂದರಲ್ಲಿ ಮನೆಯನ್ನು ಎಬ್ಬಿಸಿ, ಮತ್ತೊಂದನ್ನು ಕೈ ತೋಟ ಮಾಡಿಕೊಂಡಿದ್ದರು. ಅಲ್ಲಿ ಚೆಂಗುಲಾಬಿಗಳದೇ ಮೇಲುಗೈ. ಅದೆಷ್ಟು ವೈವಿಧ್ಯ, ವರ್ಣವಿನ್ಯಾಸ? ಕಡುಗೆಂಪು, ತಿಳಿಗೆಂಪು, ನಸುಹಳದಿ, ತುಸು ಹಸಿರು, ಕನಕಾಂಬರ, ಕುಂಕುಮವರ್ಣ ಅಬ್ಬಬ್ಬಬ್ಬಾ! ಆ ಸೊಬಗಿನ ರಾಶಿಗೆ ಕುಸುಮ ಬೆರಗಾಗಿ ಬಿಡುತ್ತಿದ್ದಳು. ಆ ಮನೆಯ ಮುಂದೆ ಬಂದಾಗ ನಿಧಾನಗತಿಯಲ್ಲಿ ನಡೆಯುತ್ತ ಆ ಸೌಂದರ್ಯವನ್ನು ಸವಿಯುತ್ತಾ ಹೋಗುತ್ತಿದ್ದಳು.

ಆದರೆ, ಅಲ್ಲಿ, ಸೌಂದರ್ಯೋಪಾಸಕಿ ಕುಸುಮಳ ಚೆಲುವಿಗೇ ಹೊಂಚು ಹಾಕುವ ವ್ಯಕ್ತಿ ಒಂದಿತ್ತು. ಆತನೋರ್ವ ರಸಿಕ ಮುದುಕ. ನಿವೃತ್ತ ವೈದ್ಯ ಅಂತೆ. ಬಹಳ ನಿಷ್ಣಾತರಾಗಿದ್ದಿರಬೇಕೆಂದು ಆ ಪ್ರಜ್ಞಾವಂತ ಚಲನವಲನಗಳೇ ಹೇಳುತ್ತಿದ್ದುವು. ಒಳ್ಳೆಯ ಬಿಳಿಯ ಬಣ್ಣ ಆತನ ಹಣೆಯ ನಿರಿಗೆಗಳನ್ನು ಹೆಚ್ಚು ಸ್ಪಷ್ಟವಾಗಿಸಿತ್ತು.

ಆ ಮುದುಕನದು ಬಹಳ ತೀಕ್ಷ್ಣ ನೋಟ. ಅದರಲ್ಲಿ ಹಸಿಹಸಿ ಕಾಮುಕತೆ.. ಬೆದಕಾಟ. (ತಾನು ವಸ್ತ್ರಗಳನ್ನು ಧರಿಸುವುದನ್ನೇನಾದರೂ ಮರೆತೆನೋ ಎಂದು ಕುಸುಮ ಕಳವಳಿಸುವಷ್ಟು!) ಸಾಮಾನ್ಯವಾಗಿ ಆತ ತೋಟದಲ್ಲಿ ಏನಾದರೊಂದನ್ನು ಮಾಡುತ್ತಲೇ ಇರುತ್ತಿದ್ದ. ಕುಸುಮ ಅಷ್ಟು ದೂರದಲ್ಲಿ ಬರುವುದು ಕಣ್ಣಿಗೆ ಬಿದ್ದೊಡನೆ ಮಡಿಸಿ ಮೊಣಕಾಲ ಬಳಿ ಕಟ್ಟಿದ್ದ ಲುಂಗಿಯನ್ನು ಕೆಳಗಿಳಿಸಿ ಸರಿಪಡಿಸಿಕೊಂಡು, ಇದ್ದ ಬಿದ್ದ ಒಂದೆರಡು ತಲೆಗೂದಲನ್ನು ಓರಣವಾಗಿ ನೀವಿಕೊಂಡು, ಗೇಟಿನ ಬಳಿ ಬರುತ್ತಿದ್ದ. ಗತ್ತಿನಿಂದ ಜೇಬಿಗೆ ಕೈ ಹಾಕಿ ಸಿಗರೇಟನ್ನು ತೆಗೆದು ಲಾಘವವಾಗಿ ಬಾಯಿಗಿರಿಸಿ, ಲೈಟರಿನಿಂದ ಹಚ್ಚಿ, ಆಸ್ವಾದಿಸುತ್ತ, ಜತೆಜತೆಗೆ ಕುಸುಮಳನ್ನೂ ನುಂಗುವಂತೆ ನೋಡುತ್ತಾ ನಿಲ್ಲುತ್ತಿದ್ದ... ಸಿಗರೇಟು ಸೇದುತ್ತಾ ಇರುವಾಗಲಂತೂ ಆ ಕಣ್ಣುಗಳಲ್ಲಿ ಅದೇನು ಮಾದಕತೆ!

ಕುಸುಮಗಳಿಗೆ ಮೊದಲು ಭಯವಾಯಿತು: ಆಮೇಲಾಮೇಲೆ ಅಸಹ್ಯವಾಯಿತು. ತಾನು ಆತನ ಬಗ್ಗೆ ಏನು ತಿಳಿದುಕೊಳ್ಳ ಬಹುದೆಂಬ ಹೇವವೂ ಇಲ್ಲದ ಮುದುಕನ ನಿರ್ಭೀತ ವ್ಯಕ್ತಿತ್ವವನ್ನೂ, ಚೆಂದದ ಗುಲಾಬಿಗಳನ್ನೂ ಉಪೇಕ್ಷಿಸಿ, ತನ್ನಷ್ಟಕ್ಕೆ ನಿರ್ವಿಕಾರವಾಗಿ ನಡೆಯತೊಡಗಿದಳು. 'ಈ ಧನ್ವಂತರಿ ತನ್ನ ಯೌವನ ಕಾಲದಲ್ಲಿ ತನ್ನ ಬಳಿ ಬಂದ



ಪ್ರಾಯಸ್ಥ ಹೆಣ್ಣು ಮಕ್ಕಳ ವೈದ್ಯಕೀಯ ತಪಾಸಣೆಗೆ ಸ್ಟೆಥೋಸ್ಕೋಪನ್ನು ಅದೆಷ್ಟು ಶೃಂಗಾರಪೂರ್ಣವಾಗಿ ಬಳಸಿರಬಹುದೊ.... ಆನಂದಿಸಿರಬಹುದೋ'- ಎನ್ನುವ ತುಂಟ ಆಲೋಚನೆಯೊಂದು ಅವಳಲ್ಲಿ ಸುಳಿದು ಹೋಯಿತು !

ಹೀಗಿರುವಾಗ ಆತ ಒಂದೆರಡು ವಾರಗಳು ಕಾಣಲಿಲ್ಲ. ಒಂದು ಸಂಜೆ ಕೆಲಸದ ಹುಡುಗಿ ಹೇಳಿದಳು, 'ಆ ತಾತಂಗೆ ಶಾನ ಉಸಾರಿಲ್ವಂತೆ ಕಣ್ರಕ್ಕಾ. ಪಾಪ, ಹಾಸ್ಪತ್ರೆ ತಕಾ ಓಗವ್ರಂತೆ...' ಇದಾದ ಕೆಲವು ದಿನಗಳ ಬಳಿಕ ಆತ ಮತ್ತೆ ಮನೆಯ ಬಳಿ ಕಾಣಿಸಿಕೊಂಡ. ಗುಲಾಬಿ ಗಿಡದ ಹಣ್ಣೆಲೆಗಳನ್ನು ಉದುರಿಸಿ ಬೀಳಿಸುತ್ತಿದ್ದಾತನಿಗೆ ಕುಸುಮ ಕಣ್ಣಿಗೆ ಬಿದ್ದಳು. ಅಗೋ ! ಆತನಲ್ಲಿ ಉತ್ಸಾಹವೇ ಮೂಡಿಬಿಟ್ಟಿತಲ್ಲ ! ಕಣ್ಣುಗಳಲ್ಲಂತೂ ಪೌರುಷದ ಆವಾಹನೆ; ಚೆಲುವಿನ ಉಪಾಸನೆ !

ಆತ ಮತ್ತದೇ ಎಲ್ಲ ಕ್ರಿಯೆಗಳ ಪುನರಾವರ್ತನವನ್ನು ನಡೆಸಿದ. ಆದರೆ ನಿಃಶಕ್ತಿಯ ಕಾರಣದಿಂದಲೋ ಏನೋ, ಅವೆಲ್ಲ ಬಹಳ ನಿಧಾನವಾಗಿ ಸಾಗಿದ್ದವು. ತಟ್ಟಾಡುತ್ತ ಗೇಟಿನ ಬಳಿ ಬಂದು ನಡುಗುವ ಕೈಗಳಿಂದ ಸಿಗರೇಟನ್ನು ಹೊತ್ತಿಸಿ, ತದೇಕಚಿತ್ತನಾಗಿ ಕುಸುಮಳ ಚೆಲುವನ್ನು ಹೀರತೊಡಗಿದ. 'ಈ ಹುಣಿಸೆ ಮುಪ್ಪಾದರೂ ಹುಳಿ ಮುಪ್ಪಾಗಿಲ್ಲ' ಅಂದುಕೊಂಡಳು ಕುಸುಮ.

ಸಾಯಂಕಾಲ ಕುಸುಮ ಹಿಂತಿರುಗಿ ಬರುವಾಗ ಆತನ ಮನೆಯ ಬಳಿ ಬೆಂಕಿ ಹಾಕಿದ್ದರು !.... ಜನ ಗುಂಪುಗೂಡಿದ್ದರು. ಕುಸುಮಳ ಎದೆ ಹೊಡೆದುಕೊಂಡಿತು. ಅಸಭ್ಯತೆ ಅನಿಸಬಹುದೇನೋ ಎಂದು ಅಳುಕಿದರೂ, ಅಲ್ಲೇ ನಿಂತಿದ್ದ ಟಾಕುಟೀಕಾದ ಒಬ್ಬರನ್ನು ಕೇಳಿಯೇ ಬಿಟ್ಟಳು- 'ಯಾರಿಗೇನಾಯಿತು ?' ಆತ ದುಃಖಮಿಶ್ರಿತ ಗಾಂಭೀರ್ಯದಿಂದ 'ಡಾಕ್ಟರು ತೀರಿದರು.... ನನ್ನ ಚಿಕ್ಕಪ್ಪ... ತೀರಿದರು' ಎಂದರು.

ಕಡೆಯ ಬಾರಿಗೆ ಆತನನ್ನೊಮ್ಮೆ ನೋಡೋಣವೇ ಎಂದವಳಿಗೆ ಅನಿಸಿತಾದರೂ ಮನಸ್ಸು ತಡೆಯಿತು. 'ತನ್ನನ್ನು ಕಂಡು ಆ ಶವದ ಕೈಗಳಿಗೂ ಚಲನೆ ಬಂದು, ಸಿಗರೇಟು ಹೊತ್ತಿಸಿ...' ಮುಂದೆ ಯೋಚಿಸಲೂ ಭಯಗೊಂಡ ಕುಸುಮ ತನ್ನ ಮನೆಯತ್ತ ಓಡಿಬಿಟ್ಟಳು.

ಐದು ಮಿನಿ ಕಥೆಗಳು

❄

ಆಕ್ಷೇಪಣೆ

• ಗುಬ್ಬಿ ವಿ. ಸತ್ಯನಾರಾಯಣ

ಅಂದು....

ಅವಸರದಿಂದ ಸ್ನಾನ ಮುಗಿಸಿ ಬಂದ ರಾಯರು ದೇವರಿಗೆ ಕೈ ಮುಗಿಯುತ್ತಿರುವಾಗಲೇ, ಅಡುಗೆ ಮನೆಯಲ್ಲಿ ಜಾನಕಮ್ಮನವರ ಗೊಣಗಾಟ ಪ್ರಾರಂಭವಾಗಿರುತ್ತದೆ.

"ದೇವರ ಪಟಕ್ಕೆ ಎರಡು ಹೂವಿಟ್ಟು, ದೀಪ ಹಚ್ಚುವಷ್ಟು ಪುರುಸೊತ್ತಿಲ್ಲವೆ ?"

"ಎಲ್ಲರೂ ಆಫೀಸಿಗೆ ಹತ್ತು ಗಂಟೆಗೆ ಹೋದರೆ ಇವರು ಮಾತ್ರ ಎಂಟು ಗಂಟೆಗೇ ಹೋಗಬೇಕು, ಯಾರಿಗೂ ಇಲ್ಲದ್ದು ಇವರಿಗೆ ಸ್ಪೆಷಲ್ ಟೈಂ."

"ಆಫೀಸನ್ನೇ ಇವರ ತಲೆ ಮೇಲೆ ಹೊತ್ಕೊಂಡಿರೋ ಹಾಗೆ ಒದ್ದಾಡ್ತಾರೆ. ಬೇರೆಯವರೆಲ್ಲಾ ಹತ್ತುಗಂಟೆ ಆದ್ರೂ ಮನೆಗಳನ್ನೇ ಬಿಟ್ಟಿರೋಲ್ಲ. ಅದೇನಿದೆಯೋ ಅಲ್ಲಿ ಇವರಿಗೆ ಅಂಥಾದ್ದು, ನಾ ಬೇರೆ ಕಾಣೆ."

ರಾಯರು ತಲೆ ಬಾಚಿಕೊಂಡು ಬಟ್ಟೆ ಧರಿಸುತ್ತಿರುವಂತೆಯೇ, ತಿಂಡಿ ತಟ್ಟೆ ಹಿಡಿದು ಕೋಣೆಗೆ ಬಂದ ಮಡದಿಯ ಸುಪ್ರಭಾತ ಅಲ್ಲಿಯೂ ಮುಂದುವರೆಯುತ್ತದೆ.

"ಒಂದು ಭಾನುವಾರವೇ ? ರಜಾ ದಿನವೇ ? ಅನ್ನೋ ಹಾಗಿಲ್ಲ. ಎಲ್ಲಾ ಒಂದೇ. ಎಂದೂ ರಜಾ ದಿನ ಅಂತಾ ನಿಧಾನವಾಗಿ ಏಳೋಹಾಗಿಲ್ಲ."

"ಅದೂ ಹೋಗಲಿ, ಒಂದು ಹಬ್ಬಾನೇ... ಹುಣ್ಣಿಮೇನೇ.... ಅವತ್ತೂ ಅವಸರವೇ. ಇಂಥಾ ದಿನಗಳಲ್ಲಾದರೂ ಎಲ್ಲರೊಂದಿಗೆ ಕುಳಿತು ಹಾಯಾಗಿ ಊಟ ಮಾಡಬಾರದೇ ?"

ರಾಯರು ಮರು ಮಾತಾಡದೆ ಮಡದಿ ತಂದಿತ್ತ ತಿಂಡಿ ತಿಂದು ಮುಗಿಸುತ್ತಾರೆ. ಕಾಫಿ ಬರುತ್ತದೆ. ಅದನ್ನೂ ಹೀರಿ ಆಫೀಸಿಗೆ ಹೊರಡಲು ರೆಡಿ ಎನ್ನುವ ಸೂಚನೆ ನೀಡುತ್ತಾರೆ.

ತಿಂಡಿ ಡಬ್ಬಿಯನ್ನು ಕೈ ಚೀಲದಲ್ಲಿಡುತ್ತಾ, "ಹೋಗಲಿ ಸಂಜೆ ಹೊತ್ತಾದರೂ ಬೇಗ ಬರ್ತೀರಾ ? ಅದೂ ಇಲ್ಲ. ದಿನಾಲೂ ವಿವಿಧ ಭಾರತಿಯಲ್ಲಿ 'ಛಾಯಾಗೀತ್' ಮುಗಿದ ಮೇಲೇ ಬರೋದು."

"ಬೇರೆಯವರೆಲ್ಲಾ ಐದೂವರೆಗೆ ಆಫೀಸು ಮುಗಿಸಿ ಆರಕ್ಕೆಲ್ಲಾ ಮನೇಲಿರ್ತಾರೆ."

"ಎಷ್ಟೂ ಹೇಳಿದ್ರ ತಾನೆ ಏನು ? ನೀವು ಕಿವಿ ಮೇಲೆ ಹಾಕ್ಕೊಳ್ತೀರಾ ? ನಿಮಗೆ ಏನು ಹೇಳಿದರೂ, ಬಂಡೆ ಮೇಲೆ ಮಳೆ ಸುರಿದಂತ ಆಗಿದೆ. ನಾನೊಬ್ಬು ಕೆಲಸವಿಲ್ಲದೆ ಹೊಡ್ಕೋಬೇಕು...." ಇನ್ನೂ ಏನೇನೋ ಹೇಳುತ್ತಿರುವಾಗಲವೇ ರಾಯರು ಗೇಟನ್ನು ದಾಟಿ ದೂರ ಸಾಗಿರುತ್ತಾರೆ.

ರಾತ್ರಿ ಮನೆಗೆ ಬಂದ ರಾಯರು ಊಟ ಮುಗಿಸಿ, ಫೈಲುಗಳಲ್ಲಿ ಮುಳುಗಿರುವಾಗ, ಹಾಲಿನ ಲೋಟಾ ಹಿಡಿದು ಬಂದ ಜಾನಕಮ್ಮನವರು ಗಂಡನ ತಲೆಗೂದಲಲ್ಲಿ ಕೈ ಬೆರಳಾಡಿಸುತ್ತಾ,

"ಹೀಗೆ ಬಿಡುವಿಲ್ಲದೆ ದುಡಿದರೆ ಹೇಗೆ ?

ಸ್ವಲ್ಪವಾದ್ರೂ ವಿಶ್ರಾಂತಿ ಬೇಡ್ವೆ ? ನಾಳೆ ಏನಾದ್ರೂ ಹೆಚ್ಚು ಕಮ್ಮಿ ಆದ್ರೆ ಏನು ಗತಿ ?" ಎನ್ನುತ್ತಾರೆ.

ನಸುನಗುತ್ತಾ ಹಾಲನ್ನು ಕುಡಿದ ರಾಯರು ಫೈಲುಗಳಲ್ಲಿನ ತಮ್ಮ ಟಿಪ್ಪಣಿಯನ್ನು ಮುಂದುವರೆಸುತ್ತಾರೆ.

ಇಂದು....

ವರ್ಷಗಳು ಉರುಳಿವೆ. ರಾಯರು ಕೆಲಸದಿಂದ ನಿವೃತ್ತರಾಗಿದ್ದಾರೆ. ಆದರೂ ಜಾನಕಮ್ಮನವರ ಗೊಣಗಾಟ ನಿಂತಿಲ್ಲ.

"ಏಳ್ರೀ, ಆಗ್ಲೇ ಗಂಟೆ ಎಂಟಾಯ್ತು, ಕುಂಭಕರ್ಣನಂತೆ ಸದಾ ಬಿದ್ಕೊಂಡಿರ್ತೀರಲ್ಲಾ ? ನಾಚಿಕೆಯಾಗೋಲ್ವೆ ?"


ನಿಧಾನವಾಗಿ ಎದ್ದ ರಾಯರು ಸ್ನಾನ ಮುಗಿಸಿ ಬಂದು ದೇವರ ಪೂಜೆಗೆ ಕೂರುತ್ತಾರೆ.

"ಪೂಜೆ ಮಾಡಿದ್ದು ಸಾಕು. ನಿಮ್ಮ ಭಕ್ತಿಗೆ ದೇವರು ಪ್ರತ್ಯಕ್ಷ ಆಗಿಬಿಡ್ತಾನೆ ಅಷ್ಟೆ," ಎಂದು ಗೊಣಗಾಟ ಮುಂದುವರೆಸುತ್ತಾರೆ.

ರಾಯರು ತಿಂಡಿ ತಿನ್ನುತ್ತಿರುವಾಗ,

"ಏನ್ರಿ ಯಾವಾಗ್ಲೂ ಮನೇಲೇ ಇರ್ತೀರಲ್ಲಾ ?





ಚೆಳಿಗ್ಗೆ ಇಷ್ಟಾದರೆ, ಸಂಜೆ...

ಕಾಫಿ ಜೊತೆಗೆ ಹುರಿಗಾಳನ್ನು ತಂದವರು ಪುಸ್ತಕ ಹಿಡಿದು ಕುಳಿತಿರುವ ರಾಯರನ್ನು ಕುರಿತು,

"ಯಾವಾಗ ನೋಡಿದ್ರೂ ಪೇಪರ್ರು, ಪುಸ್ತಕ ಅಂತ ಹಿಡ್ಕೊಂಡಿರ್ತೀರಲ್ಲಾ? ಕಣ್ಣು ಹಾಳಾಗೋಲ್ವೆ? ಏನಿರುತ್ತೆ ಅಂಥಾದ್ದು ಪೇಪರ್ನಲ್ಲಿ? ಓದಿ ಓದಿ ಕೂಚುಭಟ್ಟ ಆದ ಅಂತ ನೀವೂ ಆಗ್ಬೇಕಾ? ಹೇಳಿ," ಎನ್ನುತ್ತಾರೆ ಅಸಹನೆಯಿಂದ.

ಮುಂದುವರೆಯುತ್ತಾ,

"ಹುಡುಗರನ್ನು ಪಾರ್ಕಿಗೆ ಕರೆದುಕೊಂಡು ಹೋಗಿ ಬರೋಕಾಗಲ್ವೆ? ರಾಮಮಂದಿರಕ್ಕೆ ಹೋಗಿ ಪುರಾಣ, ಪ್ರವಚನ ಅಂತ ಕೇಳಿ ಬಂದ ರಾಗದ?" ಎನ್ನುತ್ತಾರೆ.

ರಾಯರು ಮಾತ್ರ ಹುರಿಗಾಳನ್ನು ಬಾಯಲ್ಲಿ ಹಾಕಿಕೊಳ್ಳುತ್ತಾ ಪುಸ್ತಕ ಓದುವುದರಲ್ಲಿ ತಲ್ಲೀನರಾಗೇ ಇರುತ್ತಾರೆ. ●

ಒಳ್ಳೆ ಗೂಬೆ ಥರಾ, ಬೇಜಾರಾಗೋಲ್ವೆ? ಎಲ್ಲಾದ್ರೂ ಪಾರ್ಟ್ ಟೈಂ ಕೆಲ್ಸ ಹುಡಿಕ್ಕೊಳ್ಳಿ."

ರಾಯರು ಮೌನವಾಗಿ ತಿಂಡಿ ಮುಗಿಸಿ ತಮ್ಮ ಕೋಣೆ ಸೇರುತ್ತಾರೆ.

ಐದು ಮಿನಿ ಕಥೆಗಳು

❄

ಯಾರ ನಂಬಿದೆ? ಯಾರ ಸೇರಿದೆ?

● ಟಿ. ಎಸ್. ಲಲಿತ

ಎತ್ತಿದ ಮಂಗಳಾರತಿಯ ತಟ್ಟೆಯನ್ನು ದೇವರ ಮನೆಯ ಹೊಸ್ತಿಲಾಚೆ ಇಟ್ಟು, "ಯಾನಿ ಕಾನಿಚ ಪಾಪಾನಿ... ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ !" ಎಂದು ಹೇಳಿಕೊಳ್ಳುತ್ತ, ಹೂವು, ಅಕ್ಷತೆಯನ್ನು ದೇವರ ಮೇಲೆ ಹಾಕಿ, ಸಾಷ್ಟಾಂಗ ನಮಸ್ಕಾರ ಮಾಡಿದ್ದರು, ಅಪ್ಪಯ್ಯ ದೀಕ್ಷಿತರು. ಹಣೆಯ ಮೇಲೆ ಎದ್ದು ಕಾಣುವ ವಿಭೂತಿ ಪಟ್ಟೆ, ಕೊರಳೊಳಗಿನ ರುದ್ರಾಕ್ಷಿ ಮಾಲೆ, ಮೈಮೇಲೆ ಕೆಂಪು ಮುಗುಟ, ಉತ್ತರೀಯ. ಆರಡಿ ಎತ್ತರದ ನಿಲುವು ದೀಕ್ಷಿತರದು. ಮುಖಭಾವ ಸ್ವಲ್ಪ ಒರಟೆನಿಸಿದರೂ ಮೃದು ಮನಸ್ಸು. ನನ್ನವರು ತನ್ನವರೆನ್ನುವ ವಾಂಛಲ್ಯ ಅವರ ಮಾತುಗಳಲ್ಲಿ ತುಂಬಿ ಬರುತ್ತಿತ್ತು. ಮಕ್ಕಳು, ಮೊಮ್ಮಕ್ಕಳೆಲ್ಲ ಮಂಗಳಾರತಿ ತೆಗೆದುಕೊಂಡು ನಮಸ್ಕಾರ ಮಾಡಿದ್ದರು. ಅಲ್ಲಿಗೆ ರುದ್ರಾಭಿಷೇಕದೊಂದಿಗೆ ಶಿವರಾತ್ರಿಯ ಜಾವದ ಪೂಜೆ ಮುಗಿದಿತ್ತು. ಅಲ್ಲಿಯವರೆಗೂ ದೀಕ್ಷಿತರು ಬೆಳಗಿನಿಂದಲೂ ಬಾಯಿಗೆ ನೀರು ಹನಿಸಿದವರಲ್ಲ. ಮಕ್ಕಳಿಗೆ ಹಿಗ್ಗು. ದಿನ ನಿತ್ಯದ ಊಟದ ಕಾಟವಿಲ್ಲದೆ, ಹುಳಿಯವಲಕ್ಕಿ, ಕೋಸಂಬರಿ, ಹೆಸರುಬೇಳೆ ಪಾಯಸವನ್ನು ಲೊಟ್ಟೆ ಹೊಡೆದು ಮುಗಿಸುತ್ತಿದ್ದರು.

ಅಗ್ನಿಹೋತ್ರಿಗಳ ವಂಶದ ಸೋಮು ದೀಕ್ಷಿತರ ಹಿರಿಯ ಮಗ ಅಪ್ಪಯ್ಯ ದೀಕ್ಷಿತರು, ಈಗಾಗಲೇ ಮಡದಿ ಸೀತಮ್ಮನವರೊಂದಿಗೆ ತಮ್ಮ ವಿವಾಹ ಜೀವನದ ೫೦ ವರ್ಷಗಳನ್ನು ದಾಟಿದ್ದರು. ಊರೂರು ಸುತ್ತುವ ಕೆಲಸದಿಂದ ನಿವೃತ್ತರಾದ ಮೇಲೆ ಸ್ವಂತ ಊರಲ್ಲೇ ವಾಸ್ತವ್ಯ. ಹೆಣ್ಣು ಮಕ್ಕಳು ಮದುವೆಯಾಗಿ ಅತ್ತೆಯ ಮನೆ ಸೇರಿಯಾಗಿತ್ತು. ಆಗ ಮಕ್ಕಳೊಂದಿಗೆ ಕಳೆಯಲು ಇಲ್ಲದಿದ್ದ ಕಾಲ ಈಗ ಮೊಮ್ಮಕ್ಕಳೊಂದಿಗೆ ಕಳೆಯುತ್ತಿತ್ತು.

ಅಂದು ಏಳುವಾಗಲೇ ಬೆನ್ನುನೋವೆಂದ ದೀಕ್ಷಿತರಿಗೆ, ಊರಿನಲ್ಲಿದ್ದ ವೈದ್ಯರ ಶುಶ್ರೂಷೆ ಸಾಲದಾಯ್ತು. ಬೆನ್ನು ನೋವೀಗ ಕಾಲಿಗೂ ಇಳಿದು ನಡೆಯುವುದೇ ಕಷ್ಟವೆನಿಸಿತ್ತು. ದೀಕ್ಷಿತರನ್ನು ಮಗ ಬಲವಂತದಿಂದ ಬೆಂಗಳೂರಿಗೆ ಕರೆದುಕೊಂಡು ಹೋಗಿ, ಸೊಂಟದ ಆಪರೇಶನ್ ಮಾಡಿಸಿದ್ದು ದೀಕ್ಷಿತರ ತಿರುಗಾಟಕ್ಕೆ ತಡೆ ತಂದಿತ್ತು. ಈಗ ಆಧಾರವಿಲ್ಲದೆ ನಿಲ್ಲಲಾಗುತ್ತಿರಲಿಲ್ಲ ಅವರಿಗೆ. ಆದರೂ ವರ್ಗವಾದ ಮಗನೊಂದಿಗೆ ದೀಕ್ಷಿತರು ಪತ್ನಿ ಸೀತಮ್ಮನೊಂದಿಗೆ ಮುಂಬಯಿಗೆ ಬರಬೇಕಾಯ್ತು. ಪರಿಚಿತ ಪರಿಸರದಿಂದ ದೂರಾಗಿ, ಭಾಷೆ ಬಾರದ ಈ ಊರಲ್ಲಿ ಇಪ್ಪತ್ನಾಲ್ಕು ಘಂಟೆಯೂ ಮಂಚದ ಮೇಲೆ ಕಳೆಯಬೇಕಾಗಿ ಬಂದುದು ದೀಕ್ಷಿತರಿಗೆ ಹಿಂಸೆಯಾಗಿತ್ತು. ಈ ಮಾನಸಿಕ ಅಸ್ವಾಸ್ಥ್ಯ ಅವರನ್ನು ಹೆಚ್ಚಾಗಿ ಕಾಡಿತ್ತು. ಮತ್ತಷ್ಟು ಬಿಗಡಾಯಿಸುತ್ತಿದ್ದ ಆರೋಗ್ಯ ಆಸ್ಪತ್ರೆಯಲ್ಲಿಯೇ ವಾರ, ಎರಡು ವಾರಗಳನ್ನು ಕಳೆಯುವಂತೆ ಮಾಡುತ್ತಿತ್ತು. ಸಂಧ್ಯಾವಂದನೆ ದೇವತಾರ್ಚನೆ ಮಾಡದೆ ಕಾಫಿ ಕುಡಿದ ದಿನವಿಲ್ಲ. ಆದರೆ ಈಗ

ಸ್ನಾನಮಾಡಲೂ ಇನ್ನೊಬ್ಬರ ಸಹಾಯಬೇಕು. ಪರಿಸ್ಥಿತಿ ಅವರು ಎಲ್ಲರ ಮೇಲೂ ಹರಿಹಾಯುವಂತೆ ಮಾಡಿತ್ತು. ಈ ಸ್ಥಿತಿಯಲ್ಲೇ ಮೂರು ವರ್ಷ ಕಳೆದಾಯ್ತು.

ಸೀತಮ್ಮ ಕಿಟಕಿಯಾಚೆ ನೋಡುತ್ತಿದ್ದರು. ಬಿಡುವಿಲ್ಲದೆ ಓಡಾಡುವ ವಾಹನಗಳು, ಕಿಕ್ಕಿರಿದ ಫುಟಪಾತ್‌ಗಳು. ಕತ್ತಲಾಗಿದ್ದರೂ ಮಗ ಮನೆಗೆ ಬಂದಿಲ್ಲ. ಹಸಿಯೋ, ಬಿಸಿಯೋ ಬೆಳಗ್ಗೆ ತಿಂದು, ತಿಂಡಿ ಡಬ್ಬಿಯನ್ನು ಬ್ರಿಫ್‌ಕೇಸಿಗೆ ಸೇರಿಸಿ, ಮನೆ ಬಿಟ್ಟರೆ, ಕಣ್ಣಪಟ್ಟಿ ಕಟ್ಟಿದ ಕುದುರೆಯಂತೆ, ಈ ಮಾನವ ಯಂತ್ರಗಳು ಸಮಯದೊಂದಿಗೆ ಸ್ಪರ್ಧೆ ಮಾಡುವುದಷ್ಟೇ ಕೆಲಸವೆ ಈ ಮಹಾನಗರದಲ್ಲಿ? ಗಂಡ, ಹೆಂಡತಿ ಇಬ್ಬರೂ ದುಡಿಯುವವರಾದರಂತೂ, ರಾತ್ರಿ ಮನೆಸೇರಿ ಉಂಡು ಮಲಗಿದರೆ ಸಾಕೆನ್ನುವಂತಿರುವಾಗ ಮಕ್ಕಳ ಪಾಠ-ಪ್ರವಚನಗಳಿಗೆಷ್ಟು ಗಮನ ಕೊಡಲು ಸಾಧ್ಯ?

ಬಾರಿಸಿದ ಕರೆಗಂಟೆ ಮಗ ಮನೆಗೆ ಬಂದುದನ್ನು ಸೂಚಿಸಿತ್ತು. "ಇದ್ಯಾಕೋ ರಾಜು ಇಷ್ಟೊತ್ತು?" ಎಂದು ಬಟ್ಟೆ ಬದಲಿಸ ಹೊರಟ ಮಗನನ್ನು ಕೇಳಿದ್ದರು ಸೀತಮ್ಮ. ಮಕ್ಕಳಾಗಲೇ ತಂದೆಗಾಗಿ ಕಾದು, ಮಲಗಿದ್ದವು. ಶಾಲೆಗೆ ತಯಾರಾಗಲು ಬೆಳಿಗ್ಗೆ ಬೇಗ ಏಳಬೇಕಾಗಿತ್ತು. ದೀಕ್ಷಿತರಿಗೆ ಊಟ ಮಾಡಿಸಿ ಬರುವಲ್ಲಿ ಬಡಿಸಿದ್ದಳು ಸೊಸೆ ಸೌಮ್ಯ. ಹುರುಳಿಕಾಯಿ ಪಲ್ಯ, ಸಾರು, "ನಮ್ಮೂರ ತರ್ಕಾರಿ ತಿಂದ್ಮೇಲ ಇದೂ ತರ್ಕಾರೀನೇ? ಅನ್ನುತ್ತೆ ೧೦-೧೫ ರೂ. ಕೊಟ್ಟರೂ ಒಂದು ರುಚೀನೇ?



ಸತ್ತಾನೆ ? ಏನಿದೆ ? ನೀರು ಚಿಮುಕಿಸಿಟ್ಟ ತರ್ಕಾರಿ ಮನೆಗೆ ಬರೋದ್ರಲ್ಲೆ ಬತ್ತಿ ಬಾಡಿರುತ್ತ." ಮಗ ಅಧಿಕಾರಿಯಾಗಿ, ಕೈತುಂಬ ಸಂಬಳ ತಂದರೂ, ಎಣಿಕೆಯ ಹಣ ಈ ಏರಿಕೆಯ ಬೆಲೆಗಳಲ್ಲಿ ಕರಗಲು ಎಷ್ಟು ಕಾಲ ಬೇಕು ?

"ಅಮ್ಮಾ, ಇದು ಬೊಂಬಾಯಿ. ನಿಮ್ಮೂರಲ್ಲ," ಎಂದ ರಾಜು. ಹೌದು ಇದು ಬೊಂಬಾಯಿ ಎನ್ನುವುದು ಪ್ರತಿಕ್ಷಣವೂ ನೆನಪಿಗೆ ಬರುತ್ತಿದೆ. ಮನೆ ಬೆಲ್ಲದಚ್ಚಿನಂತ ಅನುಕೂಲವಾಗಿ, ಮಗನ ಸಂಸಾರಕ್ಕೆ ಹೇಳಿ ಮಾಡಿಸಿದಂತಿದೆ. ತಾವಿಬ್ಬರೂ ಈ ಮನೆಗೆ ಹೆಚ್ಚೇ ಅನಿಸಿತ್ತು ಸೀತಮ್ಮನವರಿಗೆ. ಊರಿನ ವಿಶಾಲಮನೆ ಮಾರಿ ಬಂದಾಗಿತ್ತು. ಮಾಡುವ ಮಗ ಕರೆದೆಡೆಗೆ ಹೋಗಲೇಬೇಕಲ್ಲ. ತಾವಿದ್ದ ಬಹು ಮಹಡಿ ಕಟ್ಟಡದಲ್ಲಿ ಸಿಂಧಿ, ಹಿಂದಿ, ಗುಜರಾತಿ, ಮರಾಠಿ, ತಮಿಳು, ಕನ್ನಡ ಎಲ್ಲ ಭಾಷೆಯಾಡುವ ಜನರಿದ್ದು ಪುಟ್ಟ ಭಾರತವೊಂದು ಒಟ್ಟಾದಂತಿತ್ತು. ಪರಸ್ಥಳದಲ್ಲಿ ಒಂಟಿ ಎನಿಸಿದಾಗ, ನೆರೆಹೊರೆಯವರೊಂದಿಗಿನ ನಂಟು ಗಟ್ಟಿಯಾಗುತ್ತದೆ. ಭಾಷೆಯ ತೊಡಕು ಸ್ನೇಹಕ್ಕೆ ಕುಂದು ತಂದಿಲ್ಲ.

ಸಂಜೆ ಆಫೀಸಿನಲ್ಲಿ ಗೆಳೆಯ ಮೂರ್ತಿ ಸಿಕ್ಕಿದ್ದೇ ರಾಜು ಮನೆಗೆ ಬರಲು ತಡವಾಗಿತ್ತು. ಕ್ರಿಶ್ಚಿಯನ್ ಮಿಷನರಿ ಆಸ್ಪತ್ರೆಯ ಬಗೆಗೆ ಹೇಳಿ, ಅಪ್ಪನಂತಹ ರೋಗಿಗಳನ್ನು ಅಲ್ಲಿ ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಾರೆ. ನೀನೇಕೆ ನಿಮ್ಮ ತಂದೆಯನ್ನೊಮ್ಮೆ ಅಲ್ಲಿಗೆ ತೋರಿಸಬಾರದು ಎಂದಿದ್ದ. ಮನೆಯಿಂದ ೨೫ ಕಿ.ಮೀ ದೂರ. ಎಷ್ಟು ದಿನ ರಜಹಾಕಲು ಸಾಧ್ಯ ? ಸೌಮ್ಯ ಮಕ್ಕಳನ್ನು ಸುಧಾರಿಸಿ ಆಸ್ಪತ್ರೆ ಸುತ್ತಲು ಸಾಧ್ಯವೆ ? ಭಾಷೆ ಬಾರದ ಅಮ್ಮನಂತೂ ಹಿಂದಿ, ಮರಾಠಿಯಲ್ಲಿ ಬರೆದ ಹೆಸರೋದಿ, ಬಸ್ಸು ರೈಲಿನಲ್ಲಿ ಓಡಾಡುವುದು ಅಸಾಧ್ಯ ಎನಿಸಿದರೂ ಸೀತಮ್ಮನವರೆದುರು ಈ ವಿಷಯ ಮಾತಾಡಿದ್ದ. "ಏನೋ, ಇದೊಂದು ಪ್ರಯತ್ನ ಮಾಡಿ ನೋಡೋದಪ್ಪ," ಎಂದರು ಸೀತಮ್ಮ. ಮರುದಿನ ಗಂಡ, ಮಗನೊಂದಿಗೆ ಆಸ್ಪತ್ರೆಗೆ ಹೋದರು.

ವಿಶಾಲ ಕಂಪೌಂಡಿನ ಆವರಣದಲ್ಲಿ ಕ್ರಿಸ್ತನ ಶಿಲುಬೆಯ ಗುರುತು ಹೊತ್ತ ಆಸ್ಪತ್ರೆ. ಕನ್ನಡಿಯಂತೆ ಥಳಥಳಿಸುವ ನೆಲ, ಕಾಲಿಟ್ಟರೆಲ್ಲಿ ಕೊಳೆಯಾಗುವುದೋ ಎಂಬಂತಿತ್ತು. ಎದುರು ಗೋಡೆಯ ಗೂಡಿನಲ್ಲಿ, ಮಾತೆ ಮೇರಿಯ ಮಡಿಲಲ್ಲಿ ಮುಗ್ಧ ಬಾಲಕ್ರಿಸ್ತನ ವಿಗ್ರಹ. ಎಡ ಬಲಕ್ಕೆ ವೈದ್ಯರ ಕೋಣೆಗಳು. ಕೊಕ್ಕರೆ ಬಿಳುಪಿನ ಉಡಿಗೆಯ ದಾದಿಯರ ಓಡಾಟ ನಡೆದಿತ್ತು. ಪರೀಕ್ಷಿಸಿದ ವೈದ್ಯರು ಅಪ್ಪಯ್ಯನವರನ್ನು ಅಡ್ಮಿಟ್ ಮಾಡಿಸಿದರು. ಔಷಧಿ ಮಾತ್ರೆಗಳನ್ನು ಕೊಡುವುದರಿಂದ ಹಿಡಿದು, ದೀಕ್ಷಿತರ ಎಲ್ಲ ಕೆಲಸಗಳನ್ನೂ ದಾದಿಯರೇ ನೋಡಿಕೊಳ್ಳುತ್ತಿದ್ದರು. ಅವರ ಶ್ರದ್ಧೆ ಸ್ನೇಹ ಸೂಸುವ ಮಾತುಗಳು ಸೀತಮ್ಮನವರನ್ನು ಮೂಕರನ್ನಾಗಿಸಿ, ಹೊಯ್ದಾಡುತ್ತಿದ್ದ ಅವರ ಮನಸ್ಸನ್ನು ಸ್ತಿಮಿತಕ್ಕೆ ತಂದಿದ್ದವು. ದೀಕ್ಷಿತರಿಗೀಗ ಯಾವುದರ ಮೇಲೂ ನಿಯಂತ್ರಣವಿಲ್ಲ.

ಮಕ್ಕಳನ್ನು ಶಾಲೆಗೆ ಕಳಿಸಿ, ಸೌಮ್ಯ ಆಸ್ಪತ್ರೆಗೆ ಹೋಗಿ ಬಂದರೆ, ಸಂಜೆ ಸೀತಮ್ಮನವರು ಹೋಗಿ ಮರುಬೆಳಿಗ್ಗೆ ಬರುವರು. ಬಸ್ಸು ಹತ್ತಿಳಿಯುವ ಅಭ್ಯಾಸವಾಗಿತ್ತು. ಹೆಣ್ಣು ಮಕ್ಕಳು ನೆಂಟರಿಷ್ಟರು, ಬಂದು ನೋಡಿ ಹೋಗುವವರ ಗುರುತು ದೀಕ್ಷಿತರಿಗಾಗುತ್ತಿರಲಿಲ್ಲ. "ನೀವೇಕೆ ಶ್ರಮ ಪಡುತ್ತೀರಿ. ನಾವೇ ನೋಡಿಕೊಳ್ಳುತ್ತೇವೆ. ನೀವು ವಾರಕ್ಕೊಮ್ಮೆ ಆಸ್ಪತ್ರೆಗೆ ಬಂದರೂ ಸಾಕು" ಎನ್ನುತ್ತಿದ್ದರು ಸಿಸ್ಟರ್ ಮೇರಿ. ಸೌಮ್ಯಳಿಗೆ ಯಾರೇನೇ ಹೇಳಿದರೂ ತಾನೊಂದು ಬಾರಿಯಾದರೂ ಬರದಿದ್ದಲ್ಲಿ ಸಮಾಧಾನವಿಲ್ಲ. ಅನುಕೂಲಸ್ಥರ ಮನೆಯ ಒಬ್ಬಳೇ ಮಗಳಾದರೂ ಈ ಹುಡುಗಿಗೆ ಅದೆಷ್ಟು ಅಂತಃಕರಣ.

* * *

ಎಲ್ಲವೂ ಒಂದು ಹದಕ್ಕೆ ಬಂತೆಂದುಕೊಳ್ಳುವುದರಲ್ಲಿ, ರಾಜುವಿಗೆ ಬಡ್ತಿ ಸಿಕ್ಕು ಅವನನ್ನು ಕಲ್ಕತ್ತಾಕ್ಕೆ ವರ್ಗಮಾಡಲಾಗಿತ್ತು. ಹೋಗದೆ, ಮಗ ತಮಗಾಗಿ ಬಡ್ತಿ ಕಳೆದುಕೊಳ್ಳುವುದು ಸೀತಮ್ಮನವರಿಗೆ ಇಷ್ಟವಿಲ್ಲ. ತಾವಾದರೆ ಉದುರುವ ಹಣ್ಣೆಲೆಗಳು. ಮಗ ಇನ್ನೂ ಜೀವನದ ಯಶಸ್ಸಿನ ಏಣಿ ಹತ್ತುತ್ತಿರುವವನು. ತಮ್ಮಿಂದ ಅವನಿಗೇಕೆ ತೊಂದರೆ ? ಬೇಕು ಬೇಡಗಳ ಒಳತೋಟಿ ಸಾಕಷ್ಟು ಅನುಭವಿಸಿದ ಸೀತಮ್ಮ ರಾಜುವಿಗೆ ಕಲ್ಕತ್ತೆಗೆ ಹೋಗುವಂತೆ ಹೇಳಿದರು: "ನಿಮ್ಮ ತಂದೇನ ಈ ಸ್ಥಿತೀಲಿ ಎಲ್ಲೂ ಕರ್‍ಕೊಂಡು ಹೋಗಕ್ಕಾಗಲ್ಲ.

ನಾನಿಲ್ಲ ಇರ್ತೀನಿ. ಡಾಕ್ಟರ್ ನರ್ಸ್‌ಗಳೇ ಎಲ್ಲಾ ನೋಡ್ಕೋತಾರೆ." ಒಬ್ಬದ ಮಗ, ಸೊಸೆ ಕಲ್ಕತ್ತಾಕ್ಕೆ ಹೋಗಿದ್ದರು. ಆಸ್ಪತ್ರೆಗೆ ಹೊಂದಿಕೊಂಡ ಕೋಣೆಯೊಂದಕ್ಕೆ ಸೀತಮ್ಮ ವಾಸ್ತವ್ಯ ಬದಲಿಸಿದ್ದರು. ದೀಕ್ಷಿತರ ಸ್ಥಿತಿ ಕ್ಷೀಣಿಸುತ್ತಿತ್ತು.

ಒಮ್ಮೊಮ್ಮೆ ಸೀತಮ್ಮನವರಿಗೆ ಅನಿಸುತ್ತಿತ್ತು. 'ಜನರಿಂದ ಗಿಜಿಗೊಳ್ಳುವ ಈ ಊರಿನಲ್ಲಿ ತನ್ನದೆನ್ನುವ ಒಂದು ಜೀವವೂ ಇಲ್ಲ. ಜೀವನವಿಡೀ ಸಂಸಾರ ಮಕ್ಕಳೆಂದು ಹೋರಾಡುತ್ತೇವೆ. ಆದರೆ ಪರಿಸ್ಥಿತಿ ಎಂಥೆಂಥ ಸಂದರ್ಭಗಳನ್ನು ತಂದೊಡ್ಡುತ್ತದೆ. ನಾನು ಇದ್ದದ್ದೆಲ್ಲಿ, ಈಗ ಬಂದದ್ದೆಲ್ಲಿ. ಇದನ್ನೆ ತಾನೆ ನೀರು, ನೆಲದ ಋಣಾನುಬಂಧವೆನ್ನುವುದು? ತುಂಬಿದ ಸಂಸಾರ ತನ್ನದಾದರೂ, ಸಮಯ ತನ್ನನ್ನಿಂದು ಎಷ್ಟು ಒಂಟಿಯಾಗಿಸಿದೆ? ಆದರೆ ಮರುಕ್ಷಣವೇ ಸಿಸ್ಟರ್, ಆಯಾ, ಡಾಕ್ಟರ್‌ಗಳ ಪ್ರೀತಿ, ಅಂತಃಕರಣಗಳನ್ನು ಕಂಡಾಗ ಪ್ರೀತಿ, ಕಳಕಳಿಗೆ ರಕ್ತ ಸಂಬಂಧ, ಜಾತಿ ಬಂಧನ ಮುಖ್ಯವಲ್ಲ ಅನಿಸುತ್ತಿತ್ತು ಸೀತಮ್ಮನವರಿಗೆ. ಇಂಥದೇ ಜಾತಿಯಲ್ಲಿ, ಇಂಥದೇ ಮನೆಯಲ್ಲಿ ಹುಟ್ಟಿ ಬರಬೇಕೆನ್ನುವುದು ನಮ್ಮ ಕೈಯಲ್ಲಿದೆಯ? ಆದರೆ ಪರಿಸರಕ್ಕೆ, ಸಂದರ್ಭಕ್ಕೆ ಹೊಂದಿಕೊಳ್ಳುವುದಂತೂ ನಮ್ಮ ಕೈಲಿದೆಯಲ್ಲ. ನಮ್ಮ ಸುತ್ತ ಜಾತಿ ಗೋಡೆಗಳನ್ನು ಸೃಷ್ಟಿಸಿಕೊಂಡು ಉಸಿರು ಕಟ್ಟುವ ಸ್ಥಿತಿಗೆ ಸಿಲುಕಿಕೊಳ್ಳುವವರು ನಾವೇ?

ದೀಕ್ಷಿತರಿಗೀಗ ಯಾವ ಆಹಾರವೂ ಹೋಗುತ್ತಿಲ್ಲ. ಸೀತಮ್ಮನವರೂ ಉಪವಾಸ. ನೋಡುತ್ತಿದ್ದ ಸಿಸ್ಟರ್ ಮೇರಿ, "ನೀವೆಷ್ಟು ಹೊತ್ತು ಹೀಗೆ ಇರಲು ಸಾಧ್ಯ. ನಿಮ್ಮ ಅಭ್ಯಂತರವಿಲ್ಲದಿದ್ದಲ್ಲಿ ಹಾಲನ್ನಾದರೂ ತರಿಸಿಕೊಡುತ್ತೇನೆ. ತೆಗೆದುಕೊಳ್ಳುವಿರಾ?" ಎಂದರು.

"ತರಿಸಿಕೊಡಿ," ಎಂದಿಷ್ಟೇ ಹೇಳಿದ ಸೀತಮ್ಮ ಸಂಪ್ರದಾಯದ ಸೀಮೆಯಿಂದಾಚೆ ಸರಿದಿದ್ದರು. ಸಂಜೆ ದೀಕ್ಷಿತರನ್ನು ಮೇರಿ ಪೂಜಾ ಕೊಠಡಿಗೆ ಕರೆದೊಯ್ದರು. ಥಳಥಳಿಸುತ್ತಿದ್ದ ಹಿತ್ತಾಳೆಯ ಹಿಡಿಕೆಯೊಳಗಿನ ಮೋಂಬತ್ತಿಯ ಪ್ರಕಾಶವು ಏಸುಕ್ರಿಸ್ತನ ಶಾಂತ ಮುಖವನ್ನು ಬೆಳಗಿತ್ತು. ನೆಲದ ಮೇಲೆ ಹಾಸಿದ ಮಲ್ಲಿಗೆ ಬಿಳುಪಿನ ಚಾದರದ ಮೇಲೆ ದೀಕ್ಷಿತರನ್ನು ಮಲಗಿಸಲಾಗಿತ್ತು. ಅನುಭವಿಸಿದ ನೋವೆಲ್ಲಾ ದೂರಾದಂತೆ ಮುಖದಲ್ಲಿ ಪ್ರಸನ್ನತೆ ತುಂಬಿತ್ತು. ಸೀತಮ್ಮನವರನ್ನು ಪಕ್ಕದಲ್ಲಿ ಕೂಡಿಸಿಕೊಂಡು ಸಿಸ್ಟರ್, "ಅಮ್ಮ, ನಿಮಗಿಷ್ಟವಾದ ಪ್ರಾರ್ಥನೆ ಮಾಡುತ್ತಿರಿ," ಎಂದು ತಾವು ಕೈಲಿ ಹಿಡಿದಿದ್ದ ಜಪಸರ ತಿರುಗಿಸುತ್ತಾ ಕುಳಿತರು. ಹೊತ್ತು ಕಳೆಯುತ್ತ ಅಲುಗುತ್ತಿದ್ದ ದೀಕ್ಷಿತರ ತುಟಿಗಳು ತಟಸ್ಥವಾದುವು. ದೀಕ್ಷಿತರನ್ನು ಮೇರಿ ಪರೀಕ್ಷಿಸಿ ಚಾದರನ್ನು ಮುಖದ ಮೇಲೆಳೆದರು. ಸೀತಮ್ಮನವರ ಮನದಲ್ಲಿ ಮಡುಗಟ್ಟಿದ ದುಃಖ ಹೊರಹರಿದಿತ್ತು.

ಜೀವನವಿಡಿ ಶಿವನನ್ನು ಸ್ತುತಿಸಿದ, ದೀಕ್ಷಿತರ ಆತ್ಮವಿಂದು ಏಸುವಿನ ಪಾದಗಳಲ್ಲಿ ಲೀನವಾಗಿತ್ತು!

●

ಐದು ಮಿನಿ ಕಥೆಗಳು

❋

ನಿರುದ್ಯೋಗ

● ಫಣೀಂದ್ರ ಆರ್.ಆರ್.


ಎರಡೆರಡು ಪದವಿಗಳಿದ್ದರೂ ಕೆಲಸ ಸಿಗದ ಈ ಕಾಲದಲ್ಲಿ ಕೇವಲ ಬಿ.ಕಾಂ. ಮಾಡಿದರೆ ಸಿಕ್ಕೀತೆ ? ಕೂಲಿಗೂ ಕ್ಯೂ ನಿಲ್ಲುವ ಕಾಲದಲ್ಲಿ ಕೆಲಸ ಸಿಗುವುದು ಅಸಾಧ್ಯವೆನಿಸಿತ್ತು ಮಹೇಶನಿಗೆ. ಆದರೆ ಹೇಗಾದರೂ ಮಾಡಿ ದುಡ್ಡು ಸಂಪಾದಿಸಬೇಕು, ನಾಲ್ಕು ಜನರ ಕಣ್ಣಿಗೆ ಕಾಣುವಂತಾಗಬೇಕು ಎಂಬ ಹಂಬಲ ಅವನನ್ನು ಬಿಡಲಿಲ್ಲ. ಹಗಲೂ ರಾತ್ರಿಯೂ ಚಿಂತಿಸಿ ಕೆಲ ಯೋಜನೆಗಳನ್ನು ಹಾಕಿಕೊಂಡ. ಮನೆಯಲ್ಲಿದ್ದ ಹಳೇ ರಾಮಾಯಣ-ಮಹಾಭಾರತಗಳ ದೊಡ್ಡ ದೊಡ್ಡ ಗ್ರಂಥಗಳನ್ನು ಮಾರಲು ಹೊರಟ. ಆದರೆ ಕೊಳ್ಳುವವರೇ ಸಿಗಲಿಲ್ಲ. ಚಿತ್ರಗಳಲ್ಲಿ ಅವಕಾಶ ಸಿಗಬಹುದೇನೋ ಎಂದು ಕೆಲವು ನಿರ್ಮಾಪಕರ ಮನೆಗಳತ್ತ ಎಡತಾಕಿ ಮುಖ ಒಣಗಿಸಿಕೊಂಡು ಬಂದ. ಹಿನ್ನೆಲೆ ಗಾಯಕನಾಗಿ ಜೀವನ ನಡೆಸಬೇಕೆಂಬ ಆಸೆಗೆ ಅವನ ಧ್ವನಿಯೇ ಅಡ್ಡಿಯಾಯಿತು.

ಕೆಲವು ದಿವಸ ಕವಿಯ ವೇಷ ಧರಿಸಿದ. ಪ್ರಸಿದ್ಧ ಕವಿಗಳ ಒಂದೆರಡು ಸಾಲುಗಳನ್ನು ಬಳಸಿ ಕವನ ರಚಿಸಿ, ಸಂಪಾದಕರುಗಳಿಂದ 'ಬೈಗಳು ಪತ್ರ' ಪಡೆದಿದ್ದ. ಜೀವನವೇ ಬೇಸರವಾಗಿ, ಹರಿಶ್ಚಂದ್ರನಂತೆ ತನ್ನನ್ನೇ ಮಾರಿಕೊಳ್ಳಲು ಬಯಸಿದರೂ ಫಲ ಸಿಗಲಿಲ್ಲ. ಕಡೆಗೆ ಸಾಯಲು ಹೋಗಿ, ಸಾಯುವ ಮುನ್ನವೇ ಪೊಲೀಸರಿಗೆ ಸಿಕ್ಕುಬಿದ್ದು ಠಾಣೆಯ ಮೆಟ್ಟಿಲುಗಳನ್ನು ಸವೆಸಿದ್ದ.

ಅನಂತರ ಅವನಿಗೆ ಮತ್ತೆ ರಾಮಾಯಣ-ಮಹಾಭಾರತ ಗ್ರಂಥಗಳ ನೆನಪಾಗಿ ಹೊಸ ಯೋಜನೆ ಹಾಕಿದ. ಸಿನಿಮಾ ಹೀರೋಗಳಂತೆ ಬಟ್ಟೆ ಧರಿಸಿ, ಬಾಡಿಗೆ ಕಾರನ್ನು ಏರಿ, ಪಂಚತಾರಾ ಹೋಟೇಲಿಗೆ ಬಂದಿಳಿದ. ಆಳು-ಕಾಳುಗಳೊಡನೆ ಹೋಟೇಲಿನ ಯಜಮಾನ ಹಾರ್ದಿಕವಾಗಿ ಸ್ವಾಗತಿಸಿದ. ಸಾವಿರ ರೂಪಾಯಿ ನೀಡಿ ರೂಮು ಪಡೆದ ಮಹೇಶ ತಾನು ತಂದ ಗ್ರಂಥಗಳ ಗಂಟನ್ನು ಬಿಚ್ಚಿ, ಒಂದೊಂದನ್ನೆ ಓದಿದ. ಓದಿಯೇ ಓದಿದ....

ಓದಿದ್ದು ಏನು ಅರ್ಥವಾಗಲೇ ಇಲ್ಲ. ಅಲ್ಲಿನ ಆಳುಗಳಿಗೂ ಇವನ ವರ್ತನೆ ನೋಡಿ ಆಶ್ಚರ್ಯ ಹುಟ್ಟಿತು. ಮಾರನೇದಿನ ರೂಮಿಗೆ ಬೀಗ ಜಡಿದು ಗಂಟಿನೊಡನೆ ಮಹೇಶ ಹೊರಬಂದ. ಗಂಟು ಹೊರಲು ಹೋಟೇಲಿನ ಯಜಮಾನ ಆಳನ್ನು ಕಳಿಸಿದ. ಎಷ್ಟು ಭಾರ ಮಹಾಭಾರತ-ರಾಮಾಯಣ ಗ್ರಂಥಗಳು ? ತಾನೊಬ್ಬನೆಯೇ ಯಾವುದೋ ಹೆಣ ಹೊತ್ತಂತಿತ್ತು ಪಾಪ ಆಳಿಗೆ !

ಮಹೇಶನನ್ನು ಬೀಳ್ಕೊಟ್ಟು ರೂಮು ಶುಚಿ ಮಾಡಲು ಬಂದವರು ಮಾಲಕನನ್ನು ಕೂಗಿ ಕರೆದರು. ಮಹಾಭಾರತ-ರಾಮಾಯಣ ಪುಸ್ತಕಗಳೆಲ್ಲ ಅಲ್ಲೇ ಇದ್ದವು. ವರ್ಣದ ಟಿ.ವಿ., ಫ್ರಿಜರ್, ಫ್ಯಾನ್ ಮತ್ತಿತರ ವಸ್ತುಗಳು ನಾಪತ್ತೆಯಾಗಿದ್ದವು. ●



ಐದು ಮಿನಿ ಕಥೆಗಳು

ಬೆಡಗಿ

• ಕುಡಿನೋಟ ಕೃಷ್ಣಮೂರ್ತಿ

ಮಾರುಕಟ್ಟೆಗೆ ನುಗ್ಗಿ ತರಕಾರಿಗಳನ್ನು ಖರೀದಿಸಿದ್ದಾಯಿತು. ಒಂದೆರಡು ಹಣ್ಣುಗಳನ್ನೂ ಕೊಳ್ಳೋಣವೆಂದು ಹಣ್ಣಿನ ಅಂಗಡಿಯತ್ತ ನಡೆಯುತ್ತಿದ್ದಾಗಲೇ ಆ ಬೆಡಗಿ ನನ್ನ ಕಣ್ಣಿಗೆ ಬಿದ್ದಿದ್ದು. ಸೂರ್ಯನ ಸಂಧ್ಯಾಕಾಲದ ರಂಗಿಗೆ ತನ್ನ ಚೆಲುವಿನ ರಂಗನ್ನು ಸೇರಿಸಿಕೊಂಡು ಮಿನುಗುತ್ತಿದ್ದಳು. ಕಪ್ಪನೆಯ ಸುರುಳಿ ಕೂದಲು. ಹಾಲಿನ ಬಟ್ಟಲಿನಲ್ಲಿ ಅರ್ಧಮಿಂದ ಕಪ್ಪುದ್ರಾಕ್ಷಿ ಹಣ್ಣಿನಂತಹ ಕಣ್ಣುಗಳು. ಕಾಮನ ಬಿಲ್ಲಿನಾಕಾರದ ಹುಬ್ಬು. ಆಕರ್ಷಕವಾದ ನೀಳ ಮೂಗು. ಗುಲಾಬಿ ಬಣ್ಣದ ಕೆನ್ನೆ, ತುಟಿಗಳು, ಒಪ್ಪವಾದ ನೀಳ ಮೂಗು, ಗುಲಾಬಿ ಬಣ್ಣದ ಕೆನ್ನೆ, ತುಟಿಗಳು, ಒಪ್ಪವಾದ ಪುಟ್ಟ ಬಾಯಿ. ಅಲ್ಲಿ ಶಿಸ್ತಿನ ಸಿಪಾಯಿಗಳಂತೆ ನಿಂತ ಬಿಳಿ ಹಲ್ಲಿನ ಸಾಲು. ಇಡೀ ಮುಖಕ್ಕೆ ರಂಗಿನ ಕಲಶದಂತಿದ್ದ ಹಣೆಯ ನೀಲಿ ಬೊಟ್ಟು. ಉದ್ದ ಕುತ್ತಿಗೆಯ ಕೆಳಗೆ ಸೂಜಿಗಲ್ಲಿನಂತೆ ಸೆಳೆಯುವಂತಿದ್ದ ವಕ್ಷಸ್ಥಳ. ಆ ಸೌಂದರ್ಯಕ್ಕೆ ಅಣೆಕಟ್ಟೆನಂತಿದ್ದ ಬಡನಡು. ಬೇಲೂರು ಶಿಲಾಬಾಲಿಕೆಯರ ಸೌಂದರ್ಯ ಹೊತ್ತಿದ್ದ ತೋಳು, ತೊಡೆಗಳು. "ಅಬ್ಬಾ! ಬ್ರಹ್ಮನೇನಾದರೂ ಗಂಧರ್ವರಿಗಾಗಿ ಇವಳನ್ನು ಸೃಷ್ಟಿಸಿ ಮರೆತು ಭೂಲೋಕದವರ ಸಾಲಿಗೆ ಸೇರಿಸಿದನೇನೋ" ಎಂದು ಸಂಶಯ ಪಡುವಷ್ಟು ರೂಪ, ಲಾವಣ್ಯ. ಆಕೆಯ ಚೆಲುವಿಗೆ ಮನಸೋತ ನಾನು ಕಣ್ಣು ರೆಪ್ಪೆಗಳನ್ನು ಮಿಟುಕಿಸದೇ ಅಚ್ಚರಿಯಿಂದ ಕದ್ದು ಕದ್ದು ಅವಳನ್ನೇ ನೋಡುತ್ತಾ ನಿಂತು ಬಿಟ್ಟೆ.

ಆಗ ಇದ್ದಕ್ಕಿದ್ದಂತೆ ನನ್ನತ್ತ ತಿರುಗಿದ ಆಕೆ ನಾನು ನೋಡುತ್ತಿದ್ದ ಪರಿಗೆ ನನ್ನನ್ನೇ ದಿಟ್ಟಿಸಿ ನೋಡತೊಡಗಿದಳು. ನಾನು ಸಿಕ್ಕಿ ಬಿದ್ದ ಕಳ್ಳನಂತೆ ಮುಖವನ್ನು ಅತ್ತ ಇತ್ತ ತಿರುಗಿಸಿ ಮತ್ತೆ ಅವಳನ್ನು ನೋಡಿದಾಗ ಆಕೆ ನಸು ನಕ್ಕಳು. ಆ ನಗು ನೇರ ನನ್ನೆದೆಗೆ ಬಾಣದಂತೆ ನಾಟಿ ನವಿರಾದ ಸಂತೋಷ ಉಕ್ಕಿಸಿತು. ಆ ಸೆರೆಗೆ ಸಿಕ್ಕಿದ ನಾನೂ ಕಿರುನಗೆ ಚೆಲ್ಲಿದೆ. ತಕ್ಷಣ ಆಕೆ ಮುಗ್ಧನಗೆಯೊಂದಿಗೆ ಕಣ್ ಮಿಟುಕಿಸಿ ನನ್ನನ್ನು ಹತ್ತಿರ ಬರುವಂತೆ ಸನ್ನೆ ಮಾಡಿದಳು. ಇಂತಹ ಬೆಡಗಿಯ ಕರೆಯನ್ನು ನಿರಾಕರಿಸಿದರೆ ನನ್ನಂಥ ಮೂರ್ಖ ಇಡೀ ಜಗತ್ತನ್ನು ಹುಡುಕಿದರೂ ಸಿಗುವುದಿಲ್ಲವೆಂದು ಆಕೆಯ ಕೆಂಪು ಕೆನ್ನೆಯತ್ತ ದೃಷ್ಟಿನೆಡುತ್ತಾ ಹತ್ತಿರ ನಡೆದೆ. ಕಣ್ಣಿಗೆ ರಾಚುವಂತಿದ್ದ ಆಕೆಯ ಚೆಲುವಿಗೆ ದಾಸನಾಗಿ "ಏನು? ಏತಕ್ಕೆ ನನ್ನ ಕರೆದಿದ್ದು?" ಎಂದು ಕೇಳುವ ಮುನ್ನವೇ ಆಕೆ ನನ್ನ ಕೆನ್ನೆಗೆ ರಪ್ಪನೆ ಬಾರಿಸಿದ್ದಳು. ಅನಿರೀಕ್ಷಿತವಾಗಿ ನಡೆದ ಘಟನೆಯಿಂದ ಗಲಿಬಿಲಿಗೊಂಡು ಸುತ್ತ ನೋಡಿ ಈ ಶಬ್ದಕ್ಕೆ ತಿರುಗಿ ನಿಂತ ಸುತ್ತಮುತ್ತಲಿದ್ದವರೆಲ್ಲಾ ಸೇರಿ "ಏನು? ಏಕೆ ಆ ಹುಡುಗಿ ನಿನಗೆ ಹೊಡೆದಿದ್ದು?" ಎಂದು ವಿಚಾರಿಸುವ ಮುನ್ನವೇ ನನಗೆ ಮಾನ ಹೋದಂತಾಗಿತ್ತು. ನಮ್ಮತ್ತ ತಿರುಗಿ ನಿಂತ ಆಕೆಯ ತಾಯಿಗೆ, "ನೋಡಿ ನಿಮ್ಮ ಮಗಳು, ನನ್ನನ್ನು ಹತ್ತಿರ ಕರೆದು ಏನು? ಎತ್ತ! ಎಂದು

ಕೇಳುವ ಮುನ್ನವೇ ನನ್ನ ಕೆನ್ನೆಗೆ ಹೊಡೆದಿದ್ದಾಳೆ ನನ್ನ ತಪ್ಪಿಲ್ಲದಿದ್ದರೂ. ಹುಡುಗಿಯಾದುದಕ್ಕೆ ಸುಮ್ಮನಾಗಿದ್ದೇನೆ. ಮೊದಲು ಇವಳಿಗೆ ಹೆಣ್ಣಿಗೆ ಇರಬೇಕಾದ ಸಂಸ್ಕೃತಿ ಕಲಿಸಿ" ಎಂದು ಜೋರು ಧ್ವನಿಯಲ್ಲಿ ವಾದಿಸಿದೆ. ಆಕೆ ತಾನು ಆಯ್ಕೆ ಮಾಡಿದ್ದ ಬೆಂಡೆಕಾಯಿಗಳನ್ನು ಅಂಗಡಿಯವನ ರಾಶಿಗೆ ಹಾಕಿ ನನ್ನ ಕೈ ಹಿಡಿದು ಸ್ವಲ್ಪ ದೂರಕ್ಕೆ ಕರೆದುಕೊಂಡು ಹೋದಳು. "ಏನೂ ಬೇಜಾರು ಮಾಡಿಕೊಳ್ಳಬೇಡಪ್ಪ. ಅವಳು ಮಾಡಿದ ತಪ್ಪಿಗೆ ನಾನು ಕ್ಷಮಾಪಣೆ ಕೇಳುತ್ತಿದ್ದೀನಿ. ಅವಳಿಗೆ ಬುದ್ಧಿ ಮಂದ. ಸುಂದರ ರೂಪವನ್ನು ಕರುಣಿಸಿದ ದೇವರು, ಅವಳಿಗೆ ಜ್ಞಾನದ ವರ ಕೊಡುವುದನ್ನು ಮರೆತುಬಿಟ್ಟ. ತನ್ನನ್ನು ನೋಡಿದವರನ್ನು ನಗುತ್ತಾ ಕಣ್‌ಸನ್ನೆ ಮಾಡಿ ಹತ್ತಿರ ಕರೆದು ಕೆನ್ನೆಗೆ ಹೊಡೆದು ಬಿಡುತ್ತಾಳೆ. ನಿಮಗೆ ಆಕೆಯ ಮುಗ್ಧಮುಖ ನೋಡಿದಾಗಲೇ ಆಕೆಯ ಬುದ್ಧಿಮಟ್ಟ ತಿಳಿಯಲಿಲ್ಲವೇ ? ಒಂದು ಸುಂದರ ಹುಡುಗಿ ನಸುನಕ್ಕು ಕಣ್ಸನ್ನೆ ಮಾಡಿ ಹತ್ತಿರ ಕರೆದರೆ ಹಿಂದು ಮುಂದು ನೋಡದೆ ಹತ್ತಿರ ಹೋಗಿ ಬಿಡುವುದೇ ?" ಎಂದು ನನಗೆ ಛೀಮಾರಿ ಹಾಕಿದಳು. ನಾನು ಅಯ್ಯೋ ಗ್ರಹಚಾರವೇ ! ಸೌಂದರ್ಯವನ್ನು ಆರಾಧಿಸುವುದು ತಪ್ಪೇ ? ಎನ್ನುತ್ತಾ ಕೆನ್ನೆ ಸವರಿಕೊಂಡೆ. ಮತ್ತೆ ಆ ಬೆಡಗಿಯತ್ತ ನೋಡಿದಾಗ ಆಕೆ ಮೊದಲಿನಂತೆ ನಕ್ಕು ಹತ್ತಿರ ಬರುವಂತೆ ಸನ್ನೆ ಮಾಡಿ ಕರೆದಾಗ ಬೆಚ್ಚಿ ಆಕೆಯತ್ತ ತಿರುಗಿಯೂ ನೋಡದೇ ಹಣ್ಣಿನ ಅಂಗಡಿಗಳ ಸಾಲಿನತ್ತ ಹೆಜ್ಜೆ ಚುರುಕುಗೊಳಿಸಿದೆ. ●





ಎಕ್ಸ್-ರೇ ಕಣ್ಣಿನ ಮನುಷ್ಯ !

• ಗೋವಾ

೬

"ನಲವತ್ತು ಅಡಿ ಆಳದಲ್ಲಿ ನಿಮ್ಮ ಮಗನ ಶವವಿದೆ...."

ಸಾವಿರಾರು ಜನರನ್ನು ನಗೆಗಡಲಲ್ಲಿ ಮುಳುಗಿಸಬಲ್ಲ ಬ್ಯಾರೆನ್ಸ್, ಚತುರ ಮಾತುಗಾರ ಬ್ಯಾರೆನ್ಸ್, ತನ್ನದೊಂದು ಅಂಗ ಚೇಷ್ಟೆಯಿಂದ ಪ್ರೇಕ್ಷಕನನ್ನು ಕುಳಿತಲ್ಲೇ ಕುಪ್ಪಳಿಸುವ ಹಾಗೆ ಮಾಡಬಲ್ಲ ಬ್ಯಾರೆನ್ಸ್ ಅಲ್ಲಿ ತನ್ನನ್ನೇ ತಾನು ಮರೆತು ಕೂತಿದ್ದ. ಪ್ರದರ್ಶನ ಮುಗಿದದ್ದೂ ಗೊತ್ತಾಗದಂಥ ತನ್ಮಯತೆ ಆತನದು. ಆ ಎರಡು ಗಂಟೆಗಳ ಅವಧಿಯಲ್ಲಿ ಆತನಿಗೆ ಕಂಡದ್ದೊಂದೇ.... ಪೀಟರ್ ತನ್ನೊಂದಿಗೆ ಸೇರಿ ಪ್ರದರ್ಶನ ನೀಡುತ್ತಿದ್ದಾನೆ... ಹಾಸ್ಯದೊಂದಿಗೆ ಅಚ್ಚರಿ-ರೋಮಾಂಚನಗಳೂ ಸೇರಿದಂತಿದೆ....

ಪ್ರೇಕ್ಷಾಗೃಹದಲ್ಲಿನ ಗೌಜು-ಗದ್ದಲ ಕಡಿಮೆಯಾಗಿ, ದೀಪಗಳು ಒಂದೊಂದಾಗಿ ನಂದತೊಡಗಿದಾಗ ಧಿಗ್ಗನೆದ್ದ ಬ್ಯಾರೆನ್ಸ್. ಸುತ್ತ ಕಣ್ಣಾಡಿಸಿದಾಗ ವೇದಿಕೆಯಿಂದ ಇಳಿದು ಬರುತ್ತಿದ್ದ ಪೀಟರ್ ಹಾಗೂ ಆತನ ಗೆಳೆಯ ಕಂಡರು.

"ಹಲೋ ಪೀಟರ್... ಸ್ವಲ್ಪ ನಿಮ್ಮೊಂದಿಗೆ ಮಾತನಾಡಬೇಕು."

"ಹೇಳಿ, ಅದಕ್ಕೇನಂತೆ,"

"ಏನಿಲ್ಲ... ನಾನು..."

"ನೀವು ಬರ್ನಾರ್ಡ್ ಬ್ಯಾರೆನ್ಸ್. ಸುಪ್ರಸಿದ್ಧ ಹಾಸ್ಯ ನಟ. ನಿಮ್ಮ ಬಗ್ಗೆ ಕೇಳಿ ಗೊತ್ತು. ಏನು ನಿಮ್ಮ ಸಮಸ್ಯೆ?"

ಬ್ಯಾರೆನ್ಸ್ ನಕ್ಕ... "ಸಮಸ್ಯೆಯೇನಿಲ್ಲ ಬಿಡಿ. ಆದರೆ ಈಗ ನಾನು ಕೇಳುವುದನ್ನು ನೀವು ತಿರಸ್ಕ

ರಿಸಿದರೆ ಮಾತ್ರ ನಿಜಕ್ಕೂ ಸಮಸ್ಯೆಯಾಗುತ್ತದೆ."

"ಬನ್ನಿ ಮಾತನಾಡೋಣ."

★ ★ ★

ಪ್ರದರ್ಶನವೊಂದಕ್ಕೆ ೧೦೦ ಗಿಲ್ಡರ್‌ಗಳು!

ನಾಲ್ಕು ಪ್ರದರ್ಶನಗಳ ನಂತರವೂ ತನ್ನ ಕೈಯಲ್ಲಿ ಉಳಿಯಬಹುದಾದ ಹಣಕ್ಕಿಂತ ಹೆಚ್ಚು!

ಬ್ಯಾರೆನ್ಸ್‌ನ ಆಮಂತ್ರಣವನ್ನು ಹಿಂದು ಮುಂದು ನೋಡದೆ ಒಪ್ಪಿಕೊಂಡ ಪೀಟರ್.

ಒಪ್ಪಿಕೊಂಡದ್ದೇನೋ ಆಯಿತು. ಆದರೆ ಒಳಗೊಳಗೇ ಅಳುಕು ಆತನಿಗೆ. ಆರೇಳು ನೂರು ಪ್ರೇಕ್ಷಕರನ್ನು ಎದುರಿಸಬೇಕು! ಇಷ್ಟೆಲ್ಲ ದಿನ ಹೆಚ್ಚೆಂದರೆ ನೂರು-ನೂರೈವತ್ತು ಮಂದಿಗೆ ಪ್ರದರ್ಶನ ನೀಡಿ ಗೊತ್ತು.

ನೂರು ಗಿಲ್ಡರ್‌ಗಳ ಆಮಿಷ ಅಳುಕನ್ನು ಅಷ್ಟು ಮಟ್ಟಿಗೆ ಕಡಿಮೆ ಮಾಡಿತು.

ಮೊದಲ ಪ್ರದರ್ಶನದ ದಿನ....

ರಾತ್ರಿ ಎಂಟು ಘಂಟೆ. ಹೇಗ್ ಪಟ್ಟಣದ 'ಕಾಸ್‌ಲ್ಯಾಂಗ್ ಥಿಯೇಟರ್' ಹೊರಗೆ ಟಿಕೆಟ್ಟು ಸಿಗದೇ ನಿರಾಶರಾದ ಜನ ಮತ್ತೊಂದು ಶೋಗಾಗಿ ಕಾದು ನಿಂತಿದ್ದಾರೆ. ಸಾವಿರ ದಿನ್ನೂರು ಸೀಟಿನ ಆ ಥಿಯೇಟರಿನಲ್ಲಿ ಮೊದಲಿನ ಅರ್ಧಗಂಟೆ ಬ್ಯಾರೆನ್ಸ್ ಮತ್ತು ತಂಡದವರಿಂದ ಹಾಸ್ಯರಸಾಯನ. ಆಮೇಲೆ ಹತ್ತು ನಿಮಿಷದ ವಿರಾಮ. ಮುಂದೆ ಒಂದೂವರೆ ತಾಸು ಅಚ್ಚರಿಯ ಅಭ್ಯಂಜನ!

ಐದುವಾರಗಳವರೆಗೆ ಮುಂದುವರಿದ ಪ್ರದರ್ಶನಗಳು ಬ್ಯಾರೆನ್ಸ್‌ಗೆ ಹೆಸರು-ಹಣ ತಂದುಕೊಟ್ಟುವಾದರೂ ಪೀಟರ್‌ಗೆ ತೃಪ್ತಿನೀಡಲಿಲ್ಲ. ತನಗೆ ಕಂಡದ್ದನ್ನು ಕಂಡಂತೆ ಹೇಳಲಾರ. ಜನಕ್ಕೇನೋ ಮೋಸಮಾಡುತ್ತಿರುವೆನೆಂಬ ಅಪರಾಧಿ ಮನೋಭಾವ. ತಾನು ಸ್ವತಂತ್ರನಲ್ಲ-ಬ್ಯಾರೆನ್ಸ್‌ನಲ್ಲಿ ಸಂಬಳಕ್ಕಿರುವ ತೊತ್ತು ಎಂಬ ಅನಿಸಿಕೆ ಬಲವಾಯಿತು. ಗೆಳೆಯನೊಂದಿಗೆ ಚರ್ಚಿಸಿದ.

"ಒಮ್ಮೆಲೇ ಮುಖಕ್ಕೆ ಹೊಡೆದವರಂತೆ 'ಒಲ್ಲೆ' ಎಂದುಬಿಡಬೇಡ. ಬ್ಯಾರೆನ್ಸ್‌ನ ಮೂಡ್ ನೋಡಿಕೊಂಡು ನಿನ್ನ ತೊಂದರೆಯನ್ನು ತೋಡಿಕೋ," ಗೆಳೆಯ ಸಲಹೆ ನೀಡಿದ.

ಬ್ಯಾರೆನ್ಸ್ ತನ್ನ ಕ್ಯಾಂಪನ್ನು ಲಂಡನ್ ಮುಂತಾದೆಡೆ ವರ್ಗಾಯಿಸಲು ನಿಶ್ಚಯಿಸಿದ. ಪೀಟರ್‌ನನ್ನು ಅಲ್ಲಿಗೂ ಜತೆಗೂಡಲು ಕೇಳಿಕೊಂಡ.

"ಸಾರಿ ಬ್ಯಾರೆನ್ಸ್... ಇಲ್ಲಿ ನನಗೆ ಮನೆಯಿದೆ. ತಾಯಿ ಇದ್ದಾಳೆ. ಅವಳಿಗೂ ವಯಸ್ಸಾಗಿದೆ. ಹೀಗಾಗಿ ಹೇಗ್ ಬಿಟ್ಟು ದೂರ ಹೋಗಲಾರೆ. ಹೀಗೆ ಹೇಳ್ತೀನಿಂತ ದಯವಿಟ್ಟು ತಪ್ಪು ತಿಳಿದುಕೋಬಾರದು."

ಈತನ ಅಭಿಪ್ರಾಯದ ಒಳಗನ್ನು ಅರಿಯದವನೇನಲ್ಲ ಬ್ಯಾರೆನ್ಸ್. ಹೆಚ್ಚು ಒತ್ತಾಯಿಸಲಿಲ್ಲ. ಇಷ್ಟು ದಿನ ನೀಡಿದ ಸಹಕಾರಕ್ಕಾಗಿ ಕೃತಜ್ಞತೆ ಹೇಳಿ ಬೀಳ್ಕೊಂಡ.

ಪೀಟರ್‌ನ 'ಸ್ಪರ್ಶಭವಿಷ್ಯ ಪ್ರದರ್ಶನ'ಗಳು ಮತ್ತೆ ಶುರುವಾದವು. ೧೯೪೭ರ ಹೊತ್ತಿಗೆ ಲಿಂಬರ್ಗ್ ಪೊಲೀಸರು ಕೊಲೆ ಪ್ರಕರಣವೊಂದರ ಪತ್ತೆ ಕಾರ್ಯದಲ್ಲಿ ಪೀಟರ್‌ನ ನೆರವು ಪಡೆಯಲು ಯೋಚಿಸಿದರು. ಆದರೆ ತನ್ನನ್ನು ಉಪಯೋಗಿಸಿಕೊಂಡು ನಂತರ ಎಲ್ಲ ಯಶಸ್ಸನ್ನೂ ತಾವೇ ಆರೋಪಿಸಿಕೊಳ್ಳಬಹುದೆಂಬ ಗುಮಾನಿ ಪೀಟರ್‌ಗೆ. ಗೆಳೆಯನ ಸಲಹೆಯೆ ಮತ್ತೆ ಕಾಪಾಡಿತು.

ಲಿಂಬರ್ಗ್‌ನ ಕಲ್ಲಿದ್ದಲು ಗಣಿ ಕೆಲಸಗಾರ ವಾನ್ ಟಾಸ್ಸಿಂಗ್ ಎಂಬಾತ ಮನೆಗೆ ಮರುಳುತ್ತಲೇ ಕೊಲೆಗೈಯಲ್ಪಟ್ಟಿದ್ದ. ಹಾಡೇ ಹಗಲು ನಡೆದ ಈ ಪ್ರಕರಣದಲ್ಲಿ ಪಾತಕಿಯನ್ನು ಪತ್ತೆ ಹಚ್ಚಲು ಪುರಾವೆಗಳೇ ಇರಲಿಲ್ಲ. ಆದರೆ ಸ್ಪರ್ಶ ಮಾತ್ರದಿಂದ ಅಪರಾಧಿ ಯಾರೆಂದು ಹೇಳಬಲ್ಲನೆಂಬ ದೃಢ ವಿಶ್ವಾಸದೊಂದಿಗೆ ಪೀಟರ್‌ಗೆ ಪೊಲೀಸರು ಮೃತನ ಕೋಟನ್ನು ತಂದುಕೊಟ್ಟರು.

ಬಟ್ಟೆಗಳ ವಿಷಯದಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸಬೇಕು. ಯಾವುದೇ ಪ್ರಕರಣದಲ್ಲಿ ಬಟ್ಟೆಗಳು ಗುಟ್ಟು ಬಿಟ್ಟುಕೊಡಬೇಕಾದರೆ ಅವು

ಆಯಾ ಪ್ರಕರಣದಲ್ಲಿನ ವ್ಯಕ್ತಿಯ ಸಂಪರ್ಕದಲ್ಲಿ ಕನಿಷ್ಠ ೨೪ ಗಂಟೆಗಳ ಕಾಲವಾದರೂ ಇದ್ದಿರಬೇಕು: ಪ್ರಕರಣದ ನಂತರ ಒಗೆಯಲ್ಪಟ್ಟ ಇಲ್ಲವೆ ಲಾಂಡ್ರಿ ಮಾಡಲ್ಪಟ್ಟ ಬಟ್ಟೆಗಳು ಏನನ್ನೂ ತಿಳಿಸಲಾರವು; ಅವು ಮಳೆಯಲ್ಲೂ ತೋಯ್ದಿರಬಾರದು ಮುಂತಾಗಿ ಪೀಟರ್ ಹೇಳುತ್ತಿದ್ದ. "ಯಾಕೆ?" ಎಂಬ ಪ್ರಶ್ನೆಗೆ ಆತನಲ್ಲಿ ಉತ್ತರವಿರಲಿಲ್ಲವಾದರೂ ಅಂಥ ಬಟ್ಟೆಗಳಿಂದ ಫಲಿತಾಂಶ ಶೂನ್ಯವೆಂಬುದು ಪೀಟರ್‌ನ ಅನುಭವಕ್ಕೆ ಬಂದ ಮಾತಾಗಿತ್ತು. ಪೊಲೀಸು ನಾಯಿಗಳು ಎಷ್ಟೋ ಕೇಸುಗಳಲ್ಲಿ ಪತ್ತೆಕಾರ್ಯದಲ್ಲಿ ಅಯಶಸ್ವಿಯಾಗುವುದರ ಹಿಂದೆ ಇರುವ ತತ್ವವನ್ನೇ ಇದೂ ಹೋಲುತ್ತದೆ. ಕೊಲೆ ಇಲ್ಲವೆ ಇನ್ನಿತರ ಪಾತಕಗಳು ಸಂಬಂಧಿಸಿದ ಮೇಲೆ ಕೇವಲ ೨೪ ಗಂಟೆಗಳೊಳಗಾಗಿ --ಮಳೆ, ಮಂಜುಗಳು ಬೀಳದಿದ್ದ ಪಕ್ಷದಲ್ಲಿ ಮಾತ್ರ -- ವಾಸನೆಯನ್ನು ಗ್ರಹಿಸಬಲ್ಲವು ಪೊಲೀಸು ನಾಯಿಗಳು. ಆದರೆ ಇಲ್ಲಿ, ಪೀಟರ್‌ನ ವಿಷಯದಲ್ಲಿ ಹಾಗಲ್ಲ. ಅಪರಾಧ ಕೃತ್ಯ ನಡೆದು ಎಷ್ಟೇ ದಿನಗಳಾಗಿದ್ದರೂ ತತ್ಸಂಬಂಧಿ ಬಟ್ಟೆಗಳು ಹಾಗೆಯೇ ಉಳಿದಿದ್ದರೆ ಅವುಗಳನ್ನು ಸ್ಪರ್ಶಿಸಿ ಪಾತಕಿಯ ದಿಕ್ಕು-ದೆಶೆ-ಚಹರೆ ಪಟ್ಟಿಯನ್ನು ಹೇಳಿ ಬಿಡುವ ಸಾಮರ್ಥ್ಯ ಪೀಟರ್‌ನದು.

"ಕೊಲೆಗಾರ ಮಧ್ಯವಯಸ್ಸು ದಾಟಿದವ. ಪೊದೆ ಮೀಸೆಯ, ಕನ್ನಡಕಧಾರಿ. ಆತನ ಒಂದು ಕಾಲು ಕಟ್ಟಿಗೆಯದು." ಎಂದ ಪೀಟರ್, ಕೋಟನ್ನು ಮುಟ್ಟಿ.

ಪೊಲೀಸರಿಗೆ ತೃಪ್ತಿಯಾದಂತೆ ಕಾಣಲಿಲ್ಲ.

"ನಿಜ ಹೇಳು ಪೀಟರ್. ನಮ್ಮ ಇಲಾಖೆಯ ಯಾರೊಂದಿಗೆ ನಿನ್ನ ಘನಿಷ್ಠ ಪರಿಚಯವಿದೆ ಹೇಳು. ನೀನು ಹೇಳಿದಂಥ ಚಹರೆ ಪಟ್ಟಿಯ ವ್ಯಕ್ತಿ ಈಗಾಗಲೇ ನಮ್ಮ ಕಸ್ಟಡಿಯಲ್ಲಿದ್ದಾನೆ. ಬರ್ನಾರ್ಡ್ ವಾನ್ ಟಾಸಿಂಗ್. ಕೊಲೆಗೈಯಲ್ಪಟ್ಟವನ ಮಲತಂದೆ. ನೀನೇನು ಹೊಸ ವಿಷಯ ಹೇಳಿದಂತಾಯಿತು? ಯಾರು ನಿನಗೆ ಇದೆಲ್ಲವನ್ನೂ ಹೇಳಿದರು? ನಮ್ಮ ಇಲಾಖೆಯ

> **ನಾವೀನ್ಯ**
>
> ಹರವಾದ ಬೆನ್ನು
> ಆಕರ್ಷಕ ಎದೆ
> ಎಲಾಸ್ಟಿಕ್ ಸೊಂಟ
> ಕಚಗುಳಿ ಇಡುವ ಮಾಟ
> ಅಪ್ಪಿದರೆ
> ಚಳಿಗೆ ಬಲು ಹಿತ
> ಹೊಸ ಬಗೆಯ
> ಉಣ್ಣೆಯ ಕೋಟು.
>
> ● ರಮೇಶಚಂದ್ರ

ಯಾರೊಂದಿಗೆ ನೀನು ಸಂಪರ್ಕವಿಟ್ಟುಕೊಂಡಿದ್ದೀ?"

ಅವರ ಮಾತುಗಳನ್ನು ಕೇಳಿ ಪೀಟರ್ ಕೋಪಿಸಿಕೊಳ್ಳಲಿಲ್ಲ.

"ಹಾಗಾದರೆ ಈ ಕೊಲೆಯ ಉದ್ದೇಶ ನಿಮಗೆ ಗೊತ್ತೇನು?" ಎಂಬ ಪ್ರಶ್ನೆ ಎಸೆದು ಅವರನ್ನೊಮ್ಮೆ ದಿಟ್ಟಿಸಿದ. ಅವರು ತಣ್ಣಗಾದರು.

"ಈಗ ಕೇಳಿ ನಿಮಗೆ ಹೊಸ ವಿಷಯ ಹೇಳುತ್ತೇನೆ. ನಿಮ್ಮ ಕಸ್ಟಡಿಯಲ್ಲಿರುವ ಬರ್ನಾರ್ಡ್ ವಾನ್ ಟಾಸಿಂಗ್ ತನ್ನ ಮಲಮಗನ ಕೊಲೆಗೈದ್ದು ಯಾಕ ಅಂತ. ಆತನಿಗೆ ಮೃತನ ಮುದ್ದು ಹೆಂಡತಿಯ ಮೇಲೆ ಆಸೆ."

ಪೊಲೀಸರು ಗಹಗಹಿಸಿ ನಕ್ಕರು.

"ಇದು ಇಡೀ ಊರಿಗೇ ಗೊತ್ತಿರುವ ಸಂಗತಿ ಕಣಯ್ಯಾ," ಅಂದರು.

ಪೀಟರ್ ಮತ್ತೊಂದು ಪ್ರಶ್ನೆ ಎಸೆದ, "ಹಾಗಾದರೆ ಕೊಲೆಗೆ ಬಳಸಿದ ಅಸ್ತ್ರ ಎಲ್ಲಿದೆ ಗೊತ್ತೆ ನಿಮಗೆ?"

ಅವರಿಗೆ ಗೊತ್ತಿರಲಿಲ್ಲ.

"ಕೊಲೆಗೈಯಲ್ಪಟ್ಟವನ ಮನೆಯ ಮಾಳಿಗೆಯೇರಿ ನೋಡಿದ್ದೀರಾ?"

ಪೊಲೀಸರು 'ಇಲ್ಲ'ವೆಂಬಂತೆ ತಲೆಯಾಡಿಸಿದರು.

"ಅಲ್ಲಿದೆ ಹೋಗಿ."

ಮಾಳಿಗೆಯ ಮೇಲೆ, ತಡಗೋಡೆಯ ಅಡಿ

ಯಲ್ಲಿನ ಹರನಾಳಿಗೆಯಲ್ಲಿ ಒಂದು ಗನ್ನು. ಮತ್ತೆರಡು ಪಾರಿಸಿದ ಗುಂತುಗಳು ಅಡಗಿಸಿಡಲ್ಪಟ್ಟಿದ್ದವು. ಬರ್ನಾರ್ಡ್ ವಾನ್ ಟಾಸಿಂಗ್‌ನ ಬೆರಳಿನ ಗುರುತುಗಳೂ ಅವುಗಳ ಮೇಲೆ ಅಚ್ಚೊತ್ತಿದಂತಿದ್ದವು.

ಇಷ್ಟು ಪುರಾವೆ ಸಾಕಾಯಿತು ಬರ್ನಾರ್ಡ್ ಟಾಸಿಂಗ್‌ನನ್ನು ಆಜೀವ ಕಾರಾಗಾರಕ್ಕೆ ತಳ್ಳಲು.

ಪೀಟರ್ ಹೇಳಿದ್ದೆಲ್ಲ ಸರಿಯಾಗಿತ್ತು. ಆದರೆ ಆತ ಮೊದಲೇ ಅಂದುಕೊಂಡಿದ್ದಂತೆ ಪೊಲೀಸರು ಇದರ ಯಶವನ್ನು ಆತನಿಗೆ ಕಟ್ಟಲು ತಯಾರಿರಲಿಲ್ಲ. "ಇಂಥದು ಶಕ್ಯವೇ ಇಲ್ಲ" ಎಂಬುದು ಅವರ ವಾದ.

* * *

ಪೀಟರ್‌ನ ಅದ್ಭುತ ಶಕ್ತಿಯ ಕುರಿತು ರಾಟರ್‌ಡ್ಯಾಮ್‌ನ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾದವು. ಅವುಗಳನ್ನು ಓದಿ ಪ್ರಭಾವಿತರಾದ ಅನೇಕರು ದೇಶವಿದೇಶಗಳಿಂದ ಪೀಟರ್‌ನನ್ನು ಭೇಟಿಯಾಗಲು ಅವಕಾಶ ಕೋರಿ ಪತ್ರ ಬರೆದರು. ಅಂಥ ಪತ್ರಗಳನ್ನು ಸ್ಪರ್ಶಿಸಿಯೇ ಆಯಾ ವ್ಯಕ್ತಿಯ ಸಮಸ್ಯೆಯ ಸ್ಥೂಲ ಕಲ್ಪನೆ ಮಾಡಿಕೊಂಡ ಪೀಟರ್ ಅವರಿಗೆಲ್ಲ ಇಂಥಿಂಥ ದಿನ ಬರಲು ಬರೆದ.

ಆದರೆ ಕ್ಯಾಪ್ಟನ್ ಫೋಕನ್ ಎಂಬಾತ ನೇರವಾಗಿ ಪೀಟರ್‌ನ ಮನೆಗೇ ಬಂದಿಳಿದ.

"ನನ್ನ ಮಗ ಈಗ ಕೆಲವು ದಿನಗಳ ಹಿಂದೆ ನನ್ನೊಂದಿಗೆ ಹಡಗಿನಲ್ಲಿ ಹೊರಟಿದ್ದ. ಹುಡುಗುಬುದ್ಧಿ. ಹೇಳಿದರೂ ಕೇಳಲಿಲ್ಲ. ಆಯತಪ್ಪಿ ನೀರೊಳಗೆ ಬಿದ್ದು ಮುಳುಗಿಬಿಟ್ಟ. ಕೂಡಲೇ ಈಜುಗಾರರು ನೀರಿಗೆ ಧುಮುಕಿ ಆಳಕ್ಕಿಳಿದು ಜಾಲಾಡಿದರು. ಪ್ರಯೋಜನವಾಗಲಿಲ್ಲ. ಆತನ ಕುರಿತು, ಕೊನೆಗೆ ಆತನ ಶವದ ಕುರಿತಾದರೂ ನನಗೆ ದಯವಿಟ್ಟು ಹೇಳಿ. ಶವ ಸಿಕ್ಕರೆ ಅಂತಿಮ ಸಂಸ್ಕಾರ ನಡೆಸಿ ದುಃಖದ ಹೊರೆಯಿಂದ ಮುಕ್ತನಾಗಿ ನಿಶ್ಚಿಂತನಾಗುತ್ತೇನೆ." - ಕ್ಯಾಪ್ಟನ್ ಗೋಳಿಟ್ಟ.

"ಆತನಿಗೆ ಸಂಬಂಧಿಸಿದ ಯಾವುದಾದರೂ ವಸ್ತುವನ್ನು ತಂದಿದ್ದೀರೇನು?" ಪೀಟರ್‌ನ ಪ್ರಶ್ನೆಗೆ ಕ್ಯಾಪ್ಟನ್ನನ ಮೌನವೇ ಉತ್ತರವಾಯಿತು. "ಏನಾದರೂ ವಸ್ತುವೊಂದನ್ನು ತನ್ನಿ. ಆತನ ವಾಚು, ಪೆನ್ನು, ಡೈರಿ... ಅಂದರೆ ಮಾತ್ರ ಏನಾದರೂ ಹೇಳಿಯೇನು..." ಎಂದ ಪೀಟರ್.

ಮರುದಿನ ಕ್ಯಾಪ್ಟನ್ ಫೋಕನ್ ಮತ್ತೆ ಹಾಜರಾದ. ಜತೆಗೆ ಒಂದು ಕಿಟ್ ಇತ್ತು. ಅದನ್ನು ಪೀಟರ್ ಎದುರು ಬಿಚ್ಚಿಟ್ಟ. ಒಂದು ಶರ್ಟು. ಒಂದು ನೆಕ್‌ಟೈ ಮತ್ತು ಒಂದು ಸಿಗಾರ್ ಪೈಪು....

ಪೀಟರ್ ಅವನ್ನೆಲ್ಲ ಮುಟ್ಟಿ ಮುಟ್ಟಿ, ಮುಟ್ಟಿ ನೋಡಿದ. ಶರ್ಟು-ಟೈಗಳು ಏನೂ ಹೇಳಲಿಲ್ಲ. ಪೈಪು ಮಾತ್ರ ಸ್ವಲ್ಪ ಮಟ್ಟಿಗೆ ಸಹಕರಿಸಿತು.

"ನಿಮ್ಮ ಮಗನ ಶವ..."

"ಎಲ್ಲಿದೆ?"

"ಕೆಸರಿನಲ್ಲಿ ಹೂತುಕೊಂಡಿದೆ.... ಆದರೆ ನಿರ್ದಿಷ್ಟ ಜಾಗ ಮಾತ್ರ ಗೊತ್ತಾಗುತ್ತಿಲ್ಲ..."

"ಹಾಗಾದರೆ ನಾವಿಬ್ಬರೂ ರಾಟರ್‌ಡ್ಯಾಮ್ ಬಂದರಿಗೆ ಹೋಗೋಣ. ಹಡಗಿನಲ್ಲಿ ಆ ಜಾಗವನ್ನೆಲ್ಲ ಸುತ್ತೋಣ."

"ಅಷ್ಟಾದರೆ ನಿರ್ದಿಷ್ಟ ಜಾಗ ಸಿಕ್ಕಂತೆಯೆ. ಆದರೆ ಇದರಲ್ಲಿ ಒಂದು ತೊಂದರೆಯಿದೆಯಲ್ಲ...."

"ಏನು ಹೇಳಿ ಪೀಟರ್.... ಎಂಥ ತೊಂದರೆಯಿದ್ದರೂ ಪರಿಹರಿಸಬಲ್ಲೆ..."

"ಏನಿಲ್ಲ.... ಇದು ಪೊಲೀಸು ಕೇಸು. ರಾಟರ್‌ಡ್ಯಾಮ್ ರಿವರ್ ಪೊಲೀಸರ ಅನುಮತಿಯಿಲ್ಲದೆ ನಾನು ಆ ಜಾಗದಲ್ಲಿ ಬರುವಂತಿಲ್ಲ. ಒಂದು ವೇಳೆ ಅವರು ನನ್ನ ನೆರವು ಕೇಳಿದರೆ ಖಂಡಿತ ಸಹಕರಿಸುತ್ತೇನೆ."

ಕ್ಯಾಪ್ಟನ್ ಫೋಕನ್ ರಾಟರ್‌ಡ್ಯಾಮ್ ರಿವರ್ ಪೊಲೀಸರನ್ನು ಒಪ್ಪಿಸಿದ. ಅವರಿಗೂ ಇದೊಂದು ಸವಾಲಾಗೇ ಪರಿಣಮಿಸಿತ್ತಲ್ಲ.... ಹೇಗಾದರೂ ಸರಿ ಶವ ಸಿಕ್ಕರೆ ಸಾಕಾಗಿತ್ತು.

ಮರುದಿನ ಪೀಟರ್ ಬೆಳಗಿನ ಹೊತ್ತಿನಲ್ಲೇ

"ಆವೊತ್ತು ನಿಮ್ಮ ಮಗನನ್ನು ಹತ್ತಿಸಿಕೊಂಡು ಸುತ್ತಾಡಿವಲ್ಲಲ್ಲ ಹಡಗಿನಲ್ಲಿ ನನ್ನನ್ನೂ ಕರೆದೊಯ್ಯಿರಿ ಕ್ಯಾಪ್ಟನ್. ಖಂಡಿತ ಜಾಗ ಪತ್ತೆಹಚ್ಚಬಲ್ಲೆ."

ಹಡಗು ಸುತ್ತಾಡಿತು. ಪೀಟರ್ ಮುಖ ಅರಳಿತು. ಒಂದೆಡೆ ಆತ ನೀರಿನೆಡೆ ಕೈ ಮಾಡಿ ಹೇಳಿದ - "ಇಲ್ಲಿ ನಲಪತ್ತು ಅಡಿ ಆಳದಲ್ಲಿ - ಇಪ್ಪತ್ತೆರಡು ಅಡಿ ಬಲಕ್ಕೆ ಕೆಸರಿನಲ್ಲಿ ಶವ ಹೂತುಕೊಂಡಿದೆ. ಹೂಳು ತೆಗೆದು ಅದನ್ನು ಹೊರಕ್ಕೆ ಎತ್ತಬೇಕು." ಆತನ ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತಿತ್ತು ಛಿದ್ರವಿಚ್ಛಿದ್ರ ದೇಹ. "ಪಾಪ, ಜಲಚರಗಳೆಲ್ಲ ಕುಕ್ಕಿ ಮುಕ್ಕಿವೆ," ಎಂದ.

ಪೊಲೀಸರು ಒಂದಿಬ್ಬರು ಮುಳುಗು ಹಾಕುವವರನ್ನು ಕರೆಸಿದರು. ಪೀಟರ್ ಹೇಳಿದ ಜಾಗದಲ್ಲಿ ನಲವತ್ತು ಅಡಿ ಆಳದಲ್ಲಿ ಇಪ್ಪತ್ತು ಅಡಿ ಬಲಕ್ಕೆ ಈಜಿದ ಮುಳುಗುವವರು ಹೂಳೆತ್ತಿದಾಗ ಆ ಎಂದು ಬಾಯಿ ತೆಗೆದ ಶವ ಅಣಕಿಸಿತು.

ಈಗ ಪೊಲೀಸರಿಗೆ ಪೀಟರ್‌ನ 'ದಿವ್ಯದೃಷ್ಟಿ'ಯನ್ನು ಮನ್ನಿಸದೇ ವಿಧಿ ಇರಲಿಲ್ಲ. "ದಯವಿಟ್ಟು ನಾವು ಕರೆದಾಗ ಬಂದು ನಿಗೂಢಗಳನ್ನು ಒಡೆಯಲು ಮನಸ್ಸು ಮಾಡಿ," ಎಂದು ಕೈ ಮುಗಿದು ಕೇಳಿಕೊಂಡರು.


ಬೆಲ್ಜಿಯಂನಿಂದ ಕರೆ ಬಂತು. ಆ್ಯಂಟ್ವರ್ಪ್ ಸಮೀಪದ ಬೋರ್ಗರ್‌ಹೌಟ್ ಪೊಲೀಸರು ಪಾದ್ರಿಯೊಬ್ಬನ ಕೊಲೆ ಪ್ರಕರಣದಲ್ಲಿ ಪೀಟರ್‌ನ ನೆರವು ಯಾಚಿಸಿದ್ದರು.

೧೯೪೨ರ ಬೇಸಿಗೆಯ ದಿನಗಳವು. ಬೋರ್ಗರ್‌ಹೌಟ್ ಕೆಥೋಲಿಕ್ ಚರ್ಚ್ ಆವರಣದ ಮನೆಯಿಂದ ಕೇಳಿಬಂದ ಚೀತ್ಕಾರಗಳು ಸುತ್ತಲಿನ ಜನರನ್ನು ಗಾಬರಿಗೀಡುಮಾಡಿದ್ದವು. ಬಂದು ನೋಡಿದರೆ ಪಾದ್ರಿಯ ಮನೆಯಾಳು -೨೬ ವರ್ಷದ ಮುದುಕಿ - -ಜೊಆನಾ ಗ್ರೌಮನ್ ಕುರ್ಚಿಗೆ ಕಟ್ಟಲ್ಪಟ್ಟಿದ್ದಾಳೆ... ತುಸು ದೂರದಲ್ಲೇ ಫಾದರ್ ವ್ಲಿಂಟ್ಸ್‌ರ ಶವ..... ಕೈಗೆ ಸಿಕ್ಕ ಭಾರವಾದ ವಸ್ತುವೊಂದರಿಂದ ಫಾದರ್‌ನ ತಲೆ ಚಚ್ಚಿ ಕೊಲ್ಲಲಾಗಿತ್ತು....

ಬಂದ ಜನರೆದುರು ಜೊಆನಾ ಕೊಲೆ ನಡೆದ ಪ್ರಸಂಗವನ್ನು ಯಥಾವತ್ತಾಗಿ ವಿವರಿಸಿದಳು. "ಇಬ್ಬರು ಥಾಂಡಿಗರು ಇಂದು ಬೆಳಗಿನ ಜಾವ ನುಗ್ಗಿ ಬಂದರು. ನಾನು ಹಾಲು-ಹೈನು ಅಂತ ಹಿತ್ತಲಲ್ಲಿದ್ದೆ. ಆ ಇಬ್ಬರೂ ಹಣಕ್ಕಾಗಿ ಫಾದರನ್ನು ಪೀಡಿಸತೊಡಗಿದರು. ಮಾತಿಗೆ ಮಾತು ಬೆಳೆದು ಮೂವರ ಸ್ವರವೂ ತಾರಕಕ್ಕೇರಿದಾಗ ನಾನು ಓಡಿ ಬಂದೆ. ನೋಡಿದರೆ ಆ ಇಬ್ಬರೂ ಫಾದರನ್ನು ನೆಲಕ್ಕೆ ಕೆಡವಿ ಕಬ್ಬಿಣದ ಸಲಾಕೆಯಿಂದ ತಲೆಹೊಡೆದು ಕೊಂದರು. ಗಾಬರಿಯಿಂದ ಅರಚಿಕೊಂಡ ನನ್ನನ್ನು ಈ ಸ್ಥಿತಿಗೆ ತಂದಿಟ್ಟು ಸಿಕ್ಕಷ್ಟು ಹಣ ದೋಚಿಕೊಂಡು ಓಡಿ ಹೋದರು..."

ಜನ ನಂಬಿದರೋ ಇಲ್ಲವೋ, ಪೊಲೀಸರಿಗೆ ಮಾತ್ರ ಸುದ್ದಿ ತಲ್ಪಿಸಿದರು. ಆಕೆ ಅದೇ ಕಥೆಯನ್ನು ಪುನರಾವರ್ತಿಸಿದಳು. ಫಾದರನ್ನು ಕೊಂದವರು ಎಂದು ಇಬ್ಬರ ಚೆಹರೆ ಪಟ್ಟಿಯನ್ನು ಹೇಳಿದಳು. ಹೆಸರು ಗೊತ್ತಿಲ್ಲವೆಂದೂ ಸೇರಿಸಿದಳು.

ಅರೆನಂಬಿಕೆಯಿಂದಲೇ, ಆಕೆ ಹೇಳಿದ ಚೆಹರೆಯ ಇಬ್ಬರನ್ನು ಬಂಧಿಸಿ ತನಿಖೆಗೆ ತೊಡಗಿದ ಪೊಲೀಸರಿಗೆ ಬಂಧಿತರಿಬ್ಬರೂ ನಿರಪರಾಧಿಗಳೆಂಬುದು ಮನದಟ್ಟಾಯಿತು.



"ರಾಜಕಾರಣಿ'ಗಳ ರಕ್ತ ಹೀರಬೇಡ. ಅವರಲ್ಲಿರುವ ಭಿನ್ನಮತ, ಭ್ರಷ್ಟಾಚಾರ ನಮಗೂ ಬಂದೀತು...."

ಆದರೆ ಅಪರಾಧಿ ಸಿಗುವವರೆಗೂ ಆವರಿಬ್ಬರನ್ನೂ ಕಸ್ಟಡಿಯಲ್ಲಿಟ್ಟುಕೊಳ್ಳಲೇಬೇಕಾಗಿತ್ತು.

"ಹಾಗಾದರೆ ಅಪರಾಧಿ ಯಾರು?"

"ಇದನ್ನು ನಿಖರವಾಗಿ ಹೇಳಬಲ್ಲಾತ ಪೀಟರ್ ಹುರ್‌ಕೋಸ್ ಮಾತ್ರ," ಎಂಬುದು ಪೊಲೀಸುವಲಯದ ಒಮ್ಮತದ ಅಭಿಪ್ರಾಯ. ಆತನಿಗೆ ಕರೆಹೋಯಿತು.

ಮೊದಲು ಆತ ಪ್ರಕರಣದ ಕುರಿತು ವಿವರ ಪಡೆದ. ಕಸ್ಟಡಿಯಲ್ಲಿದ್ದವರನ್ನೂ ಕಂಡ. ನಂತರ ಚರ್ಚ್ ಆವರಣದ ಮನೆಗೆ ಹೊರಟ.

ಇನ್ನೂ ಹೊಸ್ತಿಲು ಮೆಟ್ಟುತ್ತಿದ್ದ ಹಾಗೆಯೇ ಪೀಟರ್‌ಗೆ ಏನೇನೋ ಸಂಕೇತಗಳು ಬರತೊಡಗಿದವು. "ಪಾದ್ರಿಯನ್ನು ಕೊಂದವರು ಇಬ್ಬರು. ಆದರೆ ನೀವು ಬಂಧಿಸಿಟ್ಟಿರುವ ಆ ಧಾಂಡಿಗರಂತೂ ಖಂಡಿತ ಅಲ್ಲ. ಈ ಕೊಲೆ ಹಣಕ್ಕಾಗಿ ನಡೆದಿದೆ. ಪಾದ್ರಿ ಕೊಡಲೊಪ್ಪಿದುದಕ್ಕಿಂತ ಹೆಚ್ಚಿನ ಹಣಕ್ಕಾಗಿ...."

ಜೊಆನಾ ಗ್ರೌಮನ್ ಬಾಯಿ ಬಡಕೊಂಡು ಅಳತೊಡಗಿದಳು.

"ಏ ಮುದುಕಿ... ಮಾಡೋದೆಲ್ಲ ಮಾಡಿಬಿಟ್ಟು ಏನೂ ಅರಿಯದ ಮಳ್ಳಿ ಹಾಗೆ ಯಾಕಳ್ತಿದೀಯಾ? ಸ್ವಲ್ಪ ಸುಮ್ನಿರು, ನಾನು ಇನ್ನೊಬ್ಬ ಅಪರಾಧಿ ಯಾರು ಅಂತ ಹುಡುಕ್ತಿದೀನಿ..."

ಪೊಲೀಸು ಅಧಿಕಾರಿಗಳು ಮುಖ ಮುಖ ನೋಡಿಕೊಂಡರು. ಮುದುಕಿ ಈಗ ನಿಜಕ್ಕೂ ಗಾಬರಿಗೊಂಡಳು.

"ಅಂದ್ರೆ... ಈ ಮುದುಕಿ..." ಅಧಿಕಾರಿಯೊಬ್ಬ ವಿಸ್ಮಯ ವ್ಯಕ್ತಪಡಿಸಿದ.

"ಹೌದು, ಇಬ್ಬರಲ್ಲೊಬ್ಬ ಅಪರಾಧಿ ಈ ಮುದುಕಿ," ಎನ್ನುತ್ತ ಪೀಟರ್ ಅಲ್ಲೆಲ್ಲ ಸುತ್ತಿ ಒಂದೊಂದೇ ವಸ್ತುವನ್ನು ಸ್ಪರ್ಶಿಸತೊಡಗಿದ. ಮಫ್ಲರ್ ಒಂದು ಮಾತಾಡಿತು. ಪೀಟರ್ ಹೇಳತೊಡಗಿದ.

"ಕೊಲೆಯಾದ ಫಾದರ್ ವ್ರಿಂಟ್ಸ್‌ಗೆ ಸಮೀಪ ಸಂಬಂಧಿ ಅವಿವಾಹಿತ ಶ್ರೀಮಂತನೊಬ್ಬನಿಂದ ಹತ್ತಾರು ಲಕ್ಷ ಬೆಲೆಬಾಳುವ ಚಿನ್ನ ಮತ್ತು ಎಣಿಸಲಾಗದಷ್ಟು ಹಣ ಬಕ್ಷೀಸಾಗಿ ಬಂತು."

"ಹೌದು. ಇದು ಬೋರ್ಗರ್ ಹೌಟ್‌ನವರಿಗೆಲ್ಲ ಗೊತ್ತಿರುವ ವಿದ್ಯಮಾನ," ಎಂದ ಪೊಲೀಸು ಅಧಿಕಾರಿಯೊಬ್ಬ.

"ಆದರಲ್ಲಿ ಕಾಲು ಭಾಗದಷ್ಟು ಚಿನ್ನ-ಹಣ ತನ್ನ ಈ ನಂಬಿಗಸ್ಥ ಮುದುಕಿಗೆ ಸೇರಬೇಕೆಂದು ಫಾದರ್ ವ್ರಿಂಟ್ಸ್ ಉಯಿಲು ಬರೆದಿಟ್ಟ. ಆದರೆ ಈ ವಿಷಯವನ್ನು ಮುದುಕಿಗೆ ಹೇಳಿ ತಪ್ಪು ಮಾಡಿದ. 'ಐವತ್ತು ವರ್ಷಗಳಿಂದ ನಿಮ್ಮಲ್ಲಿ ನಿಷ್ಠೆಯಿಂದ ದುಡಿಯುತ್ತಿದ್ದೇನೆ. ನಿಮಗೆ ಬಕ್ಷೀಸಾಗಿ ಬಂದದ್ದರಲ್ಲಿ ಅರ್ಧದಷ್ಟಾದರೂ ನನಗೆ ಸೇರಬೇಕು' ಎಂದು ದುಂಬಾಲು ಬಿದ್ದಳು ಈ ಮುದುಕಿ..."

"ಇಲ್ಲಿಲ್ಲ.... ನನ್ನ ಒಡೆಯನನ್ನು ಹಾಗೆಲ್ಲ ಪೀಡಿಸುವುದೆಂದರೇನು? ಏಸು ಪ್ರಭು ಮೆಚ್ಚುತ್ತಾನೆಯೆ?" ಮುದುಕಿ ಬಡಬಡಿಸಿದಳು.

"ಏಯ್ ಹಣಾಹದ್ದೇ.... ಸ್ವಲ್ಪ ತೆಪ್ಪಗಿರು. ನನಗೇನು ನಿನ್ನ ಮೇಲೆ ದ್ವೇಷವೇ? ನಾನೇನು ಕಲ್ಪಿಸಿಕೊಂಡು ಹೇಳುತ್ತಿದ್ದೇನೆಯೆ? ಈ ಮಫ್ಲರ್, ಫಾದರ್ ವ್ರಿಂಟ್ಸ್ ಮೊನ್ನೆ ಮೊನ್ನೆಯವರೆಗೂ ಧರಿಸಿದ್ದ ಈ ಮಫ್ಲರ್ ನನಗೆಲ್ಲವನ್ನೂ ಹೇಳುತ್ತಿದೆ. ಸುಮ್ಮನೇ ಬಾಯಿಮುಚ್ಚಿಕೊಂಡು ಕೇಳು..." ಪೀಟರ್ ಗದರಿಸಿದ. ಮುದುಕಿ ಮೌನಧರಿಸಿದಳು.

"ಆದರೆ ಈ ಮುದುಕಿಯ ಒತ್ತಾಯ ಹೆಚ್ಚಾದಂತೆಲ್ಲ ಫಾದರ್ ವ್ರಿಂಟ್ಸ್ ಆ ಉಯಿಲನ್ನೇ ರದ್ದುಗೊಳಿಸುವುದಾಗಿ ಹೇಳಿ ಬಾಯಿ ಮುಚ್ಚಿಸಲು ನೋಡಿದ. ಈ ಮುದುಕಿ ಬಾಯಿ ಮುಚ್ಚಿಕೊಂಡಳಾದರೂ ಮಿದುಳು ಚುರುಕಾಗಿ ನಿಂತಿತು. ಇದಕ್ಕಾಗಿ ತನ್ನ ಮಗನನ್ನು ಬಳಸಿಕೊಂಡಳು. ದಿನವೂ ಬಂದು ಆತ ಹಣಕಿತ್ತುಕೊಂಡು ಹೋಗಲಾರಂಭಿಸಿದ. ಒಂದೆರಡು ಸಲ ಕೊಡಲು ನಿರಾಕರಿಸಿದ್ದಕ್ಕೆ ಫಾದರ್ ವ್ರಿಂಟ್ಸ್‌ಗೆ ಈಕೆಯ ಮಗ ಜೀವ ಭಯ ಒಡ್ಡಿದ. ಫಾದರ್ ಜಪ್ಪೆನ್ನಲಿಲ್ಲ. ತಾಯಿ-ಮಗ ಇಬ್ಬರೂ

ಸೇರಿ ಫಾದರ್ ವ್ರಿಂಟ್ಸ್‌ನಿಂದ ಹಣ ಕೀಳುವ ಕುರಿತು ಯೋಚಿಸಿಯೇ ಯೋಚಿಸಿದರು. ಕೊನೆಯ ಉಪಾಯವಾಗಿ ಮತ್ತೊಮ್ಮೆ ಒತ್ತಾಯಿಸಿನೋಡುವುದು. ಅದಕ್ಕೂ ಪಾದ್ರಿ ಒಡಂಬಡದಿದ್ದರೆ ಸದ್ಯದ ಉಯಿಲಿನಲ್ಲಿರುವಷ್ಟಾದರೂ ಬರುವಂತೆ ಜಾಗ್ರತೆವಹಿಸುವುದು." ಎನ್ನುತ್ತ ಪೀಟರ್ ಮುದುಕಿಯತ್ತ ನೋಡಿದ.

ಆಕೆಯ ಮುಖದಲ್ಲಿ ಹೆಣದ ಕಳೆಯಿತ್ತು.

"ಆ ದಿನ ಮುಂಜಾನೆಯೇ ಈಕೆಯ ಮಗ ಬಂದ. ತನ್ನ ಅವ್ವನಿಗೆ ಸಿಗಬೇಕಾದ ಚಿನ್ನ-ಹಣವೆರಡನ್ನೂ ಈಗಿಂದೀಗಲೇ ಆಕೆಯ ಸುಪರ್ದಿಗೆ ಒಪ್ಪಿಸೆಂದು ಪಾದ್ರಿಗೆ ಗಂಟುಬಿದ್ದ. ಮನಸ್ಸು ಕಲ್ಲು ಮಾಡಿಕೊಂಡಿದ್ದ ಫಾದರ್ ವ್ರಿಂಟ್ಸ್ ಮಾತಾಡಲೇ ಇಲ್ಲ. ಮಗ ಅವ್ವನೆಡೆ ನೋಡಿದ. ಆಕೆ 'ಹೂಂ' ಎನ್ನುವಂತೆ ಸನ್ನೆ ಮಾಡಿದಳು. ಆತ ಪಾದ್ರಿಯ ಮೇಲೆ ಏರಿಹೋದ. ಹುಡುಗನ ಹಿಡಿತ ಬಿಗಿಯಾಗಿತ್ತು. ಮುದುಕ ಪಾದ್ರಿಗೆ ಬಿಡಿಸಿಕೊಳ್ಳುವುದೇ ದುಸ್ತರವಾಯಿತು. ಈ ಹುಡುಗ ಮುದುಕನನ್ನು ಒಮ್ಮೆ ಬಲವಾಗಿ ದೂಡಿದ. ಗೋಡೆಗೆ ಹೋಗಿ ಅಪ್ಪಳಿಸಿ ಮುದುಕನ ತಲೆ ಒಡೆಯಿತು. ಪೆಟ್ಟು ಬಲವಾಗೇ ಇತ್ತು. ಸಾಲದ್ದಕ್ಕೆ ಕಬ್ಬಿಣ ಸಲಾಕೆಯಿಂದ ಮಗ ಒಂದು ಹೊಡೆತ ಹಾಕಿದ. ಪಾದ್ರಿ ಪ್ರಾಣಬಿಟ್ಟ...."

"ಸುಳ್ಳು... ಆ ಇಬ್ಬರು ಧಾಂಡಿಗರು ನನ್ನನ್ನು ಕಟ್ಟಿಹಾಕಿ...."

"ಏಯ್ ಮುದುಕಿ.... ಜಾಸ್ತಿ ಜಾಣತನ ತೋರಿಸಲು ಯತ್ನಿಸಬೇಡ. ನಾನು ಕಂಡದ್ದನ್ನೆಲ್ಲ ಕಂಡ ಹಾಗೆ ಹೇಳುತ್ತಿದ್ದೇನೆ. ಫಾದರ್ ವ್ರಿಂಟ್ಸ್ ಸತ್ತು ಬಿದ್ದಿದ್ದು ಗೊತ್ತಾಗಿ ನೀವಿಬ್ಬರೂ ಗಾಬರಿಯಾದಿರಿ. ಅವಸವಸರವಾಗಿ ದರೋಡೆಕೋರರ ಕಥೆ ಹೊಸೆದಿರಿ. ಮಗ ನಿನ್ನನ್ನು ಈ ಕುರ್ಚಿಗೆ ಆವರಣ ದಾಟುವವರೆಗೂ ಸುಮ್ಮನಿದ್ದು ನಂತರ ಅರಚಿಕೊಳ್ಳಲು ಶುರುಮಾಡಿದಿ. ನಿನ್ನ ಮಗ ಈಗ ಎಲ್ಲಿದ್ದಾನೆಂದು ಹೇಳಲೇನು? ಇಲ್ಲಿಂದ ಉತ್ತರಕ್ಕೆ ಇಪ್ಪತ್ತು ಮೈಲು ದೂರದ ಹಳ್ಳಿಯ ನಿನ್ನ ಮನೆಯಲ್ಲಿ ತಲೆಮರೆಸಿಕೊಂಡಿದ್ದಾನೆ...."

ಪೀಟರ್ ಹೇಳಿದಂತೆ ಪೊಲೀಸರು ಹಳ್ಳಿಯ ಮನೆಯಿಂದ ಮುದುಕಿಯ ಮಗನನ್ನು ಹಿಡಿದು ತಂದರು. ಹೃದಯಾಘಾತಕ್ಕೊಳಗಾದ ಮುದುಕಿ ಆಸ್ಪತ್ರೆಗೆ ಸೇರಿಸಲ್ಪಟ್ಟಳು. ಆ ಇಬ್ಬರೂ ನಿರಪರಾಧಿಗಳನ್ನು ಬಿಡುಗಡೆ ಮಾಡಿದ ಪೊಲೀಸರು ಈ ತಾಯಿ-ಮಗನ ಮೇಲೆ ಮೊಕದ್ದಮೆ ಹೂಡಿದರು. ●

(ಮುಂದಿನ ಸಂಚಿಕೆ ನೋಡಿ)

ತಣ್ಣಗೆ !

ಆ ದಿನ ರವಿವಾರ. ವಿಪರೀತ ಸೆಕೆ ಇದ್ದುದರಿಂದ ಆ ಸಂಸಾರ ತಿರುಗಾಟಕ್ಕೆ ಹೊರಟಿತ್ತು. ಮಾರ್ಗ ಮಧ್ಯದಲ್ಲಿ ಕಿರಿಮಗ ಬಾಯಿ ತೆರೆದ:

"ಅಪ್ಪಾ..."

"ಏನು ಪುಟ್ಟಾ ?"

"ಈಗ ನಮ್ಮನೆ ತಣ್ಣಗಾಗಿರಬಹುದಲ್ವೆ ?"

"ಅದು ಹೇಗೆ ?"

"ನಾನು ಫ್ರಿಜ್ ಬಾಗಿಲನ್ನು ತೆರೆದಿಟ್ಟೇ ಬಂದಿದ್ದೇನೆ."

● ಸುಮಂಗಲಾ ಹಿರೇಮಠ

ಪುಸ್ತಕ ವಿಭಾಗ



ಅನ್ವೇಷಣೆಯ ಹಾದಿಯಲ್ಲಿ

ಇಂಗ್ಲಿಷ್ ಮೂಲ:

ಪ್ರೊ. ಜಾಯ್ಸ್ ವಾಲ್ಟನ್

ಸಂಗ್ರಹಾನುವಾದ:

ಬಿ.ಎಸ್. ರಾಮಭಟ್ಟ

ಪುಸ್ತಕ ವಿಭಾಗ

ಅನ್ವೇಷಣೆಯ ಹಾದಿಯಲ್ಲಿ....

ಮುಂಗೋಪಾರ್ಕ್ ಎಂಬ ಮಹಾನ್ ಸಾಹಸಿ ಹಾಗೂ ಶಸ್ತ್ರ ವೈದ್ಯನೊಬ್ಬನ ಅನ್ವೇಷಕ ಪ್ರವೃತ್ತಿಯ ಒಂದು ರೋಮಾಂಚಕ ಗಾಥೆ.

ಪ್ರಾಚೀನ ಕಾಲದಿಂದಲೂ ನದಿಯು ಮನುಷ್ಯನಿಗೆ ವರಪ್ರಸಾದವಾಗಿದೆ. ನದಿಯ ಬಯಲಿನಲ್ಲಿ ಜಗತ್ತಿನ ಪ್ರಾಚೀನ ನಾಗರಿಕತೆಗಳು ಬೆಳೆದಿವೆ. ಸಿಂಧು, ನೈಲ್, ಹೂಆಂಗ್ ಹೋ ಮೊದಲಾದ ಕೆಲವೇ ನದಿಗಳು ಶತಮಾನಗಳ ಹಿಂದೆಯೇ ಜನತೆಗೆ ಪರಿಚಿತವಾಗಿದ್ದರೂ ಇನ್ನೂ ಅನೇಕ ನದಿಗಳು ನಾಗರಿಕ ಜಗತ್ತಿಗೆ ಅಜ್ಞಾತವಾಗಿಯೇ ಉಳಿದಿದ್ದವು. ಇವುಗಳಲ್ಲಿ ನೈಜರ್ ನದಿಯೂ ಒಂದು. ಇದರ ಅನ್ವೇಷಣೆಯೂ ರೋಮಾಂಚಕವಾಗಿದೆ. ಪ್ರಪಂಚದ ಅತಿ ಉದ್ದವಾದ ನದಿಗಳಲ್ಲೊಂದಾದ ನೈಜರ್ ಉತ್ತರ ಆಫ್ರಿಕದ ಪಶ್ಚಿಮ ಭಾಗದ ಗಿರಿಶ್ರೇಣಿಗಳಲ್ಲಿ ಹುಟ್ಟಿ, ಪೂರ್ವಾಭಿಮುಖವಾಗಿ ಹರಿದು, ಗ್ರೀನ್‌ವಿಚ್‌ನ ಪಶ್ಚಿಮ ರೇಖಾಂಶ "೦" ಡಿಗ್ರಿಯಲ್ಲಿ ದಕ್ಷಿಣಕ್ಕೆ ತಿರುಗಿ ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಇದು ಸಾಗುವ ಮಾರ್ಗದಲ್ಲಿ ಆಳವಾದ ಕಣಿವೆಗಳೂ ಇವೆ. ಅಲ್ಲಲ್ಲಿ ಜವುಳು ಪ್ರದೇಶಗಳಿವೆ. ಇದು ಪೂರ್ವಾಭಿಮುಖವಾಗಿ ಹರಿಯುವಷ್ಟು ದೂರದವರೆಗೂ ಸಹರಾ ಮರುಭೂಮಿಯ ಅಂಚಿನಲ್ಲೇ ಹರಿಯುತ್ತದೆ. ಇಲ್ಲಿ ಸಹಿಸಲಸಾಧ್ಯವಾದ ಸೆಕೆ. ಒಮ್ಮೊಮ್ಮೆ ಮರಳು ಮತ್ತು ಕಂದು ಮಣ್ಣಿನಿಂದ ಮಿಶ್ರಿತವಾದ ಭೀಕರವಾದ ಬಿರುಗಾಳಿ ಬೀಸುತ್ತದೆ. ಆಗಾಗ ಘನಘೋರವಾದ ಮಳೆಯೂ ಸುರಿಯುತ್ತದೆ. ದಕ್ಷಿಣ ದಿಕ್ಕಿನಲ್ಲಿ ಹರಿಯುವ ಈ ನದಿಯ ಕೊಳ್ಳದಲ್ಲಿ ವಿಸ್ತಾರವಾದ ಮತ್ತು ದಟ್ಟವಾದ ಕಾಡುಗಳಿವೆ. ಇದರಲ್ಲಿರುವ ಒಂದೊಂದು ಮರದ ಎತ್ತರ ಸುಮಾರು ೭೧ ಮೀಟರುಗಳಿಗೆ ಕಡಿಮೆಯಿಲ್ಲ.

ಸಮುದ್ರ ಮಟ್ಟದಿಂದ ೯೦೦ ಮೀಟರು ಎತ್ತರದಲ್ಲಿ ೪೧೮೦ ಕಿಲೋಮೀಟರಿನಷ್ಟು ದೂರ ಹರಿಯುವ ನೈಜರ್ ನದಿಯ ಜಲಾನಯನ ಕ್ಷೇತ್ರವು ಸುಮಾರು ೭೭,೭೦೦ ಚದರ ಕಿಲೋಮೀಟರುಗಳಷ್ಟು. ಈ ನದಿಯು ತನ್ನ ಪಾತ್ರದಲ್ಲಿ ಅಲ್ಲಲ್ಲಿ ಮರಳು ದ್ವೀಪಗಳನ್ನು ಸೃಷ್ಟಿಸಿಕೊಂಡಿದೆ. ಇದರಲ್ಲಿ ಹರಿಯುವ ನೀರು ಭೂಮಿಯಲ್ಲಿ ಇಂಗಿ ಹೋಗುವುದಲ್ಲದೆ ಮರುಭೂಮಿಯ ಪ್ರದೇಶದಲ್ಲಿ ಉಷ್ಣತೆಯಿಂದ ಆವಿಯಾಗುತ್ತದೆ. ಇದರ ಬಯಲಿನಲ್ಲಿ ಹಿಂದಿನಿಂದಲೂ ಭತ್ತ, ಜೋಳ ಮತ್ತು ಹತ್ತಿಯನ್ನು ಹೇರಳವಾಗಿ ಬೆಳೆಯಲಾಗುತ್ತದೆ. ನೈಜರ್ ನದಿಯ ಮುಖಜಭೂಮಿಯು ಸುಮಾರು ನಾಲ್ಕು ಸಾವಿರ ಚದರ ಕಿಲೋಮೀಟರುಗಳಷ್ಟಿದ್ದು ಒಂದು ಸಾವಿರ ಕಿಲೋಮೀಟರುಗಳಿಗಿಂತ ಹೆಚ್ಚು ದೂರದವರೆಗೂ ಹಡಗುಗಳು ಸಂಚರಿಸಬಹುದು.

ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲಿ

ಹೆರೊಡೋಟಸ್ ಎಂಬ ಗ್ರೀಕ್ ಇತಿಹಾಸಕಾರನು ಈ ನದಿಯ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದ್ದಾನೆ. ಕೆಲವು ಯುವಕರು ಲಿಬಿಯಾದಿಂದ ಸಹರಾ ಮರುಭೂಮಿಯನ್ನು ದಾಟಿ ದಕ್ಷಿಣಾಭಿಮುಖವಾಗಿ ಪ್ರಯಾಣಿಸಿ ಕೊನೆಗೆ ನೈಜರ್ ನದಿಯನ್ನು ನೋಡಿದ್ದರೆಂದಾತ ಬರೆದಿದ್ದಾನೆ. ಇವನ ನಂತರ ಭೂಗೋಳ ಶಾಸ್ತ್ರಜ್ಞರಿಗೆ ಈ ನದಿಯ ಬಗೆಗೆ ಸರಿಯಾದ ಕಲ್ಪನೆಯೇ ಇರಲಿಲ್ಲ. ಇದನ್ನು ನೈಲ್ ನದಿಯ ಒಂದು ಸಣ್ಣ ಉಪನದಿಯೆಂದು ಕೆಲವರು ವಾದಿಸಿದರೆ ಹೆರೊಡೋಟಸ್ ಹೇಳಿದ ನದಿಯು ಕಾಂಗೋ ನದಿಯೆಂದು ಪತ್ರಿಕೆಗಳಲ್ಲಿ ವರದಿ ಮಾಡಿದವರು ಇನ್ನು ಕೆಲವರು. ಹೀಗೆ ನೈಜರ್ ನದಿಯು ಅಜ್ಞಾತ ಲೋಕದ ಒಂದು ವಿಸ್ಮಯಕರವಾದ ನದಿಯಾಗಿ ಉಳಿದಿತ್ತು.

ಆಫ್ರಿಕವೆಂದರೆ ಹೊರಜಗತ್ತಿನ ರಾಷ್ಟ್ರಗಳಿಗೆ ಏನೋ ಒಂದು ರೀತಿಯ ಮೈನಡುಕ. ಇಲ್ಲಿರುವ ಆನೆ, ಸಿಂಹ, ಹುಲಿ ಮತ್ತು ವಿಷಪೂರಿತ ಹಾವುಗಳು ಅರಣ್ಯದ ಭೀಕರತೆಯನ್ನು ಹೆಚ್ಚಿಸಿದ್ದವು. ಇಲ್ಲಿನ ಮೂಲನಿವಾಸಿಗಳು ಅನಾಗರಿಕರು; ಕೆಲವರು ನರಭಕ್ಷಕರೆಂದೂ ಪ್ರತೀತಿಯಿತ್ತು. ಸಂಸ್ಕೃತಿವಿಹೀನರಾದ ಈ ಜನರ ಜೀವನ ಕಾಡುಪ್ರಾಣಿಗಳಂತಿತ್ತು. ಇದರಿಂದಾಗಿ ಅನೇಕ ಶತಮಾನಗಳ ಕಾಲ ಇದು ಕಗ್ಗತ್ತಲೆಯ ಖಂಡವಾಗಿಯೇ ಉಳಿದಿತ್ತು.

ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯು ಜಗತ್ತಿನ ಇತಿಹಾಸವನ್ನೇ ಬದಲಿಸಿತು. ಕೃಷಿಯ ಪ್ರಾಮುಖ್ಯ ಕಡಿಮೆಯಾಗುತ್ತ ಬೃಹತ್ ಪ್ರಮಾಣದ ಕಾರ್ಖಾನೆಗಳು ತಲೆಯೆತ್ತಿದವು. ಉತ್ಪಾದನೆಗೆ ಕಚ್ಚಾ ಪದಾರ್ಥಗಳನ್ನು ಪಡೆಯಲು ಮತ್ತು ಸಿದ್ಧ ವಸ್ತುಗಳನ್ನು ಮಾರಾಟ ಮಾಡಲು ಮಾರುಕಟ್ಟೆಗಳ ಅವಶ್ಯಕತೆಯಿತ್ತು. ಇದಕ್ಕಾಗಿ ತಮ್ಮದೇ ಆದ ವಸಾಹತುಗಳನ್ನು ಕಟ್ಟಿಕೊಳ್ಳಲು ಯುರೋಪಿಯನ್ ರಾಷ್ಟ್ರಗಳ ನಡುವೆ ಪೈಪೋಟಿ ಆರಂಭವಾಯಿತು.

ಈ ಉದ್ದೇಶದಿಂದ ಇಂಗ್ಲೆಂಡಿನ ಉದ್ದಿಮೆದಾರರು "ಆಫ್ರಿಕನ್ ಅಸೋಸಿಯೇಶನ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆಫ್ರಿಕ ಖಂಡದ ಒಳಭಾಗಗಳನ್ನು ಶೋಧಿಸುವುದು, ವಸಾಹತುಗಳ ಸ್ಥಾಪನೆಗೆ ಯೋಗ್ಯವಾದ ಸ್ಥಳಗಳನ್ನು ಆಯ್ದುಕೊಳ್ಳುವುದು ಮತ್ತು ಅಲ್ಲಿ ದೊರೆಯಬಹುದಾದ ಸಂಪನ್ಮೂಲಗಳನ್ನು ತಿಳಿಯುವುದು ಇವರ ಪ್ರಮುಖ ಉದ್ದೇಶಗಳಾಗಿದ್ದವು. ಹಾಗೆಯೆ, ಅದುವರೆಗೂ ಕುತೂಹಲಕರವಾಗಿ ಉಳಿದಿದ್ದ ನೈಜರ್ ನದಿಯ ಅನ್ವೇಷಣೆ ಮತ್ತು ಇದರ ದಡದಲ್ಲಿರುವ ಬಹುದೊಡ್ಡ ವ್ಯಾಪಾರ ಕೇಂದ್ರವಾದ "ಟಿಂಬಕ್ಟು" ಎಂಬ ಪಟ್ಟಣದೊಡನೆ ವ್ಯಾಪಾರ ಸಂಬಂಧ ಬೆಳೆಸಿಕೊಳ್ಳುವುದು ಆಫ್ರಿಕನ್ ಅಸೋಶಿಯೇಶನ್ನಿನ ಇನ್ನೊಂದು ಗುರಿಯಾಗಿತ್ತು.

ಆಗ ಯುರೋಪಿನಲ್ಲಿ ಅನ್ವೇಷಕರ ಕೊರತೆ ಇರಲಿಲ್ಲ. ನೈಜರ್ ನದಿಯನ್ನು ಕಂಡುಹಿಡಿಯಲು ಉತ್ಸಾಹಿ ಯುವಕರ ತಂಡವೊಂದು ಮುಂದೆ ಬಂದಿತು. ಆಫ್ರಿಕನ್ ಅಸೋಸಿಯೇಶನ್ ಹೀಗೆ ಬಂದವರಲ್ಲಿ ಮೂರು ಜನರನ್ನು ಮಾತ್ರ ಆಯ್ದುಕೊಂಡು ಎಲ್ಲ ಸೌಕರ್ಯಗಳನ್ನು ನೀಡಿತು. ಆದರೆ ಈ ಯುವಕರು ನೈಜರ್ ನದಿಯ ಪ್ರದೇಶದ ನಕ್ಷೆ, ಮಾಹಿತಿ ಮತ್ತು ತಲುಪುವ ಮಾರ್ಗವನ್ನು ಪೂರ್ವಭಾವಿಯಾಗಿ ನಿರ್ಧರಿಸಲಿಲ್ಲ. ಸಲಕರಣೆಗಳನ್ನು ಒದಗಿಸಿಕೊಳ್ಳಲಿಲ್ಲ. ಸರಿಯಾದ ಸಿದ್ಧತೆ ನಡೆಸಲಿಲ್ಲ.

ಆದರೂ ಈ ಯುವಕರ ತಂಡವು ಭೂಮಧ್ಯ ಸಮುದ್ರವನ್ನು ಹಡಗಿನಲ್ಲಿ ದಾಟಿ ಈಜಿಪ್ಟಿನ ಅಲೆಗ್ಸಾಂಡ್ರಿಯ ಬಂದರನ್ನು ತಲುಪಿತು. ನಂತರ ಕೈರೋ ಪಟ್ಟಣದ ಮೂಲಕ ದಕ್ಷಿಣಾಭಿಮುಖವಾಗಿ ಪ್ರಯಾಣ ಮಾಡಿತು. ಈಜಿಪ್ಟಿನಲ್ಲಿ ಅನೇಕ ತಿಂಗಳುಗಳು ಕಳೆದುಹೋದವು. ಮುಂದಿನ ಪ್ರಯಾಣ ಸುಲಭವಾಗಿರಲಿಲ್ಲ. ನಿರ್ಜನವೂ ಅತ್ಯಂತ ವಿಶಾಲವೂ ಆದ ಸಹರಾ ಮರುಭೂಮಿಯಲ್ಲಿ ಪ್ರಯಾಣಿಸುವುದು ಅಪಾಯಕರವಾಗಿತ್ತು. ಇದನ್ನು ಲೆಕ್ಕಿಸದೆ ಯುವಕರು ಮುನ್ನುಗ್ಗಿದರು. ಆದರೆ ಒಂದೆರಡು ದಿನಗಳಲ್ಲೇ ಅವರಿಗೆ ತಾವು ಮೃತ್ಯುವಿನ ದವಡೆಯಲ್ಲಿದ್ದೇವೆ ಎಂದು ಭಾಸವಾಗತೊಡಗಿತು. ಪ್ರಯಾಣದ ಆಯಾಸದಲ್ಲಿ ಬಳಲಿಬೆಂಡಾಗಿದ್ದ ಒಬ್ಬ ಯುವಕ ಸತ್ತುಹೋದ. ಬೆಂಕಿಯಂತಹ ಉರಿಬಿಸಿಲು ಮತ್ತು ಭೀಕರವಾದ ಬಿರುಗಾಳಿ ಇನ್ನೊಬ್ಬ ಯುವಕನನ್ನು ಬಲಿ ತೆಗೆದುಕೊಂಡಿತು.

ಉಳಿದ ಒಬ್ಬನೇಒಬ್ಬ ಯುವಕ ಸಾವನ್ನು ಹೊತ್ತು ಕೊಂಡವನಂತೆ ಅತಿ ಪ್ರಯಾಸದಿಂದ ಮುಂದೆ ಸಾಗತೊಡಗಿದ. ಅದೃಷ್ಟವಶಾತ್ ಇವನಿಗೆ ಒಂದು ಯಾತ್ರಿಕರ ತಂಡ ಸಿಕ್ಕಿತು. ಅವರೊಂದಿಗೆ ಸೇರಿ ಕೆಲವು ತಿಂಗಳ ಕಾಲ ಪ್ರಯಾಣಿಸಿದ. ಆದರೆ ಅದು ಬೇರೊಂದು ದಿಕ್ಕಿಗೆ ಹೊರಟು ಹೋಯಿತು. ಈ ಯುವಕ ಮತ್ತೆ ಏಕಾಕಿಯಾಗಿ ಪ್ರಯಾಣಿಸತೊಡಗಿದ. ನೈಜರ್ ನದಿ ಸಮೀಪವಾಗುತ್ತಿತ್ತು. ಬಹುಶಃ ಇವನು ತನ್ನ ಗುರಿ ಮುಟ್ಟುವುದರಲ್ಲಿದ್ದ. ಅಷ್ಟರಲ್ಲಿ ಅನಾಗರಿಕನೊಬ್ಬ ಹಾದಿಯಲ್ಲೇ ಅವನನ್ನು ಕೊಲೆ ಮಾಡಿದ. ಹೀಗೆ ನೈಜರ್ ನದಿಯ ಅನ್ವೇಷಣೆಯ ಪ್ರಥಮ ಪ್ರಯತ್ನ ದುರಂತದಲ್ಲಿ ಪರ್ಯವಸಾನ ಗೊಂಡಿತು.

ಈ ಸುದ್ದಿಯನ್ನು ತಿಳಿದ ಆಫ್ರಿಕನ್ ಅಸೋಶಿಯೇಶನ್ ತುಂಬ ನಿರಾಶೆಗೊಂಡಿತು. ನೈಜರ್ ನದಿಯನ್ನು ಕಂಡುಹಿಡಿಯುವವರಿಗಾಗಿ ಸಂಸ್ಥೆಯು ಎಷ್ಟು ಬೇಕಾದರೂ ಹಣವನ್ನು ನೀಡಲು ಸಿದ್ಧವಾಗಿತ್ತು. ಆದರೆ ಇದನ್ನು ಹುಡುಕಲು ಹೊರಟ ಯುವಕರ ಸಾವಿನ ಸುದ್ದಿಯನ್ನು ಕೇಳಿದವರು ಯಾರೂ ಅನ್ವೇಷಣೆಗೆ ಮುಂದೆ ಬರಲಿಲ್ಲ.

ಆಫ್ರಿಕದ ಒಡಲಿನಲ್ಲಿ ವಜ್ರ, ಚಿನ್ನ, ಕಬ್ಬಿಣ ಮತ್ತು ಪೆಟ್ರೋಲಿಯಂ ಮುಂತಾದ ಅತ್ಯಮೂಲ್ಯ ಸಂಪತ್ತು ಇರುವುದು ಬ್ರಿಟಿಷರಿಗೆ ತಿಳಿದಿದ್ದರೂ ಅವು ಎಲ್ಲೆಲ್ಲಿ ಇವೆ ಎನ್ನುವುದು ಮಾತ್ರ ಅವರಿಗೆ ತಿಳಿದಿರಲಿಲ್ಲ. ಅಲ್ಲದೆ ವಿಸ್ತಾರವಾದ ಈ ಖಂಡದಲ್ಲಿ ಅವುಗಳನ್ನು ಕಂಡುಹಿಡಿಯುವುದೂ ಸುಲಭವಾಗಿರಲಿಲ್ಲ. ಅವರೂ ಈ ಹೇರಳವಾದ ಸಂಪತ್ತನ್ನು ಹೇಗಾದರೂ ಮಾಡಿ ಕಂಡುಹಿಡಿಯಬೇಕು. ಉಳಿದ ಯಾವ ಯುರೋಪಿಯನ್ ದೇಶವೂ ತಮಗಿಂತ ಮೊದಲು ಈ ಖಂಡವನ್ನು ಪ್ರವೇಶಿಸಿ ವಸಾಹತುವನ್ನು ಕಟ್ಟಬಾರದು. ಈ ಅಮೂಲ್ಯ ಭಾಂಡಾರಕ್ಕೆ ತಾನೇ ಒಡೆಯನಾಗಬೇಕು ಎಂದು ಬ್ರಿಟಿಷ್ ಸರಕಾರವೂ ನಿರ್ಧರಿಸಿತ್ತು. ಇದಕ್ಕಾಗಿ ಆಫ್ರಿಕನ್ ಅಸೋಶಿಯೇಶನ್ ಸಂಸ್ಥೆಗೆ ಆರ್ಥಿಕ ಸಹಾಯವನ್ನೂ ನೀಡಲು ಅದು ಸಿದ್ಧವಾಗಿತ್ತು. ಈ ದೃಷ್ಟಿಯಿಂದ ನೈಜರ್ ನದಿಯನ್ನು ಕಂಡು ಹಿಡಿದು ಅದರ ಮೂಲದಿಂದ ಸಮುದ್ರವನ್ನು ಸೇರುವವರೆಗೂ ಅದರಲ್ಲಿ ಪ್ರಯಾಣ ಮಾಡುವುದು ತಮ್ಮ ಯೋಜನೆಗೆ ಸಹಾಯಕವೆಂದು ಸಂಸ್ಥೆಯು ನಿರ್ಧರಿಸಿತ್ತು.

ಇಂಗ್ಲೆಂಡಿನ ಮಹಾಸಾಹಸಿಯಾಗಿದ್ದ ಮುಂಗೋಪಾರ್ಕ್‌ನು ಈ ಸಂಸ್ಥೆಯ ಆಹ್ವಾನವನ್ನು ಸ್ವೀಕರಿಸಿದ. ಬಾಲ್ಯದಿಂದಲೇ ಇವನಿಗೆ ಅನ್ವೇಷಣೆಯ ಗೀಳು. ಇದಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಿದಾಗ ಇವನಿಗೆ ರೋಮಾಂಚನವಾಗುತ್ತಿತ್ತು. ಬಾಲಕನಾಗಿದ್ದಾಗಲೆ ಆತ ಆಗಾಗ ಗುಟ್ಟಾಗಿ ಕಡಲ ತೀರಕ್ಕೆ ಹೋಗುತ್ತಿದ್ದ. ಹಡಗಿನಲ್ಲಿ ಕುಳಿತು ಯಾವುದಾದರೊಂದು ದೇಶಕ್ಕೆ ಓಡಿ ಹೋಗಬೇಕೆಂದು ಪ್ರಯತ್ನಿಸುತ್ತಿದ್ದ. ಆದರೆ ಅವನ ತಂದೆಯ ಕಂಗಣ್ಣುಗಳಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವಾಗಿತ್ತು. ತನ್ನ ಮಗ ಪ್ರಖ್ಯಾತ ವೈದ್ಯನಾಗಿ ಹಣ, ಕೀರ್ತಿ ಮತ್ತು ಪ್ರತಿಷ್ಠೆ ಗಳಿಸಬೇಕೆಂಬುದು ತಂದೆಯ ಆಸೆ. ಇದರಿಂದ ಮುಂಗೋಪಾರ್ಕ್‌ನ ಆಸೆ ಮಣ್ಣುಗೂಡಿತು. ತಂದೆಯ ಒತ್ತಾಯಕ್ಕೆ ಮಣಿದ ಅವನು, ಎಡಿನ್‌ಬರೋ ವೈದ್ಯಕೀಯ ಕಾಲೇಜನ್ನು ಸೇರಬೇಕಾಯಿತು. ಅಲ್ಲಿ ಯಾವ ಆತಂಕವೂ ಇಲ್ಲದೆ ಶಿಕ್ಷಣವನ್ನು ಪೂರ್ಣಗೊಳಿಸಿದ. ತಂದೆಯ ಆಸೆಯು ಫಲಿಸಿತು. ನಂತರ ಪಾರ್ಕ್‌ನು ಆ್ಯಂಡರ್‌ಸನ್ ಎಂಬ ಪ್ರಸಿದ್ಧ ಶಸ್ತ್ರಚಿಕಿತ್ಸಕನ ಬಳಿಯಲ್ಲಿ ಶಸ್ತ್ರಚಿಕಿತ್ಸೆಯ ಶಿಕ್ಷಣವನ್ನು ಪಡೆದು ಪರಿಣತಿ ಗಳಿಸಿಕೊಂಡ.

ಇಂಗ್ಲೆಂಡ್ ಸರ್ಕಾರ ಮುಂಗೋಪಾರ್ಕ್‌ನನ್ನು ಸುಮಾತ್ರ ದ್ವೀಪ ಸಮುದಾಯದ ಮುಖ್ಯನಗರದ ಆಸ್ಪತ್ರೆಗೆ ಶಸ್ತ್ರ ವೈದ್ಯನನ್ನಾಗಿ ಕಳುಹಿಸಿಕೊಟ್ಟಿತು. ಅಲ್ಲಿಯ ವಿಶಾಲವಾದ ಕಡಲು, ಅಲ್ಲಲ್ಲಿ ನಡುಗಡ್ಡೆಗಳು, ಬಹುದೂರದಿಂದ ಕಾಣಿಸುವ ಚಿಕ್ಕಪುಟ್ಟ ದ್ವೀಪಗಳನ್ನು ಕಂಡಾಗ ಅವನಲ್ಲಿ ಸುಪ್ತವಾಗಿದ್ದ ಅನ್ವೇಷಣೆಯ ಬಯಕೆ ಮತ್ತೆ ಪುಟಿದೆದ್ದಿತು. ಇದೇ ಕಾರಣದಿಂದ ಆತ ಮತ್ತೆ ಇಂಗ್ಲೆಂಡಿಗೆ ಹಿಂದಿರುಗಿದ. ಆಫ್ರಿಕನ್ ಅಸೋಶಿಯೇಶನ್ ನೈಜರ್ ನದಿಯ ಅನ್ವೇಷಣೆಗಾಗಿ ನೀಡಿದ ಕಥೆಯನ್ನು ಓದಿದಾಗ ಅವನಲ್ಲಿ ಹೊಸ ಚೈತನ್ಯವೊಂದು ಸೇರಿ

ಕೊಂಡಂತಾಯಿತು.

ಆಫ್ರಿಕನ್ ಅಸೋಶಿಯೇಶನ್ ಸಂಸ್ಥೆಯು ಮುಂಗೋಪಾರ್ಕ್‌ನಿಗೆ ಎಲ್ಲಾ ರೀತಿಯ ಸಹಾಯವನ್ನೂ ನೀಡಿತು. ಅವನಿಗೆ ಹಿಂದಿನ ಅನ್ವೇಷಕರ ದುರಂತ ಕಥೆ ತಿಳಿದಿತ್ತು. ಇದರಿಂದ ಪಾರ್ಕ್‌ನು ಲಂಡನ್ನಿನ ಮಹಾವಿದ್ಯಾಲಯದ ಭೌಗೋಳಿಕ ವಿಭಾಗದ ಪ್ರಾಧ್ಯಾಪಕರನ್ನು ಭೇಟಿಯಾಗಿ ನೈಜರ್ ನದಿಯ ಉಗಮಸ್ಥಾನ, ಅಲ್ಲಿಯ ಹವೆ, ಉಷ್ಣಾಂಶ, ಮಳೆ ಮುಂತಾದ ವಿವರಗಳನ್ನು ಟಿಪ್ಪಣಿ ಮಾಡಿಕೊಂಡ. ಈ ನದಿಯ ಜಲಾನಯನ ಪ್ರದೇಶದ ಒಂದು ನಕ್ಷೆಯೂ ಅವನಿಗೆ ದೊರೆಯಿತು. ಲಂಡನ್ನಿನ ಕೆಲವು ವ್ಯಾಪಾರಸ್ಥರು ಈ ವೇಳೆಗಾಗಲೇ ಪಶ್ಚಿಮ ಆಫ್ರಿಕದ ರೇವು ಪಟ್ಟಣಗಳೊಡನೆ ವ್ಯವಹರಿಸಲು ಪ್ರಾರಂಭಿಸಿದ್ದರು. ಮುಂಗೋಪಾರ್ಕ್ ಅವರನ್ನು ಭೇಟಿಯಾಗಿ ವಿವರಗಳನ್ನು ಸಂಗ್ರಹಿಸಿದ. ಮುಖ್ಯವಾಗಿ ಅವನಿಗೆ ನೈಜರ್ ನದಿಯು ಹುಟ್ಟುವ ಸ್ಥಳಕ್ಕೆ ಸಮೀಪದ ಒಂದು ರೇವು ಪಟ್ಟಣದ ಮಾಹಿತಿಯೂ ದೊರೆಯಿತು.

ಅಂತೂ ಇಪ್ಪತ್ತುನಾಲ್ಕು ವಯಸ್ಸಿನ ಈ ಯುವಕನ ಆಸೆಯು ಫಲಿಸಿತ್ತು ೧೭೯೫ರ ಮೇ ತಿಂಗಳಿನಲ್ಲಿ ಮುಂಗೋಪಾರ್ಕ್ ಇಂಗ್ಲೆಂಡಿನಿಂದ ಪ್ರಯಾಣ ಬೆಳೆಸಿದ. ಇಂಗ್ಲೆಂಡಿನ ವರ್ತಕರು ನೀಡಿದ ಮಾರ್ಗದರ್ಶನದಂತೆ ಹಡಗಿನಲ್ಲಿ ಪ್ರಯಾಣಿಸಿ ಆಫ್ರಿಕದ ಉತ್ತರ ಭಾಗದ ಪಶ್ಚಿಮತೀರದಲ್ಲಿ ಹರಿಯುತ್ತಿರುವ ಗ್ಯಾಂಬಿಯ ನದಿಯ ಮುಖಜ ಭೂಮಿಯ ರೇವು ಪಟ್ಟಣವನ್ನು ತಲುಪಿದ. ಈ ನದಿಯು ಅಷ್ಟೇನೂ ದೊಡ್ಡದಲ್ಲ.

ಅವನು ಇಳಿದುಕೊಂಡಿದ್ದ ಪಟ್ಟಣದಲ್ಲಿ ಕುದುರೆಗಳ ವ್ಯಾಪಾರ ನಡೆಯುತ್ತಿತ್ತು. ಮುಂಗೋಪಾರ್ಕ್ ತನ್ನ ಪ್ರಯಾಣಕ್ಕೆಂದು ಒಂದು ಉತ್ತಮವಾದ ಕುದುರೆಯನ್ನು ಕೊಂಡು ಒಂದೆರಡು ದಿನಗಳವರೆಗೆ ಅದರ ಮೇಲೆ ಸವಾರಿ ಮಾಡಿದ.

ರೇವು ಪಟ್ಟಣದಿಂದ ಹೊರಟ ಮುಂಗೋಪಾರ್ಕ್ ಅಲ್ಲಲ್ಲಿ ತಂಗುತ್ತಾ ಕೊನೆಗೆ ಪಿಸಾನಿಯಾ ಎಂಬ ಊರನ್ನು ತಲುಪಿದ. ಇಲ್ಲಿ ಕೆಲವು ಬ್ರಿಟಿಷ್ ವರ್ತಕರು ವ್ಯಾಪಾರ ನಡೆಸುತ್ತಿದ್ದರು. ಮುಂಗೋಪಾರ್ಕ್ ಸುಮಾರು ಆರು ತಿಂಗಳವರೆಗೆ ಆ ವ್ಯಾಪಾರಿಗಳೊಂದಿಗೆ ಕಾಲ ಕಳೆದ. ಈ ಅವಧಿಯಲ್ಲಿ ಅವನು ಆ ಪ್ರದೇಶದ ಜನರು ಮಾತಾಡುತ್ತಿದ್ದ "ಮಂಡಿನ್" ಎಂಬ ಭಾಷೆಯನ್ನು ಕಲಿತುಕೊಂಡ. ಅಲ್ಲದೆ ಅಲ್ಲಿಯ ಜನರ ಧರ್ಮ, ಆಚರಣೆ, ಹಬ್ಬ, ಉತ್ಸವಗಳು ಮುಂತಾದ ವಿವರಗಳನ್ನೂ ಸಂಗ್ರಹಿಸಿದ.

ಆ ಪ್ರದೇಶದಲ್ಲಿ ಹಲವಾರು ಜನಾಂಗದವರಿದ್ದರು. ಪ್ರತಿಯೊಂದು ಜನಾಂಗದವರಿಗೂ ಒಬ್ಬ ನಾಯಕನಿದ್ದ. ಅವನೇ ಆ ಪ್ರದೇಶದ ಜನರಿಗೆ ಆಡಳಿತಗಾರನೋ ಒಬ್ಬ, ಪಾಳೆಯಗಾರನೋ ಅಥವಾ ತುಂಡರಸನೋ ಇದ್ದ ಹಾಗೆ. ಇವನ ಆಜ್ಞೆಯನ್ನು ಯಾರೂ ಮೀರುವಂತಿರಲಿಲ್ಲ. ಪಾರ್ಕ್‌ನು ತಾನು ಸಂಗ್ರಹಿಸಿದ್ದ ಮಾಹಿತಿಗಳನ್ನೆಲ್ಲ ಡೈರಿಯಲ್ಲಿ ಬರೆದುಕೊಳ್ಳುತ್ತಿದ್ದ. ಆ ವೇಳೆಗಾಗಲೆ ಸುಮಾರು ೩೦೦ ಮೈಲುಗಳಷ್ಟು ಪ್ರಯಾಣಿಸಿ ಒಳನಾಡಿಗೆ ಬಂದಿದ್ದ.

ಮುಂದಿನ ಪ್ರಯಾಣಕ್ಕೆ ಸಜ್ಜಾಗಿದ್ದ ಮುಂಗೋಪಾರ್ಕ್ ಜಾನ್‌ಸನ್ ಎಂಬ ಒಬ್ಬ ಸ್ಥಳೀಯ ವ್ಯಕ್ತಿಯನ್ನು ತನ್ನ ಸಹಾಯಕನನ್ನಾಗಿಯೂ, ದೆಂಬ [illegible]ಬ ಒಬ್ಬ ಯುವಕನನ್ನು ತನ್ನ ಸೇವಕನನ್ನಾಗಿಯೂ ನಿಯಮಿಸಿಕೊಂಡ. ಜಾನ್‌ಸನ್ ವಿದ್ಯಾವಂತ. ಸದಾ ಚಟುವಟಿಕೆಯಿಂದಿರುವ ವ್ಯಕ್ತಿ. ಇವರಿಬ್ಬರಿಗೂ ಮುಂದಿನ ಸೀಮೆಗಳ ಪರಿಚಯವಿತ್ತು. ಮುಂಗೋಪಾರ್ಕ್ ಪಿಸಾನಿಯಾದಲ್ಲಿ ಕೇವಲ ಎರಡು ದಿನಗಳಿಗಾಗುವಷ್ಟು ಮಾತ್ರ ಆಹಾರ ಸಾಮಗ್ರಿಗಳನ್ನು ಕೊಂಡುಕೊಂಡಿದ್ದ. ಇವನ ಸಹಚರರು ಪ್ರಯಾಣಕಾಲದಲ್ಲಿ ತಮ್ಮ ಆಹಾರವನ್ನು ತಾವೇ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಮೊದಲೇ ತಿಳಿಸಿದ್ದ. ಪಾರ್ಕ್‌ನು ತನ್ನೊಂದಿಗೆ ಹಾಲುಮಡ್ಡಿ, ಕೆಲವು ಬೆಲೆಬಾಳುವ ಮಣಿಸರಗಳು, ಮತ್ತು ಔಷಧಗಳನ್ನೂ ಇಂಗ್ಲೆಂಡಿನಿಂದ ಬರುವಾಗಲೇ ತಂದಿದ್ದ. ಅಲ್ಲದೆ ತನ್ನ ಜೀವರಕ್ಷಣೆಗೆಂದು ಪಿಸ್ತೂಲ್‌ಗಳನ್ನೂ ಗುಂಡುಗಳನ್ನೂ ಕೊಂಡುಕೊಂಡಿದ್ದ. ಆಫ್ರಿಕನ್ನರು ತುಂಬಾ

ತಂಬಾಕು ತಿನ್ನುವರೆಂದು ತಿಳಿದಾಗ ಪಿಸಾನಿಯ ದಿಂದ ಹೊರಡುವಾಗ ಸಾಕಷ್ಟು ತಂಬಾಕನ್ನೂ ಕೊಂಡುಕೊಂಡ. ಇದರ ವ್ಯಾಪಾರವು ಲಾಭದಾಯಕವೆಂದು ಅವನಿಗೆ ತಿಳಿದಿತ್ತು. ಈ ಹಣದಿಂದ ಆವಶ್ಯಕವಾದ ವಸ್ತುಗಳನ್ನು ಕೊಳ್ಳಬಹುದು ಎಂಬ ವಿಚಾರ ಅವನದು.

ಇವುಗಳಲ್ಲದೆ ತನ್ನ ಉಡುಪುಗಳು, ದಿಕ್ಕು ತಿಳಿಸಲು ಒಂದು ಹೋಕಾಯಂತ್ರ, ಉಷ್ಣಮಾಪಕ ಮತ್ತು ನೀಲಿ ಬಣ್ಣದ ಕೊಡೆಯೊಂದನ್ನು ಇಟ್ಟುಕೊಂಡಿದ್ದ. ಮುಂಗೋಪಾರ್ಕ್ ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದರೆ, ಅವನ ಸಹಾಯಕ ಮತ್ತು ಸೇವಕ ಕತ್ತೆಯನ್ನೇರಿ ಹಿಂಬಾಲಿಸುತ್ತಿದ್ದರು.

ಪ್ರಯಾಣ ಕಾಲದಲ್ಲಿ ಹಲವಾರು ರಾಜ್ಯಗಳನ್ನು ದಾಟಿ ಮುನ್ನಡೆಯಬೇಕೆಂಬುದು ಪಾರ್ಕ್‌ನಿಗೆ ತಿಳಿದಿತ್ತು. ಆಶ್ಚರ್ಯವೆಂದರೆ ಒಳನಾಡಿನಲ್ಲಿ ಜನಸಂಖ್ಯೆಯು ದಟ್ಟವಾಗಿತ್ತು. ಗ್ರಾಮಗಳು ಮತ್ತು ಪಟ್ಟಣಗಳಿದ್ದವು. ಸಣ್ಣ ಸಣ್ಣ ರಾಜ್ಯಗಳಿದ್ದವು. ಪಾಳೆಯಪಟ್ಟುಗಳು ಸಹ ಇರುವುದಾಗಿ ಇವನ ಜೊತೆಯಲ್ಲಿದ್ದವರು ಹೇಳುತ್ತಿದ್ದರು. ಇಲ್ಲಿಯ ತುಂಡರಸರು ಸಾಮಾನ್ಯರಲ್ಲಿ ಅಸಾಮಾನ್ಯರು. ಅವರ ರಾಜ್ಯಗಳು ಮತ್ತು ಪಾಳೆಯಪಟ್ಟುಗಳ ನಡುವೆ ಆಕ್ರಮಣ, ಯುದ್ಧ ಮತ್ತು ರಕ್ತಪಾತಗಳು ನಡೆಯುವುದು ಸಾಮಾನ್ಯವಾಗಿತ್ತು. ಹೊರಜಗತ್ತಿನ ಸಂಪರ್ಕ ಇಲ್ಲಿಯ ಮೂಲನಿವಾಸಿಗಳಿಗಿರಲಿಲ್ಲ. ಕ್ಷುದ್ರ ದೇವತೆಗಳನ್ನು ಪೂಜಿಸುತ್ತಿದ್ದರು. ಸಮಾಜವು ಮೂಢನಂಬಿಕೆಗಳಿಂದ ತುಂಬಿಕೊಂಡಿತ್ತು. ಭೂತ, ಪಿಶಾಚಿ, ಮಾಟಮಂತ್ರಗಳನ್ನು ನಂಬಿಕೊಂಡಿತ್ತು. ಪ್ರತಿಯೊಂದು ಪ್ರದೇಶವನ್ನು ದಾಟುವಾಗಲೂ ಸಂಬಂಧಿಸಿದ ಮುಖ್ಯಸ್ಥನ ಅನುಮತಿಯನ್ನು ಪಡೆಯಬೇಕಿತ್ತು. ಸದಾ ಯುದ್ಧಗಳು ನಡೆಯುತ್ತಿದ್ದ ಕಾರಣ ಜನ ಮುಂಗೋಪಾರ್ಕ್‌ನನ್ನು ಗೂಢಚಾರನೆಂಬ ಸಂದೇಹದಿಂದಲೇ ನೋಡುತ್ತಿದ್ದರು. ಕೆಲವು ಸಲ ಇವನನ್ನೂ ಇವನ ಸಹಚರರನ್ನೂ ಬಂಧಿಸಿ ಸೆರೆಮನೆಯಲ್ಲಿಡುತ್ತಿದ್ದರು. ವಿಚಾರಣೆಯ ನಂತರ ಬಿಡುಗಡೆ ಮಾಡುತ್ತಿದ್ದರು.

ಕೆಲವು ಹಳ್ಳಿಯ ಜನರು ಮುಂಗೋಪಾರ್ಕ್‌ನೊಂದಿಗೆ ವಿಶ್ವಾಸದಿಂದ ನಡೆದುಕೊಂಡಿದ್ದೂ ಉಂಟು. ಅವರ ಹಬ್ಬಗಳಲ್ಲಿ ಮತ್ತು ಜಾತ್ರೆಗಳಲ್ಲಿ ನೃತ್ಯ ಮಾಡುವುದನ್ನು ಮುಂಗೋಪಾರ್ಕ್ ನೋಡಿದ್ದ. ಆದರೆ ಹಳ್ಳಿಯ ಮುಖ್ಯಸ್ಥನಿಗೆ ಏನಾದರೂ ಕಾಣಿಕೆ ನೀಡಿದ ಹೊರತು ಮುಂದೆ ಹೋಗಲು ಅನುಮತಿ ದೊರೆಯುತ್ತಿರಲಿಲ್ಲ. ಇವನಿಗೆ ಸಹಾಯಕನಾಗಿದ್ದ ಜಾನ್‌ಸನ್ನನಿಗೆ ಆ ಜನರ ಭಾಷೆ ತಿಳಿದಿದ್ದ ಕಾರಣ ಪಾರ್ಕನಿಗೆ ಸಮಸ್ಯೆಗಳು ಎದುರಾಗಲಿಲ್ಲ.

ಮುಂದಿನ ಪಯಣ ಪತ್ತಕೊಂಡ ಎಂಬ ಊರಿಗೆ. ಇದು ಒಂದು ಸಣ್ಣ ರಾಜ್ಯದ ರಾಜಧಾನಿ. ನೈಜರ್ ನದಿಯ ಅನ್ವೇಷಣೆಗೆ ಹೊರಟ ಮೊದಲ ತಂಡದವರಲ್ಲಿ ಕೊನೆಯ ಯುವಕನನ್ನು ಇಲ್ಲಿಯೇ ಕೊಲೆ ಮಾಡಿದ್ದರೆಂದು ಅಲ್ಲಿಯ ಜನರಿಂದ ತಿಳಿಯಿತು. ಆದುದರಿಂದ ಮುಂಗೋಪಾರ್ಕ್‌ನೂ ಅವನ ಸಂಗಡಿಗರೂ ತುಂಬಾ ಎಚ್ಚರಿಕೆ ವಹಿಸಬೇಕಾಗಿತ್ತು. ಪಟ್ಟಣವನ್ನು ಪ್ರವೇಶಿಸಿದ ಪಾರ್ಕ್‌ನನ್ನು ರಾಜಭಟರು ಅರಮನೆಗೆ ಕರೆತಂದರು. ಅರಸನು ಪಾರ್ಕ್‌ನನ್ನು ದೀರ್ಘವಾಗಿ ವಿಚಾರಿಸಿದ. ತಾನು ನೈಜರ್ ನದಿಯನ್ನು ಕಂಡು ಹಿಡಿಯಲು ಪ್ರಯಾಣ ಮಾಡುತ್ತಿರುವುದಾಗಿ ಹೇಳಿದ ಮಾತನ್ನು ರಾಜ ನಂಬಲಿಲ್ಲ. ಒಂದು ಸಾಮಾನ್ಯ ನದಿಯನ್ನು ನೋಡಲು ಅಷ್ಟು ದೂರದಿಂದ ಇಲ್ಲಿಗೆ ಬಂದಿರುವುದು ಹುಂಬತನ, ಇಂತಹ ಸಾಹಸವು ಹುಚ್ಚುತನ ಎಂದು ವ್ಯಂಗ್ಯವಾಗಿ ಆತ ನಗೆಯಾಡಿದ.

ಪಾರ್ಕ್‌ನು ತಾನು ತಂದಿದ್ದ ಕೆಲ ವಸ್ತುಗಳೊಂದಿಗೆ ತಂಬಾಕನ್ನೂ ರಾಜನಿಗೆ ನೀಡಿದ. ತಂಬಾಕನ್ನು ಕಂಡೊಡನೆ ರಾಜನಿಗೆ ಅತೀವವಾದ ಸಂತೋಷವಾಗಿತ್ತು. ಅರಸನು ಪ್ರತಿದಿನ ಇದನ್ನು ಅನೇಕ ಸಾರಿ ಉಪಯೋಗಿಸುತ್ತಿದ್ದ. ಒಮ್ಮೊಮ್ಮೆ ಇದು ಸಿಗುವುದೇ ದುರ್ಲಭವಾಗಿತ್ತು. ಇದರೊಂದಿಗೆ ಪಾರ್ಕ್‌ನು ತಾನು ತಂದಿದ್ದ ಛತ್ರಿಯನ್ನು ರಾಜನಿಗೆ ಉಡುಗೊರೆಯಾಗಿ ನೀಡಿದ. ರಾಜನಿಗೂ ಮತ್ತು ಅವನ ಆಸ್ಥಾನಿಕರಿಗೂ ಕೊಡೆಯನ್ನು ಬಿಡಿಸುವುದು

ಮತ್ತು ಮಡಿಚುವುದು ಒಂದು ರೋಮಾಂಚಕವಾದ ಅನುಭವವಾಗಿತ್ತು. ಇದರ ಉಪಯೋಗವನ್ನು ತಿಳಿದ ಅರಸನಿಗೂ ತುಂಬಾ ಆಶ್ಚರ್ಯವಾಯಿತು. ಇದು ನಿಜವಾಗಿಯೂ ಅವರಿಗೆ ಒಂದು ಅದ್ಭುತವಾದ ಯಂತ್ರದಂತೆ ಕಂಡಿತು. ರಾಜನು ಇದನ್ನು ಮತ್ತೆ ಮತ್ತೆ ಬಿಚ್ಚುತ್ತಾ ಮಡಿಚುತ್ತಾ ಆನಂದವನ್ನು ಅನುಭವಿಸುತ್ತಿದ್ದ.

ಈ ಮಧ್ಯೆ ರಾಜನು ಮುಂಗೋಪಾರ್ಕ್ ಹಾಕಿಕೊಂಡಿದ್ದ ನೀಲಿ ಬಣ್ಣದ ಕೋಟನ್ನು ನೋಡಿದ. ಇದರ ಬಣ್ಣ ಮತ್ತು ಹೊಳೆಯುತ್ತಿದ್ದ ಗುಂಡಿಗಳು ಅವನನ್ನು ಆಕರ್ಷಿಸಿದವು. ಇದನ್ನು ತನಗೆ ಕೊಡಬೇಕೆಂದು ಕೇಳಿದಾಗ ಪಾರ್ಕ್‌ನು ಕೊಡಲೇ ಬೇಕಾಯಿತು.

ರಾಜನ ವಿಚಿತ್ರ ವೇಷ ಮುಂಗೋಪಾರ್ಕ್‌ನಿಗೆ ಮನರಂಜನೆ ನೀಡಿತು. ತಲೆಯ ಮೇಲೆ ಎತ್ತಿನ ಕೋಡಿನಂತಹ ಎಲುಬಿನ ಕಿರೀಟ. ವಿವಿಧ ಮಣಿಗಳ ಹಾರಗಳು. ನಡುವಿಗಷ್ಟೇ ಧರಿಸಿಕೊಂಡಿದ್ದ ಸಾಮಾನ್ಯ ದರ್ಜೆಯ ಉಡುಪು. ಮರದಿಂದ ಮಾಡಿದ ಒಂದು ಸಿಂಹಾಸನ. ಮಾತಿನ ನಡುವೆ ರಾಜ ಅಟ್ಟಹಾಸದಿಂದ ನಗುತ್ತಿದ್ದ. ಸಂತೋಷವಾದಾಗ ಆಸ್ಥಾನದಲ್ಲಿದ್ದವರೆಲ್ಲರೂ ವಿಚಿತ್ರವಾದ ರೀತಿಯಲ್ಲಿ ಕೂಗುತ್ತಿದ್ದರು. ಸಿಂಹಾಸನದ ಪಕ್ಕದ ಒಂದು ಪೀಠದಲ್ಲಿ ಒಂದು ಬಿಲ್ಲನ್ನೂ ಬಾಣವನ್ನೂ ಇಡಲಾಗಿತ್ತು. ಅರಸನ ಪೂರ್ವಜರಿಂದ ಇದು ಬಳುವಳಿಯಾಗಿ ಬಂದಿತ್ತು. ಹಿಂದಿನ ರಾಜರು ಯುದ್ಧದಲ್ಲಿ ಇದೇ ಬಿಲ್ಲಿನಿಂದ ಸಾವಿರಾರು ಜನರನ್ನು ಸಂಹರಿಸಿದ್ದರಂತೆ. ರಾಜನೇ ಈ ವಿಷಯವನ್ನೂ ಪಾರ್ಕ್‌ನಿಗೆ ಹೇಳಿ ತಮ್ಮ ಶೌರ್ಯ ಸಾಹಸಗಳನ್ನು ವರ್ಣಿಸಿಕೊಂಡಿದ್ದ.

ಒಮ್ಮೆ ರಾಜನು ಮುಂಗೋಪಾರ್ಕ್‌ನಿಗಾಗಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದ. ಅಂತಃಪುರದ ಅನೇಕ ಯುವತಿಯರು ಇದರಲ್ಲಿ ಭಾಗವಹಿಸಿದ್ದರು. ಬಹುಶಃ ಇವರಲ್ಲಿ ರಾಜನ ಪತ್ನಿಯರೂ ಇದ್ದಿರಬಹುದು. ಇವರೆಲ್ಲರೂ ಪಾರ್ಕ್‌ನ ಬಳಿಯಲ್ಲಿದ್ದ ಕೆಲವು ಔಷಧಗಳನ್ನು ಅಮೂಲ್ಯವಾದ ಮಣಿಯ ಹಾರವನ್ನು ತೆಗೆದುಕೊಂಡರು. ಇವರೆಲ್ಲರೂ ತುಂಬಾ ಸುಂದರಿಯರಾಗಿದ್ದರು. ಸ್ವರ್ಣಾಭರಣಭೂಷಿತರಾಗಿದ್ದರು. ಆದರೆ ಅವರ ಬಣ್ಣ ಕಪ್ಪು. ಮುಂಗೋಪಾರ್ಕ್‌ನ ಬಿಳಿಯ ಮೈ ಬಣ್ಣ ಅವರಿಗೆ ವಿಚಿತ್ರವಾಗಿ ಕಂಡಿತು. ಇವನು ಹುಟ್ಟಿದಾಗ ಬಹುಶಃ ಇವನ ತಾಯಿ ಇವನನ್ನು ಹಾಲಿನಲ್ಲಿ ಮುಳುಗಿಸಿರಬೇಕೆಂದು ಹಾಸ್ಯ ಮಾಡಿದರು. ಅವನ ಚೂಪಾದ ಮೂಗು ಸಹ ಅವರಿಗೆ ವಿಚಿತ್ರವಾಗಿ ಕಂಡಿತು. ತಮ್ಮ ಗಡ್ಡೆಯ ಮೂಗು ಕುರೂಪವೆಂದು ಅವರಿಗೆ ಹೇಗೆ ತಾನೆ ತಿಳಿದಿರಬೇಕು ? ತಾಯಿಯು ಪ್ರತಿದಿನ ಇವನ ಮೂಗನ್ನು ಚಿವುಟುತ್ತಿದ್ದುದರಿಂದ ಹೀಗೆ ಮೂಗು ಕುರೂಪಿಯಾಗಿದೆ ಎಂದು ನಕ್ಕರು. ಹೀಗೆ ಮುಂಗೋಪಾರ್ಕ್‌ನು ಎರಡು ದಿನ ರಾಜನ ಆತಿಥ್ಯವನ್ನು ಸ್ವೀಕರಿಸಿ ಆಯಾಸವನ್ನು ಪರಿಹರಿಸಿಕೊಂಡ.

ಅವನ ಮುಂದಿನ ಮಾರ್ಗ ಅವನ ಪಾಲಿಗೆ ಸುಗಮವಾಗಿರಲಿಲ್ಲ. ತೀರಾ ದುರ್ಗಮ ಪ್ರದೇಶ ಅದು. ಇಲ್ಲಿದ್ದ ದರೋಡೆಗಾರರಿಂದ ತಪ್ಪಿಸಿಕೊಳ್ಳಲು ಆಗಾಗ ಬಚ್ಚಿಟ್ಟುಕೊಳ್ಳಬೇಕಾಗಿತ್ತು. ರಾತ್ರಿ ವೇಳೆಯ ಪ್ರಯಾಣ ಮಾಡುವಾಗ ಕಾಡು ಪ್ರಾಣಿಗಳಿಂದ ಅಪಾಯ ಎದುರಾಗುತ್ತಿತ್ತು. ದಾರಿಯಲ್ಲಿ ಅಲ್ಲಲ್ಲಿ ದೊಡ್ಡ ಬೆಂಕಿಯು ಕಾಣಿಸಿಕೊಳ್ಳುತ್ತಿತ್ತು. ಅದರ ಸುತ್ತಲೂ ಜನ ಕೂಗುತ್ತಾ, ಕುಣಿಯುತ್ತಿದ್ದರು. ಪ್ರಾಣಿಯ ಮಾಂಸವನ್ನು ಬೇಯಿಸಿ ತಿನ್ನುತ್ತಿದ್ದರು.

೧೭೯೫ರ ಡಿಸೆಂಬರ್ ಕ್ರಿಸ್‌ಮಸ್ ಹಬ್ಬದ ದಿನ. ಮುಂಗೋಪಾರ್ಕ್ ಮತ್ತು ಅವನ ಸಂಗಡಿಗರು ಜೋಗ್ ಎಂಬ ಒಂದು ದೊಡ್ಡ ಗ್ರಾಮಕ್ಕೆ ಬಂದರು. ಅದು ಒಂದು ವ್ಯಾಪಾರ ಸ್ಥಳವಾಗಿತ್ತು. ಪಾರ್ಕ್‌ನು ಅಲ್ಲಿ ವಿಶ್ರಾಂತಿ ಪಡೆಯಲು ತಂಗಿದ್ದಾಗ ಸುಮಾರು ೩೦ ಮಂದಿ ಕುದುರೆ ಸವಾರರು ಅವರನ್ನು ಸುತ್ತುಗಟ್ಟಿ, "ನೀವು ಇಲ್ಲಿಯ ರಾಜನ ಅಪ್ಪಣೆ ಪಡೆಯದೇ ಬಂದಿರುವಿರಿ. ನಿಮ್ಮನ್ನು ಸೆರೆಹಿಡಿದು ಕರೆತರಲು ನಮ್ಮ ಅರಸರು ಆಜ್ಞೆಮಾಡಿದ್ದಾರೆ" ಎಂದು ಅವರನ್ನು ಒತ್ತಾಯದಿಂದ ಕರೆದುಕೊಂಡು ಹೋದರು. ಊರಿನಿಂದ ಸ್ವಲ್ಪ ದೂರ ಬಂದೊಡನೆ ಆ ಜನರು ಪಾರ್ಕ್‌ನ ಬಳಿ

ಯಿದ್ದ ವಸ್ತುಗಳನ್ನು ದೋಚಲು ಯತ್ನಿಸಿದಾಗ ಇವರು ಕಳ್ಳರೆಂದು ತಿಳಿಯಿತು. ಮುಂಗೋಪಾರ್ಕ್‌ನು ತನ್ನ ಪಿಸ್ತೂಲಿನಿಂದ ಗುಂಡು ಹಾರಿಸಿದೊಡನೆ ಅವರೆಲ್ಲ ಹೆದರಿ ಓಡಿಹೋದರು.

ಮುಂದಿನ ಪಾಳೆಯ ಪಟ್ಟಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಇನ್ನೊಂದು ವಿಪತ್ತು ಕಾದಿತ್ತು. ಅಲ್ಲಿ ಮಾರ್ಗದಲ್ಲಿ ಅರಸನ ಸೈನಿಕರು ಕಾವಲು ಕಾಯುತ್ತಿದ್ದರು. ರಾಜನಿಗೆ ತೆರಿಗೆ ಕೊಡದೆ ಯಾರನ್ನೂ ಗಡಿಯೊಳಗೆ ಬಿಡುತ್ತಿರಲಿಲ್ಲ. ತೆರಿಗೆಯ ವಿಷಯವನ್ನೂ ತಿಳಿಯದ ನಾಲ್ಕು ಜನರನ್ನು ಪಡೆಯವರು ಹಿಡಿದುಕೊಂಡರು. ಆ ಜನರು ತುಂಬಾ ಬಡವರು. ಅವರ ಬಳಿ ಏನೂ ಇರಲಿಲ್ಲ. ಆದರೂ ಆ ಸೈನಿಕರು ಅವರೆಲ್ಲರನ್ನೂ ಬಡಿದು ಕೊಂದು ಎಸೆದರು. ಈ ದೃಶ್ಯವನ್ನು ಕಂಡ ಪಾರ್ಕ್‌ನ ಮೈ ತಣ್ಣಗಾಯಿತು. ತನಗೆ ಇನ್ನು ಯಾವ ಗಂಡಾಂತರ ಎದುರಾಗುತ್ತದೋ ಎಂದು ನಡುಗತೊಡಗಿದ. ತೆರಿಗೆಕೊಡುವುದಾಗಿ ಹೇಳಿದುದರಿಂದ ಸೈನಿಕರು ಅವನನ್ನು ರಾಜನ ಬಳಿಗೆ ಕರೆತಂದರು. ತನ್ನ ಪ್ರಯಾಣದ ಉದ್ದೇಶವನ್ನು ಪಾರ್ಕ್‌ನು ಹೇಳಿದರೂ ರಾಜನಿಗೆ ಅರ್ಥವಾದಂತೆ ತೋರಲಿಲ್ಲ. ಕೊನೆಗೆ ಸ್ವಲ್ಪ ಹಣವನ್ನು ಕೊಟ್ಟನಂತರ ರಾಜನು ಅವನ ಮಾತನ್ನು ಕೇಳಿದನು. ಅಲ್ಲದೆ ಮುಂದೆ ಸೆನೆಗಲ್ ನದಿಯ ದಾರಿಯನ್ನೂ ತೋರಿಸಿಕೊಡಲು ತನ್ನ ಜನರಿಗೆ ಆತ ಆದೇಶ ನೀಡಿದ.

ಮುಂಗೋಪಾರ್ಕ್ ಕಾರ್ತ ಎಂಬ ರಾಜ್ಯಕ್ಕೆ ಬಂದಾಗ ನೆರೆಯ ರಾಜನೊಡನೆ ಯುದ್ಧ ನಡೆಯುತ್ತಿತ್ತು. ಅನುಮತಿಯಿಲ್ಲದೆ ಯಾರೂ ರಾಜ್ಯದೊಳಕ್ಕೆ ಪ್ರವೇಶ ಮಾಡುವಂತಿರಲಿಲ್ಲ. ಸಂದೇಹ ಬಂದವರನ್ನು ಒಂದು ಕಂಬಕ್ಕೆ ಕಟ್ಟಿಹಾಕಿ ಹರಿತವಾದ ಬಾಣದಿಂದ ಹೊಡೆದು ಕೊಲ್ಲಲಾಗುತ್ತಿತ್ತು. ಪಾರ್ಕ್‌ನೂ ಅವನ ಸಂಗಡಿಗರೂ ರಾಜನ ಸೈನಿಕರಿಗೆ ಶರಣಾಗತರಾಗಿ ತಮ್ಮ ಉದ್ದೇಶವನ್ನು ಹೇಳಿಕೊಂಡರು. ಅದೃಷ್ಟವಶಾತ್ ಸೈನಿಕರಿಗೆ ಇವರ ಮೇಲೆ ಸ್ವಲ್ಪ ಕರುಣೆ ಹುಟ್ಟಿದ್ದರಿಂದ ರಾಜನ ಬಳಿಗೆ ಇವರನ್ನು ಕರೆದುಕೊಂಡು ಹೋದರು. ಅರಸ ಸ್ವಲ್ಪ ಸುಸಂಸ್ಕೃತನಾಗಿದ್ದ. ಆದರೆ ಯುದ್ಧ ಕಾಲದಲ್ಲಿ ತಾನು ಯಾರನ್ನೂ ರಾಜ್ಯದಿಂದ ಹೊರಗೆ ಬಿಡುವುದಿಲ್ಲವೆಂದು ಹೇಳಿದ. ಮುಂಗೋಪಾರ್ಕ್‌ನು ತುಂಬಾ ದುಂಬಾಲು ಬಿದ್ದ ನಂತರ ರಾಜನು, ಪಾರ್ಕ್ ಮತ್ತು ಅವನ ಸಹಚರರು ತನ್ನ ರಾಜ್ಯದ ಉತ್ತರ ದಿಕ್ಕಿನಲ್ಲಿ ಮಾತ್ರ ಗಡಿಯನ್ನು ದಾಟಿ, ಅರಬ್ ದೇಶಗಳ ಕಡೆಗೆ ಹೋಗಿ, ಅಲ್ಲಿಂದ ಮುಂದೆ ಪೂರ್ವದ ಕಡೆ ಪ್ರಯಾಣ ಮಾಡಬಹುದೆಂದು ಅನುಮತಿ ನೀಡಿದ. ಆದರೆ ಈ ದಾರಿಯ ಮೂಲಕ ಸಾಗಿದರೆ ನೂರಾರು ಕಿಲೋಮೀಟರುಗಳಷ್ಟು ಹೆಚ್ಚು ದೂರ ಕ್ರಮಿಸಬೇಕಾಯಿತು. ಅಲ್ಲದೆ ಮರುಭೂಮಿಯಲ್ಲಿ ಪ್ರಯಾಣ ಮಾಡುವುದೂ ಸಾಧ್ಯವಿರಲಿಲ್ಲ. ಪಾರ್ಕ್‌ನ ಸ್ಥಿತಿ ಶೋಚನೀಯವಾಯಿತು.

ಅರಬ್ಬರು ಮತ್ತು ಕ್ರೈಸ್ತರು ಕಡುವೈರಿಗಳಾಗಿದ್ದರು. ಈಜಿಪ್ಟಿನ ಮೂಲಕ ಬಂದ ಕೆಲವು ಯುರೋಪಿಯನ್ನರು ಇಲ್ಲಿನ ಮೂಲ ನಿವಾಸಿಗಳನ್ನು ಹಿಡಿದು ಯುರೋಪಿಗೆ ಸಾಗಿಸಿ ಅಲ್ಲಿಯ ಮಾರುಕಟ್ಟೆಯಲ್ಲಿ ಮಾರಾಟಮಾಡುತ್ತಿದ್ದರು. ಈ ಗುಲಾಮರನ್ನು ಅಮೆರಿಕದ ಶ್ರೀಮಂತ ಭೂಮಾಲಿಕರು ಕೊಂಡು ತಮ್ಮ ಊರುಗಳಿಗೆ ಸಾಗಿಸಿ, ತಮ್ಮ ಭೂಮಿಯಲ್ಲಿ ಕೆಲಸ ಮಾಡಿಸುತ್ತಿದ್ದರು. ಇವರ ಸ್ಥಿತಿಯು ದಯನೀಯವಾಗಿತ್ತು. ಇವರನ್ನು ಪ್ರಾಣಿಗಳಂತೆ ನಡೆಸಿಕೊಳ್ಳಲಾಗುತ್ತಿತ್ತು. ಸಾಲದ್ದಕ್ಕೆ ಗುಲಾಮ ಹೆಣ್ಣುಗಳ ಮೇಲೆ ಅತ್ಯಾಚಾರ ನಡೆಸಲಾಗುತ್ತಿತ್ತು. ಅವರನ್ನು ಮತಾಂತರಿಸಲಾಗುತ್ತಿತ್ತು. ೧೫ನೆಯ ಶತಮಾನದಿಂದಲೇ ಅವ್ಯಾಹತವಾಗಿ ನಡೆಯುತ್ತಿದ್ದ ಈ ಈ ದುರಂತಗಳನ್ನು ತಪ್ಪಿಸಲು ಯಾರಿಗೂ ಸಾಧ್ಯವಾಗಿರಲಿಲ್ಲ.

ನಿಗ್ರೋಗಳಲ್ಲಿ ಸುಮಾರು ೫೦ ಬುಡಕಟ್ಟುಗಳಿದ್ದು ಇವುಗಳಲ್ಲಿ ಯೇರುಬಾ, ಇಬ, ಹೌಸ ಎಂಬುದು ಪ್ರಮುಖ ಬುಡಕಟ್ಟುಗಳಾಗಿದ್ದವು. ಯೇರುಬಾ ಎಂಬುದು ಒಂದು ಪ್ರಬಲ ಸಂಸ್ಥಾನವಾಗಿತ್ತು. ಈ ಎಲ್ಲ ಸಂಸ್ಥಾನಗಳನ್ನು ಅಮಿರೇಟ್ ಎಂದು ಕರೆಯುವ ವಾಡಿಕೆಯಿತ್ತು. ರಾಜನನ್ನು ಅಮೀರ್ ಎಂದು ಕರೆಯುತ್ತಿದ್ದರು. ಕೆಲವು ಅಮೀರರು ಸಂಗೀತ, ನೃತ್ಯ ಮುಂತಾದ ಕಲೆಗಳಿಗೆ

ಪ್ರೋತ್ಸಾಹ ನೀಡುತ್ತಿದ್ದರು.

ನಿಗ್ರೋಗಳು ಇಸ್ಲಾಂ ಧರ್ಮದವರಾಗಿದ್ದರು. ಇವರು ಯಾವಾಗ ಈ ಧರ್ಮಕ್ಕೆ ಸೇರಿಕೊಂಡರು ಎಂಬುದು ತಿಳಿಯುವುದಿಲ್ಲ. ಆದುದರಿಂದ ಇವರನ್ನು ಸಹ ಅರಬರೆಂದೇ ಪರಿಗಣಿಸಲಾಗಿತ್ತು. ಹೀಗೆ ನಿಗ್ರೋ ಮುಂತಾದ ಎಲ್ಲಾ ಬುಡಕಟ್ಟಿನವರೂ ಕ್ರೈಸ್ತರನ್ನು ದ್ವೇಷಿಸುತ್ತಿದ್ದರು.

೧೭೯೬ರ ಫೆಬ್ರವರಿ ಒಂದರಂದು ಮುಂಗೋಪಾರ್ಕ್ ಬಹು ಕಷ್ಟದಿಂದ ಜಾಸ್ರ ಎಂಬ ಊರನ್ನು ತಲುಪಿದ. ಹಾದಿಯಲ್ಲಿ ಇವನ ಸಂಗಡಿಗರು ತಲೆತಪ್ಪಿಸಿಕೊಂಡರು. ದರೋಡೆಗಾರರು ಏಕಾಕಿಯಾಗಿದ್ದ ಪಾರ್ಕ್‌ನಿಗೆ ಮುತ್ತಿಗೆ ಹಾಕಿ ಅವನಲ್ಲಿದ್ದ ವಸ್ತುಗಳನ್ನು ಅಪಹರಿಸಿದರು. ಇಲ್ಲಿಯ ಅಮೀರನಾದ ಅಲಿಯ ಪತ್ನಿಯು ಒಬ್ಬ ಜೀವಂತ ಕ್ರೈಸ್ತನನ್ನು ನೋಡಲು ಇಷ್ಟಪಟ್ಟದ್ದರಿಂದ ಪಾರ್ಕ್‌ನನ್ನು ಇವಳ ಎದುರಿನಲ್ಲಿ ನಿಲ್ಲಿಸಲಾಯಿತು. ಇವನನ್ನು ನೋಡಲು ನೂರಾರು ಜನರು ಸುತ್ತುವರಿದರು. ಪಾರ್ಕ್‌ನಿಗೆ ಮುಂದೆ ಹೋಗಲೂ ಸಾಧ್ಯವಾಗಲಿಲ್ಲ. ಜನರು ಇವನಿಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಅವನ ಜೇಬುಗಳನ್ನು ಹುಡುಕಿದರು. ಕೋಟಿನ ಗುಂಡಿಗಳನ್ನು ಬಿಚ್ಚಿ ಅವನ ಬಿಳಿ ಮೈಯನ್ನು ಕುತೂಹಲದಿಂದ ನೋಡಿದರು. ಅವನ ಕಾಲು ಬೆರಳು ಮತ್ತು ಕೈ ಬೆರಳನ್ನು ಎಣಿಸಿ 'ಇವನು ನಿಜವಾದ ಮನುಷ್ಯ' ಎಂಬುದನ್ನು ಖಚಿತಪಡಿಸಿಕೊಂಡರು.

ಈ ಅಮೀರನಿಗೆ ಕ್ರಿಶ್ಚಿಯನ್ನರು ಕಡುವೈರಿಗಳಾಗಿದ್ದರು. ಈ ಕ್ರಿಶ್ಚಿಯನ್ನನನ್ನು ಒಮ್ಮೆಲೆ ಕೊಲ್ಲುವುದಕ್ಕಿಂತ ಸಾವಕಾಶವಾಗಿ ತಾನಾಗಿಯೇ ಸತ್ತು ಹೋಗಲಿ ಎಂದು ಸೆರೆಮನೆಗೆ ಕಳುಹಿಸಲಾಯಿತು. ಅದೃಷ್ಟವಶಾತ್ ಇವನಲ್ಲಿದ್ದ ಯಾವ ವಸ್ತುಗಳನ್ನೂ ಬಲಾತ್ಕಾರವಾಗಿ ಕಿತ್ತುಕೊಳ್ಳಲಿಲ್ಲ. ಈ ಸೆರೆಮನೆಯು ಹಂದಿಗಳನ್ನು ಸಾಕುವ ಸ್ಥಳವಾಗಿತ್ತು. ಹುಡುಗರು ಪ್ರತಿದಿನ ಅಲ್ಲಿಗೆ ಬಂದು ಕಲ್ಲುಗಳಿಂದ ಹಂದಿಗಳನ್ನು ಹೊಡೆಯುತ್ತಿದ್ದರು. ದೊಡ್ಡವರು ಇವನ ಎದುರಿನಲ್ಲಿಯೇ ಹಂದಿಗಳನ್ನು ಕಡಿದು ಮಾಂಸದ ವ್ಯಾಪಾರ ಮಾಡುತ್ತಿದ್ದರು. ಹೊಲಸು ಮತ್ತು ದುರ್ನಾತದಿಂದ ಕೂಡಿದ ನೆಲದ ಮೇಲೆ ಮುಂಗೋಪಾರ್ಕ್ ಮಲಗಬೇಕಾಗಿತ್ತು. ಹೊಟ್ಟೆ ತುಂಬಾ ಊಟವನ್ನು ಕೊಡುತ್ತಿರಲಿಲ್ಲ. ಕುಡಿಯಲು ಸಾಕಷ್ಟು ನೀರನ್ನು ನೀಡುತ್ತಿರಲಿಲ್ಲ. ಸೆರೆಮನೆಯ ಪಕ್ಕದಲ್ಲಿದ್ದ ಬಾವಿಗೆ ನೀರು ಸೇದಲು ಬಂದ ಹೆಂಗಸರನ್ನು ನೀರಿಗಾಗಿ ಪರಿಪರಿಯಾಗಿ ಬೇಡಿಕೊಂಡರೂ ಅವರು ನೀರನ್ನು ಕೊಡುತ್ತಿರಲಿಲ್ಲ. ಬದಲು ಬಿಳಿ ತೊಗಲಿನ ಈ ಕ್ರೈಸ್ತನು ತನ್ನ ತುಟಿಯಿಂದ ನೀರು ಮುಟ್ಟಿದರೆ ಭಯಂಕರವಾದ ಕ್ಷಾಮಬರುತ್ತದೆ, ನೀರು ಮಲಿನವಾಗುತ್ತದೆ ಎಂದು ನಂಬಿದ ಅವರು ಅವರ ಭಾಷೆಯಲ್ಲಿ ಬಾಯಿಗೆ

> **ಕಡಿತ**
>
> ಭಾರೀ ಕಡಿತದ
> ಅಂಗಡಿಯಿಂದ ಸೀರೆ
> ಕೊಂಡು ನಲಿಯುತ
> ಬಂದು ಉಟ್ಟುಕೊಂಡಳು
> ನೋಡಿದರೆ
> ಸೆರಗೇ ಇಲ್ಲ
> ಭಾರೀ ಕಡಿತದ
> ಪರಿಣಾಮ
>
> ● ರಮೇಶಚಂದ್ರ

ಬಂದಂತೆ ಬಯ್ಯುತ್ತಿದ್ದರು. ಉಗುಳುತ್ತಿದ್ದರು.

ಸೆರೆಮನೆಯ ಮೂಲೆಯಲ್ಲಿ ಒಂದು ಪುಟ್ಟ ತೊಟ್ಟಿಯಿತ್ತು. ಹಿಂದೆ ಅಲ್ಲಿ ಹಸುಗಳನ್ನು ಕಟ್ಟುತ್ತಿದ್ದರಂತೆ. ಹಸುಗಳು ಕುಡಿಯಲೆಂದು ಎಷ್ಟೋ ದಿನಗಳ ಹಿಂದೆ ಹಾಕಿದ ನೀರು ಹಾಗೆಯೇ ಉಳಿದಿತ್ತು. ಪಾರ್ಕ್‌ನು ಅದನ್ನೇ ಚಪ್ಪರಿಸಿ ಬಾಯಾರಿಕೆಯನ್ನು ತಣಿಸಿಕೊಳ್ಳಬೇಕಾಯಿತು. "ಇವರು ಪ್ರಪಂಚದ ಅತ್ಯಂತ ಕ್ರೂರ ಅನಾಗರಿಕರು" ಎಂದು ಮುಂಗೋಪಾರ್ಕ್ ತನ್ನ ಡೈರಿಯಲ್ಲಿ ಬರೆದಿದ್ದಾನೆ.

ಈ ನರಕ ವಾಸದಿಂದ ಮುಂಗೋಪಾರ್ಕ್ ಅರೆಜೀವವಾಗಿದ್ದ. ಅವನ ಕುದುರೆಗೆ ಮಾತ್ರ

ಅಷ್ಟಿಷ್ಟು ಆಹಾರ ಕೊಡುತ್ತಿದ್ದರು. ಅರಬ್ಬರಿಗೆ ಕುದುರೆಯ ಮೇಲೆ ತುಂಬಾ ಮಮತೆ. ಅದನ್ನು ಯಾವ ಕಾರಣದಿಂದಲೂ ಕೊಲ್ಲುತ್ತಿರಲಿಲ್ಲ. ಹೀಗಾಗಿ ಪಾರ್ಕ್‌ನ ಕುದುರೆಯು ಸುರಕ್ಷಿತವಾಗಿತ್ತು.

ಇದ್ದಕ್ಕಿದ್ದಂತೆ ಕಾರ್ಕ್ ದೇಶದ ರಾಜ ಈ ಆಮೀರನ ರಾಜ್ಯಕ್ಕೆ ಲಗ್ಗೆ ಹಾಕಿದ. ಅವನ ಸೈನಿಕರು ಕೊಳ್ಳೆ ಹೊಡೆಯುತ್ತಾ ಮನೆಗಳಿಗೂ ಬೆಂಕಿಯಿಟ್ಟರು. ಜನರು ಹೆದರಿ ಓಡಿ ಹೋದರು. ಈ ಗಲಾಟೆಯ ಮಧ್ಯೆ ಮುಂಗೋಪಾರ್ಕ್ ಸೆರೆಮನೆಯಿಂದ ತಪ್ಪಿಸಿಕೊಂಡು ತನ್ನ ಕುದುರೆಯ ಮೇಲೇರಿ ಅಲ್ಲಿಂದ ಪಾರಾಗಿ ಹೊರಟ. ಅದನ್ನು ಗಮನಿಸಿದ ಮೂರು ಜನ ಅರಬರು ಇವನ ಬೆನ್ನು ಹತ್ತಿದರು. ಮುಂಗೋಪಾರ್ಕ್ ಅವರಿಗೆ ಸ್ವಲ್ಪ ಹಣವನ್ನು ಕೊಟ್ಟು ಮತ್ತೆ ಅಪಾಯದಿಂದ ಪಾರಾದ.

ಹೊಟ್ಟೆತುಂಬಾ ತಿನ್ನದೆ ಅದೆಷ್ಟೋ ದಿನಗಳಾಗಿದ್ದವು. ಹಸಿವಿನಿಂದ ಬಳಲುತ್ತಿದ್ದ. ಉರಿ ಬಿಸಿಲು ಬೇರೆ. ಅವನ ಬಾಯಿ ತುಂಬಾ ಗುಳ್ಳೆಗಳು ಕಾಣಿಸಿಕೊಂಡವು. ಸಾಲದ್ದಕ್ಕೆ ಸೆರೆಮನೆಯವಾಸ ನೆನಪಾದಾಗ ಮೈ ಜುಂ ಎನ್ನುತ್ತಿತ್ತು. ಬಾಯಿಯ ಉರಿಯನ್ನು ತಡೆಯಲಾಗದೆ ಹಸಿರು ಎಲೆಗಳನ್ನು ಜಗಿಯುತ್ತಿದ್ದ. ಆದರೆ ಆ ಎಲೆಗಳಲ್ಲಿ ಕೆಲವು ತುಂಬಾ ಕಹಿಯಾಗಿರುತ್ತಿದ್ದವು. ನಾಲಿಗೆ ಒಣಗಿ ಉರಿಯುತ್ತಿತ್ತು. ಎಷ್ಟು ಪ್ರಯಾಣಿಸಿದರೂ ದಾರಿ ಸವೆಯುತ್ತಿರಲಿಲ್ಲ. ಅಷ್ಟು ದೂರ ಕಾಡು. ಮತ್ತೆ ಕುರುಚಲು ಗಿಡಗಳು. ಅದರಾಚೆ ಮರುಭೂಮಿ. ಇದ್ದಕ್ಕಿದ್ದಂತೆ ಬೀಸುವ ಬಿರುಗಾಳಿ! ಇದರ ರಭಸಕ್ಕೆ ಸಿಕ್ಕ ಮರಳು ನಭೋಮಂಡಲಕ್ಕೇರುತ್ತಿತ್ತು. ಮುಂಗೋಪಾರ್ಕ್‌ನ ಕುದುರೆ ದುರ್ಬಲವಾಗಿತ್ತು. ಅದನ್ನು ನಡೆಸಿಕೊಂಡೇ ಮುಂಗೋಪಾರ್ಕ್ ಮತ್ತೆ ಕಾಡನ್ನು ಪ್ರವೇಶಿಸಿದ. ಬಿರುಗಾಳಿ ಅಲ್ಲಿಯೂ ಸಾಕಷ್ಟು ಹಾವಳಿ ಮಾಡಿತ್ತು. ಮರಗಿಡಗಳು, ಕೊಂಬೆ ರೆಂಬೆಗಳು ಉರುಳಿ ಬಿದ್ದಿದ್ದವು.

ಅಲ್ಲಿ ಹರಿಯುತ್ತಿರುವ ಹಳ್ಳವನ್ನು ನೋಡಿದಾಗ ಮುಂಗೋಪಾರ್ಕ್‌ನಿಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿದ ಹಾಗಾಯಿತು. ನೀರು ಒಂದೆಡೆಯಲ್ಲಿ ಪುಟ್ಟ ಕೆರೆಯನ್ನು ನಿರ್ಮಿಸಿತ್ತು. ಅದೆಷ್ಟೋ ದಿನಗಳಿಂದ ಸ್ನಾನ ಮಾಡದ ಪಾರ್ಕ್ ಸ್ನಾನ ಮಾಡಿ ತನ್ನ ಕುದುರೆಯ ಮೈಯನ್ನು ಚೆನ್ನಾಗಿ ಉಜ್ಜಿದ. ಎದುರಿನ ಮರದಲ್ಲಿ ನೇರಿಳೆ ಹಣ್ಣುಗಳ ಗೊಂಚಲು ಕಾಣಿಸಿತು. ಹಣ್ಣು ಯಾವುದೆಂದು ತಿಳಿಯದಿದ್ದರೂ ಸಿಹಿಯಾಗಿದ್ದುದರಿಂದ ಅದನ್ನು ಯಥೇಚ್ಛವಾಗಿ ತಿಂದ. ಮುಂದಿನ ಪಯಣಕ್ಕೆಂದು ಇನ್ನಷ್ಟು ಹಣ್ಣುಗಳನ್ನು ಕಟ್ಟಿಕೊಂಡ. ಮುಂದೆ ಸ್ವಲ್ಪ ದೂರದಲ್ಲಿಯೇ ಹಲಸಿನ ಹಣ್ಣುಗಳನ್ನು ಸೀಳಿ ತೊಳೆಗಳನ್ನು ಬಿಡಿಸಿ ತಿಂದ.

ಪಾರ್ಕ್‌ನಿಗೆ ಈಗ ಇನ್ನಷ್ಟು ಶಕ್ತಿ ಬಂದಂತಾಗಿತ್ತು. ಆದರೆ ಕುದುರೆ ಏಕೋ ದುರ್ಬಲವಾಗಿತ್ತು. ದಾರಿಯಲ್ಲಿ ಎದುರಾದ ಜನರಿಂದ ಅವರು ಯಾವುದೋ ಸಮಾರಂಭಕ್ಕೆ ದೂರದ ಊರಿಗೆ ಹೋಗುತ್ತಿರುವುದಾಗಿ ತಿಳಿಯಿತು. ಅವರಿಗೆ ಸ್ವಲ್ಪ ಹಣ ನೀಡಿ ಬೇಯಿಸಿದ ಹುರುಳಿಯನ್ನು ಕೊಂಡುಕೊಂಡು ಕುದುರೆಗೆ ತಿನ್ನಿಸಿದ. ಸ್ವಲ್ಪ ದೂರದಲ್ಲಿ ದೊಡ್ಡ ಊರೊಂದು ಸಿಗುವುದಾಗಿಯೂ ಅಲ್ಲಿ ತುಂಬಾ ಎಚ್ಚರಿಕೆಯಿಂದಿರಬೇಕೆಂದೂ ಆ ಜನರು ಹೇಳಿದರು. ಆದರೆ ಏಕೆಂದು ಮಾತ್ರ ಹೇಳಲಿಲ್ಲ.

ಮುಂದೆ ಸಾಗಿದಾಗ ದಾರಿಯಲ್ಲಿ ಒಂದೆರಡು ಹುಲ್ಲುಗುಡಿಸಲು ಸಿಕ್ಕಿದವು. ಆದರೆ ಅದರಲ್ಲಿ ಯಾರೂ ವಾಸವಾಗಿದ್ದಂತೆ ಕಾಣಲಿಲ್ಲ. ವಿಶ್ರಾಂತಿ ಪಡೆಯಲು ಮುಂಗೋಪಾರ್ಕ್ ಒಂದು ಮರದ ಬೇರಿನ ಮೇಲೆ ತಲೆಯಿಟ್ಟು ಮಲಗಿದ. ಗಾಢನಿದ್ರೆ ಬಂದಿತ್ತು. ಆದರೆ ಇದ್ದಕ್ಕಿದ್ದಂತೆ ಅವನಿಗೆ ಉಸಿರುಗಟ್ಟಿದಂತಾಯಿತು. ವಾಸ್ತವವಾಗಿ ಅವನು ಮಲಗಿದ್ದು ಮರದ ಬೇರಿನ ಮೇಲಲ್ಲ ಒಂದು ಹೆಬ್ಬಾವಿನ ಮೇಲೆ. ಅದು ಅವನ ಕುತ್ತಿಗೆಯನ್ನು ಸುತ್ತು ಹಾಕಿತ್ತು. ಪಾರ್ಕ್‌ನು ಅತ್ಯಂತ ಕಷ್ಟದಿಂದ ಕೊಸರಾಡುತ್ತ ತನ್ನ ಬಂದೂಕಿನ ಮೂತಿಯಿಂದ ಚೆನ್ನಾಗಿ ತಿವಿದ. ಹಿಡಿತ ಸಡಿಲವಾಯಿತು. ಮುಂಗೋಪಾರ್ಕ್ ತನ್ನ ತಲೆಯನ್ನು ಮೆಲ್ಲನೆ ಸರಿಸಿಕೊಂಡ. ಅತ್ತಕಡೆ ಅವನ ಕುದುರೆ ಒಂದೇ ಸವನೆ ಕೆನೆಯುತ್ತಿತ್ತು. ಒಂದು ಕಪ್ಪು ಬಣ್ಣದ ಸರ್ಪ ಕುದುರೆಯ

ಕಾಲನ್ನು ಸುತ್ತು ಹಾಕಿತ್ತು. ಕಾಲನ್ನು ಜಾಡಿಸಿದ್ದರ ರಭಸಕ್ಕೆ ಎದುರಿನ ಬಂಡೆಗೆ ಅಪ್ಪಳಿಸಿ ಅಷ್ಟು ದೂರದಲ್ಲಿ ಬಿದ್ದ ಆ ಹಾವು ಎಲ್ಲಿಗೋ ಹರಿದು ಹೋಯಿತು. ಪಾರ್ಕ್‌ನು ಭಯದಿಂದ ತತ್ತರಿಸುತ್ತಿದ್ದ.

ಮುಂದಿನ ಊರನ್ನು ತಲುಪಿದಾಗ ರಾತ್ರಿಯಾಗಿತ್ತು. ಊರಿನ ಸುತ್ತಲೂ ಕೋಟೆ. ಅಗಸೆ ಬಾಗಿಲನ್ನು ಹಾಕಲಾಗಿತ್ತು. ಪಾರ್ಕ್‌ನು ಊರ ಹೊರಗಿನ ಒಂದು ಗುಡಿಯ ಬಳಿಯ ಮರಕ್ಕೆ ತನ್ನ ಕುದುರೆಯನ್ನು ಕಟ್ಟಿಹಾಕಿ ತಾನು ಜಗಲಿಯ ಮೇಲೆ ಮಲಗಿಕೊಂಡ.

ಕಣ್ಣು ತೆರೆದಾಗ ಜನ ಸಂಚಾರ ಆರಂಭವಾಗಿತ್ತು. ಕೋಟೆಯ ಬಾಗಿಲು ತೆರೆದಿತ್ತು. ಮುಂಗೋ ಪಾರ್ಕ್ ಊರ ಒಳಗೆ ಹೋದ. ಅಲ್ಲಿ ಎಲ್ಲೆಲ್ಲೂ ಹೆಂಗಸರು ಮಾತ್ರ ಕಾಣಿಸುತ್ತಿದ್ದರು. ಎಲ್ಲ ವ್ಯವಹಾರವನ್ನೂ ಅವರೇ ನೋಡಿಕೊಳ್ಳುತ್ತಿದ್ದರು. ಒಂದು ಸಣ್ಣ ಅಂಗಡಿಯಲ್ಲಿ ಪಾರ್ಕ್‌ನು ಹಣ್ಣು ಕಡಲೆ ಮೊದಲಾದ ವಸ್ತುಗಳನ್ನು ಕೊಂಡುಕೊಂಡ. ತನ್ನ ಕುದುರೆಗೂ ಒಂದಿಷ್ಟು ಆಹಾರ ಕೊಂಡು ಅಲ್ಲಿಯ ಹೆಂಗಸರಿಂದ ಆ ರಾಜ್ಯದ ವಿಷಯ ತಿಳಿದುಕೊಂಡ.

ಈ ಊರಿನ ಯುವಕರು ಒಳ್ಳೆಯ ವೀರಾಗ್ರಣಿಗಳಾಗಿದ್ದರು. ಬಹುಪಾಲು ಮಂದಿ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಸೈನ್ಯಕ್ಕೆ ಸೇರಿಕೊಂಡರು. ಯುದ್ಧದಲ್ಲಿ ಸತ್ತು ಹೋದರು. ಇನ್ನಷ್ಟು ಮಂದಿಯನ್ನು ಯುರೋಪಿಯನ್ನರು ಗುಲಾಮರನ್ನಾಗಿ ಕರೆದುಕೊಂಡು ಹೋದರ . ಮೊದಲೆ ಅಲ್ಲಿ ಗಂಡು ಸಂತಾನವಾಗುವುದು ತೀರಾ ಕಡಿಮೆ. ಇಂತಹ ಅನಾಹುತಗಳಿಂದ ಆ ಊರಿನಲ್ಲಿ ೪-೫ ಜನ ಮಾತ್ರ ಮುದುಕರು ಉಳಿದುಕೊಂಡಿದ್ದರು. ಅವರು ಸಹ ಆಗ ಹಾಸಿಗೆ ಹಿಡಿದಿದ್ದರು.

ಆ ಊರು ಒಂದು ಪಾಳೆಯಪಟ್ಟಿನ ರಾಜಧಾನಿ. ಒಬ್ಬ ರಾಣಿಯು ಇದನ್ನು ಆಳುತ್ತಿದ್ದಳು. ಹೆಂಗಸರು ಕುಳ್ಳಗೆ ದಪ್ಪಪುಷ್ಟವಾಗಿ ಬಲಿಷ್ಠರಾಗಿದ್ದರು. ಕುದುರೆ ಸವಾರಿ ಮತ್ತು ಯುದ್ಧದಲ್ಲಿಯೂ ಪರಿಣತರಾಗಿದ್ದರು. ಹೆಂಗಸರ ಸೈನ್ಯ ರಾಜ್ಯವನ್ನು ರಕ್ಷಿಸುತ್ತಿತ್ತು. ಕಪ್ಪು ಮೋರೆಯ ದಪ್ಪ ಮೂಗಿನ ಕುಳ್ಳ ದೇಹದ ಬಹುಪಾಲು ಹೆಂಗಸರ ಪೈಕಿ ಬಹುಪಾಲು ಜನ ಕುರೂಪಿಗಳಾಗಿದ್ದರೂ ಕೆಲವರು ಸುಂದರಿಯರೂ ಇದ್ದರು.

ಹಾಗೆಯೇ ಊರನ್ನು ಸುತ್ತುತ್ತಿರುವಾಗ ರಾಜಭಟರು ಪಾರ್ಕ್‌ನನ್ನು ಅರಮನೆಗೆ ಕರೆದುಕೊಂಡು ಹೋದರು. ರಾಣಿಯು ಸಿಂಹಾಸನದ ಮೇಲೆ ಕುಳಿತಿದ್ದಳು. ಆಸ್ಥಾನದಲ್ಲಿದ್ದವರೆಲ್ಲರೂ ಹೆಂಗಸರು. ರಾಣಿಯು ತುಂಬಾ ಚೆಲುವೆ. ಮಿಕ್ಕವರಂತೆ ಕುಳ್ಳಗಿರಲಿಲ್ಲ. ಅವಳ ಸೇವಕಿಯರೂ ಅಂದಗಾತಿಯರು, ಯುವತಿಯರು. ಈವರೆಗೆ ಮುಂಗೋ ಪಾರ್ಕ್‌ನಂತಹ ಆಜಾನುಬಾಹುವಾದ ಕೆಂಪುಬಣ್ಣದ ವ್ಯಕ್ತಿಯನ್ನೇ ನೋಡಿರಲಿಲ್ಲ. ಅಂತಃಪುರದ ಚೆಲುವೆಯರಂತೂ ಪಾರ್ಕ್‌ನನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು.

ಕೆಲವು ದಿನಗಳ ಕಾಲ ತನ್ನ ಅತಿಥಿಯಾಗಿರಬೇಕೆಂದು ರಾಣಿಯು ಮುಂಗೋಪಾರ್ಕ್‌ನನ್ನು ಕೇಳಿಕೊಂಡಳು. ಪಾರ್ಕ್‌ನಿಗೂ ವಿಶ್ರಾಂತಿಯ ಅಗತ್ಯವಿತ್ತು. ವೈಭವೋಪೇತವಾದ ಅರಮನೆಯ ಜೀವನ, ಚೆಲುವೆಯರ ಸಾನ್ನಿಧ್ಯ, ನೃತ್ಯ, ಸಂಗೀತಾದಿಗಳು ಅವನ ಮನಸ್ಸನ್ನು ರಂಜಿಸಿದವು. ರಾಣಿಯು ಅವನನ್ನು ತುಂಬಾ ಪ್ರೀತಿಸುತ್ತಿದ್ದಳು.

ಒಂದು ತಿಂಗಳ ಕಾಲ ಕಳೆದದ್ದೇ ಗೊತ್ತಾಗಲಿಲ್ಲ. ರಾಣಿಯ ಅಧಿಕಾರವೂ ಸ್ಥಿರವಲ್ಲವೆಂಬುದು ಮುಂಗೋಪಾರ್ಕ್‌ನಿಗೆ ಕ್ರಮೇಣ ತಿಳಿಯಿತು. ನ್ಯಾಯವಾಗಿ ಸಿಂಹಾಸನಕ್ಕೆ ಹಕ್ಕುದಾರಳಾದ ಇನ್ನೊಬ್ಬ ಯುವತಿಯನ್ನು ಬದಿಗೊತ್ತಿ ಈಗಿನ ರಾಣಿಯು ಅಧಿಕಾರ ಸೂತ್ರವನ್ನು ಹಿಡಿದಿದ್ದಳು. ಆದರೆ ಇವಳಿಗೆ ಆಡಳಿತದ ಅನುಭವವಿರಲಿಲ್ಲ. ಯೂರೋಪಿನ ಒಬ್ಬ ಕ್ರಿಶ್ಚಿಯನ್ ಯುವಕನೊಬ್ಬನೊಡನೆ ಅವಳಿರುವುದನ್ನು ಸಹಿಸುವುದು ಪ್ರಜೆಗಳಿಂದಾಗಲಿಲ್ಲ. ರಾಜ್ಯದ ಇನ್ನೊಂದು ಗುಂಪು ನಿಜವಾದ ರಾಣಿಯನ್ನು ಮತ್ತೆ ಅಧಿಕಾರಕ್ಕೆ ತರಲು ಪ್ರಯತ್ನಿಸುತ್ತಿತ್ತು.

ಒಂದು ರಾತ್ರಿ ಪ್ರತಿ ಪಕ್ಷದ ರಾಣಿಯ ಸೈನ್ಯ

ಅರಮನೆಯೊಳಗೆ ನುಗ್ಗಿ ರಾಣಿಯ ಕಡೆಯವರಲ್ಲಿ ಕೆಲವರನ್ನು ಕೊಂದು ಹಾಕಿತು. ಇಬ್ಬರು ಗಂಡಸರು ಮುಂಗೋಪಾರ್ಕ್‌ನು ಮಲಗಿದ್ದ ಕೋಣೆಗೆ ನುಗ್ಗಿ ಅವನತ್ತ ಕತ್ತಿಯನ್ನು ಬೀಸಿದರು. ಆತ್ಮ ರಕ್ಷಣೆಗೆಂದು ಮೊದಲೇ ಸಿದ್ಧವಾಗಿಕೊಂಡಿದ್ದ ಪಿಸ್ತೂಲನ್ನು ಎತ್ತಿ ಪಾರ್ಕ್‌ನು ಗುರಿ ಹಿಡಿದಾಗ ಅವರು ಓಡಿ ಹೋದರು. ಅವರು ಜಾನ್‌ಸನ್ ಮತ್ತು ದೆಂಬರ್ ಎಂದು ತಿಳಿದಾಗ ಮುಂಗೋಪಾರ್ಕ್‌ನಿಗೆ ಆಶ್ಚರ್ಯವಾಯಿತು.

ಪ್ರಯಾಣದ ನಡುವೆ ಕಾಣೆಯಾಗಿದ್ದ ಜಾನ್‌ಸನ್ ಮತ್ತು ದೆಂಬರ್ ಇಲ್ಲಿಗೆ ಹೇಗೆ ಬಂದರೆಂಬುದು ಪಾರ್ಕ್‌ನಿಗೆ ತಿಳಿಯಲಿಲ್ಲ. ವಾಸ್ತವವಾಗಿ ಪ್ರತಿಪಕ್ಷದ ರಾಣಿಯು ಜಾನ್‌ಸನ್‌ನನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡಿದ್ದಳು. ಇವನು ಕೂಡ ಬಲಿಷ್ಠ ವ್ಯಕ್ತಿ. ಮಂತ್ರಿಯ ಮಗಳೊಬ್ಬಳು ದೆಂಬರ್‌ನನ್ನು ಪ್ರೀತಿಸುತ್ತಿದ್ದಳು. ಇವರಿಬ್ಬರ ಸಹಾಯದಿಂದ ರಾಜ್ಯಕ್ಕೆ ಹಕ್ಕುದಾರಳಾಗಿದ್ದ ರಾಣಿಯು ಒಮ್ಮೆಲೇ ಆಕ್ರಮಣ ನಡೆಸಿದ್ದಳು. ತನಗೆ ಆಶ್ರಯ ನೀಡಿದ್ದ ರಾಣಿಯನ್ನು ರಕ್ಷಿಸಲು ಮುಂಗೋಪಾರ್ಕ್ ಪಿಸ್ತೂಲಿನಿಂದ ಗುಂಡುಗಳನ್ನು ಹಾರಿಸಿದ. ಹಲವರು ಸತ್ತರು, ಕೆಲವರು ಗಾಯಗೊಂಡರು. ಉಳಿದವರು ಓಡಿಹೋದರು. ರಾಣಿಯು ಅಪಾಯದಿಂದ ಪಾರಾಗಿದ್ದಳು.

ಮುಂಗೋಪಾರ್ಕ್‌ನನ್ನು ಪ್ರೀತಿಸುತ್ತಿದ್ದ ರಾಣಿಯು ಅವನನ್ನೇ ಮದುವೆಯಾಗುವುದಾಗಿಯೂ ಹೇಳಿದಳು. ಆದರೆ ಪಾರ್ಕ್‌ನಿಗೆ ಇದು ಯಾವುದೂ ಇಷ್ಟವಿರಲಿಲ್ಲ. ಅವನಿಗೆ ರಾಜ್ಯಾಧಿಕಾರವೂ ಬೇಡವಾಗಿತ್ತು. ಗುರಿ ಸಾಧನೆಯ ಹೊರತು ಬೇರಾವುದರಲ್ಲೂ ಅವನಿಗೆ ಆಸಕ್ತಿಯಿರಲಿಲ್ಲ. ರಾಣಿಗೆ ಈ ವಿಷಯವನ್ನು ತಿಳಿಸಿ ತಾವಿಬ್ಬರೂ ಬೇರೆಯಾಗಲೇಬೇಕೆಂದು ಹೇಳಿದ. ಆದರೆ ಅವನನ್ನು ಅಗಲಿರುವುದು ರಾಣಿಗೆ ಇಷ್ಟವಿರಲಿಲ್ಲ. ಆದರೂ ಮುಂಗೋಪಾರ್ಕ್ ಪ್ರಯಾಣಕ್ಕೆ ಸಿದ್ಧನಾದ. ತನ್ನ ನೆನಪಿಗಾಗಿ ಒಂದು ಪಿಸ್ತೂಲನ್ನು ಅವಳಿಗೆ ಕೊಟ್ಟು ಅದನ್ನು ಬಳಸುವ ಕ್ರಮವನ್ನೂ ಹೇಳಿಕೊಟ್ಟ.

ಅಷ್ಟು ದಿನ ಲಾಯದಲ್ಲಿದ್ದ ಕುದುರೆಗೆ ಯಾವುದೋ ರೋಗ ತಗುಲಿ ಅದು ದುರ್ಬಲವಾಗಿತ್ತು. ಸರಿಯಾಗಿ ಆಹಾರವನ್ನೂ ತಿನ್ನುತ್ತಿರಲಿಲ್ಲ. ಆದರೂ ನಿರ್ವಾಹವಿಲ್ಲದೆ ತನ್ನ ಒಡೆಯನನ್ನು ಹಿಂಬಾಲಿಸುತ್ತಿತ್ತು. ಮುಂದೆ ಎರಡು ದಿನ ಪ್ರಯಾಣಿಸಿದ ಅದು ಇದ್ದಕ್ಕಿದ್ದಂತೆ ನೆಲಕ್ಕೆ ಬಿತ್ತು. ತನ್ನ ಯಜಮಾನನನ್ನು ನೋಡುತ್ತಿರುವಂತೆ ಅದರ ಕಣ್ಣಿನಲ್ಲಿ ನೀರು ಇಳಿಯುತ್ತಿತ್ತು. ಸ್ವಲ್ಪ ಹೊತ್ತಿನಲ್ಲೇ ಅದರ ಪ್ರಾಣ ಪಕ್ಷಿ ಹಾರಿಹೋಯಿತು. ಅವನಿಗೆ ಅತೀವವಾದ ದುಃಖವಾಗಿತ್ತು. ಅವನ ಆಪ್ತಗೆಳೆಯ, ವಿಶ್ವಾಸಿ ಬಂಧು ಹೀಗೆ ಏನೆಲ್ಲವೂ ಆಗಿದ್ದ ತನ್ನ ಜೀವದ ಹಂಗು ತೊರೆದು ಎಷ್ಟೋ ಬಾರಿ ತನ್ನ ಒಡೆಯನನ್ನು ಅಪಾಯದಿಂದ ಪಾರುಮಾಡಿತ್ತು. ಮುಂಗೋಪಾರ್ಕ್ ಕೊನೆಯ ಬಾರಿ ಅದಕ್ಕೆ ತನ್ನ ಅಶ್ರುತರ್ಪಣವನ್ನರ್ಪಿಸಿ ಪ್ರಯಾಣವನ್ನು ಮುಂದುವರಿಸಿದ.

ಮುಂಗೋಪಾರ್ಕ್‌ನಿಗೆ ಸದಾ ನೈಜರ್ ನದಿಯದೇ ಕನಸು. ಆದರೆ ತಿಂಗಳುಗಳು ಕಳೆದರೂ ಅದರ ಸುಳಿವಿಲ್ಲ. ಒಮ್ಮೊಮ್ಮೆ ತಾನು ಬಂದ ಹಾದಿಯು ತಪ್ಪಾಗಿರಬಹುದೆನಿಸುತ್ತಿತ್ತು. ಆದರೆ ದಾರಿ ತಪ್ಪಿದ್ದರೆ ಸರಿದಾರಿ ತೋರಿಸುವವರು ಯಾರೂ ಇರಲಿಲ್ಲ. ಹೀಗೆಯೇ ಮುಂದುವರೆದು ಒಂದು ಊರನ್ನು ತಲುಪಿದ. ಅಲ್ಲಿ ಪ್ರಯಾಣಕ್ಕೆ ಅಗತ್ಯವಾದ ಮತ್ತೊಂದು ಕುದುರೆಯನ್ನು ಕೊಂಡುಕೊಂಡ. ಒಂದು ದಿನ ಪಾರ್ಕ್‌ನಿಗೆ ನಿಗ್ರೋ ಪ್ರಯಾಣಿಕರ ಒಂದು ತಂಡವು ಎದುರಾಯಿತು. ತಾವು ಸೀಗೋ ಎಂಬ ಪಟ್ಟಣಕ್ಕೆ ಹೋಗುತ್ತಿರುವುದಾಗಿಯೂ ಅದು ಜೋಲಿಬ್ ಎಂಬ ನದಿಯ ದಡದ ಮೇಲಿರುವುದಾಗಿಯೂ ಅವರು ಹೇಳಿದರು. ಈ ನದಿಯೇ ನೈಜರ್ ಆಗಿರಬಹುದೇ ? ಎಂಬ ಸಂದೇಹದಿಂದ ಪಾರ್ಕ್‌ನು ಇವರೊಂದಿಗೆ ಸೇರಿಕೊಂಡು ತನ್ನ ಪ್ರಯಾಣವನ್ನು ಮುಂದುವರೆಸಿದ. ಪ್ರಯಾಣ ಕಾಲದಲ್ಲಿ ಹೆಚ್ಚಿನ ಘಟನೆಗಳೇನೂ ನಡೆಯಲಿಲ್ಲ.

ಮಾಮೂಲಿನಂತೆ ಎರಡು ದಿನಗಳು ಕಳೆದಿದ್ದವು. ಒಬ್ಬ ನಿಗ್ರೋ ಇದ್ದಕ್ಕಿದ್ದಂತೆ, "ಹೋ ! ಅಲ್ಲಿ

ನೋಡಿ, ಸಮುದ್ರ, ಸಮುದ್ರ !" ಎಂದು ಕೂಗಿಕೊಂಡ. ಮುಂಗೋಪಾರ್ಕ್ ತಲೆ ಎತ್ತಿ ನೋಡಿದ. ಓಡಿ ಹೋಗಿ ಅದರ ದಡದಲ್ಲಿ ನಿಂತ. ಅಬ್ಬ ! ಇದು ನೈಜರ್ ನದಿಯೇ ಹೌದು. ಅದೆಷ್ಟು ವಿಶಾಲವಾಗಿದೆ. ನಿಜವಾಗಿಯೂ ಇದು ಸಾಗರದಂತೆಯೇ ಹರಡಿದೆ. ಅಪಾರವಾದ ಜಲರಾಶಿ. ಸೂರ್ಯನ ರಶ್ಮಿಯಿಂದ ಹೊಳೆಯುವ ನೀರು ! ದೂರದಲ್ಲಿ ಹಬ್ಬಿರುವ ಹಸಿರು ಬೆಟ್ಟಗಳ ಸಾಲು. ಪಾರ್ಕ್‌ನು ಅಷ್ಟು ಹೊತ್ತು ಆ ನದಿಯ ಸೌಂದರ್ಯವನ್ನು ನೋಡುತ್ತಾ ಮೈಮರೆತಿದ್ದ. ಲಂಡನ್ನಿನ ಥೇಮ್ಸ್ ಇದಕ್ಕೆ ಸರಿಸಮವಲ್ಲ. ಇದಕ್ಕೆ ಹೋಲಿಸಿದರೆ ಅದೊಂದು ಸಣ್ಣ ಹಳ್ಳ ಎನಿಸಿತು. ಮುಂಗೋಪಾರ್ಕ್ ಆ ನದಿಯ ನೀರನ್ನು ತನ್ನ ಮೈಮೇಲೆ ಎರಚಿಕೊಂಡ. ಬೊಗಸೆಗಟ್ಟಲೆ ನೀರನ್ನು ಕುಡಿದ. ಸಂತೋಷಾತಿರೇಕದಿಂದ ಕುಣಿದಾಡಿದ. ಅಷ್ಟು ದಿನಗಳ ಅವನ ಕನಸು ನನಸಾಗಿತ್ತು. ಇದಕ್ಕೆ ನೆರವು ನೀಡಿದ ದೇವರನ್ನಾತ ಮೌನವಾಗಿ ಪ್ರಾರ್ಥಿಸಿದ.

ನೈಜರ್ ನದಿಯನ್ನು ಇಲ್ಲಿನ ಜನ 'ಜೋಲಿಬ್' ಎಂದು ಕರೆಯುತ್ತಿದ್ದರು. ಇದರ ಎರಡೂ ದಡಗಳ ಮೇಲೆ ಸೀಗೋ ಪಟ್ಟಣವಿತ್ತು. ಇದರ ಸುತ್ತಲೂ ಮಣ್ಣಿನ ಗೋಡೆಯ ಕೋಟೆ. ಅದರ ಸುತ್ತಲೂ ಕಂದಕ. ಅಲ್ಲಲ್ಲಿ ಹೆಬ್ಬಾಗಿಲುಗಳು. ಅಲ್ಲಿದ್ದ ಬಹುಪಾಲು ಮನೆಗಳು ಚಪ್ಪಟೆಯಾಗಿದ್ದವು. ಕೆಲವು ಮೂರು ಅಂತಸ್ತುಗಳಷ್ಟು ಎತ್ತರವಾದ ಮನೆಗಳು !

ಕೆಲವೇ ದಿನಗಳ ಹಿಂದೆ ಅರಬ್ಬರಲ್ಲಿ ಕೆಲವರು ವೇಷಾಂತರದಿಂದ ನಿಗ್ರೋ ಜನರಿಗೆ ಹಣವನ್ನು ಕೊಟ್ಟು ಅವರನ್ನು ಯುರೋಪಿನ ಗುಲಾಮರ ಮಾರುಕಟ್ಟೆಗೆ ಕರೆದುಕೊಂಡು ಹೋಗಲು ಸಜ್ಜಾಗಿದ್ದರು. ಅಷ್ಟರಲ್ಲಿ ಈ ರಹಸ್ಯವು ರಾಜನಿಗೆ ತಿಳಿಯಿತು. ಆತ ಅರಬ್ಬರನ್ನು ಹಿಡಿದು ತರಿಸಿ ವಿಚಾರಣೆ ನಡೆಸಿ ಅವರ ಕೈಗಳನ್ನು ಕತ್ತರಿಸಿ ಸೆರೆಮನೆಗೆ ತಳ್ಳಲು ಆಜ್ಞೆಮಾಡಿದ. ಹೊರಗಿನಿಂದ ಪಟ್ಟಣಕ್ಕೆ ಬರುವವರನ್ನು ಎಚ್ಚರಿಕೆಯಿಂದ ಪರೀಕ್ಷಿಸಲಾಗುತ್ತಿತ್ತು. ಅವರಿಗೆ ಮುಂಗೋಪಾರ್ಕ್‌ನ ಮೇಲೂ ಸಂದೇಹ ಬಾರದಿರಲಿಲ್ಲ. ರಾಜಭಟರು ಅವನನ್ನು ಬಂಧಿಸಿ ರಾಜನ ಸಮ್ಮುಖಕ್ಕೆ ಕರೆತಂದರು. ಮುಂಗೋಪಾರ್ಕ್‌ನು ತಾನು ಬಂದ ಉದ್ದೇಶವನ್ನು ಹೇಳಿದರೂ ರಾಜನಿಗೆ ನಂಬಿಕೆಯಾಗಲಿಲ್ಲ. "ಸೆರೆಮನೆಯಲ್ಲಿ ಕಟ್ಟಿಹಾಕಿ ಇವನ ಬಾಯಿಯಿಂದ ನಿಜವಾದ ವಿಷಯವನ್ನು ಹೊರಡಿಸಿ" ಎಂದು ಸೇನಾಪತಿಗೆ ಆದೇಶ ನೀಡಿದ. ಇದರ ಫಲವಾಗಿ ಪಾರ್ಕ್‌ನನ್ನು ಹೊಡೆದರು, ಬಡಿದರು. ಚರ್ಮಕಿತ್ತಿತು. ಅವನ ಮುಖ, ಮೈ ಊದಿಕೊಂಡವು. ಇವನು ತಪ್ಪಿತಸ್ಥನಲ್ಲ ಎಂದು ಸೇನಾಪತಿಗೆ ಮನವರಿಕೆಯಾಯಿತು. ಅವನ ವರದಿಯಂತೆ ರಾಜನು ಪಾರ್ಕ್‌ನನ್ನು ಬಿಡುಗಡೆ ಮಾಡಿ ಯಾವ ರೀತಿಯಲ್ಲಿಯೂ ಈ ನಗರದಲ್ಲಿ ನದಿಯನ್ನು ದಾಟಕೂಡದು ತಕ್ಷಣ ನಗರವನ್ನು ಬಿಟ್ಟು ಹೋಗಬೇಕೆಂದು ಆಜ್ಞೆ ಮಾಡಿದ. ರಾಜನ ಸೈನಿಕರು ಅವನನ್ನು ಊರಿನ ಗಡಿಯವರೆಗೂ ಕರೆತಂದು ಗಡೀಪಾರು ಮಾಡಿದರು.

ನೋವನ್ನು ಅನುಭವಿಸುತ್ತಿದ್ದರೂ ಮುಂಗೋಪಾರ್ಕ್‌ನು ಧೈರ್ಯಗೆಡಲಿಲ್ಲ. ಹೇಗಾದರೂ ಮಾಡಿ ನೈಜರ್ ನದಿಯ ಮುಖಜ ಭೂಮಿಯವರೆಗೂ ಪ್ರಯಾಣ ಮಾಡಲೇಬೇಕೆಂದು ನಿರ್ಧರಿಸಿದ. ಆದರೆ ಇದನ್ನು ಸಾಧಿಸಲು ಆತ ಇನ್ನೂ ೧೫೦೦ ಮೈಲಿಗಳಿಗಿಂತ ಹೆಚ್ಚು ಪ್ರಯಾಣಿಸಬೇಕಾಗಿತ್ತು.

ಪಾರ್ಕ್‌ನು ಮತ್ತೆ ಪಯಣಿಗನಾದ. ಆದರೆ ಆಗ ಆ ಪ್ರದೇಶದಲ್ಲಿ ಭಾರಿ ಮಳೆಬೀಳುತ್ತಿತ್ತು. ಸಣ್ಣಸಣ್ಣ ನದಿ, ಹೊಳೆ, ಹಳ್ಳಗಳು ತುಂಬಿ ಹರಿಯುತ್ತಿದ್ದುವು. ಇವುಗಳನ್ನು ದಾಟುವುದು ಸಾಧ್ಯವಿರಲಿಲ್ಲ. ವಿಷಯ ಹವೆಯಿಂದ ಅವನ ಆರೋಗ್ಯವು ಕೆಟ್ಟು ಹೋಯಿತು. ಅವನನ್ನು ಮಲೇರಿಯಾ ಜ್ವರವು ಹಿಡಿದುಕೊಂಡಿತು. ಕನಿಷ್ಠ ಪಕ್ಷ ವ್ಯಾಪಾರ ಕೇಂದ್ರವಾಗಿದ್ದ ಟಿಂಬಕ್ಟು ಪಟ್ಟಣವನ್ನಾದರೂ ತಲುಪಬೇಕೆಂದು ಪ್ರಯತ್ನಿಸಿದ. ಆದರೆ ಆರೋಗ್ಯ ಸಂಪೂರ್ಣವಾಗಿ ಕೆಟ್ಟಿತು. ನಿರ್ವಾಹವಿಲ್ಲದೆ ಮುಂಗೋಪಾರ್ಕ್ ಅಲ್ಲಿಂದ ಹಿಂದಿರುಗಿದ. ಅಲ್ಲಿಯವರೆಗೆ ಮುಂಗೋಪಾರ್ಕ್ ನೈಜರ್ ನದಿಯ ತೀರದಿಂದ ಕೇವಲ ೨೦೦ ಮೈಲಿಗಳಷ್ಟು ಮಾತ್ರ

ಪ್ರಯಾಣ'ಸಿದ್ದ.

ಆದರೆ ಹಿಂದಿರುಗುವುದು ಅಷ್ಟು ಸುಲಭವಾಗಿರಲಿಲ್ಲ. ಪಿಸಾನಿಯ ಪಟ್ಟಣ ಅಲ್ಲಿಂದ ಸುಮಾರು ೮೦೦ ಮೈಲುಗಳಷ್ಟು ದೂರದಲ್ಲಿತ್ತು. ಒಂದು ಹಳ್ಳಿಯನ್ನಾತ ತಲುಪಿದಾಗ ಸಂಜೆಯಾಗಿತ್ತು. ಒಳಗೆ ಹೋಗುವಷ್ಟರಲ್ಲಿ ಕೋಟೆಯ ಬಾಗಿಲನ್ನು ಮುಚ್ಚಲಾಯಿತು. ತನ್ನನ್ನು ಒಳಗೆ ಬಿಡಬೇಕೆಂದು ಕೂಗಿ ಕೊಳ್ಳುತ್ತಿದ್ದರೂ ಯಾರೂ ಕೇಳಲಿಲ್ಲ. ಒಂದು ಪಾಳು ಗುಡಿಸಲಿನಲ್ಲಿ ಹೇಗೋ ರಾತ್ರಿಯನ್ನು ಕಳೆದ. ಆ ದಿನ ಇವನಿಗಾಗಲಿ ಇವನ ಕುದುರೆಗಾಗಲಿ ಒಂದಿಷ್ಟೂ ಆಹಾರ ದೊರೆಯಲಿಲ್ಲ. ಮತ್ತೊಮ್ಮೆ ಪ್ರಯಾಣಮಾಡುತ್ತಿದ್ದಾಗ ರಾತ್ರಿಯಾಯಿತು. ಇದ್ದಕ್ಕಿದ್ದಂತೆ ಸಿಂಹಗಳ ಗರ್ಜನೆ ಕೇಳಿಬಂತು. ಕುದುರೆಯನ್ನು ಬಿಟ್ಟ ಪಾರ್ಕ್ ಹೆದರಿಕೆಯಿಂದ ಒಂದು ಮರವನ್ನು ಹತ್ತಿಕುಳಿತುಕೊಂಡ. ಕುದುರೆಯೂ ಗಾಬರಿಯಿಂದ ಕೆನೆಯತೊಡಗಿತು. ಅದೃಷ್ಟವಶಾತ್ ಸಿಂಹ ಅಲ್ಲಿಗೆ ಬರಲಿಲ್ಲ. ರಾತ್ರಿಯೆಲ್ಲಾ ಆತ ಮರದ ಮೇಲೆಯೇ ಕಾಲಕಳೆದ.

ದಾರಿಯಲ್ಲಿ ಮತ್ತೆ ದರೋಡೆಗಾರರ ಭಯ. ಒಮ್ಮೆ ಅವರು ಅವನನ್ನು ಮುತ್ತಿ ಮೈಮೇಲಿದ್ದ ಉಡುಪನ್ನು ಬಿಚ್ಚಿಕೊಂಡರು. ಪಿಸ್ತೂಲನ್ನೂ ಕಿತ್ತುಕೊಂಡರು. ಆದರೆ ಅವರಿಗೆ ಹಣಸಿಗಲಿಲ್ಲ. ಪ್ರಯೋಜನವಿಲ್ಲವೆಂದು ಅವನ ಶರ್ಟು, ಪ್ಯಾಂಟು ಮತ್ತು ಹ್ಯಾಟನ್ನು ಅವನ ಮೇಲೆ ಎಸೆದರು. ಪಿಸ್ತೂಲಿನ ಉಪಯೋಗ ಅವರಿಗೆ ತಿಳಿದಿರಲಿಲ್ಲವಾದ್ದರಿಂದ ಅದನ್ನೂ ಹಿಂದಕ್ಕೆ ಕೊಟ್ಟು ಕೋಪದಿಂದ ಅವನನ್ನು ನೋಡುತ್ತಾ "ಥತ್" ಎಂದು ಉಗುಳಿ ಹೊರಟುಹೋದರು.

ಹೀಗೆ ಎಲ್ಲಾ ಕಷ್ಟನಷ್ಟಗಳನ್ನು ಎದುರಿಸುತ್ತಾ ಪ್ರಯಾಣ'ಸುತ್ತಿದ್ದ ಮುಂಗೋಪಾರ್ಕ್‌ನಿಗೆ ಕಾರವಾನ್ ವ್ಯಾಪಾರಿಗಳ ಒಂದು ಗುಂಪು ಸಿಕ್ಕಿತು. ಇವರೆಲ್ಲರೂ ಒಳ್ಳೆಯ ನಾಗರಿಕರು. ಪಾರ್ಕ್‌ನ ಕಥೆಯನ್ನು ಕೇಳಿ ಅವರ ಮನಸ್ಸು ಕರಗಿಹೋಯಿತು. ತಮ್ಮೊಂದಿಗೆ ಸೇರಿಕೊಳ್ಳಲು ಅನುಮತಿ ನೀಡಿದರು. ಮುಂದಿನ ಪಯಣ ಸುಖಕರವಾಗಿತ್ತು. ೧೭೯೬ನೆಯ ಸಪ್ಟಂಬರ್ ೧೬ ರಂದು ಅವನು ಪುನಃ ಪಿಸಾನಿಯ ಪಟ್ಟಣ ತಲುಪಿದ. ಅಲ್ಲಿಯವರೆಗೆ ಅವನು ಸುಮಾರು ೮೦೦ ಮೈಲುಗಳಷ್ಟು ಪ್ರಯಾಣಮಾಡಿದ್ದ. ಇಷ್ಟು ದೂರದ ಪಯಣಕ್ಕೆ ಮುಂಗೋಪಾರ್ಕ್ ಸುಮಾರು ಒಂದು ವರ್ಷ ಮೂರು ತಿಂಗಳು ಕಾಲ ತೆಗೆದುಕೊಂಡು. ನೈಜರ್ ನದಿಯನ್ನು ಕಂಡುಹಿಡಿದವರಲ್ಲಿ ಆತನೇ ಮೊದಲಿಗನಾಗಿದ್ದ. ಆದರೂ ಈ ನದಿಯು ಸಮುದ್ರಕ್ಕೆ ಸೇರುವವರೆಗೂ ಪ್ರಯಾಣ ಮಾಡಬೇಕೆಂಬ ಅವನ ಆಸೆ ಈಡೇರಲಿಲ್ಲ.

ಇಂಗ್ಲೆಂಡಿಗೆ ಹಿಂದಿರುಗಿದ ಪಾರ್ಕ್ ತನ್ನ ಪ್ರವಾಸದ ಅನುಭವಗಳನ್ನು ವರ್ಣ'ಸಿ ಒಂದು ದೊಡ್ಡ ಗ್ರಂಥವನ್ನು ಬರೆದ. ಅನಂತಕಾಲದಲ್ಲೆ ಇದರ ಸಾವಿರಾರು ಪ್ರತಿಗಳು ಮಾರಾಟವಾದವು. ಪಾರ್ಕ್‌ನಿಗೆ ಹೇರಳವಾದ ಹಣ ಮತ್ತು "ಶ್ರೇಷ್ಠ ಅನ್ವೇಷಕ" ಎಂಬ ಕೀರ್ತಿ ಬಂದವು.

ಇಂಗ್ಲೆಂಡಿನಲ್ಲಿ ಮುಂಗೋಪಾರ್ಕ್ ಪ್ರತಿಷ್ಠಿತ ವ್ಯಕ್ತಿಯಾದ. ತನಗೆ ಶಸ್ತ್ರ ಚಿಕಿತ್ಸೆಯನ್ನು ಕಲಿಸಿದ ಡಾ. ಲಿಂಡರ್‌ಸನ್ನರ ಮಗಳನ್ನು ಮದುವೆಯಾಗಿ ಪೀಬಲ್ಸ್ ಎಂಬಲ್ಲಿ ವೈದ್ಯಕೀಯ ವೃತ್ತಿಯನ್ನು ಆರಂಭಿಸಿ ನೆಮ್ಮದಿಯ ಬದುಕನ್ನು ಸಾಗಿಸತೊಡಗಿದ. ಇಷ್ಟಾದರೂ ಅನ್ವೇಷಣೆಯ ಕಾರ್ಯ ಪೂರ್ಣವಾಗಲಿಲ್ಲವೆಂಬ ವಿಚಾರ ಅವನ ಮನಸ್ಸನ್ನು ಕೊರೆಯುತ್ತಲೇ ಇತ್ತು. ಹಿಂದಿನ ಆಫ್ರಿಕದ ಯಾತ್ರೆಯು ಭಯಂಕರವಾಗಿದ್ದರೂ ತನ್ನ ಗುರಿಸಾಧನೆಗಾಗಿ ಮತ್ತೆ ಎಂಥ ಅಪಾಯವನ್ನಾದರೂ ಎದುರಿಸಲು ಇನ್ನೂ ಆತ ಸಿದ್ದನಾಗಿದ್ದ. ಹೀಗೆಯೇ ಏಳುವರ್ಷಗಳು ಕಳೆದುಹೋದವು.

ಲಂಡನ್ನಿನ ಆಫ್ರಿಕನ್ ಅಸೋಸಿಯೇಶನ್ ಸಂಸ್ಥೆಯು ಮತ್ತೆ ಮುಂಗೋಪಾರ್ಕ್‌ನನ್ನು ಆಹ್ವಾನಿಸಿ ಅನ್ವೇಷಣೆಯ ಕಾರ್ಯವನ್ನು ಪೂರ್ಣಗೊಳಿಸಲು ಕೇಳಿಕೊಂಡಿತು. ಈ ಬಾರಿ ಅವನು ನದಿಯ ಉದ್ದಕ್ಕೂ ಪ್ರಯಾಣ'ಸಿ ಅಟ್ಲಾಂಟಿಕ್ ತೀರದಲ್ಲಿನ ಅದರ ಮುಖಜ ಭೂಮಿಯನ್ನು ಕಂಡುಹಿಡಿಯಬೇಕು, ಎಲ್ಲೆಲ್ಲಿ ವ್ಯಾಪಾರದ ಕೋಠಿಗಳನ್ನು ನಿರ್ಮಿಸಬಹುದು ಎಂಬ ಮಾಹಿತಿಯನ್ನು ನೀಡಬೇಕು

ಎಂಬ ಕಾರ್ಯವನ್ನು ಆಫ್ರಿಕನ್ ಸಂಸ್ಥೆ ಅವನಿಗೆ ಒಪ್ಪಿಸಿತು. ಅವನ ವೆಚ್ಚಕ್ಕೆಂದು ಧಾರಾಳವಾಗಿ ಹಣವನ್ನು ನೀಡಿತು. ಸಹಾಯಕ್ಕೆಂದು ೪೦ ಜನ ಸೈನಿಕರನ್ನೂ ಕಳುಹಿಸಲಾಯಿತು. ಇವರೊಂದಿಗೆ ಹೊರಟ ಮುಂಗೋಪಾರ್ಕ್ ಹಿಂದಿನಂತೆ ಪಿಸಾನಿಯಾದಿಂದಲೇ ತನ್ನ ಕಾರ್ಯವನ್ನು ಆರಂಭಿಸಿದ.

೧೮೦೫ರ ಮೇ ತಿಂಗಳಿನಲ್ಲಿ ಮಳೆಗಾಲ ಆರಂಭವಾಗಿತ್ತು. ಮೈ ನಡುಗುವಷ್ಟು ಚಳಿ. ವಿಪರೀತ ಸೊಳ್ಳೆಗಳ ಕಾಟ. ಇಂಗ್ಲೆಂಡಿನ ತಂಪು ಹವೆಯಲ್ಲಿ ಸೊಂಪಾಗಿ ಬೆಳೆದ ಸೈನಿಕರಿಗೆ ಇಲ್ಲಿಯ ಹವಾಮಾನ ಹಿಡಿಸಲಿಲ್ಲ. ಆರಂಭದಲ್ಲಿಯೇ ಕೆಲವರಿಗೆ ಮಲೇರಿಯಾ ರೋಗ ಹಿಡಿದುಕೊಂಡಿತು. ಇವರೆಲ್ಲರನ್ನು ನೋಡಿಕೊಳ್ಳುವುದೇ ಪಾರ್ಕನಿಗೆ ದೊಡ್ಡ ಹೊರೆಯಾಯಿತು. ಮೇ ತಿಂಗಳಿನಿಂದ ಆಗಸ್ಟ್ ತಿಂಗಳವರೆಗೆ ಮುಂಗೋಪಾರ್ಕ್ ಅನುಭವಿಸಿದ ಕಷ್ಟ ವರ್ಣಿಸಲಸಾಧ್ಯ. ಮಾರ್ಗಮಧ್ಯದಲ್ಲಿ ೩೩ ಸೈನಿಕರು ಸತ್ತುಹೋದರು. ನೈಜರ್ ನದಿಯನ್ನು ತಲುಪಿದಾಗ ಅವನೊಂದಿಗೆ ಉಳಿದವರು ಏಳು ಜನ ಮಾತ್ರ.

ಪಯಣದ ನಡುವೆ ತಾನು ಹಿಂದೊಮ್ಮೆ ವಿಶ್ರಾಂತಿ ಪಡೆದಿದ್ದ ಪಾಳೆಯಪಟ್ಟಿನ ವಿಷಯವನ್ನು ಅಲ್ಲಿಂದ ಬಂದವರು ಪಾರ್ಕನಿಗೆ ಹೇಳಿದರು. ಆ ಪ್ರಕಾರ ಆಗ ಅಲ್ಲಿ ಆಳುತ್ತಿದ್ದ ರಾಣಿಯನ್ನು ಪ್ರತಿಪಕ್ಷದವರು ಹಿಡಿದು ಸೆರೆಮನೆಗೆ ಕಳುಹಿಸಿದ್ದರು. ರಾಣಿಯು ತಾನು ಪ್ರೀತಿಸುತ್ತಿದ್ದ ಒಬ್ಬ ಯುರೋಪಿಯನ್‌ನನ್ನು ಅಗಲಿರಲಾರದೆ ಅಲ್ಲಿಯೇ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಳಂತೆ. ಹಕ್ಕುದಾರಳಾದ ರಾಣಿಗೆ ರಾಜ್ಯಾಧಿಕಾರ ಸಿಕ್ಕಿತು. ಆದರೆ ಅವಳ ಜೊತೆಯಲ್ಲಿದ್ದ ಒಬ್ಬ ಯುವಕನನ್ನು ಯಾರೋ ಕೊಲೆ ಮಾಡಿದರಂತೆ. ಇವನ ಜೊತೆಯಲ್ಲಿದ್ದ ಇನ್ನೊಬ್ಬ ವ್ಯಕ್ತಿಯು ಕಣ್ಮರೆಯಾಗಿದ್ದು ಈವರೆಗೂ ಅವನ ಸುಳಿವು ತಿಳಿದಿಲ್ಲ ಎಂದು ಅವರಿಂದ ಪಾರ್ಕನಿಗೆ ತಿಳಿಯಿತು. ರಾಣಿಯ ದುರಂತ ಮರಣದ ಸುದ್ದಿಯನ್ನು ಕೇಳಿ ಪಾರ್ಕನಿಗೆ ಬಹಳ ದುಃಖವಾಯಿತು.

ನದಿಯ ತೀರದಲ್ಲಿ ಪ್ರಯಾಣಿಸುವುದು ತೀರಾ ಪ್ರಯಾಸದ ಕಾರ್ಯವಾಗಿತ್ತು. ಇದಕ್ಕಿಂತಲೂ ದೋಣಿಯ ಮೂಲಕ ಮುಂದುವರೆದರೆ ಶೀಘ್ರವಾಗಿ ಗುರಿ ಮುಟ್ಟಬಹುದೆಂದು ಮುಂಗೋಪಾರ್ಕ್ ನಿರ್ಧರಿಸಿದ. ಸ್ಥಳೀಯರು ಹಾಗೂ ತನ್ನ ಜೊತೆಯಲ್ಲಿದ್ದ ಸೈನಿಕರ ಸಹಾಯದಿಂದ ೪೦ ಅಡಿ ಉದ್ದ ಮತ್ತು ಆರು ಅಡಿ ಅಗಲದ ಒಂದು ಮರದ ದೋಣಿಯನ್ನಾತ ಸಿದ್ಧಗೊಳಿಸಿದ. ಸಾಕಷ್ಟು ದೊಡ್ಡದಾಗಿದ್ದ ಈ ದೋಣಿ ಮಳೆಯಿಂದ ರಕ್ಷಣೆ ಪಡೆಯಲು ಹಾಗೂ ಸಾಮಾನುಗಳನ್ನು ಇಟ್ಟುಕೊಳ್ಳಲು ಅನುಕೂಲವಾಗಿತ್ತು. ಇದಕ್ಕೆ ಆತ 'ಎಚ್.ಎಂ.ಎಸ್. ಜೋಲಿಬ್' ಎಂದು ನಾಮಕರಣ ಮಾಡಿದ.

೧೮೦೫ರ ನವೆಂಬರ್ ತಿಂಗಳು ಹವಾಮಾನ ಆಹ್ಲಾದಕರವಾಗಿತ್ತು. ಮಳೆಯ ಆರ್ಭಟವೂ ನಿಂತಿತ್ತು. "ನಾವು ಈಗ ಒಂದು ಮಹತ್ಕಾರ್ಯವನ್ನು ಸಾಧಿಸಲು ಹೊರಟಿದ್ದೇವೆ. ಇದುವರೆಗೂ ಯಾರೂ ಸಾಧಿಸದಂತಹ ಸಾಹಸವಾಗಿದೆ. ನೈಜರ್ ನದಿಯು ಸಮುದ್ರವನ್ನು ಸೇರುವವರೆಗೂ ನಾವೀಗ ಪ್ರಯಾಣ ಮಾಡುತ್ತೇವೆ. ಎಷ್ಟೇ ಆಪತ್ತುಗಳು ಬಂದರೂ ಹೆದರುವುದಿಲ್ಲ. ನಮ್ಮ ಗುರಿ ಮುಟ್ಟುವವರೆಗೂ ನಾವು ಹಿಂತಿರುಗುವುದಿಲ್ಲ. ಕೈ ಹಿಡಿದ ಈ ಸಾಹಸದಲ್ಲಿ ವಿಜಯಿಗಳಾಗುತ್ತೇವೆ ಎಂಬ ವಿಶ್ವಾಸ ನಮಗಿದೆ" ಎಂದು ಮುಂಗೋಪಾರ್ಕ್ ತನ್ನ ಗೆಳೆಯನಿಗೆ ಒಂದು ಪತ್ರ ಬರೆದ. ಹಾಗೆಯೇ ತನ್ನ ಪತ್ನಿಗೂ ಒಂದು ಪತ್ರ ಬರೆದು, "ನಾನು ಆರೋಗ್ಯವಾಗಿದ್ದೇನೆ. ನನಗೆ ಸದಾ ನಿನ್ನ ನೆನಪಾಗುತ್ತಿದೆ. ೧೮೦೬ರ ಮೇ ತಿಂಗಳ ಕೊನೆಯ ವಾರದಲ್ಲಿ ಮತ್ತೆ ನಾವಿಬ್ಬರೂ ಒಂದಾಗೋಣ. ಬದುಕಿನ ರಸನಿಮಿಷಗಳನ್ನು ಕಳೆಯೋಣ," ಎಂದು ತಿಳಿಸಿದ್ದ. ನದಿಯ ದಂಡೆಗೆ ಬರುವ ಯಾವುದಾದರೊಂದು ಕಾರವಾನ್ ಸಂಗಡಿಗರ ಮೂಲಕ ಇದನ್ನು ಟಂಬಕ್ಟುವಿಗೆ ಕಳುಹಿಸಿದರೆ ಅಲ್ಲಿಂದ ಯುರೋಪಿನ ಯಾವುದಾದರೊಂದು ಅಂಚೆಯ ಮೂಲಕ ಈ ಪತ್ರ ಊರಿಗೆ ತಲುಪಬಹುದೆಂದು ಪಾರ್ಕನು ನಿರೀಕ್ಷಿಸಿದ್ದ.

ಆದರೆ ದೋಣಿಯ ಪಯಣವೂ

ಅಷ್ಟೊಂದು ಸುರಕ್ಷಿತವಾಗಿರಲಿಲ್ಲ. ಮೊದಲೇ ನೈಜರ್ ಬಹುದೊಡ್ಡ ನದಿ. ಮೇಲಾಗಿ ಅದರ ಪಾತ್ರದಲ್ಲಿ ಅಲ್ಲಲ್ಲಿ ಬಂಡೆಗಳು ಬೇರೆ. ಕೆಲವೊಮ್ಮೆ ನದಿಯು ವೇಗವಾಗಿ ಹರಿಯುತ್ತಿತ್ತು. ಮುಂದೆ ಸಾಗುತ್ತಿದ್ದಂತೆ ಆಳವೂ ಹೆಚ್ಚಾಗುತ್ತಿತ್ತು. ಊಟ ವನ್ನು ತಯಾರಿಸಿಕೊಳ್ಳಲು ಅವರು ಆಗಾಗ ನದಿಯ ದಂಡೆಯ ಮೇಲೆ ಇಳಿಯಬೇಕಾಗುತ್ತಿತ್ತು. ಹಾಗೆ ಒಂದು ದಿನ ಒಂದು ಪುಟ್ಟ ಹಳ್ಳಿಯಲ್ಲಿ ಇಳಿದಾಗ ಅಲ್ಲಿಯ ಅನಾಗರಿಕ ಜನರು ಇವರ ಆಕೃತಿ, ಉಡುಪು ಮತ್ತು ಬಣ್ಣವನ್ನು ನೋಡಿದರು. ಇವರ ಭಾಷೆಯೂ ಅವರಿಗೆ ವಿಚಿತ್ರವಾಗಿ ಕೇಳಿ ಸಿತು. ಇದ್ದಕ್ಕಿದ್ದಂತೆ ಸುಮಾರು ೫೦ ಜನರ ಒಂದು ಗುಂಪು ಇವರನ್ನು ಸುತ್ತುಗಟ್ಟಿ ಬಾಣ ಬಿಡಲು ಪ್ರಾರಂಭಿಸಿತು. ಮುಂಗೋಪಾರ್ಕ್‌ನ ಏಸ್ತೂಲು ದೋಣಿ'ಯಲ್ಲೇ ಉಳಿದಿತ್ತು. ನಾಲ್ಕು ಜನ ಸೈನಿ ಕರು ಅವರ ಬಾಣಕ್ಕೆ ಬಲಿಯಾದರು. ಪಾರ್ಕನೂ, ಇನ್ನಿಬ್ಬರು ಸೈನಿಕರು ಹೇಗೋ ತಪ್ಪಿಸಿಕೊಂಡು ದೋಣಿ'ಯನ್ನು ತಲುಪಿದರು.

ಹೀಗೆಯೇ ಇನ್ನೊಮ್ಮೆ ನಿರ್ಜನವಾದ ಸ್ಥಳದಲ್ಲಿ ಇಳಿದಾಗ ಇದ್ದಕ್ಕಿದ್ದಂತೆ ಓಡಿ ಬಂದ ಮದಗಜಗಳ ಕಾಲ್ತುಳಿತಕ್ಕೆ ಸಿಕ್ಕು ಇನ್ನೊಬ್ಬ ಸೈನಿಕ ಪ್ರಾಣತೆತ್ತ. ಹೀಗೆ ಮೃತ್ಯುವಿನೊಂದಿಗೆ ಹೋರಾಡುತ್ತಲೇ ಮುಂಗೋಪಾರ್ಕ್ ತನ್ನ ಗುರಿಯತ್ತ ಸಾಗುತ್ತಿದ್ದ.

ಆತ ತನ್ನ ಪತ್ನಿಗೆ ಮತ್ತು ಗೆಳೆಯನಿಗೆ ಬರೆದ ಪತ್ರವೇ ಕೊನೆಯ ಪತ್ರ. ಅವನಿಗೆ ಮುಂದೇನಾ ಯಿತೋ ತಿಳಿಯಲಿಲ್ಲ. ಏಳು ವರ್ಷಗಳ ನಂತರ ಆಫ್ರಿಕದ ವರದಿಗಾರನೊಬ್ಬ ಸಂಗ್ರಹಿಸಿದ ಮಾಹಿ ತಿಯಂತೆ ಮುಂಗೋಪಾರ್ಕ್ ನೈಜರ್ ನದಿಯಲ್ಲಿ ಒಂದು ಸಾವಿರ ಮೈಲುಗಳಷ್ಟು ಪ್ರಯಾಣ ಮಾಡಿದ್ದ. ನದಿಯ ಮುಖಜ ಭೂಮಿಯನ್ನು ಮುಟ್ಟುವ ಮೊದಲೇ ಅವನನ್ನೂ, ಅವನ ಜೊತೆ ಯಲ್ಲಿದ್ದ ಸೈನಿಕರನ್ನೂ ಅನಾಗರಿಕ ಕಾಡು ಜನರು ಕೊಲೆ ಮಾಡಿದರು. ಕೊನೆಗೂ ಮುಂಗೋಪಾರ್ಕ್ ಮೃತ್ಯುವಿಗೆ ಶರಣಾಗಲೇಬೇಕಾಯಿತು.

ಮುಂಗೋಪಾರ್ಕ್ ಮಹಾ ಸಾಹಸಿ. ಸುಪ್ರ ಸಿದ್ಧ ಶಸ್ತ್ರವೈದ್ಯ. ಅನ್ವೇಷಣೆಗಾಗಿ ತನ್ನ ಸುಖವನ್ನು ತ್ಯಜಿಸಿ ಕಂಡು ಕೇಳರಿಯದ ಸ್ಥಳದಲ್ಲಿ ಅನಾಥನಂತೆ ಸಾಯಬೇಕಾಯಿತು. ಯಾವ ಮಹಾತ್ಕಾರ್ಯಕ್ಕಾಗಿ ತನ್ನ ಬದುಕನ್ನು ಮೀಸಲಾಗಿಟ್ಟಿದ್ದನೋ, ಅದನ್ನು ಸಾಧಿಸಲಾರದ ಆತ ವಿಧಿಯ ಕೈಗೊಂಬೆಯಾಗಬೇ ಕಾಯಿತು.

ಮುಂಗೋಪಾರ್ಕ್ ಬರೆದಿಟ್ಟ ಪತ್ರಗಳು, ಸಂಗ್ರಹಿಸಿದ ನೈಜರ್ ಕೊಳ್ಳದ ಮಾಹಿತಿಗಳು ಅತ್ಯ ಮೂಲ್ಯವಾಗಿವೆ. ಇದರಲ್ಲಿ ಅಂದಿನ ಆಫ್ರಿಕದ ಮೂಲನಿವಾಸಿಗಳ ಮೃಗೀಯ ಬದುಕಿನ ಕರ್ಮಕ ಥೆಯೂ ಸೇರಿಕೊಂಡಿದೆ. ಇವನು ನೀಡಿದ ಮಾಹಿ ತಿಯಿಂದ ಯುರೋಪಿಯನ್ನರು ತಂಡೋಪತಂಡ ವಾಗಿ ಆಫ್ರಿಕದಲ್ಲಿ ನುಗ್ಗಿದರು. ಕಾಡನ್ನು ಕಡಿದು ನಾಡು ಕಟ್ಟಿದರು. ಇವರ ಸುಸಂಸ್ಕೃತ ಜೀವನವು ಅಲ್ಲಿಯ ಮೂಲನಿವಾಸಿಗಳ ಜೀವನವನ್ನೇ ಮಾರ್ಪಡಿಸಿತು. ಪಾರ್ಕ್‌ನ ಬಲಿದಾನದ ಹಿನ್ನೆಲೆ ಯಲ್ಲಿ ನೈಜರ್ ನದಿಯ ಹೆಸರಿನಿಂದ ನೈಜೀರಿಯ ಎಂಬ ಹೊಸ ರಾಜ್ಯ ಉದಯವಾಯಿತು. ಮುಂಗೋಪಾರ್ಕ್‌ನ ಸಾಧನೆ ಇತಿಹಾಸದಲ್ಲಿ ಅಮ ರವಾಯಿತು.

●

ಬೋರ್ನಿಯೋ, ಸುಮಾತ್ರಾ ದ್ವೀಪಗಳಲ್ಲಿ ಕಂಡುಬರುವ ಗೋರಿಲ್ಲಾ ಜಾತಿಗೆ ಸೇರಿದ ಪ್ರಾಣಿ ವಿಶೇಷ ಒರಾಂಗ್ ಉಟಾನ್. ಮಲಯಿ ಭಾಷೆಯಲ್ಲಿ ಒರಾಂಗ್ ಉಟಾನ್ ಎಂದರೆ 'ಕಾಡಿನ ತಾತ' ಎಂದರ್ಥ. ಅದರ ಮುಖ ಮನುಷ್ಯನ ಮುಖವನ್ನು ಹೋಲುವುದರಿಂದ ಈ ಶಬ್ದ ಬಂದಿದೆಯೋ ಏನೋ.

● **ಭ್ರಾಂತೇಶ**

ಆರೋಗ್ಯದಂಗಳ

ವೈದ್ಯರಿಲ್ಲದ ಹೊತ್ತಿನಲ್ಲಿ.....

ನಮಗೆ ಕಾಯಿಲೆ-ಕಸಾಲೆಯೇನಾದರೂ ಬಂದರೆ ವೈದ್ಯರ ಬಳಿಗೆ ಹೋಗುತ್ತೇವೆ. ಅವರು ದೊರೆಯದಿದ್ದಲ್ಲಿ ಮರುದಿನ ಹೋಗಬಹುದು. ಆದರೆ ಕಾಯಿಲೆ ಉಲ್ಬಣವಾದಾಗ, ಅಪಘಾತ ಸಂಭವಿಸಿದಾಗ, ಗುಂಡೇಟು ಬಿದ್ದಾಗ, ವಿಷ ಜಂತುಗಳು ಕಚ್ಚಿದಾಗ ವೈದ್ಯರು ಅಲಭ್ಯವಾದರೆ ? ಆಗಿನ ಪಡಿಪಾಟಲನ್ನು ವರ್ಣಿಸಲಾಗದು. ಆದರೆ ನಿಮಗೆ ಪ್ರಾಥಮಿಕ ಉಪಚಾರದ ಬಗ್ಗೆ ಅಷ್ಟಿಷ್ಟು ಮಾಹಿತಿ ಗೊತ್ತಿದ್ದರೆ ವೈದ್ಯರ ನೆರವು ದೊರೆಯುವವರೆಗೆ ಪರಿಸ್ಥಿತಿಯನ್ನು ಧೈರ್ಯವಾಗಿ ನಿಭಾಯಿಸಬಲ್ಲಿರಿ. ಅಪಘಾತದಂಥ ಸಂದರ್ಭಗಳಲ್ಲಿ ಹಲವಾರು ಜನರ ಆಯುಷ್ಯವನ್ನು ಹೆಚ್ಚಿಸಬಲ್ಲಿರಿ. ಗಿಡಮೂಲಿಕೆಗಳ, ಔಷಧಿಗಳ ಉಪಯೋಗದ ಪ್ರಾಥಮಿಕ ಜ್ಞಾನವಿದ್ದರೆ ನೀವು ಅಭಿನವ ವೈದ್ಯರೇ ಸೈ. ನಿಮಗೆ ನೆರವಾಗಬಲ್ಲಂಥ ಸಾಮಾನ್ಯ ಉಪಚಾರದ ವಿಧಾನಗಳು ಇಲ್ಲಿವೆ, ಗಮನಿಸಿ.

● 'ಸೂರ್ಯಕಲಿ'

ಗ್ರಂಥಮೂಲ:
ಡೇವಿಡ್ ವೆರ್ನರ್ ಸಂಪಾದಿಸಿದ
'Where there is no Doctor'

ವೈದ್ಯರಿಲ್ಲದ ಹೊತ್ತಿನಲ್ಲಿ.....

೧. ಜ್ವರ

ವ್ಯಕ್ತಿಯ ಮೈಬಿಸಿ ಮಾಮೂಲಿಗಿಂತ ಹೆಚ್ಚಾಗಿದ್ದರೆ 'ಯಾಕೋ ಮೈ ಬೆಚ್ಚಗಿದೆ, ಜ್ವರ ಬಂದಿರಬೇಕು' ಎಂದುಕೊಳ್ಳುತ್ತೇವೆ. ಜ್ವರ ಒಂದು ಕಾಯಿಲೆ ಎನ್ನುವುದಕ್ಕಿಂತ ಕಾಯಿಲೆಗಳ ಒಕ್ಕೂಟದ ಲಕ್ಷಣ ಎನ್ನುವುದು ಹೆಚ್ಚು ಸೂಕ್ತ. ವಿಷಮಜ್ವರ ಅಪಾಯಕಾರಿ. ಮಕ್ಕಳಲ್ಲಿ ಅಪಾಯದ ಪ್ರಮಾಣ ಇನ್ನೂ ಹೆಚ್ಚು.

ನಿಮ್ಮ ಕುಟುಂಬದಲ್ಲಿ ಯಾರಿಗಾದರೂ ಜ್ವರ ಬಂದರೆ, ಅವರ ಮೇಲಿನ ಹೊದಿಕೆಯನ್ನು ಮೊದಲು ತೆಗೆಯಿರಿ. ಚಿಕ್ಕ ಮಕ್ಕಳಾದರೆ ಅವರು ಜ್ವರದಿಂದ ಮುಕ್ತರಾಗುವವರೆಗೂ ಬೆತ್ತಲೆಯಾಗಿಯೇ ಇರಲಿ. ಪರಿಶುದ್ಧ ಹವೆ ಅಥವಾ ಮೆಲುಗಾಳಿ ಜ್ವರವನ್ನು ಶಮನಗೊಳಿಸಬಲ್ಲದಾದ್ದರಿಂದ ಕಿಟಕಿ-ಬಾಗಿಲುಗಳು ತೆರೆದುಕೊಂಡಿರಲಿ. ಜ್ವರದ ತಾಪ ಇಳಿಯಲು ದೊಡ್ಡವರಿಗೆ ಆ್ಯಸ್ಪಿರಿನ್, ಚಿಕ್ಕಮಕ್ಕಮಕ್ಕಳಿಗೆ ಅಸಿಟಾಮಿನೊಫೆನ್ ಮಾತ್ರೆಗಳನ್ನು ಕೊಡಿ.

ಜ್ವರಪೀಡಿತರು ಸಾಧ್ಯವಾದಷ್ಟು ಹೆಚ್ಚು ನೀರು, ಹಣ್ಣಿನ ರಸ, ಎಳನೀರು ಮೊದಲಾದ ದ್ರವ ಪದಾರ್ಥಗಳನ್ನು ಸೇವಿಸಬೇಕು. ಮಕ್ಕಳಿಗೆ- ವಿಶೇಷತಃ ಶಿಶುಗಳಿಗೆ- ಕುದಿಸಿ ಆರಿಸಿದ ನೀರನ್ನೇ ಕುಡಿಯಲು ಕೊಡಿ. ಇಷ್ಟಾದ ನಂತರ ಜ್ವರದ ಕಾರಣವೇನೆಂಬುದನ್ನು ಯೋಚಿಸಿ.

ಪ್ರಾಥಮಿಕ ಉಪಚಾರದಿಂದ ಜ್ವರ ತಹಬಂದಿಗೆ ಬಾರದೆ ಮತ್ತಷ್ಟು ಏರುಮುಖವಾದರೆ



ಜ್ವರವಿದ್ದಾಗ ಮಕ್ಕಳಿಗೆ ಹೊದಿಕೆ ಬೇಡ

ಅಪಾಯ. ಭಾರೀ ಜ್ವರದಿಂದ ವ್ಯಕ್ತಿ ಪ್ರಜ್ಞೆ ಕಳೆದುಕೊಳ್ಳಬಹುದು. ಪಾರ್ಶ್ವವಾಯು, ಮೂರ್ಛೆ ರೋಗದಂಥ ಅವಸ್ಥೆಗೆ ಮಿದುಳು ಗುರಿಯಾಗಬಹುದು.

ದೇಹದ ಉಷ್ಣತೆ ೪೦ ಡಿಗ್ರಿ ಸೆಂಟಿಗ್ರೇಡ್‌ಗಿಂತ ಹೆಚ್ಚಾದರೆ, ರೋಗಿಯ ಬಟ್ಟೆಗಳೆಲ್ಲವನ್ನೂ ಕಳಚಿ. ಎದೆಯ ಮೇಲೆ ಮಾತ್ರ ದಪ್ಪನೆಯ ಬಟ್ಟೆ ಇರಲಿ. ಬಟ್ಟೆಯೊಂದನ್ನು ನೀರಿನಲ್ಲಿ ಅದ್ದಿ, ಹಣೆಯ ಮೇಲೆ, ತೋಳುಗಳ ಮೇಲೆ, ತೊಡೆಗಳ ಮೇಲೆ ಇಡಿ. ಬೀಸಣಿಗೆ ಅಥವಾ ಫ್ಯಾನಿನ ಗಾಳಿ ನಿರಂತರವಾಗಿ ಬೀಸುತ್ತಿರಲಿ. ಶರೀರದ ಉಷ್ಣತೆ ೩೮ ಡಿಗ್ರಿ ಸೆಂಟಿಗ್ರೇಡ್‌ಗೆ ಇಳಿಯುವವರೆಗೆ ಈ ಉಪಚಾರ ಮುಂದುವರಿಸಿರಿ. ಜೋಕೆ ! ಮಂಜುಗಡ್ಡೆ ಹಾಕಿದ ಅಥವಾ ಫ್ರಿಜ್‌ನಲ್ಲಿ ತಂಪುಗೊಳಿಸಿದ ನೀರನ್ನು ಬಳಸಬಾರದು. ಜ್ವರ, ನಡುಕ ಮತ್ತಷ್ಟು ಹೆಚ್ಚಾದೀತು.

ಜ್ವರಪೀಡಿತರು ನಿಃಶಕ್ತರಾಗುವುದು ಸಹಜ. ಅವರಿಗೆ ಸಕ್ಕರೆ ಅಥವಾ ಬೆಲ್ಲ ಹಾಕಿದ ಶುದ್ಧ ನೀರನ್ನು ಕುಡಿಸಿರಿ. ಹನ್ನೆರಡು ವರ್ಷಕ್ಕಿಂತ ದೊಡ್ಡವರಿಗೆ (ಲಘು ಆಹಾರ ಅಥವಾ ದ್ರವ ಪದಾರ್ಥ ಸೇವನೆಯ ಬಳಿಕ) ಎರಡು, ಆರರಿಂದ ಹನ್ನೆರಡರವರೆಗಿನ ಮಕ್ಕಳಿಗೆ ಒಂದು, ಮೂರರಿಂದ ಆರರವರೆಗಿನ ಮಕ್ಕಳಿಗೆ ಅರ್ಧ, ಮೂರು ವರ್ಷದ ಮಕ್ಕಳಿಗೆ ಕಾಲುಭಾಗ- ಈ ಪ್ರಮಾಣದಲ್ಲಿ ಎಂಟು ತಾಸಿಗೊಮ್ಮೆ ಆ್ಯಸ್ಪಿರಿನ್ ಮಾತ್ರೆಯನ್ನು ಕೊಡಿ. ರೋಗಿ ಮಾತ್ರೆಯನ್ನು ನುಂಗಲು ಅಸಮರ್ಥನಿದ್ದರೆ ಮಾತ್ರೆಯನ್ನು ಪುಡಿ ಮಾಡಿ ನೀರಿನೊಂದಿಗೆ ಬೆರೆಸಿ ಕುಡಿಸಿರಿ.

ಅಸಿಟಾಮಿನೊಫೆನ್ (ಪ್ಯಾರಾಸೆಟಮೊಲ್) ಜ್ವರಪೀಡಿತ ಮಕ್ಕಳಿಗೆ ಪರಿಣಾಮಕಾರಿ ಎಂದು ಬಹುತೇಕ ವೈದ್ಯರು ಅಭಿಪ್ರಾಯಪಡುತ್ತಾರೆ. ವರ್ಷದೊಳಗಿನ ಶಿಶುಗಳಿಗೆ ಆ್ಯಸ್ಪಿರಿನ್ ಕೊಡಕೂಡದು.

ಇಷ್ಟೆಲ್ಲ ಉಪಚಾರಕ್ಕೂ ಜ್ವರ ನಿಯಂತ್ರಣಕ್ಕೆ ಬಾರದಿದ್ದರೆ, ಮೂರ್ಛೆ ಪ್ರಾರಂಭವಾದರೆ ವೈದ್ಯರ ನೆರವು ಅತ್ಯಗತ್ಯವೆಂದರ್ಥ. ತೇವದ ಬಟ್ಟೆಯ ಉಪಚಾರವನ್ನು ಮುಂದುವರಿಸುತ್ತಿದ್ದಂತೆಯೇ ಯಾರನ್ನಾದರೂ ವೈದ್ಯರ ಬಳಿಗೆ ಓಡಿಸಿರಿ.

೨. ಆಘಾತ

ಆಘಾತವು ಜೀವಕ್ಕೆ ಅಪಾಯಕಾರಿಯಾದಂಥ ಸನ್ನಿವೇಶ. ರಕ್ತದೊತ್ತಡ ಇದ್ದಕ್ಕಿದ್ದಂತೆ ಕುಸಿಯುವುದರಿಂದ ಉಂಟಾಗುವ ಸ್ಥಿತಿ ಇದು. ಪರಮಾವಧಿ ನೋವು, ಸುಟ್ಟ ಗಾಯ, ರಕ್ತದ ವಿಪರೀತ ಸೋರಿಕೆ, ಕಾಯಿಲೆಗಳ ತೀವ್ರತೆ, ಡಿ-ಹೈಡ್ರೇಶನ್ ಅಥವಾ ಅಲರ್ಜಿಕಾರಕ ಪ್ರತಿಕ್ರಿಯೆಗಳಿಂದ ಆಘಾತ ಉಂಟಾಗುತ್ತದೆ.

ಲಕ್ಷಣಗಳು

* ಬವಳಿ ನಂತರದ ನಿಃಶಕ್ತತೆ.
* ವಾಂತಿಯ ಶಂಕೆ
* ಚರ್ಮ ಹಸಿಯಾದಂಥ ಅನಿಸಿಕೆ
* ತಂಪು ಹವೆಯಲ್ಲೂ ಹೆಚ್ಚು ಬೆವರುವುದು
* ಮಿತಿಮೀರಿದ ಬಾಯಾರಿಕೆ
* ಮಾನಸಿಕ ಗೊಂದಲ, ಪ್ರಜ್ಞೆ ತಪ್ಪುವಿಕೆ
* ನಾಡಿಮಿಡಿತದ ವೇಗದಲ್ಲಿ ಉತ್ಕರ್ಷ
  (ನಿಮಿಷಕ್ಕೆ ೧೦೦ಕ್ಕೂ ಹೆಚ್ಚು ಬಾರಿ)



ಉಪಚಾರ

ಆಘಾತಕ್ಕೊಳಗಾದ ವ್ಯಕ್ತಿಯನ್ನು ತಲೆಗಿಂತ ಕಾಲುಗಳೇ ಕೊಂಚ ಎತ್ತರವಾಗಿರುವಂಥ ಸ್ಥಿತಿಯಲ್ಲಿ ಮಲಗಿಸಬೇಕು. ಜೋಕೆ! ತಲೆಗೆ ಪೆಟ್ಟು ಬಿದ್ದಿದ್ದರೆ ಗಾಯಾಳುವನ್ನು ಈ ಸ್ಥಿತಿಯಲ್ಲಿ ಮಲಗಿಸದೆ ದಿಂಬಿಗೆ ಒರಗಿರುವಂತೆ ಕೂಡಿಸಬೇಕು.

ಚಳಿಯ ಅನುಭವಾಗುತ್ತಿದ್ದರೆ ಕಂಬಳಿಯೊಂದನ್ನು ಹೊದಿಸಿ. ಎಚ್ಚರವಿದ್ದರೆ ಬಿಸಿನೀರು ಅಥವಾ ಉಗುರುಬೆಚ್ಚಗಿನ ಪಾನೀಯಗಳನ್ನು ಕುಡಿಯಲು ಕೊಡಿ. ಆದರೆ ಆಘಾತವು ಇರಿತ ಅಥವಾ ಅಪಘಾತದಿಂದಾಗಿದ್ದರೆ ಏನನ್ನೂ ಕುಡಿಸುವುದು ಬೇಡ. ಅವರಿಗೆ ಸರ್ಜರಿಯ ಜರೂರಿದೆಯೆಂದು ತಿಳಿದು ತಕ್ಷಣ ಆಸ್ಪತ್ರೆಗೆ ಸಾಗಿಸುವ ಯತ್ನ ಮಾಡಿ.

ವ್ಯಕ್ತಿ ನೋವು ಅನುಭವಿಸುತ್ತಿದ್ದರೆ ಆ್ಯಸ್ಪಿರಿನ್‌ನಂತಹ ನೋವು ನಿವಾರಕ ಔಷಧಿಗಳನ್ನು ಕೊಡಿ. ಅವನನ್ನು ಶಾಂತಗೊಳಿಸಿ. ಅಭಯದ ಭರವಸೆ ನೀಡಿ.

ಆಘಾತದಿಂದ ಪ್ರಜ್ಞೆ ಕಳೆದುಕೊಂಡಾತ ವಾಂತಿ ಮಾಡಿಕೊಂಡರೆ ತಕ್ಷಣವೆ ಬಾಯಿಯನ್ನು ಸ್ವಚ್ಛಗೊಳಿಸಿ. ಮಗ್ಗುಲಾಗಿ ಮಲಗಿಸಿದರೆ ಅವನು ಮಾಡಿಕೊಂಡ ವಾಂತಿ ಉಸಿರಾಟದೊಂದಿಗೆ ಒಳಹೋಗುವುದು ತಪ್ಪುತ್ತದೆ. ಪ್ರಜ್ಞೆ ಮರಳುವವರೆಗೆ ಏನನ್ನೂ ತಿನ್ನಿಸುವ, ಕುಡಿಸುವ ಯತ್ನಕ್ಕೆ ಕೈ ಹಾಕಬೇಡಿ. ಸಲೈನ್ ನೀಡುವ ವಿಧಾನ ತಿಳಿದವರು ನಿಮ್ಮ ಆಸುಪಾಸಿನಲ್ಲಿದ್ದರೆ ಅವರ ನೆರವಿನಿಂದ ತಕ್ಷಣದ ಚಿಕಿತ್ಸೆಗಾಗಿ ಒಂದು ಬಾಟಲು ಹಚ್ಚಿ. ಆದಷ್ಟು ಬೇಗ ವೈದ್ಯರನ್ನು ಸಂಪರ್ಕಿಸಿ.

೩. ಪ್ರಜ್ಞಾಹೀನತೆ

* ತಲೆಗೆ ಬಿದ್ದ ಪ್ರಹಾರ
* ಮಿತಿ ಮೀರಿದ ಕುಡಿತ
* ಆಘಾತ
* ವಿಷಸೇವನೆ
* ಮಧುಮೇಹ
* ಬವಳಿ (ಭಯ, ಶಕ್ತಿಹೀನತೆ ಮೊದಲಾದವುಗಳಿಂದ)
* ಪಾರ್ಶ್ವವಾಯು
* ಹೃದಯಾಘಾತ
* ಅಪಸ್ಮಾರ

ಇತ್ಯಾದಿ ಕಾರಣಗಳಿಂದ ವ್ಯಕ್ತಿ ಪ್ರಜ್ಞೆಯನ್ನು ಕಳೆದುಕೊಳ್ಳುವ ಸಂಭವವಿರುತ್ತದೆ. ಇಂಥವರಿಗೆ ನಿಮ್ಮ ನೆರವಿನ ಆವಶ್ಯಕತೆ ಇದ್ದರೆ:

೧. ವ್ಯಕ್ತಿಯ ಉಸಿರಾಟ ಕ್ರಮ ಸರಾಗವಾಗಿದೆಯೇ ಎಂಬುದನ್ನು ಗಮನಿಸಿ. ಹಾಗಿಲ್ಲದಿದ್ದರೆ ಗಂಟಲಿನಲ್ಲಿ ಏನಾದರೂ ಸಿಕ್ಕಿಹಾಕಿಕೊಂಡಿರಬಹುದು. ಅಂತಹದೇನಾದರೂ ಇದ್ದರೆ ದವಡೆಯನ್ನು ಅಗಲಿಸಿ ನಾಲಿಗೆಯನ್ನು ಹೊರತೆಗೆಯಿರಿ. ಉಸಿರಾಟ ಆಗಲೂ ಸುಧಾರಿಸದಿದ್ದರೆ ಬಾಯಿಗೆ ಬಾಯಿ ಹಚ್ಚಿ (Mouth to mouth breathing) ಉಸಿರಾಡಿಸಿರಿ.

೨. ಅವನು ಬಹಳಷ್ಟು ರಕ್ತವನ್ನು ಕಳೆದುಕೊಂಡಿದ್ದಾನೇನೋ ಹೇಗೆ ? ಎನ್ನುವುದನ್ನು ನೋಡಿ. ಸ್ರಾವವಿದ್ದರೆ ಅದನ್ನು ನಿಯಂತ್ರಿಸಿ.

೩. ವ್ಯಕ್ತಿ ಆಘಾತದಿಂದ ಪ್ರಜ್ಞೆ ಕಳೆದುಕೊಂಡಿದ್ದರೆ (ಚರ್ಮ ಬಿಳಿಚಿರುವುದು, ಒದ್ದೆಯಾಗಿರುವುದು ಇಲ್ಲವೆ ನಾಡಿ ವೇಗವಾಗಿ ಬಡಿದುಕೊಳ್ಳುವುದು ಇತ್ಯಾದಿ ಲಕ್ಷಣಗಳಿದ್ದರೆ) ಬಟ್ಟೆಯನ್ನು ಸಡಿಲಗೊಳಿಸಿರಿ. ಕಾಲಿಗಿಂತ ತಲೆಯ ಭಾಗ ಕೆಳಗಿರುವಂಥ ಸ್ಥಿತಿಯಲ್ಲಿ ಮಲಗಿಸಿರಿ.

೪. ವ್ಯಕ್ತಿ ಉಷ್ಣಾಘಾತ (heat stroke)ಕ್ಕೀಡಾಗಿದ್ದಾನೇನೋ ಪರಿಶೀಲಿಸಿ (ಅತಿ ಹೆಚ್ಚು ಜ್ವರ, ಕೆಂಪೇರಿದ ಚರ್ಮ, ಬೆವರಿಲ್ಲದಿರುವಿಕೆ ಇದರ ಲಕ್ಷಣಗಳು). ಹಾಗಿದ್ದರೆ ಅವನನ್ನು ನೆರಳಿನಲ್ಲಿ ಮಲಗಿಸಿ. ಕಾಲಿಗಿಂತ ಶಿರೋಭಾಗವೇ ಮೇಲಿರುವಂತೆ ನೋಡಿಕೊಳ್ಳಿ. ಮುಖದ ಮೇಲೆ ತಣ್ಣೀರನ್ನು ಪ್ರೋಕ್ಷಿಸಿ. ಸಾಧ್ಯವಾದರೆ ಮಂಜುಗಡ್ಡೆಯ ನೀರನ್ನು ಬಳಸಿ.

೫. ಪ್ರಜ್ಞಾಹೀನ ವ್ಯಕ್ತಿ ತೀವ್ರ ಗಾಯಗೊಂಡಿದ್ದರೆ, ಅವನಿಗೆ ಎಚ್ಚರ ಬರುವವರೆಗೆ ಕದಲಿಸದಿರುವುದು ಕ್ಷೇಮ. ಕದಲಿಸುವ ಅನಿವಾರ್ಯತೆ ಇದ್ದರೆ ಜಾಗ್ರತೆ. ಏಕೆಂದರೆ ಕುತ್ತಿಗೆ ಅಥವಾ ಬೆನ್ನೆಲುಬು ಲಟಕ್ ಎಂದಿರಬಹುದು. ಗಾಯದ ಪ್ರಮಾಣ ಮತ್ತು ಮುರಿದಿರಬಹುದಾದ ಎಲುವುಗಳನ್ನು ಪರಿಶೀಲಿಸಿ. ಯಾವ ಕಾರಣಕ್ಕೂ ಬೆನ್ನು, ಕುತ್ತಿಗೆಯನ್ನು ಬಾಗಿಸಬೇಡಿ. ಪ್ರಜ್ಞಾಹೀನ ವ್ಯಕ್ತಿಯ ಬಾಯಿಗೆ ಹಾಕುವ ಯಾವುದೇ ಪದಾರ್ಥ ಅವನ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆಂಬುದನ್ನು ಮರೆಯದಿರಿ.

೪. ಗಂಟಲಲ್ಲಿ ತಡೆ



ಆಹಾರ ಮತ್ತು ಇನ್ನಿತರ ಪದಾರ್ಥಗಳು ಗಂಟಲಲ್ಲಿ ಸಿಕ್ಕು ಹಾಕಿಕೊಂಡು ಉಸಿರಾಟ ಕ್ಷೀಣಗೊಳ್ಳುವುದು ಅಪಾಯವಾದರೂ ಅಸಹಜವೇನಲ್ಲ.

ಇಂಥ ಸಂದರ್ಭಗಳಲ್ಲಿ,

* ತಕ್ಷಣ ವ್ಯಕ್ತಿಯ ಹಿಂದೆ ನಿಂತು ಅವನ ನಾಭಿ ಮತ್ತು ಪಕ್ಕೆಲುವಿನ ನಡುವೆ ನಿಮ್ಮ ಎರಡೂ ಕೈಗಳನ್ನು ಸೇರಿಸಿ.
* ಅವನ ಹೊಟ್ಟೆಯನ್ನು ಒಂದೆರಡು ಸೆಕೆಂಡು ಒತ್ತಿ ಹಿಡಿದು ಗಕ್ಕನೆ

ಮೇಲ್ಮುಖವಾಗಿ ಜರುಗಿಸಿ. ಶ್ವಾಸಕೋಶದಿಂದ ಒತ್ತಿ ಬರುವ ಗಾಳಿ ಗಂಟಲಿನಲ್ಲಿ ಸಿಕ್ಕಿಹಾಕಿಕೊಂಡ ವಸ್ತುವನ್ನು ಹೊರತಳ್ಳುತ್ತದೆ. ಮೊದಲ ಯತ್ನ ಫಲಕಾರಿಯಾಗದಿದ್ದರೆ ಪ್ರಯತ್ನವನ್ನು ಪುನರಾವರ್ತಿಸಿ.


ವ್ಯಕ್ತಿ ಬಲಿಷ್ಠನಾಗಿದ್ದರೆ ಅಥವಾ ಅದಾಗಲೇ ಪ್ರಜ್ಞೆ ಕಳೆದುಕೊಂಡಿದ್ದರೆ ಕೂಡಲೇ ಅವನನ್ನು ಬೆನ್ನ ಮೇಲಾಗಿ ಮಲಗಿಸಿ. ನಿಮ್ಮ ಹಿಮ್ಮಡದ ಮೇಲೆ ಭಾರ ಬಿಟ್ಟು ಅವನ ಮೊಳಕಾಲ ಬಳಿ ಕುಳಿತುಕೊಂಡು ನಾಭಿಯಿಂದ ಮೇಲ್ಮುಖವಾಗಿ ಬಲವಾಗಿ ಒತ್ತಿ. ಹಲವು ಬಾರಿ ಪ್ರಯತ್ನ ಮುಂದುವರಿಸಿ.

ಆಗಲೂ ಉಸಿರಾಟ ಸುಧಾರಿಸದಿದ್ದರೆ ಬಾಯಿಗೆ ಬಾಯಿ ಹಚ್ಚಿ ಉಸಿರಾಟ ಮಾಡಿಸಿರಿ.

೫. ರಕ್ತಸ್ರಾವ

ಅಪಘಾತ, ಹರಿತ ಉಪಕರಣಗಳ ಬಳಕೆಯಲ್ಲಿನ ಅಚಾತುರ್ಯದಿಂದ ಶರೀರ ರಕ್ತ ಕಳೆದುಕೊಳ್ಳುತ್ತದೆ. ಹೀಗೆ ಸ್ರಾವದಿಂದ ಹೊರಹೋಗುವ ರಕ್ತವನ್ನು ನಿಯಂತ್ರಿಸದಿದ್ದರೆ ಪರಿಸ್ಥಿತಿ ಗಂಭೀರವಾಗಬಹುದು. ಅಂಥ ಸಂದರ್ಭಗಳೆದುರಾದಲ್ಲಿ:

* ಗಾಯಾಳುವಿನ ಗಾಯದ ಭಾಗವನ್ನು ಎತ್ತಿ ಹಿಡಿಯಿರಿ.
* ಗಾಯದ ಮೇಲೆ ಸ್ವಚ್ಛವಾದ ಬಟ್ಟೆಯನ್ನು ಒತ್ತಿ ಹಿಡಿಯಿರಿ. (ನಿಮ್ಮಲ್ಲಿ ಬಟ್ಟೆ ಇಲ್ಲದಿದ್ದಲ್ಲಿ ಅಂಗೈಯನ್ನೇ ಉಪಯೋಗಿಸಬಹುದು) ಸ್ರಾವ ನಿಲ್ಲಲು ೧೫ ನಿಮಿಷದಿಂದ ಒಂದು ತಾಸೂ ಹಿಡಿಯಬಹುದು. ಕೈಯನ್ನು ಕದಲಿಸದಿರಲು ಆದಷ್ಟು ಪ್ರಯತ್ನಿಸಿ.
* ಸ್ರಾವ ನಿಯಂತ್ರಣಕ್ಕೆ ಬರದಿದ್ದರೆ ಅಥವಾ ವ್ಯಕ್ತಿ ಬಹಳಷ್ಟು ರಕ್ತವನ್ನು ಕಳೆದುಕೊಂಡಿದ್ದರೆ:



೧. ಗಾಯದ ಮೇಲಿನ ಒತ್ತಡವನ್ನು ಹಾಗೇ ಮುಂದುವರಿಸಿ.

೨. ಗಾಯದ ಭಾಗವನ್ನು ಗರಿಷ್ಠ ಎತ್ತಿ ಹಿಡಿಯಿರಿ.

೩. ದೇಹ ಮತ್ತು ಗಾಯದ ನಡುವಿನ ಭಾಗವನ್ನು- ಗಾಯಕ್ಕೆ ಸಮೀಪವಾಗಿ- ಬಿಗಿದು ಕಟ್ಟಿ. ಆದರೆ ಆ ಅಂಗ ನೀಲಿಗಟ್ಟುವಂತೆ ಗಟ್ಟಿಯಾಗಿ ಕಟ್ಟಬೇಡಿ.

೪. ಪಟ್ಟಿ ಕಟ್ಟಲು ಮಡಿಚಿದ ಅರಿವೆಯನ್ನೇ ಉಪಯೋಗಿಸಿರಿ. ಹಗ್ಗ, ವೈರು, ದಾರ, ತಂತಿಯನ್ನು ಬಳಸಬೇಡಿ.

೫. ರಕ್ತಸ್ರಾವ ತೀವ್ರವಾಗಿದ್ದರೆ ಮತ್ತು ಅದು ಬಟ್ಟೆಯ ಒತ್ತಡಕ್ಕೆ ತಹಬಂದಿಗೆ ಬಾರದಿದ್ದರೆ ಮಾತ್ರ ಪಟ್ಟಿಯನ್ನು ಕಟ್ಟಿ.

೬. ಅರ್ಧ ಗಂಟೆಗೊಮ್ಮೆ ಕಟ್ಟು ಬಿಚ್ಚಿ. ಸ್ರಾವ ನಿಂತಿದೆಯೋ ಇಲ್ಲವೋ ಎಂಬುದನ್ನು ನೋಡಲು ಮತ್ತು ರಕ್ತಸಂಚಾರ ಸುಗಮಗೊ

ಳ್ಳಲು ಇದರಿಂದ ಸಾಧ್ಯ.

೭. ಸುದೀರ್ಘ ಅವಧಿಯವರೆಗೆ ಕಟ್ಟು ಬಿಚ್ಚದಿದ್ದರೆ ಆ ಅಂಗದ ವಿಚ್ಛೇದನವೂ ಅಸಹಜವೇನಲ್ಲ.

೮. ಸೆಗಣಿ, ಸೀಮೆ ಎಣ್ಣೆ ಸುಣ್ಣ ಕಾಫಿ, ಆಲ್ಕೋಹಾಲ್ ಮತ್ತಿತರ ಪದಾರ್ಥಗಳನ್ನು ರಕ್ತಸ್ರಾವದ ನಿಯಂತ್ರಣಕ್ಕೆ ಬಳಸುವುದು ತುಂಬ ಅಪಾಯಕರ. ಧನುರ್ವಾಯುವಿನಂಥ ಸೋಂಕು ರೋಗ ಬಂದೀತು.

ಸಣ್ಣ-ಪುಟ್ಟ ಸ್ರಾವಗಳಿಗೆ ಉಪಚಾರ

- ಮೊದಲು ನಿಮ್ಮ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಿ. ನಂತರವೇ ಸೋಪು ಮತ್ತು ಕುದಿಸಿದ ನೀರಿನೊಂದಿಗೆ ಗಾಯಾಳುವಿನ ಬಳಿಗೆ ಹೋಗಿ.
- ಗಾಯವನ್ನು ತೊಳೆಯುವಾಗ ಅತ್ಯಂತ ಎಚ್ಚರ ವಹಿಸಬೇಕು. ಹರಿದು ತೂಗಾಡುವ ಚರ್ಮವನ್ನೂ ತೊಳೆಯಿರಿ. ಇದಕ್ಕಾಗಿ ಚಿಮ್ಮಟವನ್ನು ಉಪಯೋಗಿಸಬಹುದು. ಆದರೆ ಅದನ್ನು ಕುದಿಯುವ ನೀರಿನಲ್ಲಿ ತೊಳೆದು ಕ್ರಿಮಿಮುಕ್ತಗೊಳಿಸಿರಬೇಕು.
- ಗಾಯದಲ್ಲಿ ಉಳಿದ ಯಾವುದೇ ಕಲ್ಮಷ ಸೋಂಕಿಗೆ ಅವಕಾಶ ನೀಡಬಹುದು. ಈ ಬಗ್ಗೆ ಜಾಗ್ರತೆ ಇರಲಿ.
- ಟಿಂಕ್ಚರ್ ಆಯೋಡಿನ್‌ನಂಥವುಗಳನ್ನು ನೇರವಾಗಿ ಗಾಯಕ್ಕೆ ಸುರಿಯಬೇಡಿ. ಗಾಯ ಸ್ವಚ್ಛವಾಗಿದ್ದರೆ ಔಷಧಿ ಇಲ್ಲದೆ ಗುಣವಾಗುತ್ತದೆ.
- ತಿಂಗಳಿಗೊಮ್ಮೆಯಂತೆ ಎರಡು ಸಲ ನಂಜು ನಿರೋಧಕ ಚುಚ್ಚುಮದ್ದು ಕೊಡಿಸುವುದು ಜಾಣತನ.

ಮೂಗಿನಲ್ಲಿ ಸ್ರಾವ



ಪೆಟ್ಟು, ಅತಿ ಶೈತ್ಯ ಮೊದಲಾದ ಕಾರಣಗಳಿಂದ ಮೂಗಿನಲ್ಲಿ ರಕ್ತಸ್ರಾವವಾಗುವ ಸಂಭವ ಇರುತ್ತದೆ. ಅಂಥ ಸಂದರ್ಭಗಳಲ್ಲಿ ವ್ಯಕ್ತಿಯನ್ನು ಕುಳ್ಳಿರಿಸಿ. ಅವನ ಮೂಗನ್ನು ಹತ್ತು ನಿಮಿಷಗಳವರೆಗೆ ಅಥವಾ ಸ್ರಾವ ನಿಲ್ಲುವವರೆಗೆ ಹಿಸುಕಿ ಹಿಡಿದುಕೊಳ್ಳಿ. ಬಾಯಿಯ ಮೂಲಕ ಉಸಿರಾಟ ನಡೆಯಲಿ.

ಆಗಲೂ ಪ್ರಯೋಜನ ಕಂಡುಬರದಿದ್ದಲ್ಲಿ ಸ್ವಲ್ಪ ಅರಳೆಯನ್ನು ಹೈಡ್ರೋಜನ್ ಪೆರೋಕ್ಸೈಡ್ ಅಥವಾ ವ್ಯಾಸಲಿನ್‌ನಲ್ಲಿ ಅದ್ದಿ ಮೂಗಿನ ಹೊರಳೆಗಳನ್ನು ಭದ್ರಪಡಿಸಿ. ಒಂದೆರಡು ಗಂಟೆಗಳ ಬಳಿಕ ಜಾಗರೂಕತೆಯಿಂದ ಅರಳೆಯನ್ನು ಹೊರಗೆ ತೆಗೆಯಿರಿ. ಕರಣೆಗಟ್ಟಿದ ರಕ್ತವನ್ನು ತೆಗೆಯುವ ಯತ್ನ ಕೂಡದು.

ಬಾಹ್ಯ ಪ್ರಚೋದನೆ ಇಲ್ಲದೆ ಆಗಿಂದಾಗ ಮೂಗಿನಲ್ಲಿ ರಕ್ತಸ್ರಾವವಾಗುವವರ ಮೂಗಿನಲ್ಲಿ ವ್ಯಾಸಲಿನ್ ಎಣ್ಣೆಯನ್ನು ದಿನಕ್ಕೆರಡು ಬಾರಿ ಹನಿಸಿ. ಕಿತ್ತಳೆ, ಟೊಮೆಟೋ ಮತ್ತಿತರ ಹಣ್ಣುಗಳ ಸೇವನೆಯಿಂದ ಕ್ರಮೇಣ ಸ್ರಾವ ಕಡಿಮೆಯಾಗುತ್ತದೆ.

೬. ಸೋಂಕಿನ ಗಾಯಗಳು

ಚರ್ಮ ಕೆಂಪಾಗುವುದು, ಊದಿಕೊಳ್ಳುವುದು, ತುಂಬ ನೋವಿರುವುದು ಮತ್ತು ಆ ಭಾಗ ಬಿಸಿಯಾಗಿರುವುದು ಸೋಂಕಿನ ಗಾಯದ ಲಕ್ಷಣಗಳು. ಗಾಯದಲ್ಲಿ ಕೀವು ಹಾಗೂ ದುರ್ವಾಸನೆ ಪ್ರಾರಂಭವಾಗಲೂಬಹುದು.


ಕಿವಿಯ ಹಿಂಭಾಗದಲ್ಲಿ ಗ್ರಂಥಿಗಳ ಉರಿಯೂತ (ಅಸ್ಥಿಗುಲ್ಮ) ಕಾಣಿಸಿಕೊಂಡರೆ ತಲೆ ಇಲ್ಲವೆ ಗಂಡಸ್ಥಲದಲ್ಲಿ, ಕತ್ತಿನ ಹಿಂಭಾಗದಲ್ಲಿ ಗ್ರಂಥಿಗಳ ಉರಿಯೂತ ಕಾಣಿಸಿಕೊಂಡರೆ ಕಿವಿ-ಮುಖ ಅಥವಾ ತಲೆಯಲ್ಲಿ, ದವಡೆಯ ಕೆಳಗೆ ಗ್ರಂಥಿಗಳ ಉರಿಯೂತ ಕಾಣಿಸಿಕೊಂಡರೆ ಹಲ್ಲು ಅಥವಾ ಗಂಟಲಿನಲ್ಲಿ, ಕಂಕುಳಲ್ಲಿ ಉರಿಯೂತ ಉಂಟಾದರೆ ತೋಳು- ತಲೆ- ಕೈ- ಎದೆಯ ಪ್ರದೇಶದಲ್ಲಿ, ತೊಡೆ ಸಂದಿಯಲ್ಲಿ ಉರಿಯೂತದ ಅನುಭವವಾದರೆ ಕಾಲು, ಪಾದ ಅಥವಾ ಗುದ ಭಾಗದಲ್ಲಿ ಸೋಂಕು ಆಗಿದೆಯೆಂದು ಅರ್ಥ.

ಕೈ ಅಥವಾ ಕಾಲಿನ ಮೇಲೆ ಸೋಂಕಿನ ಗಾಯಗಳಾಗಿದ್ದರೆ ಆ ಭಾಗವನ್ನು ಪೊಟ್ಯಾಸಿಯಂ ಪರ್ಮ್ಯಾಂಗನೇಟ್ (ಒಂದು ಬಕೆಟ್ ನೀರಿಗೆ ಒಂದು ಚಮಚೆ) ಅಥವಾ ಸೋಪು ಹಾಕಿದ ಬಿಸಿ ನೀರಿನಲ್ಲಿ ಇಡಿ. ಸೋಂಕಿನ ಭಾಗವನ್ನು ಹೃದಯಕ್ಕಿಂತ ಎತ್ತರವಾಗಿ ಇರಿಸಿದರೆ ಒಳ್ಳೆಯದು.

ಸೋಂಕಿಗೆ ಒಳಗಾದ ವ್ಯಕ್ತಿ ಧನುರ್ವಾಯು ನಿರೋಧಕ ಚುಚ್ಚುಮದ್ದು ಹಾಕಿಸಿಕೊಂಡಿರದಿದ್ದ ಪಕ್ಷದಲ್ಲಿ ಪೆನ್ಸಿಲಿನ್‌ನಂಥ ರೋಗ ನಿರೋಧಕ ಚುಚ್ಚುಮದ್ದನ್ನು ಕೊಡಿ. ಜೋಕೆ ! ಗಾಯದಲ್ಲಿ ದುರ್ವಾಸನೆ ಪ್ರಾರಂಭವಾದರೆ, ಕಂದು ಅಥವಾ ಬೂದುಬಣ್ಣದ ದ್ರವ ಒಸರತೊಡಗಿದರೆ, ಆ ಭಾಗದ ಚರ್ಮ ಕಪ್ಪು ಬಣ್ಣಕ್ಕೆ ತಿರುಗತೊಡಗಿದರೆ, ಬೊಕ್ಕೆಗಳು ಏಳತೊಡಗಿದರೆ ಅದು ಗ್ಯಾಂಗ್ರೀನ್ (ಮಾಂಸ ಕೊಳೆಯುವಿಕೆ) ಆಗಿರಬಹುದು. ಇಂಥ ಸಂದರ್ಭಗಳಲ್ಲಿ ತಕ್ಷಣವೇ ವೈದ್ಯರನ್ನು ಕಾಣಿ.

೭. ಅಪಾಯಕಾರಿ ಗಾಯಗಳು

- ಮಲಿನ, ಕೊಳಕಾದ ವಸ್ತುಗಳಿಂದಾದ ಗಾಯಗಳು.
- ಆಳವಾಗಿದ್ದರೂ ರಕ್ತಸ್ರಾವವಾಗದ ಗಾಯಗಳು
- ಜಜ್ಜುವಿಕೆ ಅಥವಾ ತೀವ್ರ ತರಚು ಗಾಯಗಳು
- ನಾಯಿ, ಹಂದಿ ಮತ್ತಿತರ ಪ್ರಾಣಿಗಳ ಕಡಿತದಿಂದಾಗುವ ಗಾಯಗಳು
- ಗುಂಡಿನಿಂದಾಗುವ ಗಾಯಗಳು



ಮೊದಲು ಗಾಯದ ಭಾಗವನ್ನು ಕುದಿಸಿದ ನೀರು ಮತ್ತು ಸಾಬೂನಿನಿಂದ ಚೆನ್ನಾಗಿ ತೊಳೆಯಿರಿ. ಶೇಷ ಕಲ್ಮಷ, ರಕ್ತದ ಕರಣೆ, ಮಾಂಸದ ಮುದ್ದೆ, ಇಳಿಬಿದ್ದ ಚರ್ಮ ಮೊದಲಾದವುಗಳನ್ನು ನಿವಾರಿಸಿ. ಇದಕ್ಕಾಗಿ ಸೂಜಿಯನ್ನು ತೆಗೆದ ಸಿರಿಂಜ್ ಇಲ್ಲವೆ ಪಿಚ

ಕಾರಿಯನ್ನು ಬಳಸಬಹುದು.

ತುಸು ಪೊಟ್ಯಾಸಿಯಂ ಪರ್ಮ್ಯಾಂಗನೇಟ್ ಬೆರೆಸಿದ ನೀರಿನಲ್ಲಿ ಗಾಯದ ಭಾಗವನ್ನು ಮುಳುಗಿಸಿ. ಗಾಯವು ಪ್ರಾಣಿಯ ಕಡಿತದಿಂದಾಗಿದ್ದು, ಗಂಭೀರ ಸ್ವರೂಪದ್ದಾಗಿದ್ದರೆ ಅಥವಾ ಅದರಲ್ಲಿ ಮತ್ತೆ ಕೊಳೆ ಸೇರಿಕೊಳ್ಳುವ ಅವಕಾಶಗಳಿದ್ದರೆ ಜೀವಿರೋಧಕ (antibiotic) ಔಷಧಿ ಲೇಪಿಸಿ. ಸಾಧ್ಯವಾದರೆ ಗಾಯಾಳುವಿಗೆ ಆ್ಯಂಪಿಸಿಲಿಯನ್ ಕ್ಯಾಪ್ಸೂಲ್ ಕೊಡಿ. ಕ್ಯಾಪ್ಸೂಲ್ ದೊರೆಯದಿದ್ದರೆ ಪೆನ್ಸಿಲಿನ್ ಅಥವಾ ಟೆಟ್ರಾಸೈಕ್ಲಿನ್ ಕೊಡಿ. ಗಾಯಗಳಿಗೆ ಬ್ಯಾಂಡೇಜು ಹಾಕುವುದು ಬೇಡ. ಮುಕ್ತವಾಗಿಯೇ ಇರಲಿ. ಧನುರ್ವಾಯು ವಿರುದ್ಧ ಲಸಿಕೆ ಹಾಕಿಸಿಕೊಳ್ಳದವರಲ್ಲಿ ಇಂಥ ಗಾಯಗಳಿಂದಾಗುವ ಅಪಾಯ ಜಾಸ್ತಿ. ಆದ್ದರಿಂದ ಅಂಥವರಿಗೆ ಕೂಡಲೇ ಪೆನ್ಸಿಲಿನ್ ಚುಚ್ಚುಮದ್ದು ಇಲ್ಲವೆ ಆ್ಯಂಪಿಸಿಲಿಯನ್ ಮಾತ್ರೆ ಒದಗಿಸಲೇಬೇಕು. ಸೂಕ್ತ ಮುನ್ನೆಚ್ಚರಿಕೆಯೊಡನೆ ವೈದ್ಯರ ಮೂಲಕ ಧನುರ್ವಾಯು ಲಸಿಕೆಯನ್ನು ಕೊಡಿಸುವುದು ಸಾಧ್ಯವೇನೋ ಯತ್ನಿಸಿ.

ಗುಂಡು, ಚೂರಿಯಿಂದಾದ ತೀವ್ರ ಗಾಯಗಳು

ಬಂದೂಕಿನಿಂದ ಸಿಡಿದ ಗುಂಡು ಮತ್ತು ಚೂರಿಯಿಂದಾದ ಗಾಯಗಳು ಆಳವಾಗಿದ್ದರೆ ಸೋಂಕು ತಗುಲುವ ಅವಕಾಶ ಜಾಸ್ತಿ. ಆದ್ದರಿಂದ ಕೂಡಲೇ ಗಾಯಾಳುವಿಗೆ ಜೀವಿರೋಧಕಗಳನ್ನು, ವಿಶೇಷತಃ ಪೆನ್ಸಿಲಿನ್ ಅಥವಾ ಆ್ಯಂಪಿಸಿಲಿನ್ ಔಷಧಿಗಳನ್ನು ಕೊಡಬೇಕು.

ರಕ್ತಸ್ರಾವ ಬಹಳಷ್ಟು ಹೆಚ್ಚಾಗಿದ್ದರೆ ಪುಟ ೧೫೦ರಲ್ಲಿ ತೋರಿಸಿದಂತೆ ಸ್ರಾವವನ್ನು ತಡೆಗಟ್ಟಲು ಪ್ರಯತ್ನಿಸಿ.


ಸ್ರಾವ ಗಂಭೀರ ಸ್ವರೂಪದ್ದಾಗಿರದಿದ್ದರೆ ಸ್ವಲ್ಪ ಹೊತ್ತು ಹಾಗೇ ಬಿಡಿ. ಗಾಯದಲ್ಲಿನ ಮಲಿನ ವಸ್ತುಗಳು ಹೊರಬರಬಹುದು.

ಕುದಿಸಿ ಆರಿಸಿದ ನೀರು ಮತ್ತು ಸಾಬೂನಿನಿಂದ ಗಾಯವನ್ನು ಚೆನ್ನಾಗಿ ತೊಳೆದು ಹಗುರವಾಗಿ ಬ್ಯಾಂಡೇಜು ಕಟ್ಟಿ. ಗುಂಡಿನ ಗಾಯವಾಗಿದ್ದರೆ ಹೊರಗಿನ ಭಾಗವನ್ನು ಮಾತ್ರ ತೊಳೆಯಿರಿ. ಗಾಯದ ರಂಧ್ರಕ್ಕೆ ಮತ್ತೇನನ್ನೂ ಸುರಿಯಬೇಡಿ.

ಎಚ್ಚರಿಕೆ

ಗುಂಡು ಎಲುವಿಗೆ ತಾಗಿದ್ದರೆ ಎಲುವು ಮುರಿದುಹೋಗಿರುವ ಸಾಧ್ಯತೆ ಇರುತ್ತದೆ. ಗಾಯದ ಭಾಗದ ಮೇಲೆ ಭಾರ ಬಿಡುವುದರಿಂದ (ಉದಾ: ಕಾಲಿಗೆ ಗುಂಡು ಬಿದ್ದಾಗ ನಡೆಯಲು ಯತ್ನಿಸುವುದು) ಅಪಾಯವನ್ನು ಮತ್ತಷ್ಟು ತೀವ್ರಗೊಳಿಸಿದಂತಾಗುತ್ತದೆ.

- ಮೂಳೆ ಮುರಿದಿದೆ ಎಂದು ನಿಮಗೆನಿಸಿದರೆ ಗಾಯದ ಭಾಗಕ್ಕೆ ಮಾಲೀಸು ಮಾಡಬೇಡಿ.



- ಗಾಯ ತೀವ್ರವಾಗಿದ್ದರೆ ಗಾಯದ ಭಾಗ ಶರೀರಕ್ಕಿಂತ ಮೇಲಿರುವಂತೆ ವ್ಯಕ್ತಿಯನ್ನು ಮಲಗಿಸಿ. ಗಾಯದ ಪ್ರದೇಶ ತೂಗಾಡುವಂತಿರಬಾರದು.

- ಶ್ವಾಸಕೋಶಕ್ಕೆ ಗುಂಡಿನಿಂದ ಧಕ್ಕೆಯಾಗಿದ್ದರೆ ವ್ಯಕ್ತಿ ಉಸಿರಾಡಲು ತೊಂದರೆಯಾಗುತ್ತದೆ. ಅವನು ಎಳೆದುಕೊಳ್ಳುವ ಉಸಿರು ರಂಧ್ರದ ಮೂಲಕ ಹೊರಸಾಗುವ ಅವಕಾಶ ಇರುವ ಕಾರಣ ರಂಧ್ರದ ಮೇಲೆ ವ್ಯಾಸಲಿನ್ ಸವರಿದ ಅಗಲವಾದ ಮೆತ್ತೆಯಿಂದ ಪಟ್ಟಿ ಕಟ್ಟಿ.
- ಗಾಯಾಳುವಿಗೆ ಆರಾಮವೆನಿಸಿದ ಭಂಗಿಯಲ್ಲೇ ಮಲಗಿಸಿ. ವೈದ್ಯರನ್ನು ಕರೆತರುವ ಏರ್ಪಾಟು ಮಾಡುತ್ತಿರುವಂತೆಯೇ ಜೀವಿರೋಧಕ ಮತ್ತು ನೋವು ನಿವಾರಕ ಔಷಧಿಗಳನ್ನು ಕೊಡಿ.

೮. ಜಠರಕ್ಕೆ ಪೆಟ್ಟು

ಜಠರಕ್ಕೆ ಆಗುವ ಯಾವುದೇ ಪೆಟ್ಟು ತುಂಬ ಅಪಾಯಕಾರಿ. ಆದ್ದರಿಂದ ವೈದ್ಯರ ಸಹಾಯ ನಿರೀಕ್ಷಿಸುತ್ತಿರುವಂತೆಯೇ-



- ಗಾಯವನ್ನು ಸ್ವಚ್ಛವಾದ ಬ್ಯಾಂಡೇಜನಿಂದ ಕಟ್ಟಿ.
- ಕರುಳು ಹೊರಬಂದಿದ್ದರೆ ಉಪ್ಪಿನ ನೀರಿನಲ್ಲಿ ಅದ್ದಿದ ಶುಭ್ರ ಬಟ್ಟೆಯಿಂದ ಮುಚ್ಚಿ. ಕರುಳನ್ನು ಒಳತಳ್ಳುವ ಯತ್ನ ಖಂಡಿತ ಬೇಡ.
- ಗಾಯಾಳು ಆಘಾತಗೊಂಡಿದ್ದರೆ, ಅವನ ಕಾಲುಗಳು ತಲೆಗಿಂತ ಎತ್ತರವಾಗಿರುವ ಸ್ಥಿತಿಯಲ್ಲಿ ಮಲಗಿಸಿ.
- ನೀರೂ ಸೇರಿದಂತೆ ಬಾಯಿಯ ಮೂಲಕ ಏನನ್ನೂ ಕೊಡಬೇಡಿ. ಅವನಿಗೆ ಬಾಯಾರಿಕೆಯಾದರೆ ತೋಯಿಸಿದ ಸ್ವಚ್ಛ ಬಟ್ಟೆಯನ್ನು ಚೀಪುತ್ತಿರಲಿ.
- ವೈದ್ಯರ ಬರವಿಗಾಗಿ ಕಾಯಬೇಡಿ. ನೀವೇ ಅವನನ್ನು ಸಮೀಪದ ಆಸ್ಪತ್ರೆ ಇಲ್ಲವೆ ಆರೋಗ್ಯ ಕೇಂದ್ರಕ್ಕೆ ರವಾನಿಸಿ. ಅವನಿಗೆ ಶಸ್ತ್ರಕ್ರಿಯೆಯ ಅವಶ್ಯಕತೆ ಇರುತ್ತದೆ.

೯. ಸುಟ್ಟ ಗಾಯಗಳು

ಒಂದಿಷ್ಟು ಮುಂಜಾಗ್ರತೆ ವಹಿಸಿದರೆ ಸುಟ್ಟ ಗಾಯಗಳಾಗುವ ಬಹಳಷ್ಟು ಸಂದರ್ಭಗಳನ್ನು ತಪ್ಪಿಸಬಹುದು.

- ಮಕ್ಕಳನ್ನು ಒಲೆಯ ಹತ್ತಿರ ಹೋಗಲು ಬಿಡಬೇಡಿ.
- ದೀಪ, ಬೆಂಕಿಪೊಟ್ಟಣಗಳನ್ನು ಅವರ ಕೈಗೆ ಸಿಗದಂತೆ ನೋಡಿಕೊಳ್ಳಿ.
- ಸ್ಟೋವ್ ಮೇಲಿಟ್ಟ ಹರಿವಾಣದ ಹಿಡಿಕೆ ಮಕ್ಕಳ ಕೈಗೆ ನಿಲುಕದಂತಿರಲಿ.
- ಗ್ಯಾಸ್ ಸಿಲಿಂಡರ್‌ನ ರೆಗ್ಯುಲೇಟರನ್ನು ಅವರಿಗೆ ತೋರಿಸಬೇಡಿ.

ಅಲ್ಪ ಪ್ರಮಾಣದ ಸುಟ್ಟ ಗಾಯಗಳು

ಬೊಕ್ಕೆಗಳೇಳದಷ್ಟು ಪ್ರಮಾಣದ ಸಣ್ಣ-ಪುಟ್ಟ ಸುಟ್ಟ ಗಾಯಗಳಿಗೆ ವಿಶೇಷ ಚಿಕಿತ್ಸೆಯೇನೂ ಬೇಕಿಲ್ಲ. ಗಾಯದ ಭಾಗವನ್ನು ಸ್ವಲ್ಪ ಹೊತ್ತು ತಣ್ಣೀರಿನಲ್ಲಿಟ್ಟುಕೊಂಡರೆ ಸಾಕು. ನೋವೆನಿಸಿದರೆ ಆ್ಯಸ್ಪರಿನ್ ತೆಗೆದುಕೊಳ್ಳಬೇಕು. ಚರ್ಮವನ್ನು ಮೆದುಗೊಳಿಸುವ ಮಲಾಮನ್ನು ಹಚ್ಚಬೇಕು.

ಹೊಪ್ಪಳಿಗಳು

ಸುಟ್ಟ ಗಾಯಗಳು ಹೊಪ್ಪಳೆ (ಗುಳ್ಳೆ)ಗಳು ಏಳಲು ಕಾರಣವಾಗುವಷ್ಟು ತೀವ್ರವಾಗಬಹುದು. ಗುಳ್ಳೆಗಳನ್ನು ಒಡೆಯಬೇಡಿ. ಒಂದು ವೇಳೆ ಅವು ಒಡೆದುಕೊಂಡಿದ್ದರೆ ಗಾಯವನ್ನು ಸೋಪು ಮತ್ತು ಕುದಿಸಿದ ನೀರಿನಿಂದ ತೊಳೆಯಿರಿ. ಸ್ವಲ್ಪ ವ್ಯಾಸಲಿನ್‌ನ್ನು ಬಿಸಿ ಮಾಡಿ ಮೆತ್ತನೆಯ ಬಟ್ಟೆಯ ಮೇಲೆ ಸವರಿ ಅದನ್ನು ಗಾಯದ ಮೇಲೆ ಪಟ್ಟಿಯಂತೆ ನವುರಾಗಿ ಸುತ್ತಿ.

ಗಾಯದ ಮೇಲೆ ಧೂಳು, ಹೊಲಸು ಅಥವಾ ನೊಣ ಕೂಡದಂತೆ ಎಚ್ಚರ ವಹಿಸಿ. ಕೀವು, ದುರ್ವಾಸನೆ ಅಥವಾ ಜ್ವರ ಕಾಣಿಸಿಕೊಂಡರೆ ಅದು ಸೋಂಕಿನ ಲಕ್ಷಣ. ಬಿಸಿ ಮಾಡಿದ ಉಪ್ಪಿನ ದ್ರಾವಣದಲ್ಲಿ (ಒಂದು ಚಮಚ ಉಪ್ಪು, ಒಂದು ಲೀಟರು ನೀರು) ಸ್ವಚ್ಛವಾದ ಬಟ್ಟೆಯನ್ನು ತೋಯಿಸಿ ಗಾಯದ ಮೇಲೆ ಹಾಕಿ. ಬಹು ಎಚ್ಚರಿಕೆಯಿಂದ ತೆರೆದುಕೊಂಡ ಚರ್ಮ ಮತ್ತು ಮಾಂಸವನ್ನು ನಿವಾರಿಸಿ. ಸಾಧ್ಯವಾದರೆ ಜೀವಿರೋಧಕ ಮಲಾಮನ್ನು ಲೇಪಿಸಬಹುದು.

ಗಂಭೀರ ಗಾಯಗಳು

ಚರ್ಮ ಕರಕಲಾಗುವಂಥ, ಮಾಂಸ ಹೊರಕಾಣುವಂಥ ಸುಟ್ಟ ಗಾಯಗಳನ್ನು ಗಂಭೀರವಾಗಿ ಪರಿಗಣಿಸಿ. ಗಾಯದ ಮೇಲೆ ಶುಭ್ರ ವಸ್ತ್ರ ಹೊದಿಸಿ ಗಾಯಾಳುವನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಿ. ಒಂದು ವೇಳೆ ವೈದ್ಯಕೀಯ ನೆರವು ಅಲಭ್ಯವಾಗುವಂತಿದ್ದರೆ, ಹೊಪ್ಪಳೆಗಳಿಗೆ ಮಾಡುವ ಉಪಚಾರವನ್ನೇ ಇಲ್ಲಿಯೂ ಅನುಸರಿಸಿ. ಗಾಯದಿಂದ ಒಸರುವ ದ್ರವ, ರಕ್ತ ಹತ್ತಿದ ಬಟ್ಟೆಯನ್ನು ಆಗಿಂದಾಗ್ಗೆ ಬದಲಿಸಿ. ವ್ಯಕ್ತಿಗೆ ಪೆನ್ಸಿಲಿನ್ ಕೊಡಿ.

ಬೊಬ್ಬೆಗಳ ಮೇಲೆ ಸೀಮೆಎಣ್ಣೆ ಗ್ರೀಸ್ ಮತ್ತಿತರ ವಸ್ತುಗಳನ್ನು ಪ್ರಯೋಗಿಸಬೇಡಿ.

ವಿಶೇಷ ಮುನ್ನೆಚ್ಚರಿಕೆ

ತೀರಾ ಗಂಭೀರವಾದ ಸುಟ್ಟ ಗಾಯಗಳಾದ ವ್ಯಕ್ತಿ ಭಯ, ಉರಿತ ಮತ್ತು ಜೀವಪೋಷಕ ದ್ರವಗಳ ನಷ್ಟದಿಂದಾಗಿ ಆಘಾತಕ್ಕೊಳಗಾಗಬಹುದು. ಅವನನ್ನು ಸಾಂತ್ವನಗೊಳಿಸಿ ಅಭಯ ನೀಡಿ. ಆಸ್ಪಿರಿನ್ ಕೊಡಿ. ಲಘುವಾಗಿ ಉಪ್ಪು ಬೆರೆಸಿದ ನೀರಿನಿಂದ ಗಾಯಗಳನ್ನು ತೊಳೆಯಿರಿ. ದ್ರವ ಪದಾರ್ಥಗಳನ್ನು ಯಥೇಚ್ಛ ಕುಡಿಸಿ. ದೇಹದ ಬಹುಭಾಗ ಸುಟ್ಟಿದ್ದರೆ ಗಾಯಾಳುವಿಗೆ ಕೊಡಬೇಕಾದ ದ್ರಾವಣವನ್ನು ಹೀಗೆ ಸಿದ್ಧಪಡಿಸಿಕೊಳ್ಳಿ: ಒಂದು ಲೀಟರ್ ನೀರಿಗೆ ಅರ್ಧ ಚಮಚೆ ಉಪ್ಪು, ಅರ್ಧ ಚಮಚೆ ಸೋಡಾ, ೨-೩ ಚಮಚೆ ಸಕ್ಕರೆ ಅಥವಾ ಜೇನುತುಪ್ಪ ಮತ್ತು ಕಿತ್ತಳೆ ಇಲ್ಲವೆ ಲಿಂಬೆ ರಸವನ್ನು ಸೇರಿಸಿ. ಗಾಯಗೊಂಡ ವ್ಯಕ್ತಿ ಈ ದ್ರಾವಣವನ್ನು ಸಾಧ್ಯವಾದಷ್ಟೂ ಹೆಚ್ಚು ಕುಡಿಯಲಿ. ಮೂತ್ರ ವಿಸರ್ಜನೆ ಆದಷ್ಟೂ ಒಳ್ಳೆಯದು. ಎಲ್ಲ ವಿಧವಾದ ಆಹಾರ ಸೇವಿಸಬಹುದಾದರೂ ಸತ್ವಭರಿತ ಹಣ್ಣು ಮೇಲು.

ಬೆರಳ ಸಂದು, ಕಂಕುಳು ಮತ್ತು ಕೀಲುಗಳಲ್ಲಿ ತೀವ್ರತಮ ಸುಟ್ಟ ಗಾಯಗಳಾದರೆ ಅವುಗಳ ಮೇಲೆ ವ್ಯಾಸಲಿನ್ ಸವರಿದ ನವುರಾದ ಬಟ್ಟೆಯನ್ನು ಹಾಕಿ. ಕೈ ಕಾಲುಗಳು ಸುಟ್ಟರೆ ದಿನಕ್ಕೆ ಹಲವು ಬಾರಿ ಆ ಅಂಗಗಳನ್ನು ನೇರಗೊಳಿಸಿ. ಇದು ನೋವುಂಟು ಮಾಡುವುದಾದರೂ ಮುಂದೆ ಚಲನೆ ಸುಧಾರಿಸಲು ಸಹಾಯಕವಾಗುತ್ತದೆ.


೧೦. ಮುರಿದ ಎಲುವು (ಫ್ರ್ಯಾಕ್ಚರ್)

ಎಲುವು ಮುರಿದಾಗ ನೀವು ಮಾಡಬೇಕಾದ ಮುಖ್ಯ ಕೆಲಸವೆಂದರೆ ಎಲುವು ಮುರಿದ ಅಂಗವನ್ನು ಒಂದೇ ಸ್ಥಿತಿಯಲ್ಲಿರಿಸುವುದು. ಸಂಭವನೀಯ ಅಧಿಕ ಅಪಾಯವನ್ನು

ಇದರಿಂದ ತಪ್ಪಿಸಬಹುದು. ಗಾಯಾಳುವನ್ನು ಕದಲಿಸಲೇಬೇಕಾದರೆ ಮುರಿದ ಭಾಗವನ್ನು ಸ್ಪಿಂಟ್ (ಎಲುವುಗಳನ್ನು ಕೂಡಿಸಲು ಉಪಯೋಗಿಸುವ ಹಲಗೆ) ಅಥವಾ ಸ್ಲಿಂಗ್‌ನಲ್ಲಿರಿಸಿ.

ಎಲುವು ಹೆಚ್ಚೂ ಕಡಿಮೆ ಅಸಹಜ ಸ್ಥಿತಿಯಲ್ಲಿದೆ ಎಂದು ನಿಮಗನಿಸಿದರೆ ಆ ಭಾಗವನ್ನು ಚಲಿಸದಿರುವುದು ಕ್ಷೇಮಕರ.

ಎಲುವು ಮುರಿದ ವ್ಯಕ್ತಿಯ ಶುಶ್ರೂಷೆಗೆ ವೈದ್ಯರು ದೊರೆಯದ ಸಂದರ್ಭದಲ್ಲಿ ಆ ಕಾರ್ಯವನ್ನು ನೀವು ವಹಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಬಹುದು. ಈ ನಿಟ್ಟಿನಲ್ಲಿ ಒಂದೆರಡು ಸರಳ ವಿಧಾನಗಳನ್ನು ಗಮನಿಸಿ. (ಉದಾಹರಣೆಗೆ ಕೈ ಮೂಳೆ ಮುರಿದಿದೆಯೆಂದು ಭಾವಿಸೋಣ.)



ಕೈಯನ್ನು ೫-೧೦ ನಿಮಿಷಗಳ ಕಾಲ ಬಲವಾಗಿ ಎಳೆದು ಹಿಡಿದುಕೊಳ್ಳಿರಿ. ನೀವು ಹಾಗೆ ಹಿಡಿದುಕೊಂಡಿರುವಂತೆಯೇ ನಿಮ್ಮ ಸಹಚರನೊಬ್ಬ ಗಾಯಾಳುವಿನ ಮುರಿದ ಮೂಳೆಗಳನ್ನು ಮೆಲುವಾಗಿ ಜೋಡಿಸಿ ನೇರವಾಗಿ ಹಿಡಿದುಕೊಳ್ಳಲಿ.

ಮೂಳೆಗಳನ್ನು ಜೋಡಿಸುವಾಗ ಅನುಭವಿಕರೊಬ್ಬರ ನೆರವು ಪಡೆಯಿರಿ. ಇಲ್ಲದಿದ್ದರೆ ಹೆಚ್ಚಿನ ಅಪಾಯವಾದೀತು. ಮುರಿದ ಅಥವಾ ಮುರಿದಿದೆ ಎಂದು ಭಾವಿಸಲಾದ ಎಲುವಿನ ಅಂಗವನ್ನು ಮಸಾಜ್ ಮಾಡುವ ಯತ್ನ ಬೇಡ. ಭಗ್ನಗೊಂಡ ಎಲುವು ಚರ್ಮದ ಮೂಲಕ ಹಾಯ್ದು ಹೊರಬಂದಿದ್ದರೆ ಅದನ್ನು ಮತ್ತು ಗಾಯವನ್ನು ಸ್ವಚ್ಛಗೊಳಿಸದೆ ಒಳಗೆ ತಳ್ಳಬೇಡಿ. ಸೋಂಕು ನಿರೋಧಕಗಳನ್ನು (ಪೆನ್ಸಿಲಿನ್, ಆ್ಯಂಪಿಸಿಲಿನ್) ಬಳಸಿ.

೧೧. ಮೂಳೆಗಳ ಸ್ಥಾನಪಲ್ಲಟ

ಕಟ್ಟಡಗಳ ಮೇಲಿನಿಂದ, ವಾಹನಗಳ ಮೇಲಿನಿಂದ ಬಿದ್ದವರ ಕೀಲುಗಳ ಎಲುವುಗಳು ಸ್ಥಾನಪಲ್ಲಟಗೊಳ್ಳುವುದು ಸಾಮಾನ್ಯ.

- ಎಲುವನ್ನು ಸ್ವಸ್ಥಾನಕ್ಕೆ ಸೇರಿಸಲು ಯತ್ನಿಸಿ. ನಿಮ್ಮ ಯತ್ನ ಎಷ್ಟು ಬೇಗ ಯಶಸ್ವಿಯಾಗುವುದೋ ಅಷ್ಟು ಒಳ್ಳೆಯದು.
- ಆ ಎಲುವು ಮತ್ತೆ ಜಾರದಂತೆ ಭದ್ರವಾಗಿ ಬ್ಯಾಂಡೇಜು ಕಟ್ಟಿ. ಬ್ಯಾಂಡೇಜು ಒಂದು ತಿಂಗಳು ಹಾಗೇ ಇರಲಿ.
- ಸಂಪೂರ್ಣ ಗುಣವಾಗುವವರೆಗೆ ಆ ಅಂಗವನ್ನು ಯಾವುದಕ್ಕೂ ಬಲವಂತವಾಗಿ ಉಪಯೋಗಿಸದಂತೆ ನೋಡಿಕೊಳ್ಳಿ.

ಮರು ಹೊಂದಿಕೆ ಹೇಗೆ?



ಭುಜದ ಉದಾಹರಣೆ ತೆಗೆದುಕೊಳ್ಳಿ: ಗಾಯಾಳುವನ್ನು ನೆಲದ ಮೇಲೆ ಅಂಗಾತ ಮಲಗಿಸಿ. ನೀವು ಅವನಿಗೆದುರಾಗಿ ಒಂದು ಮಗ್ಗುಲಿಗೆ ಮಲಗಿ, ಅವನ ಕಂಕುಳಿಗೆ ಕಾಲನ್ನು ಒತ್ತಿ, ಪೆಟ್ಟಾದ ಕೈಯನ್ನು ನಿಧಾನವಾಗಿ ಎಳೆದು ಹತ್ತು ನಿಮಿಷ ಹಿಡಿದುಕೊಳ್ಳಿರಿ. ನಂತರ ಕೈಯನ್ನು ದೇಹಕ್ಕೆ ಸಮೀಪ ತನ್ನಿ.

ಯತ್ನದಲ್ಲಿ ನೀವು ಯಶಸ್ವಿಯಾದರೆ ಭದ್ರವಾಗಿ ಬ್ಯಾಂಡೇಜು ಬಿಗಿಯಿರಿ. ಒಂದು ವೇಳೆ ಕೀಲಿನ ಮರು ಹೊಂದಿಕೆ ಸಾಧ್ಯವಾಗದಿದ್ದರೆ ಕೂಡಲೇ ವೈದ್ಯಕೀಯ ನೆರವನ್ನು ಪಡೆಯಿರಿ. ತಡ ಮಾಡಿದಷ್ಟು ಮೂಳೆ ಹೊಂದಿಕೆಯ ಪ್ರಕ್ರಿಯೆ ಕಠಿಣವಾಗುವದು.

೧೨. ವಿಷ ಸೇವನೆ

ಮಕ್ಕಳು ಆಡುತ್ತಾಡುತ್ತ ಬಾಯೊಳಗೆ ಹಾಕಿಕೊಳ್ಳುವ ಪದಾರ್ಥಗಳು ಅವರಿಗೆ ಅಪಾಯವನ್ನುಂಟು ಮಾಡಬಲ್ಲಂಥವು. ಇಂಥ ಪದಾರ್ಥ ವಿಷವೂ ಆಗಿರಬಹುದು. ಎಚ್ಚರವಿರಲಿ.

ಲಘು ಪಾನೀಯಗಳ ಬಾಟಲುಗಳಲ್ಲಿ ಎಂದೂ ಸೀಮೆಎಣ್ಣೆ, ಪೆಟ್ರೋಲು, ಮಾರ್ಜಕಗಳು, ಕೀಟನಾಶಕಗಳನ್ನು ತುಂಬಬೇಡಿರಿ. ಏಕೆಂದರೆ ಮಕ್ಕಳು ಅಂಥ ದ್ರವವನ್ನು ಕುಡಿದಾರು!

- ಇಲಿ, ಹೆಗ್ಗಣಗಳ ಪಾಷಾಣ
- ಡಿ.ಡಿ.ಟಿ. ಟಿಂಕ್ಚರ್ ಅಯೋಡಿನ್ ಮತ್ತು ಕೀಟನಾಶಕಗಳು
- ಅಳಿದುಳಿದ ಔಷಧಗಳು
- ಬ್ಲೀಚಿಂಗ್ ಪುಡಿ, ಮಾರ್ಜಕಗಳು
- ವಾರ್ನಿಷ್
- ಬಣ್ಣಗಳು
- ಉಪಯೋಗಿಸದ ಬೆಂಕಿಕಡ್ಡಿಗಳು

ಇವುಗಳನ್ನು ಉಪೇಕ್ಷಿಸಬೇಡಿ. ಇವೆಲ್ಲವೂ ವಿಷದ ವಿವಿಧ ರೂಪಗಳು. ಜೀವನವನ್ನು ಕೊನೆಗಾಣಿಸಿಕೊಳ್ಳಲಿಚ್ಛಿಸುವವರೂ ವಿಷ ಸೇವಿಸಬಹುದು. ಅಂಥ ಪ್ರಸಂಗಗಳಲ್ಲಿ ಹೀಗೆ ಮಾಡಿ:

ನಿಮ್ಮ ಬೆರಳನ್ನು ವ್ಯಕ್ತಿಯ ಕಿರುನಾಲಿಗೆಗೆ ತಾಗಿಸಿ ಅಥವಾ ಮೆತ್ತನೆಯ ವಸ್ತುವೊಂದ

ರಿಂದ ಗಂಟಲನ್ನು ಪ್ರಚೋದಿಸಿ ಅಥವಾ ಉಪ್ಪು ಸಾಂದ್ರವಾಗಿರುವ ಬಿಸಿ ನೀರನ್ನು ಕುಡಿಸಿ ವಾಂತಿ ಮಾಡಿಸಿರಿ.

ಸೀಮೆಎಣ್ಣೆ, ಪೆಟ್ರೋಲ್, ಹುಳಿ ಆಮ್ಲ ಅಥವಾ ತುಕ್ಕು ಹಿಡಿಯಬಲ್ಲಂಥ ವಸ್ತುಗಳನ್ನು ಸೇವಿಸಿದ್ದರೆ ವಾಂತಿ ಮಾಡಿಸಬೇಡಿ. ಚಳಿ ಎನಿಸುತ್ತಿದ್ದರೆ ಸ್ವಲ್ಪ ಹೊತ್ತು ಕಂಬಳಿ ಹೊದಿಸಿ. ಆದರೆ ಅವನ ಶರೀರ ಹೆಚ್ಚು ಬಿಸಿಯಾಗದಿರಲಿ.

ತಲೆ ಸಿಡಿತ, ವಾಂತಿ, ಹೊಟ್ಟೆನೋವು, ಆಘಾತ, ಉಸಿರಾಟದಲ್ಲಿ ತೊಂದರೆ, ಮೂರ್ಛೆ-ಇವು ವಿಷಪ್ರಾಶನ ಮಾಡಿದಾಗ ಕಂಡುಬರುವ ಲಕ್ಷಣಗಳು. ವ್ಯಕ್ತಿ ನಾಲಿಗೆ ಕಚ್ಚಿಕೊಳ್ಳದಂತೆ ಎಚ್ಚರವಹಿಸುತ್ತಲೇ ಅವನನ್ನು ತುರ್ತಾಗಿ ಆಸ್ಪತ್ರೆಗೆ ರವಾನಿಸಿ. ಕೂಡಲೇ ಚಿಕಿತ್ಸೆ ದೊರೆಯದಿದ್ದರೆ ಅವನ ದುರಾದೃಷ್ಟ.

ಮುನ್ನೆಚ್ಚರಿಕೆಗಳು

- ಕೀಟನಾಶಕಗಳನ್ನು ಉಪಯೋಗಿಸುವ ಮುನ್ನ ಕೈಗವಸು ಧರಿಸಿ ಅಥವಾ ಪಾಲಿಥೀನ್ ಹಾಳೆಯಿಂದ ಕೈಗಳನ್ನು ಮುಚ್ಚಿಕೊಳ್ಳಿ.
- ಕೀಟನಾಶಕಗಳನ್ನು ಸಿಂಪಡಿಸುವಾಗ ಬಾಯಿ, ಮೂಗು ಬಟ್ಟೆಯಿಂದ ಕಟ್ಟಲ್ಪಟ್ಟಿರಲಿ. ಗಾಳಿಗೆ ವಿರುದ್ಧ ದಿಕ್ಕಿನಲ್ಲಿ ಸಿಂಪಡಿಸುವುದು ಬೇಡ.
- ಸಿಂಪರಣೆಗೆ ಮುನ್ನ ನೀರು ಮತ್ತು ಆಹಾರ ಪದಾರ್ಥಗಳನ್ನು ಮುಚ್ಚಿ.
- ಕೀಟನಾಶಕದ ಸಂಪರ್ಕ ಬಂದ ಯಾವುದೇ ಸಂದರ್ಭದಲ್ಲೂ ಸ್ವಚ್ಛವಾಗಿ ಕೈ ತೊಳೆದುಕೊಳ್ಳದೆ ಏನನ್ನೂ ಸೇವಿಸಬೇಡಿ.

೧೩. ಹಾವಿನ ವಿಷ


ನಮ್ಮಲ್ಲಿ ಹಾವಿನ ವಿಷದಿಂದ ಸಾಯುವವರಿಗಿಂತ ಹಾವಿನಿಂದ ಕಚ್ಚಿಸಿಕೊಂಡ ಭಯದಿಂದಲೇ ಸಾಯುವವರ ಸಂಖ್ಯೆ ಜಾಸ್ತಿ. ಎಲ್ಲ ಹಾವುಗಳಲ್ಲಿಯೂ ವಿಷವಿರುತ್ತದೆಂಬ ಭಾವನೆ ಇದಕ್ಕೆ ಕಾರಣ. ಆದರೆ ಎಲ್ಲವೂ ವಿಷಪೂರಿತವಲ್ಲ. ಭಾರತದಲ್ಲಿ ಕಾಣಸಿಗುವ ಹಾವುಗಳಲ್ಲಿ ನಾಲ್ಕು ಮಾತ್ರ ವಿಷಸರ್ಪಗಳು.

ಯಾರಿಗಾದರೂ ಹಾವು ಕಚ್ಚಿದ್ದರೆ, ಹಾವು ವಿಷಪೂರಿತವೋ ಅಲ್ಲವೋ ಎಂಬುದನ್ನು ಪತ್ತೆ ಹಚ್ಚಲು ಪ್ರಯತ್ನಿಸಿ. ಗಾಯದ ಮೇಲೆ ಮೂಡಿರುವ ಹಲ್ಲುಗಳ ಗುರುತುಗಳು ನಿಮಗೆ ನೆರವಾಗಬಹುದು.

ನಮಗೆ ಕೋರೆ ಹಲ್ಲುಗಳಿರುವ ಸ್ಥಾನದಲ್ಲಿ ಹಾವುಗಳಿಗೆ ವಿಷದ ಹಲ್ಲುಗಳಿರುತ್ತವೆ. ವಿಷಪೂರಿತ ಹಾವಿನಿಂದಾದ ಕಡಿತದ ಜಾಗದಲ್ಲಿ ಇಂಥ ಹಲ್ಲುಗಳ ಗುರುತು ಪ್ರಧಾನವಾಗಿ ಮೂಡಿರುತ್ತವೆ. ಆದರೆ ವಿಷರಹಿತ ಹಾವುಗಳ ಕಡಿತದಿಂದಾದ ಗಾಯದ ಮೇಲೆ ಆದರ ಎಲ್ಲ ಹಲ್ಲುಗಳ ಗುರುತು ಏಕ ಪ್ರಕಾರವಾಗಿರುತ್ತದೆ.

ವಿಷದ ಒಂದೇ ಹಲ್ಲಿನ ಗುರುತು ಮೂಡಿರುವ ಅಥವಾ ಹಾವಿನ ಹಲ್ಲಿನಿಂದ ತರಚು ಗಾಯಗಳಾಗಿರುವ ಸಂದರ್ಭಗಳಲ್ಲಿ ಯಾವ ನಿರ್ಧಾರಕ್ಕೂ ಬರಲಾಗುವುದಿಲ್ಲ. ಅಂಥ ವೇಳೆ ೧೫ ನಿಮಿಷಗಳಿಂದ ಒಂದು ತಾಸಿನವರೆಗೆ ಗಾಯಾಳುವನ್ನು ಗಮನಿಸಿ. ಈ ಕೆಳಗಿನ ಬದಲಾವಣೆಗಳಾದರೆ ಅದು ವಿಷಪೂರಿತ ಹಾವಿನ ಕಡಿತದಿಂದಾದದ್ದೆಂದು ತಿಳಿದು ಉಪಚಾರ ಪ್ರಾರಂಭಿಸಿರಿ.

- ಗಾಯದ ಭಾಗ ಊದಿಕೊಳ್ಳುವುದು. ನಾಗರ ಅಥವಾ ಮಂಡಲ ಹಾವುಗಳ ವಿಷದಿಂದಾಗುವ ಊತ ಹೆಚ್ಚು ತೀವ್ರ.



- ■ ಗಾಯದಿಂದ ರಕ್ತಸ್ರಾವ.
- ■ ಗಾಯದ ಸುತ್ತಲಿನ ಚರ್ಮ ಬಣ್ಣ ಕಳೆದುಕೊಳ್ಳುವುದು.
- ■ ತೂಕಡಿಕೆ, ಮಾಂಸ ಖಂಡಗಳಲ್ಲಿ (ವಿಶೇಷವಾಗಿ ಕಣ್ಣಿನ ಸುತ್ತ) ನಿಃಶಕ್ತಿ, ದೃಶ್ಯ ಎರಡಾಗಿ ಕಾಣುವುದು, ತೇಲುಗಣ್ಣು.
- ■ ಸ್ನಾಯುಗಳಲ್ಲಿ ಸೆಳೆತ, ಉಸಿರಾಟದಲ್ಲಿ ವ್ಯತ್ಯಯ.
- ■ ವಾಂತಿ, ರಕ್ತಮಿಶ್ರಿತ ಕಫ.

ಗಾಯದ ಭಾಗವನ್ನು ಕದಲಿಸಿದಷ್ಟೂ ವಿಷ ಹರಡುವ ವೇಗ ಹೆಚ್ಚಾಗುತ್ತದೆ. ಆದ್ದರಿಂದ ಹಾಗೆ ಮಾಡಬೇಡಿ. ವಿಷಪೂರಿತ ಹಾವಿನಿಂದ ಕಾಲನ್ನು ಕಚ್ಚಿಸಿಕೊಂಡ ವ್ಯಕ್ತಿ ಒಂದು ಹೆಜ್ಜೆಯನ್ನೂ ಮುಂದಿಡಕೂಡದು. ಗಾಯಕ್ಕಿಂತ ಸ್ವಲ್ಪ ಮೇಲೆ ಬಟ್ಟೆಯೊಂದನ್ನು ಕಟ್ಟಿ. (ಅರ್ಧ ತಾಸಿಗೊಮ್ಮೆ ಅದನ್ನು ಸಡಿಲಿಸುತ್ತಿರಿ.) ಸ್ವಚ್ಛ ಚಾಕು ಅಥವಾ ಬ್ಲೇಡಿನಿಂದ ಹಲ್ಲಿನ ಗುರುತಿನ ಸುತ್ತ ಒಂದು ಸೆಂಟಿಮೀಟರ್ ಉದ್ದ, ಅರ್ಧ ಸೆಂಟಿಮೀಟರ್ ಆಳದ ಗಾಯ ಮಾಡಿ. ೧೫-೨೦ ನಿಮಿಷಗಳ ಕಾಲ ರಕ್ತವನ್ನು ಹೀರುತ್ತಿರಿ. ಆ ರಕ್ತ ನಿಮ್ಮ ಹೊಟ್ಟೆಯನ್ನು ಸೇರದಂತೆ ಜಾಗರೂಕತೆ ವಹಿಸಿ.

ವಿಷದ ತೀವ್ರತೆಯನ್ನು ಕಡಿಮೆಗೊಳಿಸಲು ಆ್ಯಂಟಿವೆನಿನ್ ಚುಚ್ಚುಮದ್ದನ್ನು, ಅಲರ್ಜಿಕ್ ಆಘಾತದಿಂದ ವ್ಯಕ್ತಿಯನ್ನು ಪಾರು ಮಾಡಲು ಆ್ಯಂಡ್ರೆನಾಲಿನ್ ಚುಚ್ಚುಮದ್ದನ್ನು ಕೊಡಿ. ಹಾವು ಕಚ್ಚಿದ ಮೂರು ತಾಸಿನೊಳಗೆ ಆ್ಯಂಟಿವೆನಿನ್ ಹೆಚ್ಚು ಪರಿಣಾಮಕಾರಿ.

ಮಂಜುಗಡ್ಡೆ ದೊರೆತರೆ ಅದನ್ನು ದಪ್ಪ ಬಟ್ಟೆಯಲ್ಲಿ ಹಾಕಿ ಗಾಯದ ಸುತ್ತ ಲಘುವಾಗಿ ಕಟ್ಟಿ. ಪೆನ್ಸಿಲಿನ್ನನ್ನೂ ಧನುರ್ವಾಯು ನಿರೋಧಕವನ್ನೂ ಗಾಯಾಳುವಿಗೆ ಕೊಡಿ.

ವಿಷದ ಹಾವು ಕಚ್ಚಿದ ಬಳಿಕ ಮದ್ಯ ಸೇವಿಸಕೂಡದು; ಪರಿಸ್ಥಿತಿ ಮತ್ತಷ್ಟು ಹದಗೆಟ್ಟೀತು. ವಿಷಪೂರಿತ ಹಾವಿನ ಕಡಿತ ಅಪಾಯಕಾರಿ. ವಿಳಂಬ ಮಾಡದೆ ವೈದ್ಯರನ್ನು ಕರೆಸಿ. ಇಲ್ಲವೆ ಅವನನ್ನು ಸ್ಟ್ರೆಚೆರ್ ಮೇಲೆ ಹಾಕಿಕೊಂಡು ಆಸ್ಪತ್ರೆಗೆ ಸಾಗಿಸಿ.

೧೪. ಚೇಳಿನ ಕಡಿತ

ಐದು ವರ್ಷದೊಳಗಿನ ಮಕ್ಕಳ ಜೀವಕ್ಕೆ ಚೇಳಿನ ಕೊಂಡಿಯ ವಿಷ ಅಂತ್ಯ ಹಾಡಬಲ್ಲದು.

ಮೊದಲ ಬಾರಿಗೆ ಕುಟುಕಿಸಿಕೊಂಡ ವಯಸ್ಕನಿಗೆ ಚೇಳಿನ ವಿಷ ಪ್ರಾಣಾಂತಿಕವಾಗುವುದು ಅಪರೂಪ. ಆದರೆ ಎರಡನೆ ಬಾರಿ ಕುಟುಕಿಸಿಕೊಂಡ ವ್ಯಕ್ತಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರೆಯದಿದ್ದರೆ ಪ್ರಾಣ ಕಳೆದುಕೊಳ್ಳಬಹುದು.

ಚೇಳು ಕುಟುಕಿದ ಜಾಗದ ಮೇಲೆ ಮಂಜುಗಡ್ಡೆ ತುಂಡನ್ನಿರಿಸಿ. ಸಾಧ್ಯವಾದರೆ ಆ್ಯಸ್ಪಿರಿನ್ ಕೊಡಿ. ನೋವಿನ ತಾತ್ಕಾಲಿಕ ಶಮನಕ್ಕಾಗಿ ನೊವಾಕೇನ್ ಚುಚ್ಚುಮದ್ದು ನೀಡಿ.

ಉಸಿರಾಟ ನಿಂತಿದ್ದರೆ, ನಿಲ್ಲುವ ಸೂಚನೆ ಕಂಡುಬಂದರೆ ಬಾಯಿಗೆ ಬಾಯಿ ಹಚ್ಚಿ ಉಸಿರಾಡಿಸಿ.

ಈರುಳ್ಳಿಯ ರಸವನ್ನು ಗಾಯದ ಮೇಲೆ ಉಜ್ಜಿ. ಪೊಟ್ಯಾಸಿಯಂ ಪರ್ಮ್ಯಾಂಗನೇಟ್ ಮತ್ತು ಸಿಟ್ರಿಕ್ ಆಮ್ಲ (ದೊರೆಯದಿದ್ದರೆ ಒಂದೆರಡು ಹನಿ ಲಿಂಬೆರಸ)ವನ್ನು ಅರೆದು ಗಾಯದ ಗುರುತಿನ ಮೇಲೆ ಉದುರಿಸಿ. ಅದು ಅತ್ತಿತ್ತ ಬೀಳದಂತೆ ಎಚ್ಚರ ವಹಿಸಿ.

ಚೇಳು ಶರೀರದ ಮುಖ್ಯ ಭಾಗಗಳಿಗೆ ಕುಟುಕಿದ್ದರೆ, ವ್ಯಕ್ತಿ ಎರಡನೆ ಬಾರಿ ಕುಟುಕಿಸಿಕೊಂಡಿದ್ದರೆ ಅಥವಾ ಕುಟುಕಿಸಿಕೊಂಡವರು ಚಿಕ್ಕಮಕ್ಕಳಾಗಿದ್ದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ.

● ● ●

ಮೇಲೆ ವಿವರಿಸಲಾದ ಸಂದರ್ಭಗಳು ಯಾವಾಗ ಬೇಕಾದರೂ ನಿಮಗೆದುರಾಗಬಹುದು. ಅದಕ್ಕೆ ಸಿದ್ಧವಾಗಿರಿ. ನಿಮ್ಮ ನೆರವಿಗೆ ಪ್ರಥಮೋಪಚಾರದ ಪೆಟ್ಟಿಗೆಯನ್ನು ಅಣಿಗೊಳಿಸಿ. ಅದು ನಿಮಗೆ ಅತಿ ಸುಲಭವಾಗಿ ಸಿಗುವಂಥ ಸ್ಥಳದಲ್ಲಿ ಇಟ್ಟುಕೊಳ್ಳಿ.

ಪ್ರಥಮೋಪಚಾರದ ಪೆಟ್ಟಿಗೆಯಲ್ಲಿ ತುಕ್ಕು ನಿರೋಧಕ (ಸ್ಟೇನ್‌ಲೆಸ್) ಹರಿತವಾದ ಚಾಕು, ನಾಲ್ಕಾರು ಚಿಮ್ಮಟಗಳು, ವಿವಿಧ ಅಳತೆಯ ಬ್ಯಾಂಡೇಜುಗಳು, ಟಿಶ್ಯೂ ಹಾಳೆಗಳು, ನಂಜು ನಿರೋಧಕ ದ್ರಾವಣ, ನೋವು ನಿವಾರಕ ಮಾತ್ರೆಗಳು, ಪೆನ್ಸಿಲ್, ಬ್ಯಾಟರಿ, ಪ್ರಥಮೋಪಚಾರ ಪುಸ್ತಕ ಮೊದಲಾದ ಸಾಮಗ್ರಿಗಳಿರಲಿ. ಔಷಧಗಳು ಸಮಯದ ಮಿತಿ ಮೀರದ ಹಾಗೆ ನೋಡಿಕೊಳ್ಳಿ. ನಿಮ್ಮ ಯತ್ನಗಳಿಗೆ ಯಶ ಸಿಗಲಿ. ●

Printed and Published by N.H. WADAVI on behalf of Loka Shikshana Trust at 'Samyukta Karnataka Press, Koppikar Road, Hubli-580 020. (Phone: 364303): No. 2, Residency Road, Bangalore-560 025. (Phone: 2213265).

Managing Editor: K. SHAMARAO

Registered with the Registrar of Newspaper for India under No. 3633/57.

KASTURI, Kannada Digest Reg No KRNG-43,
Licence No L2120- WPP No. 33 Price- Rs. 6-00

ಲೋಕ ಶಿಕ್ಷಣ ಟ್ರಸ್ಟ್
ಗ್ರಂಥ'ಮಾಲೆಯ ಪ್ರಕಟಣೆಗಳು
ಹುಬ್ಬಳ್ಳಿ-ಬೆಂಗಳೂರು
ಈಗ ಲಭ್ಯವಿರುವ ಪ್ರಕಟಣೆಗಳು

ಪುಸ್ತಕದ ಹೆಸರು	ಲೇಖಕರ ಹೆಸರು	ಬೆಲೆ
೧. ಅತೀಂದ್ರಿಯ ಶಕ್ತಿ ಇರುವುದು ನಿಜವೇ?	ಡಾ. ಸಿ.ಆರ್. ಚಂದ್ರಶೇಖರ್	ರೂ. ೧೦.೦೦
೨. ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಿ.ಡಿ. ಜತ್ತಿ	ರೂ. ೧೫.೦೦
೩. ನನಗೆ ನಾನೇ ಮಾದರಿ	ಶ್ರೀ ಬಿ.ಡಿ. ಜತ್ತಿ	ರೂ. ೪೦.೦೦
೪. ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ	ಡಾ. ಸೂರ್ಯನಾಥ ಕಾಮತ	ರೂ. ೪೫.೦೦
೫. 'ವಂದೇಮಾತರಂ'ದಿಂದ 'ಜನಗಣಮನದ'ವರೆಗೆ	ಶ್ರೀ ವಿ.ಎಚ್. ದೇಸಾಯಿ	ರೂ. ೫೦.೦೦
೬. ಕೃಷ್ಣಾವತಾರ ಭಾಗ-೩	ಮೂಲ: ಶ್ರೀ ಕೆ.ಎಂ. ಮುನ್ಶಿ ಅನುವಾದ: ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ	ರೂ. ೨೦.೦೦
೭. ಕೃಷ್ಣಾವತಾರ ಭಾಗ-೪	-"-	ರೂ. ೨೦.೦೦
೮. ಕೃಷ್ಣಾವತಾರ ಭಾಗ-೫	-"-	ರೂ. ೨೫.೦೦
೯. ಕೃಷ್ಣಾವತಾರ ಭಾಗ-೬	-"-	ರೂ. ೨೦.೦೦
೧೦. ಕೃಷ್ಣಾವತಾರ ಭಾಗ-೭	-"-	ರೂ. ೨೦.೦೦
೧೧. ಕೃಷ್ಣಾವತಾರ ಭಾಗ-೯-೧೦	-"-	ರೂ. ೨೦.೦೦
೧೨. ಗೀತಾ ನಿತ್ಯಪಾಠ	ಶ್ರೀ ರಂಗನಾಥ ದಿವಾಕರ	ರೂ. ೩.೦೦
೧೩. ಉಲ್ಲಾಸ ಮಾನಸ	ಡಾ. ಸಿ.ಆರ್. ಚಂದ್ರಶೇಖರ	ರೂ. ೩.೦೦
೧೪. ಕೃಷ್ಣಾವತಾರದ ಕೊನೆಯ ಗಳಿಗೆಗಳು	ಪ್ರೊ. ಕೆ.ಎಸ್. ನಾರಾಯಣಾಚಾರ್ಯ	ರೂ. ೨೦.೦೦

ವಿ.ಸೂ.: ಪುಸ್ತಕ ಮಾರಾಟಗಾರರಿಗೆ ಕನಿಷ್ಠ ೧೦ ಪ್ರತಿಗಳನ್ನು ತರಿಸಿದರೆ ಶೇ. ೨೫ರಷ್ಟು ಕಮೀಷನ್ ಕೊಡಲಾಗುವದು. ಪುಸ್ತಕಗಳು ಬೇಕಾದಲ್ಲಿ ತಕ್ಷಣ ಕೆಳಕಂಡ ವಿಳಾಸಕ್ಕೆ ಎಲ್ಲ ವಿವರಗಳೊಂದಿಗೆ ಡಿ.ಡಿ. ಅಥವಾ ಮನಿಯಾರ್ಡರ್ ಮೂಲಕ ಬರೆದು ತಿಳಿಸುವುದು. (ಅಂಚೆ ವೆಚ್ಚ ಪ್ರತ್ಯೇಕ. ವಿ.ಪಿ.ಪಿ. ಸೌಲಭ್ಯ ಇಲ್ಲ.)

ಪ್ರಸಾರಾಂಗ ವ್ಯವಸ್ಥಾಪಕರು

ಸಂಯುಕ್ತ ಕರ್ನಾಟಕ,
ನಂ. ೨, ರೆಸಿಡೆನ್ಸಿ ರಸ್ತೆ,
ಬೆಂಗಳೂರು-೨೫.

ಸಂಯುಕ್ತ ಕರ್ನಾಟಕ,
ಕೊಪ್ಪೀಕರ ರಸ್ತೆ,
ಹುಬ್ಬಳ್ಳಿ-೨೦.

Cover Printed at: Bharat Photo Offset Works, Dharwad. Ph: 40545



ಶ್ರೀ ಕೃಷ್ಣಾವತಾರದ ಕೊನೆಯ ಗಳಿಗೆಗಳು

ಪ್ರೊ. ಕೆ. ಎಸ್. ನಾರಾಯಣಾಚಾರ್ಯ



ಲೋಕ ಶಿಕ್ಷಣ ಟ್ರಸ್ಟ್ ಗ್ರಂಥ ಮಾಲೆ,
ಹುಬ್ಬಳ್ಳಿ-ಬೆಂಗಳೂರು.